# THE BOOK WAS DRENCHED

UNIVERSAL LIBRARY
OU_200774
UNIVERSAL LIBRARY



ಯಂ. ರುದ್ರಪ್ಪ, ಅಂಡ್ ಸನ್ಸ್, ಪ್ರೊಪ್ರೈಟರ್ಸ್, (ಶ್ರೀ ಚಾಮುಂಡೇಶ್ವರೀ ಪ್ರೆಸ್) ಅರಳೇಪೇಟೆ ರೋಡ್, ಬೆಂಗಳೂರು.

ಶ್ರೀರಸ್ತು.

ಶ್ರೀ ಚಾಮರಾಜೋಕ್ತಿ ವಿಲಾಸ

ಎಂಬ

# ಕನ್ನಡ ರಾಮಾಯಣ

## ಕಿಷ್ಕಿಂಧಾ ಕಾಂಡ.

ಶ್ರೀಮನ್ಮಹಾರಾಜಾಧಿರಾಜ ಚಾಮರಾಜೇಂದ್ರ ಒಡೆಯರವರ ಅಪ್ಪಣೆಯುಂ ಪಡೆದು



ಎಂ. ರುದ್ರಪ್ಪ ಅಂಡ್ ಸನ್ ಅವರುಗಳಿಂದ

ಸ್ವಕೀಯ "ಶ್ರೀ ಚಾಮುಂಡೇಶ್ವರಿ" ಮುದ್ರಾಕ್ಷರಶಾಲೆಯಲ್ಲಿ ಮುದ್ರಾಪಿಸಿ ಪ್ರಕಟಸಲ್ಪಟ್ಟಿತು.

ಬೆಂಗಳೂರು:

೧೮೯೫.

ಮೊದಲನೇ ಛಾಪೆ—೧,೦೦೦ ಪ್ರತಿಗಳು.

# ಕಿಷ್ಕಿಂಧಾಕಾಂಡ-ಪೀಠಿಕೆ.

ಈ ಮನ್ಮಥನಾಮ ಸಂವತ್ಸರದ ದಸರಾಮಹೋತ್ಸವದ ಪ್ರಥಮದಿವಸದಲ್ಲಿ ಉತ್ತಮ ಕ್ಷತ್ರಿಯ ಕುಲೋದ್ಭವ ಬಿರುದೆಂತೆಂಬರಗಂಡ ಗಜಬೇಂಟೆಕಾರ ಸಮಸ್ತ ಶತ್ರುಸಂಘ ಜೀಮೂತ ಜಂಝಾಮಾರುತ ಪ್ರತ್ಯರ್ಥಿ ಪೃಥ್ವೀಪತಿ ವನ ದಾವಾನಲ ಸಮಸ್ತ ವಿದ್ವಜ್ಜನ ಸಮುದಾಯ ಕಲ್ಪಭೂಜಾತ ಆಶ್ರಿತಜನ ಸುರಧೇನು ಕಾಮಿನೀಜನ ನೂತನ ಪಂಚಬಾಣ ಚೌಷಷ್ಟಿ ಕಲಾಪ್ರವೀಣ ಮಹಿಶೂರಪುರವರಾಧೀಶ ಚಾಮರಾಜ ವಂಶೋದ್ಧಾರಕ ತಿಮ್ಮರಾಜ ತನೂಜ ನರಸರಾಜ ಗರ್ಭದುಗ್ಧ ಸಿಂಧು ಸುಧಾಕರ ಶ್ರೀಲಕ್ಷ್ಮೀಕಾಂತ ಪಾದಾರವಿಂದ ದ್ವಂದ್ವನಿಷ್ಯಂದಮಾನ ಮಕರಂದ ಬಿಂದುಸಂದೋಹಾಸ್ವಾದನ ನಿರ್ಮಲೀಕೃತಾಂತಃಕರಣ ತ್ರಿಣಯನೇಶ್ವರ ಸದ್ಭಕ್ತಿಯುಕ್ತ ಮಹಾಬಲಾಚಲಾವಾಸ ಶ್ರೀಚಾಮುಂಡಿಕಾಂಬಾ ಸದ್ಭಕ್ತಿಮಂಡಿತರಾದ ಶ್ರೀಚಾಮರಾಜ ಒಡೆಯರವರಿಂದ ಲೋಕೋಪಕಾರಾರ್ಥವಾಗಿ ಬುಧಜನ ಸಮ್ಮತಿಯಿಂದ ಕರ್ಣಾಟಕಭಾಷಾವಚನ ರಚನೆಯಾದ ಶ್ರೀಚಾಮರಾಜೋಕ್ತಿವಿಲಾಸವೆಂಬ ಕನ್ನಡ ರಾಮಾಯಣದಲ್ಲಿ ಕಿಷ್ಕಿಂಧಾಕಾಂಡವನ್ನು ಮುದ್ರಿಸಿ ಪ್ರಕಟಿಸಲು ಅನುಕೂಲವಾದದ್ದರಿಂದ ಸಂತೋಷಪಡುತ್ತೇವೆ.

ಮುಂದಣ ಸುಂದರಕಾಂಡವು ಮೊದಲೇ ಮುದ್ರಾಪಣವಾಯಿತು ; ಇನ್ನು ಯುದ್ಧಕಾಂಡವೂ ಉತ್ತರಕಾಂಡವೂ ಮಿಕ್ಕಿವೆ! ಶ್ರೀಮನ್ ಮಹಾರಾಣಿ ರೀಜೆಂಟರವರುಗಳ ಕೃಪೆಯಿಂದ ವಾಲ್ಮೀಕಿಮುನೀಶ್ವರನ ಸಂಸ್ಕೃತರಚನೆಯು ಟೀಕಾದ ಕನ್ನಡ ರಾಮಾಯಣವನ್ನು ಜಾಗ್ರತೆಯಲ್ಲೇ ಮುದ್ರಿಸಿ ಪ್ರಕಟಿಸಲು ಕೈಕೊಡುವದೆಂದು ನಂಬುತ್ತೇವೆ.

ಎಂ. ರುದ್ರಪ್ಪ, ಅಂಡ್ ಸನ್,
ಪ್ರೊಪ್ರೈಟರಸ್, ಶ್ರೀಚಾಮುಂಡೇಶ್ವರೀ ಪ್ರೆಸ್,
ಲಾಲ್-ಬಾಗ್ ರೋಡ್, ಬೆಂಗಳೂರು.

ಬೆಂಗಳೂರು,
ದಸರಾ—ಪ್ರಥಮದಿನ ೧೮೯೫.

# ಕಿಷ್ಕಿಂಧಾಕಾಂಡ–ವಿಷಯಸೂಚಿಕೆ.


| | ಪುಟ. |
|---|---|
| ಶ್ರೀರಾಮನು ಋಷ್ಯಮೂಕಪರ್ವತವನ್ನು ಸೇರಿದ್ದು | ೧ |
| ಹನುಮಂತನು ಶ್ರೀರಾಮನನ್ನು ಕಂಡದ್ದು ... | ೭ |
| ——————ರಾಮಲಕ್ಷ್ಮಣರ ವೃತ್ತಾಂತವನ್ನು ಕೇಳಿದ್ದು | ೮ |
| ——————ರಾಮಲಕ್ಷ್ಮಣರನ್ನು ಸುಗ್ರೀವನ ಬಳಿಗೆ ಕರೆದುಕೊಂಡು ಹೋದದ್ದು... | ೧೦ |
| ರಾಮಸುಗ್ರೀವರು ಅಗ್ನಿಸಾಕ್ಷಿಕವಾಗಿ ಸ್ನೇಹಮಾಡಿಕೊಂಡದ್ದು | ೧೧ |
| ಶ್ರೀರಾಮನು ಸೀತಾದೇವಿಯ ಆಭರಣಗಳನ್ನು ನೋಡಿ ಪ್ರಲಾಪಿಸಿದ್ದು ... ... | ೧೩ |
| ——————ಸುಗ್ರೀವನಿಗೆ ಅಭಯಕೊಟ್ಟದ್ದು ... | ೧೪ |
| ವಾಲಿಸುಗ್ರೀವರಿಗೆ ವಿರೋಧಬಂದ ವೃತ್ತಾಂತವು ... | ೧೬ |
| ಸುಗ್ರೀವನು ಶ್ರೀರಾಮನ ಪರಾಕ್ರಮವನ್ನು ತೋರಿಸಹೇಳಿದ್ದು | ೧೯ |
| ಸಪ್ತಜನಾಶ್ರಮ ವರ್ಣನೆ .. ... | ೨೫ |
| ಸುಗ್ರೀವನು ವಾಲಿಯನ್ನು ಯುದ್ಧಕ್ಕೆ ಕರೆದದ್ದು ... | ೨೬ |
| ತಾರಾದೇವಿಯು ವಾಲಿಗೆ ನೀತಿಹೇಳಿದ್ದು ... | ೨೭ |
| ಶ್ರೀರಾಮನು ವಾಲಿಯಮೇಲೆ ಬಾಣಪ್ರಯೋಗಮಾಡಿದ್ದು | ೨೯ |
| ವಾಲಿಯು ಶ್ರೀರಾಮನನ್ನು ನಿಂದಿಸಿದ್ದು ... | ೩೦ |
| —————— ——————ಸ್ತುತಿಸಿದ್ದು ... | ೩೩ |
| ತಾರಾದೇವಿಯು ವಾಲಿಗಾಗಿ ಹಂಬಲಿಸಿದ್ದು ... | ೩೬ |
| ಹನುಮಂತನು ತಾರಾದೇವಿಗೆ ಸಮಾಧಾನ ಹೇಳಿದ್ದು | ೩೮ |
| ವಾಲಿಯ ಮರಣವು . ... ... | ೩೯ |
| ಶ್ರೀರಾಮನು ತಾರಾದೇವಿಯನ್ನು ಸಂತವಿಟ್ಟದ್ದು ... | ೪೨ |
| ಅಂಗದನು ವಾಲಿಗೆ ಅಗ್ನಿಸಂಸ್ಕಾರಮಾಡಿದ್ದು ... | ೪೫ |
| ಸುಗ್ರೀವನ ಪಟ್ಟಾಭಿಷೇಕವು ... ... | ೪೬ |
| ರಾಮ-ಲಕ್ಷ್ಮಣರು ಮಾಲ್ಯವತ್ಪರ್ವತದಲ್ಲಿದ್ದದ್ದು ... | ೪೮ |
| ವರ್ಷಾಕಾಲ ವರ್ಣನೆ ... ... | ೫೦ |
| ಹನುಮಂತನು ಶ್ರೀರಾಮನ ಕಾರ್ಯವನ್ನು ಮಾಡಬೇಕೆಂದು ಸುಗ್ರೀವನನ್ನೆಚ್ಚರಿಸಿದ್ದು ... | ೫೩ |
| ಶರತ್ಕಾಲ ವರ್ಣನೆ ... ... ... | ೫೪ |
| ಶ್ರೀರಾಮನು ಸುಗ್ರೀವನು ಬರದಿದ್ದದ್ದರಿಂದ ಕೋಪಿಸಿಕೊಂಡದ್ದು ... ... | ೫೬ |
| ಲಕ್ಷ್ಮಣನು ಸುಗ್ರೀವನ ಬಳಿಗೆ ಹೋದದ್ದು ... | ೫೭ |
| ಹನುಮಂತನು ಸುಗ್ರೀವನಿಗೆ ಬುದ್ಧಿಹೇಳಿದ್ದು .. | ೫೯ |
| ತಾರಾದೇವಿಯು ಲಕ್ಷ್ಮಣನನ್ನು ಸಂತವಿಟ್ಟದ್ದು ... | ೬೧ |
| ಲಕ್ಷ್ಮಣನು ಸುಗ್ರೀವನಮೇಲೆ ಕೋಪಿಸಿದ್ದು ... | ೬೩ |
| ತಾರಾದೇವಿಯು ಲಕ್ಷ್ಮಣನಿಗೆ ಸಮಾಧಾನ ಹೇಳಿದ್ದು | ೬೪ |
| ಲಕ್ಷ್ಮಣನು ಸುಗ್ರೀವನನ್ನು ಶ್ರೀರಾಮನ ಬಳಿಗೆ ಕರೆದದ್ದು | ೬೫ |
| ಸುಗ್ರೀವನು ಕಪಿಸೇನೆಗಳನ್ನು ಕರೆಕಳಿಸಿದ್ದು ... | ೬೬ |
| ——————ಶ್ರೀರಾಮನನ್ನು ಕಾಣಿಸಿಕೊಂಡದ್ದು ... | ೬೭ |
| ಕಪಿಸೇನೆಗಳು ಬಂದದ್ದು ... ... | ೬೮ |
| ಸೀತಾದೇವಿಯನ್ನು ಹುಡುಕುವದಕ್ಕಾಗಿ ಕಪಿಸೇನೆಗಳನ್ನು ನಾನಾದಿಕ್ಕುಗಳಿಗೂ ಕಳುಹಿಸಿದ್ದು .. | ೭೧ |
| ಶ್ರೀರಾಮನು ಹನುಮಂತನಿಗೆ ತನ್ನ ಮುದ್ರೇ ಉಂಗುರವನ್ನು ಕೊಟ್ಟದ್ದು ... ... | ೭೯ |
| ಸುಗ್ರೀವನು ಭೂಪ್ರದಕ್ಷಿಣಮಾಡಿದ ವೃತ್ತಾಂತವು | ೮೧ |
| ಸೀತಾದೇವಿಯನ್ನು ಕಾಣದೆ ಮೂರುದಿಕ್ಕುಗಳಿಗೆ ಹೋದವರು ತಿರಿಗಿ ಬಂದದ್ದು ... | — |
| ಅಂಗದನು ಹನುಮಂತಾದಿಗಳೊಡನೆ ತೆಂಕಣದಿಕ್ಕಿಗೆಹೋದದ್ದು | ೮೨ |
| ——————ಕಪಿಗಳಿಗೆ ಧೈರ್ಯಹೇಳಿದ್ದು ... | ೮೩ |
| ಹನುಮಂತಾದಿಗಳು ಬಿಲವನ್ನು ಪ್ರವೇಶಿಸಿದ್ದು ... | ೮೪ |
| ಸ್ವಯಂಪ್ರಭೆಯು ಕಪಿಗಳಿಗೆ ಆತಿಥ್ಯವನ್ನು ಕೊಟ್ಟದ್ದು | ೮೫ |
| ——————ಹನುಮಂತಾದಿಗಳನ್ನು ಬಿಲದಿಂದ ಹೊರಪಡಿಸಿದ್ದು ... ... | ೮೬ |
| ಅಂಗದಾದಿಗಳು ಸೀತಾದೇವಿಯನ್ನು ಕಾಣದೆ ಚಿಂತಿಸಿದ್ದು | ೮೭ |
| ಹನುಮಂತನು ಅಂಗದನಿಗೆ ಬುದ್ಧಿಹೇಳಿದ್ದು ... | ೮೯ |
| ಅಂಗದಾದಿಗಳು ಪ್ರಾಯೋಪವೇಶಕ್ಕೆ ಕುಳಿತದ್ದು ... | ೯೧ |
| ಸಂಪಾತಿಯು ಜಟಾಯುವಿನ ವೃತ್ತಾಂತವನ್ನು ಕೇಳಿದ್ದು | ೯೨ |
| ಅಂಗದನು ಶ್ರೀರಾಮನ ವೃತ್ತಾಂತವನ್ನು ಹೇಳಿದ್ದು | ೯೩ |
| ಸಂಪಾತಿಯು ಸೀತಾದೇವಿಯಿರುವ ಸ್ಥಳವನ್ನು ಹೇಳಿದ್ದು | ೯೪ |
| ಸಂಪಾತಿಗೆ ಗರಿಗಳು ಬಂದ ವೃತ್ತಾಂತವು ... | ೯೭ |
| ——————ತಿರಿಗಿ ಹುಟ್ಟಿದ್ದು ... | ೯೯ |
| ಜಾಂಬವಂತನು ಹನುಮಂತನು ಸಮುದ್ರವನ್ನು ದಾಟಬಲ್ಲನೆಂದದ್ದು ... ... | ೧೦೧ |
| ——————ಹನುಮಂತನನ್ನು ಸಮುದ್ರವನ್ನು ದಾಟಲು ಪ್ರಾರ್ಥಿಸಿದ್ದು ... ... | ೧೦೩ |
| ಹನುಮಂತನು ಸಮುದ್ರವನ್ನು ದಾಟಲು ಒಪ್ಪಿದ್ದು | ೧೦೫ |



ಶ್ರೀ ಪರಬ್ರಹ್ಮಣಾಂಗೀಕೃತಃ । ನಾರದಮುನಿಪ್ರೇರಿತ ವಾಲ್ಮೀಕಿನಾಕೃತಃ । ಮಧುರರಸಸಂಪೂರ್ಣಗರ್ಭಿತ
ಭಾರತೀಭರಿತ ಶ್ರೀರಘುವೀರ ಕಥಾನಿಬಂಧನೋಯಂಗ್ರಂಥಃ । ವಿಜಯತೇತರಾಂ ॥

ಶ್ರೀ ಚಾಮರಾಜೋಕ್ತಿ ವಿಲಾಸವೆಂಬ

# ಕನ್ನಡ ರಾಮಾಯಣ.

## ಕಿಷ್ಕಿಂಧಾ ಕಾಂಡ.

### ೧ನೇ ಅಧ್ಯಾಯ.

### ಶ್ರೀರಾಮನು ಋಷ್ಯಮೂಕ ಪರ್ವತವನ್ನು ಸೇರಿದ್ದು.

ಅನಂತರದಲ್ಲಿ ವಾಲ್ಮೀಕಿಮುನಿಯು ಕುಶಲವರನ್ನು ಕುರಿತು ಇಂತೆಂದನು:

ಎಲೈ ಕುಶಲವರುಗಳಿರಾ, ಈ ಮರ್ಯಾದೆಯಲ್ಲಿ ಲಕ್ಷ್ಮಣಸಮೇತನಾದ ಶ್ರೀರಾಮನು ಕಮಲಗಳಿಂದಲೂ ಕನ್ನೈದಿಲಪುಷ್ಪಗಳಿಂದಲೂ ಜಲಚರಪ್ರಾಣಿಗಳಿಂದಲೂ ಮನೋಹರವಾದ ಪಂಪಾನದಿಯನ್ನು ನೋಡಿ ವಿರಹಾಗ್ನಿಯಿಂದ ಕೆರಳಿದ ಮದನಬಾಣಗಳಿಗೊಳಗಾಗಿ ಲಕ್ಷ್ಮಣನನ್ನು ಕುರಿತು “ಎಲೈ ಲಕ್ಷ್ಮಣ, ಈ ಪಂಪಾತೀರವು ವೈಡೂರ್ಯರತ್ನದಂತೆ ಅತಿ ನಿರ್ಮಲವಾದ ಉದಕವುಳ್ಳದ್ದಾಗಿ ವಿಕಸಿತವಾದ ತಾವರೇ ಕಮಲಗಳಿಂದಲೂ ಕನ್ನೈದಲೆ ಪುಷ್ಪಗಳಿಂದಲೂ ಪುಷ್ಪಿತವಾದ ವೃಕ್ಷಗಳಿಂದಲೂ ರಮಣೀಯವಾಗಿದೆ; ಸಮೀಪದಲ್ಲಿರುವ ಈ ವನವೂ ಅತಿ ರಮಣೀಯವಾಗಿದೆ; ಈ ವನದಲ್ಲಿರುವ ವೃಕ್ಷಗಳು ಅತ್ಯಂತ ಉನ್ನತವಾಗಿ ಅನೇಕ ಕೊಂಬುಗಳುಳ್ಳವಾಗಿ ಕೋಡುಗಲ್ಲುಗಳುಳ್ಳ ಪರ್ವತಗಳಂತೆ ಒಪ್ಪುತ್ತಿವೆ! ಇಂಥಾ ಕ್ಷೇತ್ರದಲ್ಲಿಯೂ ವಿರಹತಾಪದಿಂದ ಕಂಗೆಟ್ಟಿರುವ ನನ್ನ

ನ್ನು ಮನೋವ್ಯಥೆಗಳು ಬಾಧಿಸುತ್ತಿವೆ ; ಮೊದಲು ಭರತನಿಗೆ ಪಟ್ಟವಾಗಬೇಕೆಂದಿದ್ದ ಕೈಕೆಯಿದೇವಿಯಿಂದ ಹೊರಡಿಸಲ್ಪಟ್ಟು ರಾಜ್ಯಭ್ರಷ್ಟನಾಗಿ ಬಂದದ್ದೊಂದು ದುಃಖವು ; ಆಮೇಲೆ ಸೀತಾದೇವಿಯು ವಿಯೋಗವಾದದ್ದೊಂದು ದುಃಖವು ; ಈ ಮರ್ಯಾದೆಯಲ್ಲಿ ದುಃಖಪರಂಪರೆಯಿಂದ ನೊಂದಿರುವ ನನಗೆ ಅನೇಕ ವಿಚಿತ್ರವಾದ ಈ ಪಂಪಾತೀರವು ಮತ್ತು ವ್ಯಥೆಯನ್ನುಂಟುಮಾಡುತ್ತಿದೆ ! ಈ ಪಂಪಾತೀರವು ವೃಕ್ಷಗಳಿಂದ ಬೀಳುವ ಪುಷ್ಪಗಳಿಂದಲೂ ಅನೇಕ ಸರ್ಪಗಳಿಂದಲೂ ಇಟ್ಟಣಿಸಿದೆ ; ಪಂಪಾನದಿಯು ನಾನಾವರ್ಣವಾದ ಪುಷ್ಪಗಳಿಂದ ಹರಹಲ್ಪಟ್ಟ ಎಳೆಗರಿಕೆಗಳುಳ್ಳ ತೀರವುಳ್ಳದ್ದಾಗಿ ಅನೇಕ ಪುಷ್ಪಗಳಿಂದ ಪರಿಪೂರ್ಣವಾಗಿ ಪರಿಮಳಯುಕ್ತವಾಗಿ ಶೈತ್ಯವಾಗಿ ನಿರ್ಮಲವಾದ ಉದಕವುಳ್ಳದ್ದಾಗಿ ವಿಕಸಿತವಾದ ಕಮಲಗಳಿಂದ ಅತಿ ರಮಣೀಯವಾಗಿ ಪುಣ್ಯಮೃಗಗಳಿಂದಲೂ ಪುಣ್ಯಪಕ್ಷಿಗಳಿಂದಲೂ ಇಟ್ಟಣಿಸಲ್ಪಟ್ಟಿದೆ ; ನಾನಾವರ್ಣವಾದ ಪುಷ್ಪಗಳಿಂದ ಹರಹಲ್ಪಟ್ಟ ಎಳೆಗರಿಕೆಗಳುಳ್ಳ ಈ ಪಂಪಾತೀರವು ವಿಚಿತ್ರವಾದ ಹಾಸಿಕೆಗಳಿಂದ ಅಲಂಕರಿಸಲ್ಪಟ್ಟಂತೆ ಒಪ್ಪುತ್ತಿದೆ ! ಕುಸುಮಿತವಾದ ಎಳೇಬಳ್ಳಿಗಳಿಂದ ಸುತ್ತುವರಿಯಲ್ಪಟ್ಟ ಅಗ್ರಭಾಗಗಳುಳ್ಳವಾಗಿ ಫಲಪುಷ್ಪಗಳಿಂದ ನಿಬಿಡವಾದ ಈ ವೃಕ್ಷಗಳು ಮನ್ಮಥೋದ್ರೇಕದಿಂದ ಶರೀರಪುಳಕಿತರಾದ ಸ್ತ್ರೀಯರು ತಮ್ಮ ಪ್ರಾಣಕಾಂತರನ್ನು ಆಲಿಂಗನಮಾಡುತ್ತಿರಲು ಆ ಆಲಿಂಗನಸುಖಾತಿಶಯದಿಂದ ತನುಪುಳಕಿತರಾದ ಪುರುಷರಂತೆ ಒಪ್ಪುತ್ತಿವೆ ! ಎಲೈ ಲಕ್ಷ್ಮಣ, ಈ ವಸಂತಕಾಲವು ಶೈತ್ಯ ಸೌರಭ್ಯ ಮಾಂದ್ಯಗಳೆಂಬ ಗುಣತ್ರಯದಿಂದ ರಮಣೀಯವಾಗಿ ಮನ್ಮಥೋದ್ರೇಕವನ್ನುಂಟುಮಾಡುವ ಘೋಷಯುಳ್ಳದ್ದಾಗಿದೆ ; ವೃಕ್ಷಗಳು ಪರಿಮಳಭರಿತವಾದ ಪುಷ್ಪಸಮೂಹಗಳಿಂದ ಇಟ್ಟಣಿಸಿವೆ ; ಎಲ್ಲಿನೋಡಿದರು ಮೇಘಗಳು ಮಳೆಗರೆಯುವಂತೆ ವನಮಧ್ಯದಲ್ಲಿರುವ ವೃಕ್ಷಗಳು ಪುಷ್ಪವೃಷ್ಟಿಯನ್ನು ಕರೆಯುತ್ತಿವೆ ; ಋಷ್ಯಮೂಕಪರ್ವತದ ತಪ್ಪಲುಗಳಲ್ಲಿರುವ ಪುಷ್ಪಿತವಾದ ಮರಗಳು ವಾಯುವೇಗದಿಂದ ಚಲಿಸಲ್ಪಟ್ಟ ಅಗ್ರಭಾಗಗಳುಳ್ಳವಾಗಿ ತಮ್ಮ ಪುಷ್ಪಗಳಿಂದ ವನಭೂಮಿಯೆಲ್ಲವನ್ನು ಹರಹುತ್ತಿವೆ ; ಪುಷ್ಪಿತವಾದ ಕೊಂಬುಗಳ ಅಗ್ರಭಾಗಗಳಲ್ಲಿರುವ ತುಂಬೀಹಿಂಡುಗಳ ಝೇಂಕಾರದಿಂದ ಗಾನಮಾಡುತ ಆ ವೃಕ್ಷಗಳಿಂದ ಬೀಳುವ ಕುಸುಮಗಳೊಡನೆ ಕ್ರೀಡಿಸುತ್ತಿರುವಂತೆ ತಂಘೋಳಯು ಒಪ್ಪುತ್ತಿದೆ ; ಈ ಪರ್ವತದ ಗುಹೆಗಳಿಂದ ಹೊರಡುವ ಘೋಳಯು ಮನೋಹರವಾದ ಮುಂದಳಿರ ರಸಪಾನದಿಂದ ಸರಳವಾದ ಕಂಠಸ್ವರವುಳ್ಳ ಕೋಗಿಲೆಗಳ ರಮಣೀಯವಾದ ಧ್ವನಿಯಿಂದ ಗಾನಮಾಡುವಹಾಗೂ ಹಣ್ಣೆಲೆಗಳು ಬೀಳುವ ಚಟಚಟತ್ಕಾರಧ್ವನಿಯಿಂದ ತಾಳಹಾಕುವಹಾಗೂ ಚಲಿಸುತ್ತಿರುವ ಕುಸುಮಿತವಾದ ಲತೆಗಳಿಂದ ನರ್ತನಮಾಡುವಹಾಗೂ ಒಪ್ಪುತ್ತಿದೆ ; ವಾಯುವಿನಿಂದ ಚಲಿಸಲ್ಪಟ್ಟ ಪುಷ್ಪಿತವಾದ ಮರದ ಕೊಂಬುಗಳು ಒಂದರೊಡನೊಂದು ಕೂಡಿಕೊಂಡು ಮನ್ಮಥನ ಪುಷ್ಪತೋರಣಗಳೋ ಎಂಬಂತೆ ಒಪ್ಪುತ್ತಿವೆ ! ತಂಘೋಳಯು ಪುಷ್ಪಿತವಾದ ಪುಣ್ಯವೃಕ್ಷಗಳ ಸಮ್ಮಂಧದಿಂದ ದಾರಿಯ ಬಳಲಿಕೆಯನ್ನು ಪರಿಹರಿಸುತ್ತಿದೆ ; ಪುಷ್ಪಗಳ ಪರಿಮಳವುಳ್ಳ ಈ ವನದಲ್ಲಿರುವ ವೃಕ್ಷಗಳು ತುಂಬೀಹಿಂಡಿನ ಝೇಂಕಾರದಿಂದ ಗಾನಮಾಡುವಂತೆ ಒಪ್ಪುತ್ತಿವೆ ! ಋಷ್ಯಮೂಕಪರ್ವತವು ತನ್ನ ಮನೋಹರವಾದ ತಪ್ಪಲುಗಳಲ್ಲಿ ಪುಷ್ಪಿತವಾದ ಮರಗಳುಳ್ಳದ್ದಾಗಿ ರಮಣೀಯವಾಗಿ ಒಪ್ಪುತ್ತಿದೆ ! ಈ ವನದಲ್ಲಿ ಬೆಟ್ಟದಾವರೇ ವೃಕ್ಷಗಳು ಪುಷ್ಪಗಳಿಂದ ಇಟ್ಟಣಿಸಿ ಪೀತಾಂಬರವನ್ನು ಹೊದ್ದಿರುವ ಪುರುಷರಂತೆ ಒಪ್ಪುತ್ತಿವೆ ! ಎಲೈ ಲಕ್ಷ್ಮಣ, ನಾನಾಪಕ್ಷಿಗಳ ಸ್ವರವುಳ್ಳ ಈ ವಸಂತಕಾಲವು ಸೀತಾದೇವಿಯ ವಿರಹಾಗ್ನಿಯಿಂದ ಕಂಗೆಟ್ಟಿರುವ ನನ್ನ ಮನಸ್ಸಿಗೆ ಅತ್ಯಂತ ವ್ಯಥೆಯನ್ನು ಮಾಡುತ್ತಿದೆ ; ಹೀಗೆ ವಿರಹಾತಾಪದಿಂದ ನೊಂದಿರುವ ನನ್ನನ್ನು ಬಾಧಿಸಲೋಸುಗವಾಗಿ ಮನ್ಮಥನನ್ನು ಕರೆಯುತ್ತಿವೆಯೋ ಎಂಬಂತೆ ಕೋಗಿಲೆಗಳು ಸ್ವರಗೈಯುತ್ತಿವೆ ; ಈ ವಸಂತಕಾಲದಲ್ಲಿ ವನದಲ್ಲಿರುವ ವಜ್ಞರೋದಕಗಳಲ್ಲಿ ಅತ್ಯಂತ ಸಂತೋಷದಿಂದ ಸ್ವರಗೈಯುವ ಮುಂಡಗೊಳಲೆ ಹಕ್ಕಿಗಳು ಮದನಬಾಣಕ್ಕೊಳಗಾಗಿ ಕೃಶಶರೀರಿಯಾದ ನನ್ನನ್ನು ವ್ಯಥೆಪಡಿಸುತ್ತಿವೆ ; ನಾವು ದಂಡಕಾರಣ್ಯದಲ್ಲಿದ್ದ ಸಮಯದಲ್ಲಿ ಸೀತಾದೇವಿಯು ಮುಂಡಗೊಳಲೇಪಕ್ಷಿಯ ಸ್ವರವನ್ನು ಕೇಳದರೆ ನನ್ನನ್ನು ಕುರಿತು 'ಎಲೈ ಪ್ರಾಣಕಾಂತನೆ, ಈ ಪಕ್ಷಿಯ ರಮಣೀಯವಾದ ಸ್ವರವನ್ನು ಕೇಳು' ಎಂದು ನುಡಿದು ಅತಿ ಸಂತೋಷಪಡುವಳು ! ಎಲೈ ಲಕ್ಷ್ಮಣ, ಅತ್ಯಂತಾನಂದದಿಂದ ಸ್ವರಗೈಯುವ ನಾನಾಪ್ರಕಾರವಾದ ಪಕ್ಷಿಗಳು ಪುಷ್ಪಿತವಾದ ಮರ ತರು ಗಿಡ ಲತೆಗಳಿಗೆ ಬಂದೆ

ರಗುತ್ತಿವೆ; ಪುರುಷಪಕ್ಷಿಗಳು ಸ್ತ್ರೀಪಕ್ಷಿಗಳೊಡನೆ ಕೂಡಿಯೂ ಗಂಡುದುಂಬಿಗಳು ಹೆಣ್ಣುದುಂಬಿಗಳೊಡನೆ ಕೂಡಿಯೂ ಅತ್ಯಂತ ಸಂತೋಷದಿಂದ ಮಧುರವಾದ ಸ್ವರಗೈಯುತ್ತಿವೆ; ಗಂಡು ಮಂಡಗೊಳಲೆ ಪಕ್ಷಿಗಳು ತಮ್ಮ ಹೆಣ್ಣುಗಳಲ್ಲಿ ಕೂಡುವ ಕಾಲೋಚಿತವಾದ ಸ್ವರಗಳಿಂದಲೂ ಗಂಡುಕೋಗಿಲೆಗಳು ಹೆಣ್ಣುಕೋಗಿಲೆಗಳೊಡನೆ ರಮಿಸುವ ಕಾಲಕ್ಕೆ ಯೋಗ್ಯವಾದ ಸ್ವರಗಳಿಂದಲೂ ಕೂಡಿರುವ ಪುಷ್ಪಿತವಾದ ವೃಕ್ಷಗಳು ಸೀತಾದೇವಿಯಿಂದ ವಿರಹಿತನಾದ ನನಗೆ ಅತ್ಯಂತ ವಿರಹಸಂತಾಪವನ್ನುಂಟುಮಾಡುತ್ತಿವೆ; ಎಳದಳಿರುಗಳನ್ನೇ ಜ್ವಾಲೆಯಾಗುಳ್ಳ ವಸಂತನೆಂಬ ಅಗ್ನಿಯು ನನ್ನನ್ನು ದಹಿಸುತ್ತಿದೆ! ಎಲೈ ಲಕ್ಷ್ಮಣಾ, ಅತ್ಯಂತ ಸೂಕ್ಷ್ಮವಾದ ಎಲೆಗಳುಳ್ಳದ್ದಾಗಿ ಕೋಮಲವಾದ ತಾವರೇ ಕಮಲದಂತೆ ಕಣ್ಣುಗಳುಳ್ಳವಳಾಗಿ ಕಪ್ಪಾಗಿ ನುಣುಪಾಗಿ ನಿಡಿದಾದ ಕೇಶಪಾಶಗಳುಳ್ಳವಳಾಗಿ ಮೃದುಭಾಷಿಯಾದ ಸೀತಾದೇವಿಯನ್ನು ಕಾಣದೆ ನನಗೆ ಈ ಜೀವದಿಂದ ಪ್ರಯೋಜನವೇನು! ಕೋಕಿಲಾರವವುಳ್ಳದ್ದಾಗಿ ಪುಷ್ಪಿತವಾದ ವೃಕ್ಷಗಳುಳ್ಳ ಈ ವಸಂತಕಾಲವು ಸೀತಾದೇವಿಯು ನನ್ನ ಸಮೀಪದಲ್ಲಿಲ್ಲದಾಗ ಬರುವದಕ್ಕೆ ಯೋಗ್ಯವಲ್ಲ; ಸೀತಾದೇವಿಯ ವಿಯೋಗದಿಂದುಂಟಾದ ವಿರಹಾಗ್ನಿಯು ಮದನಬಾಣಗಳಿಂದ ಕೆರಳಿ ವಸಂತಮಾರುತದಿಂದ ಅಧಿಕ ಜ್ವಾಲೆಯುಳ್ಳದ್ದಾಗಿ ನನ್ನನ್ನು ದಹಿಸುತ್ತಿದೆ; ಸೀತಾದೇವಿಯನ್ನು ಕಾಣದೆ ಪುಷ್ಪಿತವಾದ ಈ ವೃಕ್ಷಗಳನ್ನು ನೋಡುವ ನನ್ನ ಶರೀರದಲ್ಲಿ ಹುಟ್ಟಿದ ಮದನಾಗ್ನಿಯು ನನ್ನನ್ನು ಬಾಧಿಸುತ ನನ್ನ ಮನಸ್ಸನ್ನು ಆ ದೇವಿಯ ಸಮೀಪಕ್ಕೆ ಹೊರಡಿಸುತ್ತಿದೆ; ಸೀತಾದೇವಿಯು ನನ್ನ ದೃಷ್ಟಿಗೆ ಗೋಚರವಿಲ್ಲದೆ ವಿರಹಶೋಕವನ್ನುಂಟುಮಾಡುತ್ತಿದ್ದಾಳೆ; ವಸಂತಕಾಲವು ಈಗ ಬಂದದ್ದರಿಂದ ನನ್ನ ವಿರಹಾಗ್ನಿಯು ಅತಿ ವೆಗ್ಗಳವಾಗಿ ಪ್ರಜ್ವಲಿಸುತ್ತಿದೆ; ಈ ವನದಲ್ಲಿರುವ ಗಂಡು ನವಿಲುಗಳು ತಮ್ಮ ಗರಿಗಳನ್ನು ಕೆದರಿಕೊಂಡು ಹೆಣ್ಣುನವಿಲುಗಳೊಡನೆ ಕೂಡಿ ಅತ್ಯಂತ ಸುಖಾನಂದದಿಂದ ಮೂರ್ಛೆಗೈದಂತೆ ತೋರುತ ಮೊದಲೇ ಮದನಬಾಣಗಳಿಂದ ಕಂಗೆಟ್ಟಿರುವ ನನಗೆ ಮದನತಾಪವನ್ನುಂಟುಮಾಡುತ್ತಿವೆ! ಎಲೈ ಲಕ್ಷ್ಮಣಾ, ಈ ಪರ್ವತದ ತಪ್ಪಲಲ್ಲಿ ಗಂಡುನವಿಲುಗಳು ಗರಿಗಳನ್ನು ಕೆದರಿಕೊಂಡು ನರ್ತನವನ್ನು ಮಾಡುತ್ತಿರಲು ಅವನ್ನು ಕಂಡು ಹೆಣ್ಣುನವಿಲುಗಳು ಮದನಬಾಣಪರವಶವಾಗಿ ತಮ್ಮ ಗಂಡುನವಿಲುಗಳಮುಂದೆ ನರ್ತನವನ್ನು ಮಾಡುತ್ತಿವೆ; ಆ ಹೆಣ್ಣುನವಿಲುಗಳನ್ನು ಕಂಡು ಗಂಡುನವಿಲುಗಳು ರತಿಕ್ರೀಡಾರ್ಥವಾಗಿ ಅಟ್ಟಿಕೊಂಡುಹೋಗಲು ಹೆಣ್ಣುನವಿಲುಗಳು ತಮ್ಮ ಪಕ್ಕಗಳನ್ನು ಇಬ್ಬಗೆಯಾಗಿ ಮಾಡಿಕೊಂಡು ಗಂಡುನವಿಲುಗಳಿಗೆ ಸುಖಭೋಗವನ್ನುಂಟುಮಾಡುತ್ತಿವೆ! ಎಲೈ ಲಕ್ಷ್ಮಣಾ, ಸೀತಾರಹಿತನಾದ ನನಗೆ ಈ ವಸಂತಕಾಲವು ಕಳೆಯುವದಕ್ಕೆ ಅಸಾಧ್ಯವಾಗಿದೆ; ಈ ಕಾಲದಲ್ಲಿ ಪಕ್ಷಿಗಳು ಮೊದಲಾದವುಗಳಿಗೂ ಮನ್ಮಥೋದ್ರೇಕವು ಹೆಚ್ಚಾಗಿದೆ; ಹೆಣ್ಣುನವಿಲು ಗಂಡುನವಿಲ ಬೆಂಬಿಡದೆ ಸಂಚರಿಸುವಂತೆ ಸೀತಾದೇವಿಯು ರಾಕ್ಷಸನವಶವಾಗಿ ಹೋಗದಿದ್ದರೆ ನನ್ನ ಹಿಂದೆ ಸಂಚರಿಸಿಕೊಂಡು ನನ್ನ ಕೂಡೆ ರಮಿಸಿಕೊಂಡಿರುವಳು! ಎಲೈ ಲಕ್ಷ್ಮಣಾ, ಈ ವಸಂತಕಾಲದಲ್ಲಿ ವನದಲ್ಲಿರುವ ವೃಕ್ಷಗಳ ವಿಕಸಿತವಾದ ಪುಷ್ಪಗಳು ನಿಷ್ಫಲವಾದವು; ಮನೋಹರವಾದ ಈ ಪುಷ್ಪಗಳು ಭೋಗಿಗಳಾದ ಸೊಗಸುಗಾರರಿಗೆ ಉಪಯೋಗವಾಗದೆ ತುಂಬಿಗಳ ಝೇಂಕಾರದಿಂದಕೂಡಿ ರೋದನಮಾಡಿಕೊಂಡು ಕೆಳಗೆ ಬೀಳುವಂತೆ ಉದುರುತ್ತಿವೆ; ಅತ್ಯಂತ ಮಧುರವಾಗಿ ಸ್ವರಗೈಯುವ ಪಕ್ಷಿಗಳು ಮನ್ಮಥೋದ್ರೇಕದಿಂದ ಅನ್ಯೋನ್ಯ ಸಂಭೋಗಾರ್ಥವಾಗಿ ಕರೆಯುತ್ತಿವೆ; ಈ ವಸಂತಕಾಲವು ಸೀತಾದೇವಿಯಿರುವಕಡೆಯಲ್ಲಿಯೂ ಪ್ರಾಪ್ತವಾದಪಕ್ಷದಲ್ಲಿ ನನಗೆ ಶೋಕಾಗ್ನಿಯನ್ನುಂಟುಮಾಡುವಮರ್ಯಾದೆಯಲ್ಲಿಯೇ ಆ ದೇವಿಗೂ ವಿರಹಶೋಕವನ್ನುಂಟುಮಾಡುವದು! ಹ್ಯಾಗಾದರೂ ವಸಂತಕಾಲವು ಸೀತಾದೇವಿಯಿರುವ ಸ್ಥಳದಲ್ಲುಂಟಾದರೆ ಕಮಲದಳಾಯತಾಕ್ಷಿಯಾದ ಆ ದೇವಿಯು ನನ್ನನ್ನು ಬಿಟ್ಟು ಕಾಲವನ್ನು ಕಳೆಯಲಾರಳು; ಈ ವಸಂತಕಾಲವು ಸೀತಾದೇವಿಯಿರುವ ದೇಶದಲ್ಲಿ ಸಂಭವಿಸಿದಪಕ್ಷದಲ್ಲಿ ಆ ದೇವಿಯು ಏನುಮಾಡುವಳೋ ತಿಳಿಯದು; ಯೌವನಾವಸ್ಥೆಯುಳ್ಳವಳಾಗಿ ಕಮಲಪತ್ರಾಕ್ಷಿಯಾಗಿ ಮೃದುಭಾಷಿಯಾಗಿ ನನ್ನ ಸ್ತ್ರೀಯಾದ ಸೀತಾದೇವಿಯು ನನ್ನನ್ನು ಬಿಟ್ಟು ಈ ವಸಂತಕಾಲವನ್ನು ಕಳೆದು ಜೀವಿಸಲಾರಳು; ನನ್ನ ಮನಸ್ಸಿನಲ್ಲಿ ಸೀತಾದೇವಿಯ ವೃತ್ತಾಂತವನ್ನು ವಿಚಾರಿಸಿದರೆ ನನ್ನ ವಿರಹಾಗ್ನಿಯಿಂದ ಕಂಗೆಟ್ಟು ಆ ದೇವಿಯು ಈ ವಸಂತಕಾಲದಲ್ಲಿ ಜೀವವಿಡಿದ

ನಿಲ್ಲಲಾರಳೆಂದು ತೋರುತ್ತದೆ; ಈ ಅರ್ಥದಲ್ಲಿ ಸಂಶಯವಿಲ್ಲ; ಸೀತಾದೇವಿಯು ಅಂತರಂಗವು ನನ್ನಲ್ಲಿರುವದು; ನನ್ನ ಅಂತರಂಗವು ಆ ದೇವಿಯಲ್ಲೇ ಆಸಕ್ತವಾಗಿರುವದು; ಪುಷ್ಪಗಳ ಪರಿಮಳದೊಡಗೂಡಿ ಶೈತ್ಯವಾಗಿ ಮೃದು ಗತಿಯಾಗಿರುವ ವಾಯುವು ನನ್ನ ಪ್ರಾಣಕಾಂತೆಯಾದ ಸೀತಾದೇವಿಯನ್ನೇ ಧ್ಯಾನಮಾಡುತ್ತಿರುವ ನನ್ನ ಶರೀರದ ಮೇಲೆ ಸೋಕಿ ವಜ್ರಾಯುಧದಂತೆ ವೇದನೆಯನ್ನುಂಟುಮಾಡುತ್ತಿದೆ; ಮೊದಲು ಸೀತಾಸಮೇತನಾದ ನನಗೆ ಸುಖ ವನ್ನುಂಟುಮಾಡುತ್ತಿದ್ದ ಘಾಳಿಯು ಈಗ ಆ ದೇವಿಯ ವಿರಹಶೋಕದಿಂದ ನೊಂದಿರುವ ನನ್ನನ್ನು ಬಾಧೆಪಡಿಸು ತ್ತಿದೆ; ಈ ಮರದ ಕೊಂಬಿನಲ್ಲಿ ಕುಳಿತುಕೊಂಡು ತನ್ನ ಸ್ತ್ರೀಯಾದ ಹೆಣ್ಣುಪಕ್ಷಿಯನ್ನು ಕಾಣದೆ ಹಂಬಲಿಸುತ ಧ್ವನಿಗೈಯುತ್ತಿರುವ ಈ ಗಂಡುಪಕ್ಷಿಯು ಸೀತಾದೇವಿಯ ಸಮೀಪಕ್ಕೆ ಹೋಗಿ ನನ್ನ ವಿರಹವೇದನೆಯನ್ನು ಹೇಳ ಬಾರದೇ! ಎಲೈ ಲಕ್ಷ್ಮಣ, ಪುಷ್ಪಿತವಾದ ವೃಕ್ಷಗಳ ಅಗ್ರಭಾಗದಲ್ಲಿ ಸ್ವರಗೈಯುತ್ತಿರುವ ಪಕ್ಷಿಗಳ ಧ್ವನಿಯು ನನಗೆ ಮತ್ತೂ ಮದನೋದ್ರೇಕವನ್ನುಂಟುಮಾಡುತ್ತಿದೆ; ಕೊಳಗಳಲ್ಲಿ ವಿಕಸಿತವಾದ ಅನೇಕ ಪರಿಮಳವುಳ್ಳ ಕೆಂ ದಾವರೇ ಕುಸುಮಗಳು ಎಳೇ ಬಿಸಲಿನ ಕಾಂತಿಯಿಂದ ಒಪ್ಪುತ್ತಿವೆ! ನಿರ್ಮಲೋದಕವುಳ್ಳದ್ದಾಗಿ ತಾವರೇ ಕಮಲ ಗಳುಳ್ಳದ್ದಾಗಿ ಕನ್ನೈದಿಲೇ ಪುಷ್ಪಗಳುಳ್ಳದ್ದಾಗಿ ಹಂಸಪಕ್ಷಿ ಚಕ್ರವಾಕಪಕ್ಷಿಗಳಿಂದ ಇಟ್ಟಣಿಸಿದ ಪಂಪಾನದಿಯಲ್ಲಿ ಬಾಲಸೂರ್ಯಕಾಂತಿಯುಳ್ಳ ಕೆಂದಾವರೇ ಪುಷ್ಪಗಳ ಕೇಸರಗಳು ಮಕರಂದಪಾನಾರ್ಥವಾಗಿ ಎರಗುವ ತುಂಬಿಗಳಿಂ ದ ಹುಯ್ಯಲ್ಪಟ್ಟು ಉದಕದಲ್ಲಿ ಉದುರಲು ಆ ಕಮಲಕೇಸರಗಳಿಂದ ಪರಿಪೂರ್ಣವಾದ ಪಂಪಾತೀರ್ಥವು ಅತಿ ಮ ನೋಹರವಾಗಿ ಒಪ್ಪುತ್ತಿದೆ; ಪಂಪಾತೀರ್ಥವು ಉದಕಪಾನಾರ್ಥವಾಗಿ ಬರುತ್ತಿರುವ ಕಾಡಾನೆಗಳಿಂದಲೂ ಇತರ ಮೃಗಗಳಿಂದಲೂ ಅತಿ ರಮಣೀಯವಾಗಿ ಒಪ್ಪುತ್ತಿದೆ! ಎಲೈ ಲಕ್ಷ್ಮಣ, ವಾಯುವಿನಿಂದ ಎಬ್ಬಿಸಲ್ಪಟ್ಟ ತೆರೆಗ ಳಿಂದ ಹುಯ್ಯಲ್ಪಟ್ಟು ಚಲಿಸುತ್ತಿರುವ ತಾವರೇ ಕಮಲಗಳು ಈ ಪಂಪಾತೀರ್ಥದ ಮನೋಹರತೆಯನ್ನು ಕಂಡು ತಲೆದೂಗಿ ನೋಡುತ ಆಶ್ಚರ್ಯಪಡುತ್ತಿವೆಯೋ ಎಂಬಂತೆ ಒಪ್ಪುತ್ತಿವೆ! ಈ ವಸಂತಕಾಲದಲ್ಲಿ ಇಂಥಾ ಪುಷ್ಪಗ ಳನ್ನು ನೋಡಿ ಸೀತಾದೇವಿಯನ್ನು ಕಾಣದೆ ನಾನು ಜೀವಿಸಿಕೊಂಡಿರಲೆಣಿಸುವದಿಲ್ಲ! ಕಟಕಟಾ! ಮನ್ಮಥನ ಮ ಹಿಮೆಯನ್ನೇನೆಂದುಹೇಳಲೀ! ಆತನು ಮಾಂಗಲ್ಯಸ್ವರೂಪಳಾಗಿ ನುಡಿಜಾಣ್ಮೆಯುಳ್ಳವಳಾಗಿ ದೂರದೇಶದಲ್ಲಿರುವ ಸೀತಾದೇವಿಯನ್ನು ನಾನು ಸ್ಮರಿಸುವಹಾಗೆ ಮಾಡುತ್ತಿದ್ದಾನೆ; ಪುಷ್ಪಿತವಾದ ವೃಕ್ಷಗಳುಳ್ಳ ವಸಂತಕಾಲವು ನನಗೆ ಮನ್ಮಥನ ಬಾಧೆಯನ್ನುಂಟುಮಾಡದಿದ್ದರೆ ನಾನು ತಾಳಬಹುದು! ಮೊದಲು ಸೀತಾದೇವಿಯುಸಮೇತನಾಗಿದ್ದಾಗ ನನಗೆ ಯಾವ ವಸ್ತುಗಳು ರಮಣೀಯವಾಗಿದ್ದವೋ ಆ ವಸ್ತುಗಳು ಸೀತಾದೇವಿಯ ವಿರಹದಿಂದ ಕಂಗೆಟ್ಟಿರುವ ನನಗೆ ಅಸಹ್ಯವಾಗಿ ತೋರುತ್ತಿವೆ! ಎಲೈ ಲಕ್ಷ್ಮಣ, ವಿಕಸಿತವಾದ ಕಮಲಗಳನ್ನು ನೋಡಿದರೆ ಸೀತಾದೇವಿಯ ಕಣ್ಣುಗಳು ಸ್ಮರಣೆಗೆ ಬರುತ್ತಿವೆ; ತಾವರೇಕಮಲಗಳಮೇಲೆ ಬೀಸುವ ತಂಘಾಳಿಯು ಸೀತಾದೇವಿಯ ಉಶ್ವಾಸ ಮಾರುತದಂತೆ ಅತಿ ಮನೋಹರವಾಗಿ ಬೀಸುತ್ತಿದೆ! ಎಲೈ ಲಕ್ಷ್ಮಣ, ಪಂಪಾತೀರದ ತೆಂಕಣಕಡೆಯಲ್ಲಿ ಪುಷ್ಪಿತ ವಾದ ಬೆಟ್ಟದಾವರೇ ಮರವು ಅತಿ ರಮಣೀಯವಾಗಿ ಒಪ್ಪುತ್ತಿದೆ; ಅನೇಕ ಗೈರಿಕಾದಿ ಧಾತುಗಳೊಡಗೂಡಿದ ಈ ಪರ್ವತವು ಬಿರುಘಾಳಿಯಿಂದ ಹುಯ್ಯಲ್ಪಟ್ಟದ್ದಾಗಿ ನಾನಾವರ್ಣಗಳಾದ ಧೂಳುಗಳಿಂದ ಮೆರೆಯುತ್ತಿದೆ! ಎಲೈ ಲಕ್ಷ್ಮಣ, ಈ ಪರ್ವತದ ತಪ್ಪಲುಗಳು ಎಲೆಯುದುರಿ ಅತಿ ಪುಷ್ಪಿತವಾದ ಮುಳ್ಳುಮುತ್ತುಗದ ಮರಗಳಿಂದ ಪ್ರಜ್ವಲಿಸುತ್ತಿರುವ ಯಜ್ಞಪುರುಷನಂತೆ ಒಪ್ಪುತ್ತಿವೆ; ಮತ್ತು ಈ ಪಂಪಾತೀರದಲ್ಲಿ ಆದುರಗಂತಿ ಮಲ್ಲಿಗೆ ಕಣಿ ಗಲು ಲೊಕ್ಕಿ ಶಾವಂತಿಗೆ ಮೊಲ್ಲೆ ಸಸಿವಾರ ಇಪ್ಪೆ ಅಬ್ಬೆ ಬಕುಳ ಸಂಪಿಗೆ ಸುರಹೊನ್ನೆ ತಿಲಕ ಖರ್ಜೂರ ಬೆಟ್ಟ ದಾವರೆ ಕರೀ ಅಶೋಕ ಲೋಧ್ರ ಅಂಕುಲೆ ಗೊರಟೆ ಪಾರಿಭದ್ರ ಯಲವ ಪಾದರಿ ಗೋವಿದಾರ ಕಕ್ಕೆ ಕೇತಕಿ ಕ ಡಬ ಹಾರ ಕೆಂಪುಗೊರಟೆ ಕದ್ದಾಳೆ ಶ್ರೀಗಂಧ ಚಂದನ ಹಿರಿತಾಳೆ ಮೊದಲಾದ ವೃಕ್ಷಗಳು ಪುಷ್ಪಿತವಾದ ಲತೆಗಳಿಂದ ಸುತ್ತುವರಿಯಲ್ಪಟ್ಟಿರುವದನ್ನು ನೋಡು! ಅಸಾಧ್ಯಪ್ರದೇಶಗಳಲ್ಲಿ ಎಲ್ಲಿನೋಡಿದರೂ ಮದಸೊಕ್ಕಿದ ಪರಸ್ತ್ರೀಯ ರಂತೆ ಪುಷ್ಪಿತವಾದ ಲತೆಗಳು ಒಪ್ಪುತ್ತಿವೆ ನೋಡು" ಎಂದು ಆ ವನವರ್ಣನೆಯನ್ನು ಹೇಳಿ ಹಂಬಲಿಸುತ ವಾಯು

ವಿನಂತೆ ಒಂದು ವನದಿಂದ ಮತ್ತೊಂದು ವನಕ್ಕೂ ಒಂದು ಪರ್ವತದಿಂದ ಮತ್ತೊಂದು ಪರ್ವತಕ್ಕೂ ಹೋಗುತ ಲಕ್ಷ್ಮಣನನ್ನು ಕುರಿತು " ಎಲೈ ಲಕ್ಷ್ಮಣ ನೋಡು ; ಈ ವನದಲ್ಲಿ ಕೆಲವು ವೃಕ್ಷಗಳು ಪುಷ್ಪಗಳಿಂದ ಪರಿಪೂರ್ಣವಾಗಿ ಪುಷ್ಪರಸಭರಿತವಾಗಿ ಅತ್ಯಂತ ಪರಿಮಳಾತಿಶಯವುಳ್ಳವಾಗಿವೆ ; ಕೆಲವು ವೃಕ್ಷಗಳು ಮೊಗ್ಗುಗಳಿಂದ ಪರಿಪೂರ್ಣವಾಗಿ ಶ್ಯಾಮಲವರ್ಣವಾಗಿ ಒಪ್ಪುತ್ತಿವೆ ; ತುಂಬಿಗಳು ಪುಷ್ಪರಸವನ್ನಾಸ್ವಾದಿಸುತ ಒಳ್ಳೇ ಪುಷ್ಪವೆಂತಲೂ ಸ್ವಾದುರಸವುಳ್ಳ ಪುಷ್ಪವೆಂತಲೂ ವಿಕಸಿತವಾದ ಪುಷ್ಪವೆಂತಲೂ ನಿನ್ನೇ ವಿಕಸಿತವಾದ ಪುಷ್ಪವೆಂತಲೂ ಪ್ರತಿ ಪುಷ್ಪವನ್ನೂ ನೋಡಿ ತಿಳಿಯುತ ಈ ವೃಕ್ಷಗಳಲ್ಲಿ ಸಂಚರಿಸುತ್ತಿವೆ ; ಈ ಪರ್ವತದ ತಪ್ಪಲುಗಳ ಭೂಮಿಯು ವೃಕ್ಷಗಳಿಂದ ಉದುರಿದ ಪುಷ್ಪಗಳಿಂದ ಇಟ್ಟಣಿಸಿ ಮನ್ಮಥನ ಪುಷ್ಪಸುಪ್ಪತ್ತಿಗೆಯೋ ಎಂಬಂತೆ ಒಪ್ಪುತ್ತಿದೆ ; ವೃಕ್ಷಗಳಿಂದ ಉದುರುವ ನಾನಾವರ್ಣವಾದ ಪುಷ್ಪಗಳಿಂದ ಹರಹಲ್ಪಟ್ಟ ಈ ಭೂಮಿಯು ಚಿತ್ರವಾದ ರತ್ನಗಂಬಳಿಯಿಂದ ಹರಹಲ್ಪಟ್ಟಹಾಗೆ ಒಪ್ಪುತ್ತಿದೆ ; ಈ ವಸಂತಕಾಲದಲ್ಲಿ ಸಮಸ್ತ ವೃಕ್ಷಗಳೂ ಪುಷ್ಪಿತವಾಗಿವೆ ; ಈ ಪುಷ್ಪಗಳ ಸೌಭಾಗ್ಯವನ್ನೇನೆಂದುಹೇಳಲಿ ! ಪುಷ್ಪಿತವಾದ ಈ ವೃಕ್ಷಗಳು ತಮ್ಮ ಅಗ್ರಭಾಗದಲ್ಲಿ ಮಂದಮಾರುತದಿಂದ ಕಂಪಿಸಲ್ಪಟ್ಟ ತಳಿರುಗಳೆಂಬ ಕೈಗಳಿಂದ ತಾವು ಮನ್ಮಥನಿಗೆ ಸಹಾಯವಾಗಬೇಕೆಂದು ಸನ್ನೆಮಾಡುತ ತುಂಬಿಗಳ ಧ್ವನಿಯಿಂದ ಕೂಗಿ ಕರೆಯುತ್ತಿವೆಯೋ ಎಂಬಂತೆ ಒಪ್ಪುತ್ತಿವೆ ! ಚಕ್ರವಾಕಪಕ್ಷಿಗಳು ತಮ್ಮ ಸ್ತ್ರೀಪಕ್ಷಿಗಳಲ್ಲಿ ರಮಿಸಿಕೊಂಡು ನೀರೊಳಗೆ ಮುಳುಗುತ ಏಳುತ ನನಗೆ ಮದನವೇದನೆಯನ್ನುಂಟುಮಾಡುತ್ತಿವೆ ! ಎಲೈ ಲಕ್ಷ್ಮಣಾ ಕೇಳು, ಇಂಥಾ ವಸಂತಕಾಲದಲ್ಲಿ ನಾನು ಸೀತಾದೇವಿಯನ್ನು ಕಂಡರೆ ಜಗತ್ತಿನಲ್ಲಿ ಪ್ರಸಿದ್ಧವಾದ ಈ ಪಂಪಾತೀರದಲ್ಲಿ ಅತ್ಯಂತ ಸಂತೋಷಯುಕ್ತನಾಗಿರುವೆನು ; ನಾನು ದೇವಲೋಕಾಧಿಪತ್ಯವನ್ನಾದರೂ ರಾಜ್ಯಾಧಿಪತ್ಯವನ್ನಾದರೂ ಬಯಸೆನು ; ನಾನು ಸೀತಾದೇವಿಯ ಸಮೇತನಾಗಿ ಪಂಪಾತೀರದ ಎಳೇ ಹುಲ್ಲಿನಮೇಲೆ ರಮಿಸಿಕೊಂಡಿದ್ದರೆ ಮತ್ತಾವ ವಸ್ತುವನ್ನೂ ಬಯಸೆನು ; ಹೊಸವಾಗಿ ಪಲ್ಲವಿತವಾಗಿ ಪುಷ್ಪಿತಗಳಾದ ಈ ವೃಕ್ಷಗಳು ಸೀತಾರಹಿತನಾದ ನನಗೆ ಮದನಚಿಂತೆಯನ್ನುಂಟುಮಾಡುತ್ತಿವೆ ! ಎಲೈ ಲಕ್ಷ್ಮಣ, ಶೈತ್ಯವಾದ ಉದಕವುಳ್ಳದ್ದಾಗಿ ಅನೇಕ ತಾವರೇಕಮಲಗಳಿಂದಲೂ ಚಕ್ರವಾಕ ಸಾರಸ ಹಂಸ ಮೊದಲಾದ ಪಕ್ಷಿಗಳಿಂದಲೂ ಉದಕಪಾನನಿಮಿತ್ತವಾಗಿ ಬರುತ್ತಿರುವ ನಾನಾಮೃಗಗಳಿಂದಲೂ ವೃಕ್ಷಗಳಲ್ಲಿ ಧ್ವನಿಗೈಯ್ಯುತ್ತಿರುವ ಪಕ್ಷಿಗಳಿಂದಲೂ ಮನೋಹರವಾದ ಈ ಪಂಪಾತೀರ್ಥವನ್ನು ನೋಡಿ ಚಂದ್ರಮಂಡಲದಂತೆ ಮುಖವುಳ್ಳ ಸೀತಾದೇವಿಯನ್ನು ಸ್ಮರಿಸಿ ವ್ಯಥೆಪಡುತ್ತಿದ್ದೇನೆ ! ಎಲೈ ಲಕ್ಷ್ಮಣ, ಈ ವಸಂತಕಾಲದಲ್ಲಿ ಈ ಪಂಪಾತೀರದಲ್ಲಿರುವ ಕುಸುಮಿತವಾದ ವನದಲ್ಲಿ ಸೀತಾದೇವಿಯನ್ನು ಕಂಡೆನಾದರೆ ಇವೆಲ್ಲವೂ ನನಗೆ ಸುಖಸಾಧನವಾಗುವವು ! ಎಲೈ ಲಕ್ಷ್ಮಣ, ಸೀತಾದೇವಿಯು ನನ್ನ ಸಮೀಪದಲ್ಲಿರುವ ತಂಪೊಳೆಯ ಸುಖವನ್ನನುಭವಿಸಿದಳಾದರೆ ನನ್ನ ಜನ್ಮವು ಸಫಲವಾಗುವದು ! ಎಲೈ ಲಕ್ಷ್ಮಣ, ತಾವರೇಕಮಲದ ಪರಿಮಳದೊಡಗೂಡಿದ್ದಾಗಿ ಸಮಸ್ತ ದುಃಖವನ್ನೂ ಪರಿಹರಿಸುವಂಥಾದ್ದಾಗಿ ಮಾಂಗಲ್ಯವಾದ ಈ ತಂಪೊಳೆಯನ್ನು ಧನ್ಯರಾದವರು ಸ್ತ್ರೀಸಮೇತರಾಗಿ ಸೇವಿಸುವರು ! ಎಲೈ ಲಕ್ಷ್ಮಣ, ನನ್ನ ವಿರಹದಿಂದ ಕಂಗೆಟ್ಟಿರುವ ಸೀತಾದೇವಿಯು ಇಂಥಾ ತಂಪೊಳೆಯನ್ನು ಕಂಡು ನನ್ನನ್ನು ಕಾಣದೆ ಹ್ಯಾಗೆ ಜೀವವಿಡಿದಿರುವಳು ! ಎಲೈ ಲಕ್ಷ್ಮಣ, ನಾನು ಸೀತಾದೇವಿಯನ್ನು ಬಿಟ್ಟು ಅಯೋಧ್ಯಾಪಟ್ಟಣಕ್ಕೆ ಹೋದರೆ ನನ್ನ ಪರಿಣಾಮಸ್ಥಿತಿಯನ್ನು ವಿಚಾರಿಸಲು ಬರುವ ಜನಕರಾಯನು ಸೀತಾದೇವಿಯೆಲ್ಲೆಂದು ಸಭೆಯಲ್ಲಿ ಕೇಳಿದರೆ ಆತನ ಕೂಡೆ ನಾನೇನೆಂದು ಹೇಳಲಿ ! ನಮ್ಮ ತಂದೆಯಾದ ದಶರಥರಾಯನು ನನ್ನನ್ನು ವನಕ್ಕೆ ಕಳುಹಿಸುವಾಗ ನನ್ನ ಕೂಡೆ ಬಂದ ಸೀತಾದೇವಿಯು ಎಲ್ಲಿದ್ದಾಳೋ ತಿಳಿಯಬೇಕು ; ನನ್ನನ್ನು ನಂಬಿ ನನ್ನ ಕೂಡೆ ಬಂದ ಸೀತಾದೇವಿ ಹೊರತಾಗಿ ಕಾರ್ಪಣ್ಯದಿಂದ ನಾನು ಜೀವವಿಡಿದಿರುವ ಪ್ರಕಾರವು ಹ್ಯಾಗೆ ! ರಾಜ್ಯಭ್ರಷ್ಟನಾದ ನನ್ನ ಕೂಡೆ ಬಂದ ಸೀತಾದೇವಿಯ ನಿಷ್ಕಳಂಕವಾದ ಮುಖವನ್ನು ಕಾಣದೆ ನನ್ನ ಮನಸ್ಸಿಗೆ ಬಹು ವ್ಯಥೆಯಾಗುತ್ತಿದೆ ; ಮುಗುಳುನಗೆಯೊಡಗೂಡಿದವಳಾದ ಸೀತಾದೇವಿಯ ಅಭಿಪ್ರಾಯಗರ್ಭಿತವಾದ ಮೃದುಮಧುರ ವಾಕ್ಯವನ್ನು ಇನ್ನೆಂದಿಗೆ

ಕೇಳುವೆನು ! ವನವನ್ನೈದಿ ದುಃಖಾಕ್ರಾಂತನಾಗಿ ಮದನಶರದಿಂದ ಕಂಗೆಟ್ಟ ನನ್ನನ್ನು ನೋಡಿದರೆ ಸೀತಾದೇವಿಯು ಮೃದುಭಾಷೆಯಿಂದ ನನ್ನ ಸಮಸ್ತ ದುಃಖವನ್ನೂ ನಿಲ್ಲಿಸುವಳು ! ಎಲೈ ಲಕ್ಷ್ಮಣ, ನಾನು ಸೀತಾದೇವಿಹೊರ್ತಾಗಿ ಅಯೋಧ್ಯಾಪಟ್ಟಣಕ್ಕೆ ಹೋದರೆ ನನ್ನ ತಾಯಾದ ಕೌಸಲ್ಯಾದೇವಿಯು ತನ್ನ ಸೊಸೆಯೆಲ್ಲಿದ್ದಾಳೆಂದು ಕೇಳಿದರೆ ಆಕೆಯುಕೂಡೆ ನಾನೇನೆಂದು ಹೇಳಲೀ ! ಎಲೈ ಲಕ್ಷ್ಮಣ, ನೀನು ಭರತನ ಸಮೀಪಕ್ಕೆ ಹೋಗು ; ನಾನು ಸೀತಾದೇವಿಹೊರ್ತಾಗಿ ಜೀವಿಸಲಾರೆನು " ಎಂದು ಅನಾಥನಂತೆ ಹಂಬಲಿಸುತ್ತಿದ್ದನು.

ಹಾಗೆ ಹಂಬಲಿಸುತ್ತಿದ್ದ ಮಹಾತ್ಮನಾದ ಶ್ರೀರಾಮನನ್ನು ಕುರಿತು ಲಕ್ಷ್ಮಣನು " ಎಲೈ ಪುರುಷೋತ್ತಮನಾದ ಶ್ರೀರಾಮನೆ, ದುಃಖವನ್ನು ಸಹಿಸಿಕೋ ; ನಿನ್ನಂಥಾ ಮಹಾತ್ಮರು ಹೀಗೆ ಹಂಬಲಿಸುವದು ಕಾರ್ಯವಲ್ಲ ; ಸೀತಾದೇವಿಯು ಅಗಲಿಕೆಯಿಂದುಂಟಾದ ದುಃಖವನ್ನು ಬಿಡು ; ನಿನ್ನ ಪ್ರಾಣಕಾಂತೆಯಾದ ಆ ದೇವಿಯಲ್ಲಿ ವ್ಯಾಮೋಹವನ್ನು ಬಿಡು ; ಅತ್ಯಂತ ಸ್ನೇಹವುಂಟಾದವರ ವಿಯೋಗಕಾಲದಲ್ಲಿ ಉಚಿತವಾದ ಕಾರ್ಯವನ್ನು ಮಾಡದಿದ್ದರೆ ಅತ್ಯಂತವಾದ ದುಃಖವು ಸಂಭವಿಸಿ ದೇಹವನ್ನು ಸುಡುವದು ; ರಾವಣನು ಸೀತಾದೇವಿಯನ್ನು ಅಪಹರಿಸಿಕೊಂಡು ಎಲ್ಲಿಗೆ ಹೋದಾನು ! ಪಾತಾಳಲೋಕವನ್ನು ಹೊಕ್ಕರೂ ಮತ್ತಾವ ಲೋಕವನ್ನು ಹೊಕ್ಕರೂ ಆತನು ನಿಲ್ಲಲಾರನು ; ನಾವು ಆತನಿರುವ ಸ್ಥಳವನ್ನು ಮೊದಲು ತಿಳಿದುಕೊಳ್ಳೋಣ ; ಆಮೇಲೆ ಅವನು ಸಂಧಿಯನ್ನು ಮಾಡಿಕೊಂಡು ಸೀತಾದೇವಿಯನ್ನು ಬಿಟ್ಟರೇ ತಪ್ಪಿದನು ; ಅಲ್ಲದಿದ್ದರೆ ಯಮಲೋಕವನ್ನೈದುವನೆಂದು ನಿಶ್ಚಯಿಸು ; ರಾವಣನು ಸೀತಾದೇವಿಯು ಸಹಿತವಾಗಿ ಭೂಗರ್ಭವನ್ನು ಹೊಕ್ಕರು ಬದುಕಲಾರನು ; ನೀನು ಈ ಕಾರ್ಪಣ್ಯಬುದ್ಧಿಯನ್ನು ಬಿಟ್ಟು ಸ್ವಸ್ಥಚಿತ್ತನಾಗು ; ಕೆಟ್ಟಕಾರ್ಯವನ್ನು ಸಾಧ್ಯಮಾಡಬೇಕೆಂಬವರಿಗೆ ಆ ಕಾರ್ಯವು ಆಗಲಾರದು ; ಕ್ಷತ್ರಿಯನು ಉತ್ಸಾಹಶಕ್ತಿಯನ್ನೇ ದೃಢವಾಗಿ ಆಶ್ರಯಿಸಬೇಕು ; ಉತ್ಸಾಹಶಕ್ತಿಗಿಂತಲೂ ಅಧಿಕವಾದ ಶಕ್ತಿಯಿಲ್ಲ ; ಉತ್ಸಾಹಪುರುಷನಾದವನಿಗೆ ಲೋಕದಲ್ಲಿ ಅಸಾಧ್ಯವಾದ ವಸ್ತುವು ಒಂದೂ ಇಲ್ಲ ; ಉತ್ಸಾಹಶಕ್ತಿಯುಳ್ಳ ಪುರುಷರು ಯಾವಸಮಯದಲ್ಲಿಯೂ ದುಃಖವನ್ನೈದರು ; ಆದಕಾರಣ ಉತ್ಸಾಹಶಕ್ತಿಯನ್ನಾಶ್ರಯಿಸಿ ಸೀತಾದೇವಿಯನ್ನರಸಿ ಕಾಣೋಣ ; ನೀನು ಈ ವಿರಹಶೋಕವನ್ನು ಸಾಕುಮಾಡಿ ನಿನ್ನ ಕಾಮುಕತ್ವವನ್ನು ಬಿಡು ; ನೀನು ಮಹಾತ್ಮನಾದ ಪರಮಪುರುಷನೆಂದು ನೀನರಿಯೆಯೇ ! " ಎಂದು ಲಕ್ಷ್ಮಣನು ಬೋಧಿಸಿದನು.

ಅತ್ಯಂತ ಪರಾಕ್ರಮಿಯಾದ ಶ್ರೀರಾಮನು ಶೋಕಮೋಹಗಳನ್ನು ಬಿಟ್ಟು ಧೈರ್ಯಗುಣವನ್ನಾಶ್ರಯಿಸಿ ಅತ್ಯಂತ ಮನೋಹರವಾದ ವನಗಳಲ್ಲಿ ಹರಿಯುವ ಪಂಪಾನದಿಯನ್ನು ದಾಟಿ ಪರ್ವತಝರಿಗಳನ್ನೂ ವಜ್ಝರಗಳನ್ನೂ ವನಗಳನ್ನೂ ನೋಡುತ ವಿರಹಶೋಕದಿಂದ ಚಿಂತಾಕ್ರಾಂತನಾಗಿ ಋಷ್ಯಮೂಕಪರ್ವತದಲ್ಲಿದ್ದ ಸುಗ್ರೀವನನ್ನರಸಿಕೊಂಡು ಪಂಪಾತೀರದಿಂದ ಮುಂದೆಹೊರಟು ಮದಸೊಕ್ಕಿದ ಆನೆಯಂತೆ ವಿಲಾಸಗಮನವುಳ್ಳವನಾಗಿ ದೃಢಚಿತ್ತವುಳ್ಳವನಾಗಿ ಲಕ್ಷ್ಮಣನ ಸಮೇತನಾಗಿ ತನ್ನ ಬಾಹುಬಲದಿಂದ ಆ ವನದಲ್ಲಿದ್ದ ಪ್ರಾಣಿಗಳನ್ನುರಕ್ಷಿಸುತ ಋಷ್ಯಮೂಕಪರ್ವತದ ಸಮೀಪದಲ್ಲಿದ್ದ ಅನೇಕವಾದ ವನಗಳಲ್ಲಿ ಸಂಚರಿಸುತ್ತಿದ್ದನು.

ಆಗ ಸಮಸ್ತ ಕಪಿಗಳಿಗೂ ಅಧಿಪತಿಯಾಗಿ ಬಲವಂತನಾದ ಸುಗ್ರೀವನು ರಾಮಲಕ್ಷ್ಮಣರನ್ನು ಕಂಡು ಅತ್ಯಂತ ಭಯಪಟ್ಟು ವ್ಯಾಕುಲಚಿತ್ತನಾಗಿ ಚಿಂತಾಭಾರದಲ್ಲಿ ಮುಳುಗಿ ತಾನಿದ್ದ ಆಶ್ರಮಕ್ಕೆ ಹೋಗಲು ಅಲ್ಲಿದ್ದ ಕಪಿಗಳು ಭಯಪಟ್ಟ ಸುಗ್ರೀವನನ್ನು ಕಂಡು ತಾವೂ ಭಯಪಟ್ಟು ಆ ಸ್ಥಳವನ್ನು ಬಿಟ್ಟು ಅತಿ ವೇಗದಿಂದ ಮತ್ತೊಂದು ಸ್ಥಳವನ್ನೈದುತ್ತಿದ್ದವು !

## ೧ನೇ ಅಧ್ಯಾಯ.

### ಹನುಮಂತನು ಶ್ರೀರಾಮನ ಬಳಿಗೆ ಹೋದದ್ದು.

ಎಲೈ ಕುಶಲವರುಗಳಿರಾ ಕೇಳಿರಿ, ಈ ಮರ್ಯಾದೆಯಲ್ಲಿ ದಿವ್ಯಾಯುಧಪಾಣಿಗಳಾದ ರಾಮಲಕ್ಷ್ಮಣರು ಋಷ್ಯಮೂಕಪರ್ವತದ ಸಮೀಪದಲ್ಲಿ ಸಂಚರಿಸುತ್ತಿರಲು ಸುಗ್ರೀವನು ಅವರನ್ನು ಕಂಡು ಮನಸ್ಸಿನಲ್ಲಿ ಅವರನ್ನು ವಾಲಿಯು ಕಳುಹಿಸಿದನೆಂದು ಭಯಪಟ್ಟು ಯಾವ ಸ್ಥಳದಲ್ಲಿಯೂ ದೃಢವಾಗಿ ನಿಲ್ಲದೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುತ ಆ ಸ್ಥಳದಲ್ಲಿರುವದು ಕಾರ್ಯವೋ ಅಲ್ಲವೋ ಎಂದು ಕಾರ್ಯವಿಭಾಗಗಳ ಗುರುಲಘುಗಳನ್ನು ಮನಸ್ಸಿನಲ್ಲಿ ಯೋಚಿಸುತ ತನ್ನ ಸಮೀಪದಲ್ಲಿದ್ದ ಕಪಿಗಳನ್ನು ಕರೆದು ಮಂತ್ರಾಲೋಚನೆಯನ್ನು ಮಾಡುತ ತನ್ನ ಪ್ರಧಾನಿಗಳನ್ನು ಕುರಿತು “ಎಲೈ ಮಂತ್ರಿಗಳಿರ, ಈ ಭಟರನ್ನು ವಾಲಿಯು ಕಳುಹಿಸಿರಬಹುದು ; ಈ ಅರ್ಥದಲ್ಲಿ ಸಂಶಯವಿಲ್ಲ ; ಇವರು ಆಯುಧಪಾಣಿಗಳಾಗಿದ್ದರೂ ನಾರುಶೀರೆಗಳನ್ನುಟ್ಟು ಕಪಟದಿಂದ ಈ ವನದಲ್ಲಿ ದಿಕ್ಕುದಿಕ್ಕುಗಳನ್ನು ನೋಡಿಕೊಂಡು ಬರುತ್ತಿದ್ದಾರೆ” ಎಂದು ಹೇಳಿದನು.

ಆ ಮಾತನ್ನು ಕೇಳಿ ಆ ಪ್ರಧಾನರು ಬಿಲ್ಲುಬಾಣಗಳನ್ನು ಧರಿಸಿಕೊಂಡಿದ್ದ ರಾಮಲಕ್ಷ್ಮಣರನ್ನು ನೋಡಿ ಆ ಪರ್ವತದಿಂದ ಮತ್ತೊಂದು ಪರ್ವತಕ್ಕೆ ಹೋಗಿ ತಮ್ಮ ಒಡೆಯನಾದ ಸುಗ್ರೀವನನ್ನು ಸುತ್ತುವರಿದುಕೊಂಡು ಆ ಪರ್ವತದ ಒಂದು ಕೋಡುಗಲ್ಲಿನಿಂದ ಮತ್ತೊಂದು ಕೋಡುಗಲ್ಲಿಗೆ ನೆಗೆದು ಒಂದು ವನದಿಂದ ಮತ್ತೊಂದು ವನಕ್ಕೆ ನೆಗೆದು ಬೆದರಿ ಓಡಿಯಾಡಿ ಅಲ್ಲಲ್ಲಿದ್ದ ಮರಗಳನ್ನು ಮುರಿದು ಸಿಂಹ ಶಾರ್ದೂಲಾದಿ ಮೃಗಗಳನ್ನು ಬೆದರಿಸಿ ಮಲಯಪರ್ವತಕ್ಕೆ ಬಂದು ವಾಲಿಯ ಕಪಟಕೃತ್ಯದಿಂದ ಕಂಗೆಟ್ಟಿದ್ದ ಸುಗ್ರೀವನ ಸಮೀಪದಲ್ಲಿ ಕೈಮುಗಿದುಕೊಂಡಿದ್ದರು. ಆ ಸಮಯದಲ್ಲಿ ನುಡಿಜಾಣ್ಮೆಯುಳ್ಳ ಹನುಮಂತನು ಕೈಮುಗಿದುಕೊಂಡು ಸುಗ್ರೀವನನ್ನು ಕುರಿತು “ಎಲೈ ಸ್ವಾಮಿ, ನೀನು ಕಂಗೆಡಬೇಡ ; ಇದೆಲ್ಲವೂ ವಾಲಿಯ ಕಪಟಕೃತ್ಯವಲ್ಲದೆ ಮತ್ತೊಂದಲ್ಲ ; ಹಾಗಾದರೂ ನಾವು ಈ ಪರ್ವತವನ್ನು ಸೇರಿದೆವು ; ಇಲ್ಲಿ ವಾಲಿಯಿಂದ ಭಯವಿಲ್ಲ ; ಯಾವನೊಬ್ಬನ ಭಯದಿಂದ ಕಂಗೆಟ್ಟು ನೀನಿಲ್ಲಿಗೆ ಬಂದೆಯೋ ಅಂಥಾ ವಾಲಿಯು ಇಲ್ಲಿಗೆ ಬರಲಾರನು ; ನಿನ್ನ ಅಣ್ಣನಾದ ವಾಲಿಯ ಭಯವಿಲ್ಲಿಲ್ಲ ; ನೀನು ಸುಮ್ಮನೇ ಬೆದರಬೇಡ ; ಕಪಿಗಳು ಚಿತ್ತಚಂಚಲವುಳ್ಳವೆಂಬದು ಈಗ ಪ್ರತ್ಯಕ್ಷವಾಯಿತು ; ನಿನಗೆ ಬುದ್ಧಿಚಂಚಲವಾದಕಾರಣ ಮನಸ್ಸಿನಲ್ಲಿ ಧೈರ್ಯವನ್ನು ಮಾಡಿಕೊಳ್ಳದಿದ್ದೀ ; ನೀನು ಬುದ್ಧಿವಂತನಾಗಿ ಈ ಭಟರ ಇಂಗಿತಗಳನ್ನು ತಿಳಿದು ಮಾಡಬೇಕಾದ ಕಾರ್ಯವನ್ನು ವಿಚಾರಿಸು ; ಬುದ್ಧಿಹೀನನಾದ ಅರಸನು ಪ್ರಜೆಗಳನ್ನು ಪರಿಪಾಲಿಸಲಾರನು” ಎಂದು ಹೇಳಿದನು.

ಆ ವಾಕ್ಯವನ್ನು ಕೇಳಿ ಸುಗ್ರೀವನು ಹನುಮಂತನನ್ನು ಕುರಿತು “ಎಲೈ ಹನುಮಂತನೆ, ಈ ಭಟರನ್ನು ನೋಡು ; ಇವರು ನಿಡಿದಾದ ತೋಳುಗಳುಳ್ಳವರಾಗಿ ವಿಶಾಲವಾದ ಕಣ್ಣುಗಳುಳ್ಳವರಾಗಿ ಬಿಲ್ಲುಬಾಣ ಖಡ್ಗಗಳನ್ನು ಧರಿಸಿದವರಾಗಿ ಸಾಕ್ಷಾತ್ ದೇವೋತ್ತಮರಂತೆ ಒಪ್ಪುತ್ತಿದ್ದಾರೆ ; ಇಂಥಾವರನ್ನು ಕಂಡರೆ ಲೋಕದಲ್ಲಿ ಯಾರಿಗೆ ತಾನೆ ಭಯಹುಟ್ಟದು ! ನನ್ನ ಮನಸ್ಸಿಗೆ ವಾಲಿಯು ನಮಗೆ ಉಪದ್ರವವನ್ನು ಮಾಡಬೇಕೆಂದು ಇವರನ್ನು ಕಳುಹಿಸಿರಬಹುದೆಂದು ತೋರುತ್ತದೆ ; ಲೋಕದಲ್ಲಿ ಅರಸರು ಕಾರ್ಯಾರ್ಥವಾಗಿ ಬಹುಮಂದಿಯ ಕೂಡೆ ಸ್ನೇಹಮಾಡಿಕೊಂಡಿರುವರು ; ಆದಕಾರಣ ಅವರನ್ನು ನಂಬಬಾರದು ; ಲೋಕದಲ್ಲಿ ಅರಸರು ಬೇಹುಗಾರರಿಂದಲೇ ಶತ್ರುಗಳನ್ನು ಜಯಿಸುವರು ; ಆ ಬೇಹುಗಾರರು ಉಪಾಯದಿಂದ ನಂಬಿಸಿ ಸಮಯಬಂದಾಗ ಪೆಟ್ಟುಹಾಕುವರು ; ಅವರನ್ನು ಯಾವ ಸಮಯದಲ್ಲೂ ನಂಬಬಾರದು ; ಆದಕಾರಣ ನೀನು ಒಬ್ಬ ಹ-ಲುಮನುಷ್ಯರೂಪದಿಂದ ಅವರ ಸಮೀಪಕ್ಕೆ ಹೋಗಿ ಅವರ ಚರಿತ್ರವನ್ನು ನೋಡಿ ಅವರಕೂಡೆ ಸಂಭಾಷಣೆ ಮಾಡಿ ಅವರ ವಚನಪ್ರಮಾಣಗಳಿಂದ ಅವರ ಇಂಗಿತಭಾವಗಳನ್ನು ತಿಳಿದು ಅವರಿಗೆ ನಿನ್ನಮೇಲೆ ವಿಶ್ವಾಸಹುಟ್ಟುವ ಮರ್ಯಾದೆಯಲ್ಲಿ ವಿನಯೋಕ್ತಿಗಳಿಂದ ಮೃದುನುಡಿಗಳನ್ನು

ನಾಡಿದು ಬಿಲ್ಲುಬಾಣಗಳನ್ನು ಧರಿಸಿಕೊಂಡು ಶುದ್ಧಾತ್ಮರಾಗಿ ಮಹಾತ್ಮರಾದ ಆ ಭಟರು ಇಲ್ಲಿಗೆ ಬಂದ ಕಾರಣವನ್ನು ತಿಳಿದು ಅವರ ಮಾತುಗಳನ್ನು ಮನಸ್ಸಿನಲ್ಲಿ ಗ್ರಹಿಸಿ ಅವರ ಸೌಮ್ಯಸ್ವಭಾವ ದುಷ್ಟಸ್ವಭಾವಗಳನ್ನು ತಿಳಿದುಕೊಂಡು ಬಾ" ಎಂದು ಹೇಳಿದನು.

ಆ ಬಳಿಕ ವಾಯುಪುತ್ರನಾದ ಹನುಮಂತನು ಸುಗ್ರೀವನ ವಾಕ್ಯವನ್ನು ಮಹಾಪ್ರಸಾದವೆಂದು ಅಂಗೀಕರಿಸಿ ಆತನಿಂದ ಕಳುಹಿಸಿಕೊಂಡು ಮಹಾಬಲಪರಾಕ್ರಮಿಗಳಾದ ರಾಮಲಕ್ಷ್ಮಣರ ಸಮೀಪಕ್ಕೆ ಹೋದನು.

## ೩ನೇ ಅಧ್ಯಾಯ.

### ಲಕ್ಷ್ಮಣನು ಹನುಮಂತನಿಗೆ ತಮ್ಮ ವೃತ್ತಾಂತವನ್ನು ಹೇಳಿದ್ದು.

ಎಲೈ ಕುಶಲವರುಗಳಿರಾ ಕೇಳಿರಿ, ಈ ಮರ್ಯಾದೆಯುಳ್ಳ ಮಹಾತ್ಮನಾದ ಸುಗ್ರೀವನ ಮಾತನ್ನು ಕೇಳಿ ಹನುಮಂತನು ಋಷ್ಯಮೂಕಪರ್ವತದಿಂದ ರಾಮಲಕ್ಷ್ಮಣರಿದ್ದ ಸ್ಥಳಕ್ಕೆ ನೆಗೆದುಹೋಗಿ ಕಪಿರೂಪವನ್ನು ಬಿಟ್ಟು ಸನ್ಯಾಸಿವೇಷವನ್ನು ಧರಿಸಿಕೊಂಡು ರಾಮಲಕ್ಷ್ಮಣರನ್ನು ಕಂಡು ನಮಸ್ಕರಿಸಿ ಅತಿವಿನಯದಿಂದ ಅವರನ್ನು ಕುರಿತು "ಎಲೈ ಭಟರುಗಳಿರಾ, ನಿಮ್ಮ ಸ್ವರೂಪವನ್ನು ನೋಡಿದರೆ ವ್ರತನಿಯಮವುಳ್ಳವರಾದ ರಾಜರ್ಷಿಗಳಂತೆ ಒಪ್ಪುತ್ತಿದ್ದೀರಿ; ನೀವು ಅತ್ಯಂತ ತನುಕಾಂತಿಯುಳ್ಳವರು; ಈ ದೇಶಕ್ಕೆ ಹ್ಯಾಗೆ ಬಂದಿರಿ? ನೀವು ಮಹಾ ಧೈರ್ಯವಂತರು; ನಾರುಶೀರೆ ಕೃಷ್ಣಾಜಿನಗಳನ್ನು ಧರಿಸಿಕೊಂಡಿರುವ ನೀವ್ಯಾರು! ನೀವು ಮಹಾ ದುಃಖಾಕ್ರಾಂತರಾಗಿ ನಿಟ್ಟುಸುರುಬಿಡುತ ಸಮಸ್ತ ಪ್ರಾಣಿಗಳಿಗೂ ದುಃಖವನ್ನುಂಟುಮಾಡುತ್ತಿದ್ದೀರಿ; ನೀವು ಸಿಂಹದಂತೆ ಗಂಭೀರ ದೃಷ್ಟಿಯುಳ್ಳವರು; ಸಿಂಹರಾಜನಿಗಿಂತಲು ವಿಶೇಷವಾದ ಪರಾಕ್ರಮವುಳ್ಳವರು; ನಿಮ್ಮ ಕೈಯಲ್ಲಿರುವ ಬಿಲ್ಲುಬಾಣಗಳು ಇಂದ್ರಚಾಪದಂತೆ ಮನೋಹರವಾಗಿವೆ; ನಿಮ್ಮ ಆಕಾರವನ್ನು ನೋಡಿದರೆ ಸಮಸ್ತ ಶತ್ರುಗಳನ್ನು ಜಯಿಸುವಿರೆಂದು ತೋರುತ್ತದೆ; ನೀವು ಮಹಾ ರೂಪಸಂಪನ್ನರಾಗಿ ಐಶ್ವರ್ಯವಂತರಾಗಿದ್ದೀರಿ; ನಿಮ್ಮ ಭುಜಗಳು ಆನೆಸೊಂಡಿಲಂತೆ ಮನೋಹರವಾಗಿ ಒಪ್ಪುತ್ತಿವೆ; ನೀವು ಮಹಾಕಾಂತಿಯುಳ್ಳವರು; ನಿಮ್ಮನ್ನು ನೋಡಿದರೆ ಮದಸೊಕ್ಕಿದ ವೃಷಭರಾಜನಂತೆ ಒಪ್ಪುತ್ತಿದ್ದೀರಿ; ನಿಮ್ಮ ಶರೀರಕಾಂತಿಯಿಂದ ಈ ಪರ್ವತವೆಲ್ಲವು ಬೆಳಗುತ್ತಿದೆ; ನೀವು ರಾಜ್ಯಾಧಿಪತ್ಯಕ್ಕೆ ಯೋಗ್ಯವಾದ ದೇವತಾವಂಶದವರಲ್ಲದೆ ಮನುಷ್ಯರಲ್ಲ; ನೀವು ಈ ದೇಶಕ್ಕೆ ಬಂದ ಕಾರಣವೇನು? ನೀವು ಕಮಲದ ಎಸಳಿನಂತೆ ವಿಶಾಲವಾದ ಕಣ್ಣುಗಳುಳ್ಳವರು; ಮಹಾ ಪರಾಕ್ರಮಿಗಳು; ಹಾಗಾದರೂ ಜಡೆಗಳನ್ನು ಧರಿಸಿಕೊಂಡಿದ್ದೀರಿ; ರೂಪದಲ್ಲಿ ಒಬ್ಬರಿಗೊಬ್ಬರು ಸಮಾನರಾಗಿದ್ದೀರಿ; ನೀವು ದೈವಾಧೀನದಿಂದ ಭೂಲೋಕಕ್ಕೆ ಬಂದ ಚಂದ್ರಸೂರ್ಯರಂತೆ ಒಪ್ಪುತ್ತಿದ್ದೀರಿ; ತೆರಪಾದ ಎದೆಕಟ್ಟುಗಳುಳ್ಳವರಾಗಿ ಮಹಾಬಲವಂತರಾಗಿ ಮನುಷ್ಯಾವತಾರಮಾಡಿದ ದೇವತೆಗಳಂತೆ ಒಪ್ಪುತ್ತಿದ್ದೀರಿ; ಸಿಂಹರಾಜನಂತೆ ಹೆಕ್ಕತ್ತುಳ್ಳವರಾಗಿ ಅತ್ಯಂತ ಉತ್ಸಾಹಶಕ್ತಿಯುಳ್ಳವರಾಗಿದ್ದೀರಿ; ನಿಮ್ಮ ತೋಳುಗಳು ನಿಡಿದಾಗಿ ಕ್ರಮವರ್ತುಳವಾಗಿ ಲಾಳವಿಂಡಿಗೆಯಂತೆ ಒಪ್ಪುತ್ತಿವೆ; ನಿಮ್ಮ ಭುಜಗಳು ಬಾಹುಪುರಿ ಮೊದಲಾದ ದಿವ್ಯಾಭರಣಗಳಿಗೆ ಯೋಗ್ಯವಾದಂಥಾವು; ಇಂಥಾ ಭುಜಗಳನ್ನು ಯಾಕೆ ಅಲಂಕರಿಸಿಕೊಳ್ಳದಿದ್ದೀರಿ; ನಿಮ್ಮನ್ನು ನೋಡಿದರೆ ಈ ಭೂಮಂಡಲವನ್ನು ರಕ್ಷಿಸುವದಕ್ಕೆ ಯೋಗ್ಯವಾದವರೆಂದು ತೋರುತ್ತದೆ; ನೀವು ಸಮುದ್ರಪರ್ಯಂತವಾಗಿ ಹಿಮವತ್ಸೇತುಮಧ್ಯದಲ್ಲಿರುವ ಸಮಸ್ತ ಭೂಮಂಡಲಕ್ಕೂ ರಕ್ಷಕರಾದವರೆಂದು ತೋರುತ್ತಿದೆ; ನಯನುಣುಪಾಗಿ ಚಿನ್ನದ ಮುಲಾಮುಳ್ಳವಾಗಿ ರತ್ನಖಚಿತವಾದ ನಿಮ್ಮ ಬಿಲ್ಲುಗಳು ಇಂದ್ರಚಾಪದಂತೆ ಒಪ್ಪುತ್ತಿವೆ; ಮೆರೆಯುತ್ತಿರುವ ಸರ್ಪಗಳಂತೆ ಶತ್ರುಗಳ ಪ್ರಾಣಾಪಹಾರಮಾಡುವಂಥಾವಾಗಿ ಕೂರಲಗುಳ್ಳವಾಗಿ ಮಹಾಭಯಂಕರವಾದ ಅಂಬುಗಳಿಂದ ಪರಿಪೂರ್ಣವಾದ ನಿಮ್ಮ ಬತ್ತಳಿಕೆಗಳು ರಮಣೀಯವಾಗಿ ಒಪ್ಪುತ್ತಿವೆ; ರತ್ನಖಚಿತವಾಗಿ ಸುವರ್ಣಗಳ ಪರಜುಗಳುಳ್ಳವಾಗಿ ಅತಿ

ನಿಡಿದಾಗಿ ತೆರವಾದ ಅಲಗುಗಳುಳ್ಳ ನಿಮ್ಮ ಖಡ್ಗಗಳು ಪೊರೆಗಳೆದ ಮಹಾಸರ್ಪಗಳಂತೆ ಒಪ್ಪುತ್ತಿವೆ! ಎಲೈ ಭಟರುಗಳಿರಾ, ನಿಮ್ಮಕೂಡೆ ಸಂಭಾಷಣೆಮಾಡುವ ನನ್ನಕೂಡೆ ಯಾಕೆ ಪ್ರತಿವಚನಗಳನ್ನು ನುಡಿಯದಿದ್ದೀರಿ; ಇನ್ನು ನನ್ನ ವೃತ್ತಾಂತವನ್ನು ಕೇಳಿರಿ: ಧರ್ಮಾತ್ಮನಾಗಿ ಸತ್ಯವಾದಿಯಾದ ಸುಗ್ರೀವನು ನಿಮ್ಮಕೂಡೆ ಸ್ನೇಹವನ್ನು ಬಯಸುತ್ತಿದ್ದಾನೆ; ನಾನು ಆತನ ಪ್ರಧಾನನು; ವಾಯುಪುತ್ರನು; ಜಾತಿಯಲ್ಲಿ ಕಪೀಶ್ವರನು; ನಾನು ಸುಗ್ರೀವನ ಕಾರ್ಯವನ್ನು ಸಾಧಿಸಿ ಆತನ ಚಿತ್ತಪ್ರಸಾದವನ್ನು ಪಡೆಯಬೇಕೆಂದು ವಾನರರೂಪವನ್ನು ಮರೆಸಿಕೊಂಡು ಸನ್ಯಾಸಿವೇಷದಿಂದ ಋಷ್ಯಮೂಕಪರ್ವತದಿಂದ ಇಲ್ಲಿಗೆ ಬಂದೆನು; ನಾನು ಕಾಮರೂಪಿಯು; ಯಾವ ಸ್ಥಳಕ್ಕೆ ಹೋಗಬೇಕಾದರೂ ಹೋಗುವ ಸಾಮರ್ಥ್ಯವುಳ್ಳವನು!" ಎಂದು ನುಡಿದನು.

ಆ ಮಾತನ್ನು ಕೇಳಿ ಶ್ರೀರಾಮನು ತನ್ನ ಬಲಭಾಗದಲ್ಲಿದ್ದ ಲಕ್ಷ್ಮಣನನ್ನು ಕುರಿತು "ಎಲೈ ಲಕ್ಷ್ಮಣ, ಈತನು ಕಪೀಶ್ವರನಾಗಿ ಮಹಾತ್ಮನಾದ ಸುಗ್ರೀವನ ಪ್ರಧಾನನು; ಸುಗ್ರೀವನೊಡನೆ ಸ್ನೇಹವನ್ನು ಬಯಸುತ್ತಿರುವ ನಮ್ಮನ್ನು ಅರಸಿಕೊಂಡು ಬಂದಿದ್ದಾನೆ! ಎಲೈ ಲಕ್ಷ್ಮಣ, ಸುಗ್ರೀವನ ಪ್ರಧಾನನಾದ ಈತನಕೂಡೆ ಸಂಭಾಷಣೆಮಾಡು; ಈತನು ಮಹಾ ನುಡಿಜಾಣ್ಮೆಯುಳ್ಳವನು; ಈತನಕೂಡೆ ಅತಿ ವಿನಯದಿಂದ ಮಾತನಾಡು; ಋಗ್ವೇದ ಯಜುರ್ವೇದ ಸಾಮವೇದ ಅಥರ್ವಣವೇದಗಳ ರಹಸ್ಯಗಳನ್ನು ಬಲ್ಲದವನು ಇಂಥಾ ಮಾತುಗಳನ್ನು ನುಡಿಯಲಾರನು; ಈತನು ವ್ಯಾಕರಣಶಾಸ್ತ್ರದಲ್ಲಿ ಪರಿಶೀಲವುಳ್ಳವನು; ಇಷ್ಟು ಮಾತುಗಳನ್ನು ನುಡಿದರೂ ಮರವೆಯಿಂದಲಾದರೂ ಒಂದು ಅಪಶಬ್ದವನ್ನು ನುಡಿಯಲಿಲ್ಲ; ಈತನು ಮಾತನಾಡುವಾಗ ಮುಖದಲ್ಲಾದರೂ ಕಣ್ಣುಗಳಲ್ಲಾದರೂ ಹಣೆಯಲ್ಲಾದರೂ ಹುಬ್ಬುಗಳಲ್ಲಾದರೂ ಮಿಕ್ಕ ಅಂಗಗಳಲ್ಲಾದರೂ ಯಾವ ದುಶ್ಚೇಷ್ಟೆಗಳೂ ಕಾಣಿಸಲಿಲ್ಲ; ಈತನ ವಾಕ್ಯವು ಅತಿ ವಿಸ್ತಾರವಲ್ಲದ್ದಾಗಿಯೂ ಸಂಕ್ಷೇಪವಲ್ಲದ್ದಾಗಿಯೂ ಅತಿ ನಿದಾನವಲ್ಲದ್ದಾಗಿಯೂ ಅತಿ ಶೀಘ್ರವಲ್ಲದ್ದಾಗಿಯೂ ಕರ್ಣಕಠೋರವಲ್ಲದ್ದಾಗಿಯೂ ನಾಭಿಮುಟ್ಟಿದ ಸ್ವರವುಳ್ಳದ್ದಾಗಿಯೂ ಕೊರಳಲ್ಲಿ ಸೊರಳೆಯುಳ್ಳದ್ದಾಗಿಯೂ ಅತಿ ಸ್ವರವುಳ್ಳದಲ್ಲದ್ದಾಗಿಯೂ ಅತಿ ಮೆಲ್ಲಗಲ್ಲದ್ದಾಗಿಯೂ ಅತಿ ಮನೋಹರವಾದ್ದಾಗಿ ಕಿವಿಗಿಂಪಾಗಿದೆ; ಈತನು ಅರ್ಥಗರ್ಭಿತವಾದ್ದಾಗಿ ಕೇಳುವದಕ್ಕೆ ಇಚ್ಛೆಯುಳ್ಳದ್ದಾಗಿ ಶುಭವಾರ್ತೆಯುಳ್ಳದ್ದಾಗಿ ಅಂತರಂಗಕ್ಕೆ ಪರಿಣಾಮಹುಟ್ಟಿಸುವಂಥಾದ್ದಾಗಿ ವಿನಯಗುಣಸಂಪತ್ತಿಯುಳ್ಳ ಮಾತುಗಳನ್ನಾಡುತ್ತಾನೆ; ಇಂಥಾ ವಿಚಿತ್ರವಾಗಿ ಹೃದಯ ಕಂಠ ಶಿರಸ್ಸುಗಳೆಂಬ ತ್ರಯಸ್ಥಾನಗಳಲ್ಲಿ ವ್ಯಾಪಿಸುವ ಮಾತುಗಳಿಂದ ವಕ್ಷಾದಿಗಳುಳ್ಳ ಯಾವ ಪುರುಷನ ಮನಸ್ಸುತಾನೇ ಕರಗದು! ಇಂಥಾ ಪ್ರಧಾನನು ಯಾವ ದೊರೆಯ ಬಳಿಯಲ್ಲಿರುವನೋ ಆ ದೊರೆಯ ಕಾರ್ಯವು ಸಿದ್ಧಿಯಾಗದಿರುವದೇ! ಇಂಥಾ ಸದ್ಗುಣಯುಕ್ತನಾಗಿ ಕಾರ್ಯಸಾಧಕನಾದ ಪ್ರಧಾನನು ಯಾವನಿಗಿರುವನೋ ಆತನ ಕಾರ್ಯಗಳು ವಿಘ್ನವಿಲ್ಲದೆ ಸಿದ್ಧಿಯಾಗುವದು" ಎಂದು ನುಡಿದನು.

ಆ ಮಾತನ್ನು ಕೇಳಿ ಲಕ್ಷ್ಮಣನು ವಾನರೇಶ್ವರನಾಗಿ ಸರ್ವಜ್ಞನಾದ ಹನುಮಂತನನ್ನು ಕುರಿತು "ಎಲೈ ವಾಯುಪುತ್ರನೆ, ನಿನ್ನ ಮುಖವಾರ್ತೆಯಿಂದ ಮಹಾತ್ಮನಾದ ಸುಗ್ರೀವನ ಗುಣಕಥನಗಳನ್ನು ಕೇಳಿದೆವು; ನಾವು ಸುಗ್ರೀವನನ್ನು ಹುಡುಕಿಕೊಂಡು ಬಂದೆವು; ನೀನು ಆತನಿಗಾಗಿ ಏನು ಹೇಳಿದರೂ ಕೇಳುವೆವು" ಎಂದು ಹೇಳಿದನು.

ಹನುಮಂತನು ಅತ್ಯಂತ ಸಂತೋಷಯುಕ್ತನಾಗಿ ತನ್ನ ಒಡೆಯನಾದ ಸುಗ್ರೀವನ ಕಾರ್ಯವು ಸಾಧ್ಯವಾಯಿತೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ಆತನಿಗೆ ರಾಮಲಕ್ಷ್ಮಣರೊಡನೆ ಅವಶ್ಯವಾಗಿ ಸ್ನೇಹವನ್ನುಂಟುಮಾಡಬೇಕೆಂದು ನಿಶ್ಚಯಿಸಿದನು.

## ೪ನೇ ಅಧ್ಯಾಯ.

## ಹನುಮಂತನು ರಾಮಲಕ್ಷ್ಮಣರನ್ನು ಸುಗ್ರೀವನ ಬಳಿಗೆ ಕರೆದುಕೊಂಡು ಹೋದದ್ದು.

ಆ ಬಳಿಕ ಹನುಮಂತನು ಅತ್ಯಂತ ಸಂತೋಷಚಿತ್ತನಾಗಿ ಮಹಾತ್ಮನಾದ ಸುಗ್ರೀವನಿಗೆ ರಾಜ್ಯಪ್ರಾಪ್ತಿಯಾಗುವದೆಂದೂ ಮನಸ್ಸಿನಲ್ಲಿ ಶ್ರೀರಾಮನು ಬಂದ ಕಾರ್ಯಕ್ಕೆ ಅದು ಸಮಯವೆಂದೂ ಸುಗ್ರೀವನು ತನ್ನ ಅಣ್ಣನಾದ ವಾಲಿಯಿಂದ ಪರಾಜಿತನಾಗಿ ತನ್ನ ಸ್ತ್ರೀಯನ್ನು ಬಿಟ್ಟು ಋಷ್ಯಮೂಕಪರ್ವತಕ್ಕೆ ಬಂದಿರಲು ಶ್ರೀರಾಮನೂ ಆವಸ್ಥೆಯಿಂದ ಬಂದದ್ದರಿಂದ ಅವರಿಬ್ಬರೂ ಅನ್ಯೋನ್ಯವಾಗಿ ತಮ್ಮ ಕಾರ್ಯಗಳನ್ನು ಸಾಧ್ಯಮಾಡಿಕೊಳ್ಳುವರೆಂದೂ ಅತಿ ಹರ್ಷಯುಕ್ತನಾಗಿ ನುಡಿಜಾಣ್ಮೆಯಿಂದ ಶ್ರೀರಾಮನನ್ನು ಕುರಿತು "ಎಲೈ ಶ್ರೀರಾಮನೆ, ನೀನು ಯಾವ ಕಾರಣದಿಂದ ಈ ಘೋರಾರಣ್ಯಕ್ಕೆ ಬಂದೆ?" ಎಂದು ಕೇಳಿದನು.

ಶ್ರೀರಾಮನು ಲಕ್ಷ್ಮಣನ ಮುಖವನ್ನು ನೋಡಲು ಆತನು ಹನುಮಂತನನ್ನು ಕುರಿತು "ಎಲೈ ವಾಯುಪುತ್ರನೆ, ಅಯೋಧ್ಯಾಪಟ್ಟಣದಲ್ಲಿ ದಶರಥನೆಂಬ ರಾಯನಿದ್ದನು; ಆತನು ಧರ್ಮಮಾರ್ಗಪರಿಪಾಲಕನು; ತನ್ನ ಕ್ಷತ್ರಿಯಧರ್ಮದಿಂದ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕುಜಾತಿಗಳನ್ನೂ ಬ್ರಹ್ಮಚಾರಿ ಗೃಹಸ್ಥ ವಾನಪ್ರಸ್ಥ ಯತಿಗಳೆಂಬ ನಾಲ್ಕಾಶ್ರಮದವರನ್ನೂ ತಮ್ಮ ತಮ್ಮ ಆಚಾರಗಳಲ್ಲಿ ನಡೆಯುವಂತೆ ಕಟ್ಟುಮಾಡುತ ಸಮಸ್ತ ರಾಜ್ಯವನ್ನು ಪರಿಪಾಲಿಸಿಕೊಂಡಿದ್ದನು; ಸಮಸ್ತ ಪ್ರಜೆಗಳನ್ನೂ ತನ್ನ ಮಕ್ಕಳಂತೆ ರಕ್ಷಿಸಿಕೊಂಡಿದ್ದನು; ಶ್ರೀರಾಮನು ಅಗ್ನಿಷ್ಟೋಮಾದಿ ಯಾಗಗಳನ್ನು ಮಾಡಿ ಬ್ರಾಹ್ಮಣರಿಗೆ ಬಹು ದಕ್ಷಿಣೆಗಳನ್ನು ಕೊಟ್ಟು ಪರಿಪಾಲಿಸಿಕೊಂಡಿದ್ದ ಆ ದಶರಥರಾಯನ ಜ್ಯೇಷ್ಠಪುತ್ರನು; ಈತನು ಸಕಲ ಲೋಕಗಳಲ್ಲಿಯೂ ಮಹಾಪ್ರಸಿದ್ಧನು; ಸಮಸ್ತ ಪ್ರಾಣಿಗಳಿಗೂ ರಕ್ಷಕನು; ಮಹಾಪರಾಕ್ರಮಿಯು; ದಶರಥರಾಯನ ನಾಲ್ವರು ಕುಮಾರರಲ್ಲಿ ಈತನು ಗುಣಾಧಿಕನು; ರಾಜಲಕ್ಷಣಸಂಪನ್ನನು; ಇಂಥಾ ಸ್ವಾಮಿಯು ತನ್ನ ತಂದೆಯಾದ ದಶರಥರಾಯನ ಅಪ್ಪಣೆಯಿಂದ ತನ್ನ ಪತ್ನಿಯಾದ ಸೀತಾದೇವಿಯನ್ನು ಕರೆದುಕೊಂಡು ಈ ವನಕ್ಕೆ ಬಂದನು; ಸಾಯಂಕಾಲಸಮಯದಲ್ಲಿ ಸೂರ್ಯಪ್ರಭೆಯು ಸೂರ್ಯನ ಬೆನ್ನಿಡಿದು ಹೋಗುವಂತೆ ನಾನು ಈತನ ಹಿಂದೆ ಸಂಚರಿಸಿಕೊಂಡಿರುವೆನು; ನಾನು ಈತನ ತಮ್ಮನು; ಮಾಡಿದ ಉಪಕಾರವನ್ನು ಮರೆಯುವವನಲ್ಲ; ನನ್ನ ಹೆಸರು ಲಕ್ಷ್ಮಣನು; ರಾಜ್ಯಸುಖವನ್ನನುಭವಿಸಿಕೊಂಡಿದ್ದು ಸಮಸ್ತ ರಾಜ್ಯಸುಖವನ್ನೂ ಬಿಟ್ಟು ನಮ್ಮ ಸಂಗಡ ವನಕ್ಕೆ ಬಂದ ಈತನ ಪತ್ನಿಯನ್ನು ರಾವಣನು ಅಪಹರಿಸಿಕೊಂಡು ಹೋದನು; ರಾವಣನ ಸ್ವರೂಪವನ್ನು ನಾವು ತಿಳಿದವರಲ್ಲ! ಬ್ರಹ್ಮಪುತ್ರನಾದ ಒಬ್ಬ ಗಂಧರ್ವನು ತನ್ನ ಸೌಂದರ್ಯಗರ್ವದಿಂದ ಬ್ರಾಹ್ಮಣರನ್ನವಮಾನ್ನಣೆಮಾಡಿ ಶಾಪದಿಂದ ಕಬಂಧನೆಂಬ ರಾಕ್ಷಸನಾಗಿ ಹುಟ್ಟಿ ಶ್ರೀರಾಮನ ಶರಹತಿಯಿಂದ ಕಂಗೆಟ್ಟು ಘಾಯಪಡೆದು ಬಿದ್ದು ರಾಕ್ಷಸದೇಹವನ್ನು ಬಿಟ್ಟು ತನ್ನ ಮೊದಲ ದಿವ್ಯದೇಹವನ್ನು ತಾಳಿ ಜ್ಞಾನದೃಷ್ಟಿಯಿಂದ ರಾವಣನು ಸೀತಾದೇವಿಯನ್ನಪಹರಿಸಿಕೊಂಡು ಹೋದ ವೃತ್ತಾಂತವನ್ನು ಹೇಳಿ ನಾವು ಸುಗ್ರೀವನ ಸ್ನೇಹವನ್ನು ಮಾಡಿಕೊಂಡರೆ ರಾವಣನನ್ನು ಜಯಿಸಿ ಸೀತಾದೇವಿಯನ್ನು ಸಾಧ್ಯಮಾಡಿಕೊಳ್ಳಬಹುದೆಂದೂ ಸುಗ್ರೀವನು ಸಮಸ್ತ ವೃತ್ತಾಂತಗಳನ್ನೂ ಬಲ್ಲವನೆಂದೂ ಮಹಾಪರಾಕ್ರಮಿಯೂ ಸದ್ಗುಣಸಂಪನ್ನನೂ ಎಂದು ಹೇಳಿ ಸ್ವರ್ಗವನ್ನೈದಿದನು; ಆಮೇಲೆ ನಾವು ಕಬಂಧನ ಮಾತಿನಲ್ಲಿ ವಿಶ್ವಾಸವಿಟ್ಟು ಇಲ್ಲಿಗೆ ಬಂದೆವು; ಸುಗ್ರೀವನ ಶರಣುಹೊಕ್ಕೆವು; ಪೂರ್ವದಲ್ಲಿ ಅನೇಕ ದ್ರವ್ಯವನ್ನು ವೆಚ್ಚಮಾಡಿ ಅನೇಕ ಕೀರ್ತಿಯನ್ನು ಪಡೆದು ಸಕಲ ಲೋಕನಾಯಕನಾಗಿದ್ದ ಶ್ರೀರಾಮನು ಸುಗ್ರೀವನ ಸಹಾಯವನ್ನು ಬಯಸುತ್ತಿದ್ದಾನೆ; ಸಮಸ್ತರಿಗೂ ಶರಣುಹೊಕ್ಕಲು ಯೋಗ್ಯನಾಗಿ ಸಮಸ್ತ ಲೋಕರಕ್ಷಕನಾಗಿ ದಶರಥಮಹಾರಾಯನ ಕುಮಾರನಾದ ಶ್ರೀರಾಮನು ಸುಗ್ರೀವನ ಶರಣುಹೊಕ್ಕನು; ಯಾವನೊಬ್ಬನ ಕೃಪಾದೃಷ್ಟಿಯಿಂದ ಸಮಸ್ತ ಪ್ರಜೆಗಳೂ ಕೃತಾರ್ಥರಾಗುವರೋ ಅಂಥಾ ಶ್ರೀರಾಮನು ಸುಗ್ರೀವನ ಸಹಾಯವನ್ನು ಬಯಸುತ್ತಿದ್ದಾನೆ; ಯಾವನೊಬ್ಬ

ರಾಮನಿಂದ ಸಮಸ್ತ ರಾಯರೂ ಸನ್ಮಾನದಿಂದ ರಕ್ಷಿಸಲ್ಪಟ್ಟರೋ ಅಂಥಾ ದಶರಥರಾಯನ ಜ್ಯೇಷ್ಠಪುತ್ರನಾಗಿ ಸಮಸ್ತ ಲೋಕಗಳಲ್ಲಿಯೂ ಪ್ರಸಿದ್ಧನಾದ ಶ್ರೀರಾಮನು ಸುಗ್ರೀವನ ಶರಣುಹೊಕ್ಕನು; ಸಮಸ್ತ ಲೋಕನಾಯಕನಾದ ಶ್ರೀರಾಮನ ದುಃಖವನ್ನು ಪರಿಹರಿಸುವದಕ್ಕೆ ಸುಗ್ರೀವನಲ್ಲದೆ ಮತ್ತ್ಯಾರೂ ಸಮರ್ಥರಲ್ಲ!'' ಎಂದು ಅನೇಕ ದೈನ್ಯವಚನಗಳನ್ನು ನುಡಿದನು.

ಹನುಮಂತನು ''ಎಲೈ ಲಕ್ಷ್ಮಣ, ನಿಮ್ಮಂಥಾ ಸದ್ಗುಣಸಂಪನ್ನರಾಗಿ ಜಿತೇಂದ್ರಿಯರಾಗಿ ಮಹಾತ್ಮರಾದ ಉತ್ತಮಪುರುಷರನ್ನು ಕಂಡು ನಿಮ್ಮಕೂಡೆ ಸಂಭಾಷಣೆಮಾಡುವಂಥಾ ಪುಣ್ಯವು ಸುಗ್ರೀವನಿಗುಂಟಾಯಿತು; ಸುಗ್ರೀವನು ದೇವೇಂದ್ರನ ಮಗನಾದ ವಾಲಿಯಿಂದ ಯುದ್ಧದಲ್ಲಿ ಪರಾಜಿತನಾಗಿ ರಾಜ್ಯಭ್ರಷ್ಟನಾಗಿ ತನ್ನ ಸ್ತ್ರೀಯನ್ನು ಬಿಟ್ಟು ಈ ವನಕ್ಕೆ ಬಂದಿದ್ದಾನೆ; ಆತನು ನಿಮ್ಮಂಥಾ ಮಹಾತ್ಮರ ಸಹಾಯದಿಂದ ವಾಲಿಯನ್ನು ಜಯಿಸಿ ತನ್ನ ರಾಜ್ಯವನ್ನೂ ಸ್ತ್ರೀಯನ್ನೂ ಪಡೆಯಬೇಕೆಂದು ಯತ್ನಮಾಡಿಕೊಂಡಿದ್ದಾನೆ; ಆದಕಾರಣ ಕಾರ್ಯಾರ್ಥಿಯಾದ ಸುಗ್ರೀವನು ನನ್ನನ್ನು ಕೂಡಿಕೊಂಡು ಸೀತಾದೇವಿಯನ್ನರಸುವಲ್ಲಿ ನಿಮಗೆ ಅವಶ್ಯವಾಗಿ ಸಹಾಯವಾಗಲುಳ್ಳವನು'' ಎಂದು ನುಡಿದು ರಾಮಲಕ್ಷ್ಮಣರನ್ನು ಸುಗ್ರೀವನ ಸಮೀಪಕ್ಕೆ ಕರೆದನು.

ಆ ಮಾತನ್ನು ಕೇಳಿ ಶ್ರೀರಾಮನು ಲಕ್ಷ್ಮಣಸಮೇತನಾಗಿ ಹನುಮಂತನಿಗೆ ಅನೇಕ ಸತ್ಕಾರಗಳನ್ನು ಮಾಡಿದನು. ಆಮೇಲೆ ಲಕ್ಷ್ಮಣನು ಶ್ರೀರಾಮನನ್ನು ಕುರಿತು ''ಎಲೈ ಶ್ರೀರಾಮನೆ, ವಾಯುಪುತ್ರನಾದ ಹನುಮಂತನು ಸಂತೋಷಕರವಾಗಿ ಹಿತವಾದ ವಚನಗಳನ್ನು ನುಡಿದನು; ಈಗ ಸುಗ್ರೀವನು ಕಾರ್ಯಾರ್ಥಿಯಾಗಿರುವದರಿಂದ ಆತನ ಕಾರ್ಯನಿಮಿತ್ತವಾಗಿಯೇ ಈತನು ಇಲ್ಲಿಗೆ ಬಂದನು! ಎಲೈ ಶ್ರೀರಾಮನೆ, ಇದರಿಂದ ನಮ್ಮ ಕಾರ್ಯವು ಸಾಧ್ಯವಾಗುವದೆಂದು ತಿಳಿಯುತ್ತದೆ; ಮಹಾಪರಾಕ್ರಮಿಯಾದ ಹನುಮಂತನು ಅನೃತವನ್ನು ನುಡಿಯನು'' ಎಂದು ನುಡಿದನು.

ಆಮೇಲೆ ವಾಯುಪುತ್ರನಾಗಿ ಕಪಿನಾಯಕನಾಗಿ ಅತಿ ಕೀರ್ತಿವಂತನಾಗಿ ಅತ್ಯಂತ ಸಂತೋಷಯುಕ್ತನಾಗಿ ಮಹಾಪ್ರಾಜ್ಞನಾದ ಹನುಮಂತನು ಸನ್ಯಾಸಿವೇಷವನ್ನು ಬಿಟ್ಟು ಕಪೀಸ್ವರೂಪನಾಗಿ ರಾಮಲಕ್ಷ್ಮಣರನ್ನು ಬೆನ್ನಮೇಲೆ ಕುಳ್ಳಿರಿಸಿಕೊಂಡು ತನ್ನೊಡೆಯನಾದ ಸುಗ್ರೀವನ ಕಾರ್ಯವು ಸಾಧ್ಯವಾಯಿತೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ಋಷ್ಯಮೂಕಪರ್ವತದಿಂದ ಮಲಯಪರ್ವತಕ್ಕೆ ಸುಗ್ರೀವನಿದ್ದೆಡೆಗೆ ಹೋದನು.

# ೫ನೇ ಅಧ್ಯಾಯ.

## ಶ್ರೀರಾಮಸುಗ್ರೀವರು ಸ್ನೇಹಮಾಡಿಕೊಂಡದ್ದು.

ಈ ಮರ್ಯಾದೆಯಲ್ಲಿ ಹನುಮಂತನು ಋಷ್ಯಮೂಕಪರ್ವತದಿಂದ ರಾಮಲಕ್ಷ್ಮಣರನ್ನು ಸುಗ್ರೀವನಿದ್ದ ಮಲಯಗಿರಿಗೆ ಕರೆದುಕೊಂಡುಹೋಗಿ ಅವರು ಬಂದ ವೃತ್ತಾಂತವನ್ನು ಸುಗ್ರೀವನಿಗೆ ತಿಳುಹಿಸಿ ಅವರನ್ನು ಆತನ ಎದಿರಲ್ಲಿ ಬಿಟ್ಟು ಆತನನ್ನು ಕುರಿತು ''ಎಲೈ ಸುಗ್ರೀವನೆ, ಈತನು ಶ್ರೀರಾಮನು; ಮಹಾಪ್ರಾಜ್ಞನು; ಮಹಾಪರಾಕ್ರಮಿಯು; ತನ್ನ ತಮ್ಮನಾದ ಲಕ್ಷ್ಮಣಸಮೇತನಾಗಿ ನಿನ್ನೊಡನೆ ಸ್ನೇಹಮಾಡಿಕೊಳ್ಳಬೇಕೆಂದು ಬಂದಿದ್ದಾನೆ; ಈತನನ್ನು ಅಂಗೀಕರಿಸು; ಈತನು ಮಹಾಪೂಜ್ಯನು'' ಎಂದು ಹೇಳಿದನು.

ಮೊದಲು ಶ್ರೀರಾಮನನ್ನು ಕಂಡು ಆತನು ವಾಲಿಯ ಭಟನೆಂದು ಭಯಪಟ್ಟಿದ್ದ ವಾನರಾಧಿಪತಿಯಾದ ಸುಗ್ರೀವನು ಹನುಮಂತನ ಮಾತನ್ನು ಕೇಳಿ ಅತ್ಯಂತ ಸಂತೋಷಯುಕ್ತನಾಗಿ ಕಂಗೆಡಿಕೆಯನ್ನು ಬಿಟ್ಟು ಶ್ರೀರಾಮನಿಗೆ ಅನೇಕ ಸತ್ಕಾರಗಳನ್ನು ಮಾಡಿ ವಾನರರೂಪವನ್ನು ಬಿಟ್ಟು ಮನುಷ್ಯರೂಪವನ್ನು ತಾಳಿ ಶ್ರೀರಾಮನನ್ನು ಕುರಿತು ''ಎಲೈ ಶ್ರೀರಾಮನೆ, ನೀನು ಧರ್ಮಾತ್ಮನು; ವಿನಯಗುಣಸಂಪನ್ನನು; ತಪಸ್ವಿಯಾದವನು; ಸಮ

ಸ್ತ ಪ್ರಾಣಿಗಳಲ್ಲಿಯೂ ದಯೆಯುಳ್ಳವನು ; ನಿನ್ನ ಸದ್ಗುಣಗಳನ್ನು ಮೊದಲೇ ಹನುಮಂತನು ನನ್ನ ಕೂಡೆ ಹೇಳಿದನು ; ಆ ಗುಣಗಳನ್ನು ಈಗ ನಿನ್ನಲ್ಲಿ ಪ್ರತ್ಯಕ್ಷವಾಗಿ ಕಾಣುತ್ತೇನೆ ; ಕಪೀಶ್ವರನಾದ ನನ್ನ ಕೂಡೆ ಸ್ನೇಹವನ್ನು ಮಾಡಬೇಕೆಂಬ ಬುದ್ಧಿಯು ನಿನ್ನಲ್ಲಿರುವಪಕ್ಷದಲ್ಲಿ ನನ್ನ ಕೈಹಿಡಿದುಕೊಂಡು ಸಂಶಯವಿಲ್ಲದೆ ಸ್ನೇಹವನ್ನು ಬೆಳೆಸು " ಎಂದು ನುಡಿದನು.

ಆ ಮಾತನ್ನು ಕೇಳಿ ಶ್ರೀರಾಮನು ಅತ್ಯಂತ ಸಂತೋಷಯುಕ್ತನಾಗಿ ತನ್ನ ದಕ್ಷಿಣಹಸ್ತದಿಂದ ಸುಗ್ರೀವನ ದಕ್ಷಿಣಹಸ್ತವನ್ನು ಹಿಡಿದು ಹತ್ತಿರಕ್ಕೆಳೆದು ತಬ್ಬಿಕೊಂಡನು ; ಆಮೇಲೆ ಹನುಮಂತನು ಒಣಕಾಷ್ಠಗಳನ್ನು ಸಂಗ್ರಹಿಸಿ ಯಜ್ಞಪುರುಷನನ್ನು ಪ್ರಜ್ವಲಿಸಿ ಶ್ರೀರಾಮ ಸುಗ್ರೀವರ ಮಧ್ಯದಲ್ಲಿ ನಿಂತುಕೊಂಡಿರಲು ಅವರು ಯಜ್ಞಪುರುಷನನ್ನು ವಿಧ್ಯುಕ್ತಪ್ರಕಾರದಲ್ಲಿ ಅರ್ಚನೆಮಾಡಿ ಪ್ರದಕ್ಷಿಣಗಳನ್ನು ಮಾಡಿ ಅನ್ಯೋನ್ಯ ಸಖತ್ವವನ್ನುಂಟುಮಾಡಿಕೊಂಡು ಸಂತೋಷಯುಕ್ತರಾಗಿ ಒಬ್ಬರಮುಖವನ್ನೊಬ್ಬರು ನೋಡಿ ತೃಪ್ತಿಪಡೆದು ಅನ್ಯೋನ್ಯವಾಗಿ ಮಾತನಾಡಿಕೊಂಡಿದ್ದರು ! ಶ್ರೀರಾಮನು " ಎಲೈ ಸುಗ್ರೀವನೆ, ನೀನು ನನಗೆ ಅಂತರಂಗಶುದ್ಧನಾದ ಸಖನು ; ನಿನ್ನ ಸುಖದುಃಖಗಳೇ ನನ್ನ ಸುಖದುಃಖಗಳು " ಎಂದು ನುಡಿದನು.

ಆ ಬಳಿಕ ಸುಗ್ರೀವನು ಅತ್ಯಂತ ಸಂತುಷ್ಟಚಿತ್ತನಾಗಿ ಪಲ್ಲವಿತವಾಗಿ ಕೋರಕಿತವಾಗಿ ಮುಕುಳಿತವಾಗಿ ಪುಷ್ಪಿತವಾಗಿದ್ದ ಮರದ ಕಿರುಕೊಂಬುಗಳನ್ನು ಹಾಕಿಸಿ ಶ್ರೀರಾಮನೊಡನೆ ಕುಳಿತುಕೊಂಡನು ; ಆಗ ಹನುಮಂತನು ಚಂದನವೃಕ್ಷಗಳ ತಳಿರುಗಳ ಕೊಂಬುಗಳನ್ನು ಮುರಿದು ತಂದು ಲಕ್ಷ್ಮಣನಿಗೆ ಕುಳ್ಳಿರಹಾಕಿದನು ; ಸುಗ್ರೀವನು ಅತ್ಯಂತ ಸಂತೋಷಯುಕ್ತನಾಗಿ ಮೃದುನುಡಿಯಿಂದ ಶ್ರೀರಾಮನನ್ನು ಕುರಿತು " ಎಲೈ ಶ್ರೀರಾಮನೆ, ನನ್ನ ಅಣ್ಣನಾದ ವಾಲಿಯು ನನ್ನ ಸ್ತ್ರೀಯನ್ನು ಅಪಹರಿಸಿಕೊಂಡು ನನ್ನನ್ನು ಹೊಡೆದು ರಾಜ್ಯಭ್ರಷ್ಟನಾಗಿಮಾಡಿ ಹೊರಡಿಸಲು ನಾನು ಎಲ್ಲಿಯೂ ಗತ್ಯಂತರವನ್ನು ಕಾಣದೆ ಈ ಅರಣ್ಯಕ್ಕೆ ಬಂದು ಭಯದಿಂದ ಕಂಗೆಟ್ಟು ಸಂಚರಿಸುತ್ತಿದ್ದೇನೆ ; ನಾನು ವಾಲಿಯಿಂದ ಬಹುನೊಂದೆನು ; ಆತನಿಂದ ನೊಂದು ದುಃಖಪಡುವ ನನಗೆ ನೀನು ಅಭಯವನ್ನು ಕೊಟ್ಟು ರಕ್ಷಿಸಿ ನನ್ನ ಭಯವನ್ನು ಪರಿಹರಿಸಬೇಕು " ಎಂದು ನುಡಿದನು.

ಧರ್ಮಜ್ಞನಾಗಿ ತೇಜಸ್ವಿಯಾದ ಶ್ರೀರಾಮನು ಮುಗುಳುನಗೆಯೊಡಗೂಡಿ ಸುಗ್ರೀವನನ್ನು ಕುರಿತು " ಎಲೈ ಸುಗ್ರೀವನೆ, ಲೋಕದಲ್ಲಿ ಮಿತ್ರತ್ವಕ್ಕೆ ಉಪಕಾರವೇ ಫಲವು ; ನನ್ನ ಕೂಡೆ ನೀನು ಮಿತ್ರತ್ವವನ್ನು ಮಾಡಿದ್ದಕ್ಕೆ ಫಲವುಂಟಾಗುವಂತೆ ನನ್ನಲ್ಲಿರುವ ಸೂರ್ಯಪ್ರಭೆಯಂತೆ ಕಾಂತಿಯುಳ್ಳವಾಗಿ ನಿಷ್ಫಲವಾಗದಂಥಾ ಬಾಣಗಳಿಂದ ನಿನ್ನ ಪ್ರಾಣಕಾಂತೆಯನ್ನಪಹರಿಸಿದ ವಾಲಿಯನ್ನು ಯಮಲೋಕವನ್ನೈದಿಸುವೆನು ; ನನ್ನ ಬಾಣಗಳು ವಾಯುವೇಗ ಮನೋವೇಗವುಳ್ಳವಾಗಿ ಹಂಗನಗರಿಗಳುಳ್ಳವಾಗಿ ದೇವೇಂದ್ರನ ವಜ್ರಾಯುಧಕ್ಕೆ ಸಮಾನವಾದಂಥಾವಾಗಿ ಅತ್ಯಂತ ತೀಕ್ಷ್ಣವಾದ ಅಗ್ರಭಾಗವುಳ್ಳಂಥಾವಾಗಿ ನಯವಾದ ಗಿಣ್ಣುಗಳುಳ್ಳಂಥಾವಾಗಿ ಕೋಪಕೆರಳಿದ ಕೃಷ್ಣಸರ್ಪದಂತೆ ಅತಿ ಭಯಂಕರವಾದಂಥಾವು ; ಅಂಥಾ ಬಾಣಗಳಿಂದ ದೊಡ್ಡದಾದ ಪರ್ವತವು ವಜ್ರಾಯುಧದಿಂದ ಚೂರ್ಣೀಕೃತವಾಗಿ ಬೀಳುವಂತೆ ವಾಲಿಯು ಘಾಯಪಡೆದು ಬೀಳುವನೆಂದು ನಿಶ್ಚಯಿಸು " ಎಂದು ಪ್ರತಿಜ್ಞೆಮಾಡಿದನು.

ಸುಗ್ರೀವನು ಆ ವಾಕ್ಯವು ತನಗೆ ಹಿತವಚನವೆಂದು ತಿಳಿದು ಅತ್ಯಂತ ಸಂತೋಷದಿಂದ ಶ್ರೀರಾಮನನ್ನು ಕುರಿತು " ಎಲೈ ಶ್ರೀರಾಮನೆ, ನನ್ನಲ್ಲಿ ನಿನಗೆ ಇಷ್ಟು ಕೃಪೆಯಿದ್ದಾಗಲೇ ನಾನು ನನ್ನ ರಾಜ್ಯವನ್ನೂ ಸ್ತ್ರೀಯನ್ನೂ ಪಡೆದೆನು ! ಎಲೈ ಶ್ರೀರಾಮನೆ, ನೀನು ನನ್ನ ವೈರಿಯಾಗಿ ಒಡಹುಟ್ಟಿದವನಾದ ವಾಲಿಯನ್ನು ಕೊಲ್ಲುವದಾಗಿ ನುಡಿದಮಾತ್ರದಿಂದಲೇ ವಾಲಿಗೂ ಆತನ ಪಕ್ಷವಾದ ಕಪಿಗಳಿಗೂ ರಾವಣನಿಗೂ ಆತನ ಪಕ್ಷವಾದ ರಾಕ್ಷಸರಿಗೂ ಎಡಗಣ್ಣುಗಳು ಹಾರುತ ಅನೇಕ ದುರ್ನಿಮಿತ್ತಗಳಾಗುತ್ತಿವೆ " ಎಂದು ಅತಿಹರ್ಷದಿಂದ ನುಡಿದನು.

## ೬ನೇ ಅಧ್ಯಾಯ.

### ಶ್ರೀರಾಮನು ಸೀತಾದೇವಿಯ ಆಭರಣಗಳನ್ನು ನೋಡಿ ಪ್ರಲಾಪಿಸಿದ್ದು.

ಆ ಬಳಿಕ ಮತ್ತೂ ಸುಗ್ರೀವನು ಶ್ರೀರಾಮನನ್ನು ಕುರಿತು “ ಎಲೈ ಶ್ರೀರಾಮನೆ, ನನ್ನ ಪ್ರಧಾನನಾದ ಈ ಹನುಮಂತನು ನೀನು ನಿನ್ನ ತಮ್ಮನಾದ ಲಕ್ಷ್ಮಣನೊಡನೆ ಈ ವನಕ್ಕೆ ಬಂದ ವೃತ್ತಾಂತವನ್ನು ನನ್ನ ಕೂಡೆ ಹೇಳಿದನು ; ರಾವಣನು ಕಪಟವೇಷದಿಂದ ನೀವಿಲ್ಲದ ಸಮಯವನ್ನು ನೋಡಿಕೊಂಡಿದ್ದು ಮೋಸಮಾಡಿ ಸೀತಾದೇವಿಯನ್ನಪಹರಿಸಿಕೊಂಡು ಹೋಗುತ ನಿಮ್ಮ ತಂದೆಯಾದ ದಶರಥಮಹಾರಾಯನ ಸಖನಾದ ಜಟಾಯುವು ಮಧ್ಯಮಾರ್ಗದಲ್ಲಿ ಅಡ್ಡಗಟ್ಟಲು ಆತನನ್ನು ಕೊಂದು ಅಂತರಿಕ್ಷಮಾರ್ಗದಲ್ಲಿ ಆ ದೇವಿಯನ್ನು ತಕ್ಕೊಂಡುಹೋದ ವೃತ್ತಾಂತವನ್ನೂ ಕೇಳಿದೆನು ; ಆದರೇನಾಯಿತು ! ಸ್ತ್ರೀವಿಯೋಗದುಃಖವು ನಿನಗೆ ಶೀಘ್ರದಲ್ಲಿ ಪರಿಹಾರವಾಗುವದು ; ಪೂರ್ವದಲ್ಲಿ ನಾರಾಯಣನು ಮತ್ಸ್ಯಾವತಾರದಿಂದ ಸಮುದ್ರದಲ್ಲಿ ಮುಳುಗಿದ ವೇದಗಳನ್ನುದ್ಧರಿಸಿ ತಂದಂತೆ ನಾನು ರಾವಣನು ಅಪಹರಿಸಿಕೊಂಡು ಹೋದ ಸೀತಾದೇವಿಯನ್ನು ಅರಸಿ ತರುತ್ತೇನೆ ; ಸೀತಾದೇವಿಯು ಪಾತಾಳಲೋಕದಲ್ಲಿದ್ದರೂ ಅಂತರಿಕ್ಷಮಾರ್ಗದಲ್ಲಿದ್ದರೂ ತಂದುಕೊಡುತ್ತೇನೆ ! ಎಲೈ ಶ್ರೀರಾಮನೆ, ಲೋಕದಲ್ಲಿ ವಿಷದ ಕಜ್ಜಾಯವನ್ನು ಭಕ್ಷಣಮಾಡಿ ದಕ್ಕಿಸಿಕೊಳ್ಳಕೂಡದಂತೆ ದೇವ ದಾನವರಾದರೂ ನಿನ್ನ ಪತ್ನಿಯನ್ನು ದಕ್ಕಿಸಿಕೊಳ್ಳಲಾರರು ; ಆದಕಾರಣ ದುಃಖವನ್ನು ಬಿಡು ; ಎಲ್ಲಿದ್ದರೂ ನಿನ್ನ ಪ್ರಾಣಕಾಂತೆಯಾದ ಸೀತಾದೇವಿಯನ್ನು ತಂದುಕೊಡುತ್ತೇನೆ ; ಕ್ರೂರಕರ್ಮಿಯಾದ ರಾವಣನು ಸೀತಾದೇವಿಯನ್ನು ತಕ್ಕೊಂಡು ಹೋದ ವರ್ತಮಾನವನ್ನು ನಾನು ಊಹೆಯಿಂದ ತಿಳಿದೆನು ; ಅದು ಹ್ಯಾಗೆಂದರೆ : ನಾಗಸ್ತ್ರೀಯ ಮರ್ಯಾದೆಯುಳ್ಳ ಅತಿ ಸುಕುಮಾರಾಂಗಿಯಾದ ಒಬ್ಬ ಸ್ತ್ರೀಯು ಒಬ್ಬ ರಾಕ್ಷಸನ ತೊಡೆಯಮೇಲೆ ಕುಳಿತು ‘ ರಾಮಾ—ಲಕ್ಷ್ಮಣಾ ’ ಎಂದು ಮೊರೆಯಿಡುತ ಹೋಗುತ್ತಿದ್ದಳು ; ಆಕೆಯೇ ಸೀತಾದೇವಿಯಾಗಿರಬೇಕು ; ಈ ಪರ್ವತದಲ್ಲಿ ನಾನು ನಾಲ್ಕುಮಂದಿ ಕಪಿಗಳ ಸಹಿತವಾಗಿರಲು ನಮ್ಮನ್ನು ಕಂಡು ಆ ದೇವಿಯು ತನ್ನ ಮೇಲುಹೊದಿಕೆಯ ಪೀತಾಂಬರದ ಪಟ್ಟೇಶೀರೆಯ ಶೆರಗನ್ನು ಹರಿದು ಆ ಶೆರಗಿನಲ್ಲಿ ತಾನು ತೊಟ್ಟಿದ್ದ ದಿವ್ಯಾಭರಣಗಳನ್ನು ಕಟ್ಟಿ ‘ ಎಲೈ ಕಪಿಗಳಿರಾ, ನಾನು ಹೋದ ವೃತ್ತಾಂತವನ್ನು ನನ್ನ ಪ್ರಾಣಕಾಂತನಾದ ಶ್ರೀರಾಮನಿಗೆ ಹೇಳಿ ಈ ಆಭರಣಗಳನ್ನು ನೀವೇ ತೆಗೆದುಕೊಳ್ಳಿ ’ ಎಂದು ನಮ್ಮ ಸಮೀಪಕ್ಕೆ ಹಾಕಿದಳು ; ಆ ಆಭರಣಗಳನ್ನಿಟ್ಟುಕೊಂಡಿದ್ದೇನೆ ; ಅವು ನಿಮ್ಮ ಕುರುಹಿನ ಆಭರಣಗಳಾದರೆ ನೋಡು ” ಎಂದು ನುಡಿದನು.

ಆ ಮಾತನ್ನು ಕೇಳಿ ಶ್ರೀರಾಮನು ಸುಗ್ರೀವನನ್ನು ಕುರಿತು “ ಎಲೈ ಸುಗ್ರೀವನೆ, ಈ ವರ್ತಮಾನವನ್ನು ಇಷ್ಟುಹೊತ್ತು ಪರ್ಯಂತರವು ಹೇಳದಿರಬಹುದೇ ! ಶೀಘ್ರದಲ್ಲಿ ಆ ಆಭರಣಗಳನ್ನು ತರಿಸು ” ಎಂದು ಹೇಳಿದನು.

ಸುಗ್ರೀವನು ಅತಿ ಶೀಘ್ರದಲ್ಲಿ ತಾನಿದ್ದ ಗುಹೆಯ ಒಳಗೆಹೋಗಿ ಸೀತಾದೇವಿಯ ಮೇಲುಹೊದಿಕೆಯ ಶೆರಗಿನಲ್ಲಿ ಕಟ್ಟಿದ್ದ ಗಂಟನ್ನು ತೆಗೆದುಕೊಂಡುಬರಲು ಶ್ರೀರಾಮನು ಗಂಟನ್ನು ಬಿಚ್ಚಿ ಸೀತಾದೇವಿಯ ಕುರುಹಿನ ಆಭರಣಗಳನ್ನು ನೋಡಿ ಕಣ್ಣೀರು ತುಂಬಲು ಮಂಜುಮುಸುಕಿದ ಚಂದ್ರಮಂಡಲದಂತೆ ಮುಖಕಾಂತಿಗುಂದಿ ಸೀತಾದೇವಿಯಮೇಲಣ ಹಂಬಲಿಕೆಯಿಂದ ಧೈರ್ಯಗುಂದಿ “ ಹಾ ಸೀತಾ ” ಎಂದು ಹಂಬಲಿಸುತ್ತ ಭೂಮಿಯಮೇಲೆ ಬಿದ್ದು ಆ ಆಭರಣಗಳನ್ನು ತನ್ನ ಎದೆಯಮೇಲಿಟ್ಟುಕೊಂಡು ಹುತ್ತದ ಬಿಲವನ್ನೊಕ್ಕ ಕೋಪಕೆರಳಿದ ಸರ್ಪದಂತೆ ಬಿಸುಸುಯ್ಯುತ್ತ ಸಮೀಪದಲ್ಲಿದ್ದ ಲಕ್ಷ್ಮಣನನ್ನು ನೋಡಿ ರೋದನಮಾಡುತ “ ಎಲೈ ಲಕ್ಷ್ಮಣಾ, ರಾವಣನು ಸೀತಾದೇವಿಯನ್ನಪಹರಿಸಿಕೊಂಡು ಹೋಗುವಾಗ ಆ ದೇವಿಯು ತನ್ನ ಮೇಲುಹೊದಿಕೆಯ ವಸ್ತ್ರವನ್ನು ಹರಿದು ತಾನು ತೊಟ್ಟಿದ್ದ ದಿವ್ಯಭೂಷಣಗಳನ್ನು ಗಂಟುಕಟ್ಟಿ ಎಳೇ ಹುಲ್ಲುಗಳುಳ್ಳ ಭೂಮಿಯಲ್ಲಿ ಹಾಕಿದಳಂತೆ ! ” ಎಂದು ನುಡಿದು ಸುಗ್ರೀವನನ್ನು ಕುರಿತು “ ಎಲೈ ಸುಗ್ರೀವನೆ, ನನ್ನ ಪ್ರಾಣಕಾಂತೆಯಾದ ಸೀತಾದೇವಿಯ ದಿವ್ಯಾಭರಣಭೂಷಣಗಳನ್ನು ಹ್ಯಾಗೆ ತೋರಿಸಿದೆಯೋ ಆ ಮರ್ಯಾದೆಯುಳ್ಳೇ ನನ್ನ ಪತ್ನಿಯಾದ ಸೀತಾದೇವಿಯನ್ನು ಅಪಹ

ರಿಸಿಕೊಂಡು ಹೋದ ರಾಕ್ಷಸಾಧಮನಿರುವ ಸ್ಥಳವನ್ನು ತೋರಿಸಿದೆಯಾದರೆ ಆ ರಾಕ್ಷಸನ ಸ್ತ್ರೀ ಪುತ್ರ ದಾಯಾದ್ಯಾದಿಗಳನ್ನು ಯಮಲೋಕಕ್ಕೆ ಕಳುಹಿಸುತ್ತೇನೆ; ರಾವಣನು ತನಗೆ ಮೃತ್ಯುಕಾಲವು ಬಂದದ್ದರಿಂದ ಇಂಥಾ ಕೃತ್ಯವನ್ನು ಮಾಡಿದನು! ಎಲೈ ಸುಗ್ರೀವನೆ, ನನ್ನ ಸ್ತ್ರೀಯಾದ ಸೀತಾದೇವಿಯನ್ನು ಪಹರಿಸಿಕೊಂಡುಹೋದ ನನ್ನ ಶತ್ರುವಾದ ರಾವಣನಿರುವ ಸ್ಥಳವನ್ನು ಹೇಳು; ನಾನು ಅವನನ್ನು ಅತಿ ಶೀಘ್ರದಿಂದ ಯಮಲೋಕವನ್ನೈದಿಸುತ್ತೇನೆ" ಎಂದು ಹೇಳಿದನು.

## ೭ನೇ ಅಧ್ಯಾಯ.

### ಶ್ರೀರಾಮನು ಸುಗ್ರೀವನಿಗೆ ಅಭಯವನ್ನು ಕೊಟ್ಟಿದ್ದು.

ಎಲೈ ಕುಶಲವರುಗಳಿರಾ ಕೇಳಿ, ಈ ಮರ್ಯಾದೆಯಲ್ಲಿ ಶ್ರೀರಾಮನು ಕೇಳಲು ಸುಗ್ರೀವನು ಆತನ ದೈನ್ಯವೃತ್ತಿಯನ್ನು ನೋಡಿ ದುಃಖಾಕ್ರಾಂತನಾಗಿ ಕೈಮುಗಿದುಕೊಂಡು ಕಣ್ಣೀರುಬಿಟ್ಟು ಬಿಕ್ಕುತ "ಎಲೈ ಶ್ರೀರಾಮನೆ, ನೀಚಜನ್ಮದಲ್ಲಿ ಹುಟ್ಟಿದ ರಾವಣನ ಸಾಮರ್ಥ್ಯವನ್ನೂ ಅವನಿರುವ ಸ್ಥಳವನ್ನೂ ಅವನ ಸ್ವರೂಪವನ್ನೂ ನಾನರಿತವನಲ್ಲ; ಹಾಗಾದರೂ ನನ್ನ ಬುದ್ಧಿಚಾತುರ್ಯದಿಂದ ಸೀತಾದೇವಿಯನ್ನರಸಿಕೊಂಡು ಬರುತ್ತೇನೆ; ನೀನು ನಿನ್ನ ಮನಸ್ಸಿನ ದುಃಖವನ್ನು ಬಿಟ್ಟು ಸ್ವಸ್ಥಚಿತ್ತನಾಗು; ಹುಲುಕಪಿಯಾದ ನಾನು ನನ್ನ ಹಿರಿಯಣ್ಣನಾದ ವಾಲಿಯಿಂದ ಅಪಹರಿಸಲ್ಪಟ್ಟ ಸ್ತ್ರೀಯನ್ನು ನೆನೆದು ದುಃಖಿಸದಿದ್ದೇನೆ; ನಿನ್ನಂಥಾ ಮಹಾತ್ಮನಾಗಿ ವಿನಯಧೈರ್ಯಾದಿಗುಣಸಂಪನ್ನನಾದವನು ಮನೋವ್ಯಥೆಬಂದರೂ ಶತ್ರುಗಳಿಂದ ಕಂಗೆಟ್ಟರೂ ಪ್ರಾಣಸಂಶಯವಾದ ಭಯಬಂದರೂ ಕಂಗೆಡಬಾರದೆಂಬ ನೀತಿಯನ್ನು ವಿಚಾರಿಸು; ಮನುಷ್ಯನು ನಪುಂಸಕನಂತೆ ಷಂಡತ್ವದಿಂದ ಕಂಗೆಟ್ಟರೆ ಸಮುದ್ರದಲ್ಲಿ ಅತಿ ಭಾರದಿಂದ ಮುಳುಗಿದ ಹಡೆಯಂತೆ ಕೆಟ್ಟುಹೋಗುವನು! ಎಲೈ ಶ್ರೀರಾಮನೆ, ನಾನು ನಿನಗೆ ಕೈಮುಗಿದು ಬೇಡಿಕೊಳ್ಳುತ್ತೇನೆ; ನನ್ನಮೇಲಣ ಕೃಪೆಯಿಂದ ಧೈರ್ಯಗುಣವನ್ನಾಶ್ರಯಿಸಿ ಶೋಕವನ್ನು ಬಿಡು" ಎಂದು ಮಧುರವಚನಗಳನ್ನು ನುಡಿದನು.

ಹಾಗೆ ಸುಗ್ರೀವನಿಂದ ಸಂತವಿಡಲ್ಪಟ್ಟ ಶ್ರೀರಾಮನು ತನ್ನ ಉತ್ತರೀಯದ ಶರಗಿನಿಂದ ಕಣ್ಣೀರನ್ನು ತೊಡೆದುಕೊಂಡು ಸ್ವಸ್ಥಚಿತ್ತನಾಗಿ ಅತಿ ಹರ್ಷದಿಂದ ಸುಗ್ರೀವನನ್ನು ತಬ್ಬಿಕೊಂಡು ಆತನನ್ನು ಕುರಿತು "ಎಲೈ ಸುಗ್ರೀವನೆ, ನೀನು ನನ್ನನ್ನು ಈಪ್ರಕಾರದಲ್ಲಿ ಸಂತವಿಟ್ಟದ್ದರಿಂದ ನನ್ನ ಮನಸ್ಸಿನಲ್ಲಿದ್ದ ಕಂಗೆಡಿಕೆಯನ್ನು ಬಿಟ್ಟೆನು; ಇಂಥಾ ಆಪತ್ಕಾಲದಲ್ಲಿ ನನಗೆ ನಿನ್ನಂಥಾ ಸ್ನೇಹಿತನು ದೊರಕಿದ್ದು ಪುಣ್ಯಾಫಲವು; ಇನ್ನು ನನ್ನ ಪ್ರಾಣಕಾಂತೆಯಾದ ಸೀತಾದೇವಿಯನ್ನರಸಿಕೊಂಡು ಬರುವದಕ್ಕೆ ಯತ್ನಮಾಡು; ದುರಾತ್ಮನಾಗಿ ಅತಿ ಕ್ಷುದ್ರನಾಗಿ ನೀಚನಾದ ರಾವಣನನ್ನು ಸಂಹರಿಸುವದಕ್ಕೆ ನಾನು ಮಾಡುವ ಯತ್ನವೇನು! ಎಲೈ ಸುಗ್ರೀವನೆ, ನಾನು ಅಭಿಮಾನದಿಂದ ಹೀಗೆ ಮಾತನಾಡಿದ್ದರಿಂದ ಈ ಕಾರ್ಯವು ನಿನ್ನಿಂದಲೇ ಸಾಧ್ಯವಾಗಬೇಕು; ಈ ವಚನವು ಸತ್ಯವೆಂದು ತಿಳಿ; ನಾನು ಅಸತ್ಯವನ್ನು ನುಡಿಯುವವನಲ್ಲ; ನನ್ನ ಸತ್ಯಸಾಕ್ಷಿಯಾಗಿ ನಿನಗೊಂದು ಮಾತುಕೊಟ್ಟೆನು; ಆದ್ದರಿಂದ ಮೊದಲು ನಾನು ನಿನ್ನ ಕಾರ್ಯವನ್ನು ಸಾಧ್ಯಮಾಡಿ ಕೊಟ್ಟಮೇಲೆ ನೀನು ನನ್ನಕಾರ್ಯವನ್ನು ಮಾಡು" ಎಂದು ನುಡಿದನು.

ಆ ಮಾತನ್ನು ಕೇಳಿ ಸುಗ್ರೀವನು ಅತ್ಯಂತ ಸಂತೋಷಯುಕ್ತನಾಗಿ ತನ್ನ ನಾಲ್ವರು ಪ್ರಧಾನರನ್ನು ಕೂಡಿಕೊಂಡು ರಾಮಲಕ್ಷ್ಮಣರೊಡನೆ ಅನ್ಯೋನ್ಯ ಸುಖದುಃಖಾದಿಗಳನ್ನು ವಿಚಾರಿಸಿಕೊಂಡಿದ್ದನು. ಶ್ರೀರಾಮನ ಮಾತನ್ನು ಕೇಳಿ ಸುಗ್ರೀವನು ತನ್ನ ಕಾರ್ಯವು ಸಾಧ್ಯವಾಗುವದೆಂದು ಸಂತೋಷಪಟ್ಟನು; ಸುಗ್ರೀವನ ಮಾತನ್ನು ಕೇಳಿ ಶ್ರೀರಾಮನು ತನ್ನ ಕಾರ್ಯವು ಸಾಧ್ಯವಾಯಿತೆಂದು ಅಂತರಂಗದಲ್ಲಿ ಸಂತೋಷಪಟ್ಟನು!

## ೮ನೇ ಅಧ್ಯಾಯ.

### ಶ್ರೀರಾಮನು ಸುಗ್ರೀವನಿಗೆ ಅಭಯವನ್ನು ಕೊಟ್ಟದ್ದು.

ಆ ಬಳಿಕ ಸುಗ್ರೀವನು ಅತಿ ಪರಾಕ್ರಮಿಯಾದ ಶ್ರೀರಾಮನನ್ನು ಕುರಿತು "ಎಲೈ ಶ್ರೀರಾಮನೆ, ನಿನ್ನಂಥಾ ಪರಮಪುರುಷನು ನನಗೆ ಸಖನಾದದ್ದರಿಂದ ನನಗೆ ದೇವತಾಕೃಪೆಯುಂಟಾಯಿತು; ಈ ಅರ್ಥದಲ್ಲಿ ಸಂದೇಹವಿಲ್ಲ! ಎಲೈ ಶ್ರೀರಾಮನೆ, ನಿನ್ನ ಸಹಾಯದಿಂದ ನನಗೆ ಸ್ವರ್ಗಲೋಕಾಧಿಪತ್ಯವಾದರೂ ಸಾಧ್ಯವಾಗುವದು; ಇನ್ನು ಈ ಕಪಿರಾಜ್ಯಾಧಿಪತ್ಯವಾಗುವದು ಆಶ್ಚರ್ಯವೇ! ನೀನು ನನಗೆ ಅಗ್ನಿಸಾಕ್ಷಿಕವಾಗಿ ಮಿತ್ರನಾದದ್ದರಿಂದ ನನ್ನ ಸಮಸ್ತ ಬಂಧುಗಳಲ್ಲಿಯೂ ಮಿತ್ರರಲ್ಲಿಯೂ ನಾನೇ ಭಾಗ್ಯವಂತನು; ನಾನೂ ನಿನಗೆ ಸಮಾನವಾದ ಸಖನೆಂದೆಣಿಸು; ನನ್ನ ಗುಣಗಳನ್ನು ಮುಂದೆ ಕಾಣುವೆ; ನನ್ನ ಸಾಮರ್ಥ್ಯವನ್ನೂ ನನ್ನ ಗುಣಕಥನಗಳನ್ನೂ ನಾನೇ ಹೇಳಿಕೊಳ್ಳಬಾರದು; ಲೋಕದಲ್ಲಿ ಮಹಾತ್ಮರಾದವರ ಮಿತ್ರತ್ವವು ದಿನದಿನಕ್ಕೂ ಅನ್ಯೋನ್ಯ ಪ್ರೀತಿಯನ್ನುಂಟುಮಾಡುವದಲ್ಲದೆ ಹಾನಿಯನ್ನುಂಟುಮಾಡದು; ಸತ್ಪುರುಷರು ಸತ್ಪುರುಷರ ಮಿತ್ರತ್ವವನ್ನು ಬಯಸುವರಲ್ಲದೆ ಚಿನ್ನ ಬೆಳ್ಳಿ ರತ್ನಾಭರಣಗಳನ್ನು ಬಯಸರು; ಸತ್ಪುರುಷರು ಐಶ್ವರ್ಯವಂತನಾದರೂ ದರಿದ್ರನಾದರೂ ದುಃಖಿಯಾದರೂ ಸುಖಿಯಾದರೂ ಕ್ಷಮೆಯುಳ್ಳವನಾಗಿ ಕಪಟವಿಲ್ಲದಿರುವ ಸ್ನೇಹಿತನೇ ಪರಗತಿಸಾಧನನೆಂದು ವಿಚಾರಿಸುವರು! ಎಲೈ ಶ್ರೀರಾಮನೆ, ಮಹಾತ್ಮರು ಸ್ನೇಹಿತರ ಕಾರ್ಯನಿಮಿತ್ತವಾಗಿ ಧನವನ್ನಾದರೂ ಸುಖವನ್ನಾದರೂ ಬಿಡುವರು; ಕಡೆಗೆ ಸ್ನೇಹನಿಮಿತ್ತವಾಗಿ ದೇಶತ್ಯಾಗವನ್ನಾದರೂ ಮಾಡುವರು! ಎಲೈ ಶ್ರೀರಾಮನೆ, ನನಗೆ ನನ್ನ ಭಾಗ್ಯವಶದಿಂದ ಇಂಥಾ ಸ್ನೇಹವು ಸಂಭವಿಸಿತು" ಎಂದು ನುಡಿದನು.

ಆ ಮಾತನ್ನು ಕೇಳಿ ಶ್ರೀರಾಮನು "ಎಲೈ ಸುಗ್ರೀವನೇ, ಹೌದು" ಎಂದು ಸಂತೋಷಪಟ್ಟು ಸುಗ್ರೀವನ ಕೂಡೆ ಅನೇಕ ಪ್ರಿಯವಚನಗಳನ್ನು ನುಡಿಯುತ್ತಿದ್ದನು. ಆಮೇಲೆ ಸುಗ್ರೀವನು ಇಕ್ಕೆಲದಲ್ಲಿದ್ದ ವೃಕ್ಷಗಳನ್ನು ನೋಡಿ ಸಮೀಪದಲ್ಲಿ ಪಲ್ಲವಿತವಾಗಿ ಮುಕುಳಿತವಾಗಿ ಪುಷ್ಪಿತವಾಗಿದ್ದ ಮರದ ಕಿರುಗೊಂಬುಗಳನ್ನು ಮುರಿದು ಶ್ರೀರಾಮನಿಗೆ ಆಸನವನ್ನು ಮಾಡಿ ಕುಳ್ಳಿರಿಸಿ ತಾನೂ ಕುಳಿತುಕೊಂಡನು; ಹನುಮಂತನು ಮನೋಹರವಾಗಿದ್ದ ತಳಿರುಗಳುಳ್ಳ ಕೊಂಬುಗಳನ್ನು ಮುರಿದು ಲಕ್ಷ್ಮಣನಿಗೆ ಕುಳ್ಳಿರಹಾಕಿದನು! ಈ ಮರ್ಯಾದೆಯಲ್ಲಿ ರಾಮಲಕ್ಷ್ಮಣರು ಸ್ವಸ್ಥಚಿತ್ತರಾಗಿ ಕುಳಿತುಕೊಂಡಿರುವ ಸಮಯದಲ್ಲಿ ಸುಗ್ರೀವನು ಶ್ರೀರಾಮನನ್ನು ಕುರಿತು ಅತಿ ವಿನಯಗೂಡಿದ ಮೃದುನುಡಿಯಿಂದ "ಎಲೈ ಶ್ರೀರಾಮನೆ, ನಾನು ನನ್ನ ಅಣ್ಣನಾದ ವಾಲಿಯಿಂದ ಪರಾಜಿತನಾದೆನು; ಅದಲ್ಲದೆ ವಾಲಿಯು ನನ್ನ ಸ್ತ್ರೀಯನ್ನು ಅಪಹರಿಸಿದನು; ಅದರಿಂದ ನಾನು ದುಃಖಾಕ್ರಾಂತನಾಗಿ ಆತನಿಗೆ ಅಂಜಿಕೊಂಡು ಭಯದಿಂದ ಕಂಗೆಟ್ಟು ಋಷ್ಯಮೂಕಪರ್ವತದಲ್ಲಿ ಸಂಚರಿಸಿಕೊಂಡಿದ್ದೇನೆ! ಎಲೈ ಲೋಕನಾಯಕನಾದ ಶ್ರೀರಾಮನೆ, ವಾಲಿಯಿಂದ ಭಯಪಟ್ಟಿರುವ ನನ್ನ ಭಯವನ್ನು ಪರಿಹರಿಸಿ ರಕ್ಷಿಸುವದಕ್ಕೆ ನೀನೇ ಸಮರ್ಥನಲ್ಲದೆ ಮತ್ತೊಬ್ಬರಿಲ್ಲ" ಎಂದು ನುಡಿದನು.

ಆ ಮಾತನ್ನು ಕೇಳಿ ಧರ್ಮಜ್ಞನಾದ ಶ್ರೀರಾಮನು ನಗುತ ಸುಗ್ರೀವನನ್ನು ಕುರಿತು "ಎಲೈ ಸುಗ್ರೀವನೆ, ಲೋಕದಲ್ಲಿ ಮಿತ್ರತ್ವಕ್ಕೆ ಉಪಕಾರವೇ ಫಲವು; ಮಿತ್ರರಿಗೆ ಅಪಕಾರಮಾಡುವದೇ ದುರ್ಗುಣವು; ನಾನು ನಿನಗೆ ಮಿತ್ರನಾದ್ದರಿಂದ ನಿನ್ನ ಸ್ತ್ರೀಯನ್ನಪಹರಿಸಿದ ವಾಲಿಯನ್ನು ಸಂಹರಿಸುವದೇ ನಿನಗೆ ನಾನು ಮಾಡುವ ಉಪಕಾರವು! ಎಲೈ ಸುಗ್ರೀವನೆ, ಈ ನನ್ನ ಶರಗಳನ್ನು ನೋಡು; ಇವು ಕುಮಾರಸ್ವಾಮಿಯಾದ ಷಣ್ಮುಖನಿರುವ ಶರವಣದಲ್ಲಿ ಹುಟ್ಟಿದಂಥಾವು; ಚಿನ್ನದ ಮುಲಾಮಿನಿಂದ ಅಲಂಕರಿಸಲ್ಪಟ್ಟಂಥಾವು; ಹಂಗನಗರಿಗಟ್ಟಿದಂಥಾವು; ನಯವಾದ ಗಿಣ್ಣುಗಳುಳ್ಳಂಥಾವು; ಮೊರೆಯುವ ಸರ್ಪದಂತೆ ಅತಿ ಭಯಂಕರವಾಗಿರುವಂಥಾವು; ಕೂರಲಗುಳ್ಳಂಥಾವು; ದೇವೇಂದ್ರನ

ವಜ್ರಾಯುಧದಂತೆ ಅತ್ಯಂತ ಬಲವುಳ್ಳಂಥಾವು; ಇಂಥಾ ಬಾಣಗಳಿಂದ ದೇವೇಂದ್ರನು ವಜ್ರಾಯುಧದಿಂದ ಪರ್ವತವನ್ನು ಚೂರ್ಣಮಾಡುವಂತೆ ನಿನಗೆ ಅಪರಾಧವನ್ನು ಮಾಡಿದ ವಾಲಿಯನ್ನು ಕೊಲ್ಲುವೆನು" ಎಂದು ನುಡಿದನು.

ಸುಗ್ರೀವನು ಅತ್ಯಂತ ಹರ್ಷಯುಕ್ತನಾಗಿ "ಎಲೈ ಶ್ರೀರಾಮನೆ, ಚನ್ನಾಯಿತು! ಲೋಕದಲ್ಲಿ ದುಃಖದಿಂದ ನೊಂದವರನ್ನು ನೀನೇ ರಕ್ಷಿಸಬೇಕು; ನೀನು ನನಗೆ ಪ್ರಾಣಮಿತ್ರನೆಂದು ನಿನ್ನ ಕೂಡೆ ನನ್ನ ದುಃಖವನ್ನು ಹೇಳಿಕೊಳ್ಳುತ್ತೇನೆ; ನೀನು ನನಗೆ ಅಗ್ನಿಸಾಕ್ಷಿಕವಾಗಿ 'ಅಂಜಬೇಡ' ಎಂದು ನಿನ್ನ ಬಲಗೈಯಿಂದ ನನ್ನ ಕೈಹಿಡಿದುಕೊಂಡರೆ ನಾನು ನನ್ನ ಸಾಕ್ಷಿಯಾಗಿ ನೀನು ನನ್ನ ಪರಮಾಪ್ತನೆಂದು ನನ್ನ ಅಂತರಂಗಸ್ಥಿತಿಯನ್ನು ಹೇಳುತ್ತೇನೆ; ನನ್ನ ದುಃಖವು ನನ್ನ ಮನಸ್ಸನ್ನು ದಹಿಸುತಲಿದೆ" ಎಂದು ನುಡಿದು ಕಣ್ಣೀರುತುಂಬಲು ಮಾತನಾಡುವದಕ್ಕೆ ತ್ರಾಣವಿಲ್ಲದೆ ಧೈರ್ಯದಿಂದ ನದೀಪ್ರವಾಹವನ್ನು ತಡೆಯುವ ತಡಿಯಂತೆ ಕಣ್ಣೀರವೇಗವನ್ನು ತಡೆದು ಬಿಸುಸುಯ್ದು ಮತ್ತು ಅತ್ಯಂತ ತೇಜಸ್ವಿಯಾಗಿ ಶ್ರೀರಾಮನನ್ನು ಕುರಿತು "ಎಲೈ ಶ್ರೀರಾಮನೆ, ಬಲವಂತನಾದ ವಾಲಿಯು ತನ್ನ ಬಲಗರ್ವದಿಂದ ನನ್ನನ್ನು ಬೆದರಿಸಿ ಅನೇಕ ನಿಷ್ಠುರವಚನಗಳನ್ನು ನುಡಿದು ನನ್ನ ಪ್ರಾಣಕಾಂತೆಯನ್ನಪಹರಿಸಿಕೊಂಡು ನನ್ನನ್ನು ರಾಜ್ಯಭ್ರಷ್ಟನಾಗಿಮಾಡಿ ಹೊರಡಿಸಿದನು; ನನಗನುಕೂಲವಾಗಿದ್ದ ಕಪಿಗಳನ್ನು ಶಿಕ್ಷಿಸಿದನು; ಈಗಲೂ ನನ್ನನ್ನು ಕಂಡರೆ ಸಂಹರಿಸಬೇಕೆಂದೇ ಯತ್ನಮಾಡಿಕೊಂಡಿದ್ದಾನೆ; ನಾನು ಆತನ ಸಂಬಂಧವಾದ ಬಹುಮಂದಿ ವಾನರರನ್ನು ಕೊಂದೆನು; ಆದ್ದರಿಂದ ಆತನು ಮೋಸದಿಂದ ಯಾರನ್ನಾದರೂ ಕಳುಹಿಸಿ ಕೊಲ್ಲಿಸುವನೆಂಬ ಶಂಕೆಯಿಂದ ನಿಮ್ಮನ್ನು ಕಂಡು ಸಮೀಪಕ್ಕೆ ಬರದೆ ಭೀತಿಯಿಂದಿದ್ದೆನು; ಲೋಕದಲ್ಲಿ ಭಯವು ಬಂದರೆ ಕಂಗೆಡದಿರುವದಕ್ಕಿಲ್ಲ; ಹನುಮಂತನು ಮೊದಲಾದ ಈ ನಾಲ್ಕು ಕಪಿಗಳು ನನ್ನನ್ನು ರಕ್ಷಿಸಿಕೊಂಡಿರುವದರಿಂದ ನಾನು ಈ ಋಷ್ಯಮೂಕಪರ್ವತದಲ್ಲಿ ಅತ್ಯಂತ ಪ್ರಯಾಸದಿಂದ ಪ್ರಾಣವಿಡಿದಿದ್ದೇನೆ; ಇವರು ನಾನು ಒಂದು ಸ್ಥಳದಲ್ಲಿದ್ದರೆ ನನ್ನ ಸಮೀಪದಲ್ಲಿರುವರು; ಮತ್ತೊಂದು ಸ್ಥಳಕ್ಕೆ ಹೋದರೆ ನನ್ನ ಕೂಡೆ ಬರುವರು; ಇದೀಗ ನನ್ನ ವೃತ್ತಾಂತವು; ಇದನ್ನು ಸಂಕ್ಷೇಪವಾಗಿ ಹೇಳಿದೆನು; ಇನ್ನು ವಿಸ್ತಾರವಾಗಿ ಹೇಳಿ ಪ್ರಯೋಜನವೇನು! ನನ್ನ ಅಣ್ಣನಾದ ವಾಲಿಯೇ ನನಗೆ ಶತ್ರುವು; ಆತನು ನಾಶವಾದಂದಿಗೆ ನನ್ನ ದುಃಖವು ಶಮನವಾಗುವದು; ನನ್ನ ದುಃಖವು ವಾಲಿಯು ಜೀವವಂತನಾಗಿರುವಷ್ಟುಕಾಲವೂ ಹೋಗದು; ಇದನ್ನು ದುಃಖಾತಿಶಯದಿಂದ ಹೇಳುತ್ತೇನೆ; ಲೋಕದಲ್ಲಿ ದುಃಖಿಯಾದವನಿಗೂ ಸುಖಿಯಾದವನಿಗೂ ಸಖನೇ ಪ್ರಾಣರಕ್ಷಕನು" ಎಂದು ನುಡಿದನು.

ಆ ಮಾತನ್ನು ಕೇಳಿ ಶ್ರೀರಾಮನು ಸುಗ್ರೀವನನ್ನು ಕುರಿತು "ಎಲೈ ಸುಗ್ರೀವನೆ, ನಿಮ್ಮಿಬ್ಬರಿಗೂ ಇಂಥಾ ವೈರವು ಬಂದದ್ದಕ್ಕೆ ಕಾರಣವೇನು? ನಿಮ್ಮಿಬ್ಬರ ಬಲಾಬಲಗಳನ್ನು ವಿಚಾರಿಸಿಕೊಂಡೆನು; ನಿನಗೆ ವಾಲಿಯು ಮಾಡಿದ ಅವಮಾನವನ್ನು ಕೇಳಿ ನನಗೆ ಎದೇ ನಡುಗುತ್ತದೆ; ವರ್ಷಾಕಾಲದ ಮೇಘದಿಂದ ಜಲಪ್ರವಾಹವು ಹೆಚ್ಚಾಗುವಂತೆ ಹೊತ್ತುಹೊತ್ತಿಗೂ ನನ್ನ ಕೋಪವು ಹೆಚ್ಚುತ್ತಿದೆ! ಎಲೈ ಸುಗ್ರೀವನೆ, ನಾನು ಬಿಲ್ಲಿಗೆ ಹೆದೆಯನ್ನೇರಿಸುವದಕ್ಕೆ ಮೊದಲೇ ನಿಮ್ಮ ವೃತ್ತಾಂತವನ್ನು ಹೇಳು; ನನ್ನ ಬಾಣಗಳನ್ನು ನೋಡಿದೆಯಲ್ಲ! ಇನ್ನು ನಿನ್ನ ಶತ್ರುವಾದ ವಾಲಿಯು ಹತನಾಗುವನೆಂದು ನಂಬು" ಎಂದು ನುಡಿದನು.

---

## ೯ನೇ ಅಧ್ಯಾಯ.

### ವಾಲಿಸುಗ್ರೀವರಿಗೆ ವಿರೋಧವು ಬಂದ ವೃತ್ತಾಂತ.

ಆ ಬಳಿಕ ಸುಗ್ರೀವನು ಶ್ರೀರಾಮನಿಗೆ ತನಗೂ ವಾಲಿಗೂ ವೈರವು ಬಂದದ್ದಕ್ಕೆ ಕಾರಣವನ್ನು ಸವಿಸ್ತಾರವಾಗಿ ಹೇಳುತ ಆತನನ್ನು ನೋಡಿ "ಎಲೈ ಶ್ರೀರಾಮನೆ, ನನ್ನ ಅಣ್ಣನಾದ ವಾಲಿಯು ಮಹಾಬಲವಂತನು; ಮಹಾಪರಾಕ್ರಮಿಯು; ಸಮಸ್ತ ಶತ್ರುಗಳನ್ನೂ ಜಯಿಸಿದವನು; ನಮ್ಮ ತಂದೆಗೆ ಬಹು ಅನುಕೂಲವಾದವನು; ಮೊದಲು

ನನಗೂ ಅತ್ಯಂತ ಇಷ್ಟನಾಗಿದ್ದನು ; ನಮ್ಮ ತಂದೆಯು ಸ್ವರ್ಗಸ್ಥನಾದಮೇಲೆ ಮಂತ್ರಿಗಳೆಲ್ಲರು ಕೂಡಿ ವಾಲಿಯು ಜ್ಯೇಷ್ಠಪುತ್ರನೆಂದು ಆತನಿಗೆ ಪಟ್ಟವನ್ನು ಕಟ್ಟಿ ಕಪಿರಾಜ್ಯಾಧಿಪತ್ಯವನ್ನು ಕೊಟ್ಟರು ; ಆತನು ಪೂರ್ವಾಗತವಾಗಿ ಬಂದ ನಮ್ಮ ರಾಜ್ಯಾಧಿಪತ್ಯವನ್ನು ಪರಿಪಾಲಿಸಿಕೊಂಡಿರಲು ನಾನು ಆತನು ಹೇಳಿದಂತೆ ಕೇಳಿಕೊಂಡು ಆತನ ಸೇವಕನಾಗಿದ್ದೆನು ; ಕೆಲವು ದಿವಸಗಳಾದಮೇಲೆ ಒಂದುದಿನ ದುಂದುಭಿ ಎಂಬ ರಾಕ್ಷಸನ ಮಗನಾದ ಮಾಯಾವಿ ಎಂಬವನು ವಾಲಿಯೊಡನೆ ವೈರವನ್ನು ಬೆಳೆಸಿ ಆತನಿಗೆ ಅನೇಕ ಉಪದ್ರವಗಳನ್ನು ಮಾಡಿ ಒಂದುದಿನ ಸಮಸ್ತ ಪ್ರಾಣಿಗಳೂ ಮೈಮರೆತು ನಿದ್ರೆಮಾಡುತ್ತಿದ್ದ ಅರ್ಧರಾತ್ರೀ ಸಮಯದಲ್ಲಿ ಕಿಷ್ಕಿಂಧಾಪಟ್ಟಣಕ್ಕೆ ಬಂದು ಆ ಪಟ್ಟಣದ ಬಾಗಲನ್ನು ಅಡ್ಡಗಟ್ಟಿಕೊಂಡು ಬೊಬ್ಬಿಟ್ಟು ಕೂಗಿ ವಾಲಿಯನ್ನು ಯುದ್ಧಕ್ಕೆ ಬರಹೇಳಿ ಕರೆಯಲು ಮಲಗಿದ್ದ ವಾಲಿಯು ಮಾಯಾವಿಯ ಭಯಂಕರವಾದ ಧ್ವನಿಯನ್ನು ಕೇಳಿ ಸಹಿಸಲಾರದೆ ಎದ್ದು ಅತ್ಯಂತ ಕೋಪಯುಕ್ತನಾಗಿ ಆ ರಾಕ್ಷಸನನ್ನು ಸಂಹರಿಸುವದಕ್ಕಾಗಿ ಅಟ್ಟಿ ಹೋಗುತ ನಾನು ನಮಸ್ಕಾರವನ್ನು ಮಾಡಿ ತಡೆದು ಬೇಡಿಕೊಂಡರೂ ಸ್ತ್ರೀಯರು ತಡೆದು ನಿಲ್ಲಿಸಿದರೂ ನಿಲ್ಲದೆ ನಮ್ಮನ್ನು ನೂಕಿಬಿಟ್ಟು ಕೋಪಾಟೋಪದಿಂದ ಅತಿವೇಗವಾಗಿ ಹೋಗುತ್ತಿದ್ದನು ; ನಾನು ಆತನು ಹಿರೀಅಣ್ಣನೆಂಬ ವ್ಯಾಮೋಹದಿಂದ ಆತನಹಿಂದೆ ಹೋಗುತ್ತಿದ್ದೆನು ; ಮಾಯಾವಿಯು ವಾಲಿಯನ್ನೂ ನನ್ನನ್ನೂ ನೋಡಿ ಅತಿ ಭಯದಿಂದ ಕಂಗೆಟ್ಟು ಓಡುತ್ತಿರಲು ನಾವಿಬ್ಬರೂ ಕಾಡುಮೇಡನ್ನು ನೋಡದೆ ಹಿಂದಟ್ಟಿಕೊಂಡು ಹೋದೆವು ; ನಾವು ಹೋದ ಮಾರ್ಗವು ಚಂದ್ರನಿಂದ ಪ್ರಕಾಶವಾಗಲು ಮಾಯಾವಿಯು ಅತಿ ವೇಗದಿಂದ ಒಂದು ಅತ್ಯಂತ ಘೋರಾರಣ್ಯವನ್ನು ಹೊಕ್ಕು ಹೋಗಿ ಅಲ್ಲಿದ್ದ ಗುಹೆಯನ್ನು ಪ್ರವೇಶಿಸಿದನು ; ವಾಲಿಯು ಆ ಗುಹೆಯ ಬಾಗಲನ್ನು ನೋಡಿ ಅತ್ಯಂತ ಕೋಪಕರಳ ನನ್ನನ್ನು ಕುರಿತು ‘ ಎಲೈ ಸುಗ್ರೀವನೆ, ನೀನು ಈ ಗುಹೆಯ ಬಾಗಲನ್ನು ಕಾದುಕೊಂಡು ಜತನವಾಗಿರು ; ನಾನು ಗುಹೆಯ ಒಳಹೊಕ್ಕು ನನ್ನ ಶತ್ರುವಾದ ಮಾಯಾವಿಯನ್ನು ಕೊಂದು ಬರುತ್ತೇನೆ ; ನಾನು ತಿರಿಗಿ ಬರುವಪರ್ಯಂತರವೂ ಜತನವಾಗಿರು ’ ಎಂದು ಹೇಳಿ ನಾನು ಸರ್ವಥಾ ಅಂಧಕಾರವಾದ ಆ ಗುಹೆಯನ್ನು ಹೊಕ್ಕುಹೋಗುವದು ಕಾರ್ಯವಲ್ಲವೆಂದು ಆತನ ಪಾದಗಳನ್ನು ಕಟ್ಟಿಕೊಂಡು ಹೇಳಲು ಕೋಪಾಟೋಪದಿಂದ ನನ್ನನ್ನು ಕಾಲಿಂದ ಒದ್ದು ಕೆಡಹಿ ಆ ಬಿಲವನ್ನು ಹೊಕ್ಕುಹೋದನು ! ಆ ಬಳಿಕ ನಾನು ಆತನು ಬರುವನೆಂದು ಒಂದು ವರುಷಪರ್ಯಂತರ ಕಾದುಕೊಂಡಿದ್ದು ಆಮೇಲೂ ಬರದಿರಲು ಆತನು ಏನಾದನೋ ಎಂದು ಮತ್ತೂ ಕೆಲವುದಿವಸಗಳು ಸಂಶಯದಿಂದ ಕಾದಿದ್ದೆವು ; ಆ ಸಮಯದಲ್ಲಿ ಆ ಗುಹೆಯ ಬಾಗಲಿಂದ ನೊರೆಸಹಿತವಾದ ರಕ್ತಪ್ರವಾಹವು ಬಂತು ; ಅದನ್ನು ಕಂಡು ಆ ಗುಹೆಯೊಳಗುಂಟಾದ ಕೋಲಾಹಲಧ್ವನಿಯನ್ನೂ ಬೊಬ್ಬಿಡುತ್ತಿದ್ದ ರಾಕ್ಷಸಧ್ವನಿಯನ್ನೂ ಕೇಳಿ ವಾಲಿಯ ಧ್ವನಿಯನ್ನು ಕೇಳದೆ ಅಂಥಾ ಕುರುಹುಗಳಿಂದ ವಾಲಿಯು ಪರಲೋಕವನ್ನೈದಿದನೆಂದೆಣಿಸಿ ದೊಡ್ಡ ಪರ್ವತಕ್ಕೆ ಸಮಾನವಾದ ಒಂದು ಗುಂಡುಕಲ್ಲನ್ನು ಆ ಗುಹೆಯ ಬಾಗಲಲ್ಲಿ ಚಾಚಿ ಅತ್ಯಂತ ದುಃಖಾಕ್ರಾಂತನಾಗಿ ವಾಲಿಗೆ ಉತ್ತರಕ್ರಿಯೆಗಳನ್ನು ಮಾಡಿ ಕಿಷ್ಕಿಂಧಾಪಟ್ಟಣಕ್ಕೆ ಬಂದು ಲಜ್ಜಿತನಾಗಿ ಒಂದು ದಿಕ್ಕಿನಲ್ಲಿ ಮರೆಯಾಗಿದ್ದೆನು ; ಆಗ ಮಂತ್ರಿಗಳೆಲ್ಲರು ಕೂಡಿ ರಾಜ್ಯಕ್ಕೆ ಅರಸನಿಲ್ಲದಿರಬಾರದೆಂದು ಮಂತ್ರಾಲೋಚನೆಯನ್ನು ಮಾಡಿ ನನಗೆ ಪಟ್ಟವನ್ನು ಕಟ್ಟಿದರು ; ನಾನು ಧರ್ಮದಿಂದ ರಾಜ್ಯಪರಿಪಾಲನವನ್ನು ಮಾಡಿಕೊಂಡಿದ್ದೆನು ! ಹಾಗಿರುವಲ್ಲಿ ಗುಹೆಯನ್ನು ಹೊಕ್ಕುಹೋದ ವಾಲಿಯು ಶತ್ರುವಾದ ಮಾಯಾವಿಯನ್ನು ಕೊಂದು ಕಿಷ್ಕಿಂಧಾಪಟ್ಟಣಕ್ಕೆ ಬಂದು ರಾಜ್ಯಪರಿಪಾಲನಮಾಡುತ್ತಿದ್ದ ನನ್ನನ್ನು ನೋಡಿ ಅತ್ಯಂತ ಕೋಪಯುಕ್ತನಾಗಿ ಕಣ್ಣುಗಳನ್ನು ಕೆಂಪುಮಾಡಿಕೊಂಡು ಮಂತ್ರಿಗಳನ್ನು ಬಹು ನಿಷ್ಠುರವಚನಗಳಿಂದ ನುಡಿದನು ; ನಾನು ಆತನನ್ನು ನಿಗ್ರಹಿಸಿ ಸೆರೆಯಲ್ಲಿಡಲೂ ಕೂಡುವದಾಗಿತ್ತು ; ಹಾಗಾದರೂ ಹಿರೀ ಅಣ್ಣನನ್ನು ನಿಗ್ರಹಿಸಬಾರದೆಂದು ದ್ರೋಹವನ್ನು ಚಿಂತಿಸದೆ ತನ್ನ ಶತ್ರುವನ್ನು ಜಯಿಸಿ ತಿರಿಗಿ ಬಂದನಲ್ಲವೆಂದು ಅತ್ಯಂತ ಹರ್ಷದಿಂದ ಸನ್ಮಾನಿಸಿ ನಮಸ್ಕಾರವನ್ನು ಮಾಡಿದೆನು ; ಆತನು ದ್ವೇಷದಿಂದ ಅಂತರಂಗಶುದ್ಧಿಯಾಗಿ ವಂದನೆ ಮಾಡಿದಾಗ್ಯೂ ನನಗೆ ಆಶೀರ್ವಾದವನ್ನು ಮಾಡಲಿಲ್ಲ !

## ೧೦ನೇ ಅಧ್ಯಾಯ.

### ಶ್ರೀರಾಮನು ಸುಗ್ರೀವನಿಗೆ ಮತ್ತೂ ಅಭಯವನ್ನು ಕೊಟ್ಟದ್ದು.

"ಎಲೈ ಶ್ರೀರಾಮನೆ, ಈ ಮರ್ಯಾದೆಯಲ್ಲಿ ಅತ್ಯಂತ ಕೋಪಯುಕ್ತನಾದ ವಾಲಿಗೆ ಕೋಪಶಾಂತವಾಗುವ ಹಾಗೆ ನಾನು ಅನೇಕ ಪ್ರಿಯೋಕ್ತಿಯಿಂದ ಸಂತವಿಟ್ಟು 'ಎಲೈ ವಾಲಿಯೇ ದೈವಾಧೀನದಿಂದ ಶತ್ರುವನ್ನು ಜಯಿಸಿ ಪರಿಣಾಮದಿಂದ ತಿರಿಗಿ ಬಂದೆ; ಅದರಿಂದ ನಾನು ಮಹಾ ಕೃತಾರ್ಥನಾದೆನು; ಅನೇಕ ಸಲಾಕೆಗಳಿಂದ ನಿರ್ಮಿಸಲ್ಪಟ್ಟು ಪೂರ್ಣಚಂದ್ರನಂತೆ ಅತಿ ಪ್ರಕಾಶವಾಗಿ ರಾಜಚಿಹ್ನೆಗಳಾದ ಈ ಶ್ವೇತಚ್ಛತ್ರವನ್ನೂ ಚಾಮರಗಳನ್ನೂ ಅಂಗೀಕರಿಸು; ನೀನು ಬಹುದಿವಸಗಳು ಗುಹೆಯಲ್ಲಿ ಸಂಚರಿಸಿ ಸತ್ತು ಕೆಟ್ಟುಬಂದೆ; ನಾನು ನಿನ್ನ ಮಾತನ್ನು ಮೀರದೆ ಒಂದು ವರುಷಪರ್ಯಂತರ ಗುಹೆಯ ಬಾಗಲನ್ನು ಕಾದುಕೊಂಡಿದ್ದು ಆಮೇಲೆ ಗುಹೆಯ ಬಾಗಲಿಂದ ರಕ್ತಪ್ರವಾಹವು ಬರುತ್ತಿದ್ದದ್ದನ್ನು ಕಂಡು ಅತಿ ದುಃಖಾಕ್ರಾಂತನಾಗಿ ದೊಡ್ಡ ಪರ್ವತದ ಕೋಡುಗಲ್ಲಿನಂತಿದ್ದ ಒಂದು ಗುಂಡುಕಲ್ಲನ್ನು ಆ ಗುಹೆಯ ಬಾಗಲಿಗೆ ಅಮರಿಸಿ ಇಲ್ಲಿಗೆ ಬರಲು ಪ್ರಧಾನರೆಲ್ಲರು ಕೂಡಿ ರಾಜ್ಯಕ್ಕೆ ಅರಸನಿಲ್ಲದಿರಬಾರದೆಂದು ನನಗೆ ಕಪಿನಾಯಕಪಟ್ಟವನ್ನು ಕಟ್ಟಿ ಕಿಷ್ಕಿಂಧಾ ರಾಜ್ಯಭಾರವನ್ನು ಕೊಟ್ಟರು; ನಾನು ಮಾಡಿದ ಪುಣ್ಯದಿಂದ ನೀನು ಜಯವನ್ನು ಪಡೆದು ಬಂದದ್ದು ಚನ್ನಾಯಿತು; ನೀನು ಮೊದಲಿನ ಮರ್ಯಾದೆಯಲ್ಲಿ ರಾಜ್ಯಪರಿಪಾಲನೆವನ್ನು ಮಾಡು; ನೀನಿಲ್ಲದಿದ್ದಕಾರಣ ನಾನು ಈ ರಾಜ್ಯವನ್ನು ಪರಿಪಾಲನೆಮಾಡಿಕೊಂಡಿದ್ದೆನಲ್ಲದೆ ಮತ್ತೊಂದಲ್ಲ; ಈ ರಾಜ್ಯ ದುರ್ಗ ಬಲ ಕೋಶ ಪ್ರಧಾನರ ಸಹಿತವಾದ ಸಮಸ್ತಾಧಿಪತ್ಯವನ್ನೂ ನಿನಗೆ ತಿರಿಗಿ ಕೊಟ್ಟೆನು; ನಿನಗೆ ನನ್ನಲ್ಲಿ ನಿಷ್ಕಾರಣವಾಗಿ ರೋಷವು ಬೇಡ; ನಾನು ನಿನಗೆ ಕೈಮುಗಿದು ಸಾಷ್ಟಾಂಗವೆರಗಿ ಬೇಡಿಕೊಳ್ಳುತ್ತೇನೆ; ಸಮಸ್ತ ಪ್ರಧಾನ ಪರಿಜನ ಪುರಜನರೆಲ್ಲರು ಬಲಾತ್ಕಾರದಿಂದ ನನಗೆ ರಾಜ್ಯಾಧಿಪತ್ಯವನ್ನು ಕೊಟ್ಟರು; ಈ ರಾಜ್ಯದಲ್ಲಿ ನೀನೂ ಇಲ್ಲದೆ ನಾನೂ ಇಲ್ಲದೆ ಸುಮ್ಮನಿರಬಾರದೆಂದು ಸಮಸ್ತ ಪ್ರಧಾನರೂ ಕೂಡಿ ಮಂತ್ರಾಲೋಚನೆ ಮಾಡಿ ನನ್ನ ವಶಮಾಡಿದರು; ಈ ರಾಜ್ಯವನ್ನು ನೀನೇ ಪರಿಪಾಲಿಸಿಕೊಂಡಿರು' ಎಂದು ಅತಿ ವಿನಯದಿಂದ ಹೇಳಿದೆನು.

"ವಾಲಿಯು ನನ್ನನ್ನು ಬಹು ನಿಷ್ಠುರವಾಗಿ ನುಡಿದು ಮಂತ್ರಿಗಳನ್ನೂ ಸ್ನೇಹಿತರನ್ನೂ ಕರೆದು ಅವರ ಮಧ್ಯದಲ್ಲಿ ನನ್ನನ್ನು ದಂಡಿಸಿ ಆಡಬಾರದ ನುಡಿಗಳನ್ನಾಡಿ 'ಎಲೈ ಮಂತ್ರಿಗಳಿರಾ, ನೀವೆಲ್ಲರೂ ಬಲ್ಲಿರಲ್ಲ! ಅರ್ಧರಾತ್ರಿ ಸಮಯದಲ್ಲಿ ಮಾಯಾವಿಯು ಈ ಪಟ್ಟಣದ ಬಾಗಲಲ್ಲಿಬಂದು ನಿಂತುಕೊಂಡು ನನ್ನನ್ನು ಯುದ್ಧಕ್ಕೆ ಬರಹೇಳಿ ಕರೆಯಲು ನಾನು ಆ ಅಸುರನ ಅತಿ ಭಯಂಕರವಾದ ಧ್ವನಿಯನ್ನು ಕೇಳಿ ಅರಮನೆಯಿಂದ ಹೊರಟು ಆತನನ್ನು ಅಟ್ಟಿಕೊಂಡು ಹೋಗುತ್ತಿರಲು ಪಾಪಿಷ್ಠನಾದ ಈ ಸುಗ್ರೀವನು ನನ್ನ ಕೂಡೆ ಬರುತ್ತಿದ್ದನು; ನಮ್ಮಿಬ್ಬರನ್ನು ನೋಡಿ ಮಾಯಾವಿಯು ಭಯಪಟ್ಟು ಅತಿ ವೇಗದಿಂದ ಓಡಿಹೋಗಿ ಒಂದು ಗುಹೆಯನ್ನು ಹೊಕ್ಕು ಹೋಗಲು ನಾನು ಆ ಗುಹೆಯನ್ನು ಹೊಕ್ಕಾದರು ಅವನನ್ನು ಕೊಂದು ತಿರಿಗಿ ಬರಬೇಕೆಂದು ಪ್ರತಿಜ್ಞೆಯನ್ನು ಮಾಡಿ ನಾನು ತಿರಿಗಿ ಬರುವಪರ್ಯಂತರವು ಆ ಗುಹೆಯ ಬಾಗಲನ್ನು ಕಾದುಕೊಂಡಿರಲು ಇವನನ್ನು ಗುಹೆಯ ಬಾಗಿಲಲ್ಲಿರಿಸಿ ಜತನವಾಗಿರುವನೆಂದು ನಂಬಿ ಆ ಗುಹೆಯ ಒಳಹೊಕ್ಕು ಆ ರಾಕ್ಷಸನನ್ನು ಅರಸಿಕೊಂಡು ಹೋಗಿ ಆತನು ಕಂಗೆಟ್ಟು ಒಂದು ದಿಕ್ಕಿನಲ್ಲಿರಲು ಆತನನ್ನು ಕೊಂದೆನು; ಅಷ್ಟರೊಳಗೆ ಒಂದು ವರುಷವು ಕಳೆಯಿತು; ಆ ರಾಕ್ಷಸನ ರಕ್ತವು ಆ ಗುಹೆಯನ್ನು ತುಂಬಿಕೊಂಡು ಬಾಗಲಲ್ಲಿ ಹೊರಹೊಮ್ಮಿಬಂತು; ಆಮೇಲೆ ನಾನು ಹೊರಗೆ ಬರಲೆತ್ನಯಿಸಿ ಗುಂಡುಕಲ್ಲು ಅಗಚಿದ್ದದ್ದರಿಂದ ಬಾಗಲನ್ನು ಕಾಣದೆ ಸುಗ್ರೀವಾ—ಸುಗ್ರೀವಾ ಎಂದು ಬಹಳವಾಗಿ ಕೂಗಿ ಪ್ರತಿವಚನವನ್ನು ಕೇಳದೆ ಮನಸ್ಸಿನಲ್ಲಿ ಬಹುದುಃಖಪಟ್ಟು ಕಾಲಲ್ಲಿ ಒದೆಯಲು ಆ ಬಾಗಲಲ್ಲಿದ್ದ ಗುಂಡುಕಲ್ಲು ಉರುಳಿಹೋಯಿತು; ಆಮೇಲೆ ನಾನು ಆ ಬಾಗಲಿಂದ ಹೊರಟುಬಂದೆನು; ಸುಗ್ರೀವನು ನನ್ನ ರಾಜ್ಯವನ್ನು ಬಯಸಿ ಗುಹೆಯಲ್ಲಿ

ಹೊಕ್ಕ ನಾನು ತಿರಿಗಿ ಬಾರದಹಾಗೆ ಗುಹೆಯಬಾಗಲಿಗೆ ದೊಡ್ಡಗುಂಡುಕಲ್ಲನ್ನು ಚಾಚಿದನು' ಎಂದು ಪ್ರಧಾನರಕೂಡೆಯೂ ಸಮಸ್ತ ಪರಿಜನ ಪುರಜನರಕೂಡೆಯೂ ನುಡಿದು ಅತ್ಯಂತ ಕೋಪಯುಕ್ತನಾಗಿ ತಾನೇ ಸಮಸ್ತ ರಾಜ್ಯವನ್ನೂ ಆಕ್ರಮಿಸಿ ನನ್ನ ಸ್ತ್ರೀಯನ್ನೂ ಅಪಹರಿಸಿಕೊಂಡನು.

"ಆಮೇಲೆ ಆತನ ದ್ವೇಷಬುದ್ಧಿಯನ್ನು ಕಂಡು ನಾನು ಕಿಷ್ಕಿಂಧಾ ಪಟ್ಟಣದಲ್ಲಿರುವದಕ್ಕೆ ಭಯಪಟ್ಟು ನನ್ನ ಸ್ತ್ರೀಯನ್ನಪಹರಿಸಿದನಲ್ಲಾ ಎಂಬ ದುಃಖದಿಂದ ಈ ಋಷ್ಯಮೂಕಪರ್ವತಕ್ಕೆ ಬಂದೆನು; ಈಪ್ರಕಾರದಲ್ಲಿ ನನಗು ವಾಲಿಗೂ ಮಹತ್ತಾದ ವೈರವು ಹುಟ್ಟಿತು; ನಿರಪರಾಧಿಯಾದ ನನಗೆ ವಾಲಿಯೊಡನೆ ವಿರೋಧವು ಬರಲು ಆತನ ಭಯದಿಂದ ಕಂಗೆಟ್ಟು ಈ ಪರ್ವತದಲ್ಲಿರುವ ನನ್ನನ್ನು ಕೃಪಾದೃಷ್ಟಿಯಿಂದ ನೋಡಿ ರಕ್ಷಿಸು" ಎಂದು ಹೇಳಿದನು.

ಆ ಮಾತನ್ನು ಕೇಳಿ ಶ್ರೀರಾಮನು ಪ್ರಸನ್ನಮುಖನಾಗಿ ನಸುನಗುತ "ಎಲೈ ಸುಗ್ರೀವನೆ, ಸೂರ್ಯಮಂಡಲದಂತೆ ನೋಡುವದಕ್ಕೆ ಅಶಕ್ಯವಾಗಿ ಅತಿ ತೀಕ್ಷ್ಣವಾಗಿ ಬಂಜೆಯಾಗದಂಥಾ ನನ್ನ ಶರಗಳನ್ನು ನೋಡು; ಈ ಶರಗಳು ಅತ್ಯಂತ ಕೋಪದೊಡಗೂಡಿ ವಾಲಿಯ ಶರೀರವನ್ನು ಕೆಡಹುವವಲ್ಲದೆ ಬಿಡವು; ನಿನ್ನ ಚರಿತ್ರವನ್ನು ಕೇಳಿದ ನಾನು ಪಾಪಸ್ವರೂಪನಾಗಿ ನಿನ್ನ ಶತ್ರುವಾದ ವಾಲಿಯು ನನ್ನ ಶರಹತಿಯಿಂದ ಘಾಯಪಡೆದು ಬೀಳುವಪರ್ಯಂತರ ಹ್ಯಾಗಿರಲಿ! ಶೋಕವೆಂಬ ಸಮುದ್ರದಲ್ಲಿ ಮುಳುಗಿದ ನಿನ್ನನ್ನುದ್ಧರಿಸಿ ಧನ್ಯನಾಗಿ ಮಾಡುವೆನು; ನೀನು ಅಪರಿಮಿತವಾದ ಮಾಂಗಲ್ಯವನ್ನು ಪಡೆಯುವೆ" ಎಂದು ಹೇಳಿದನು.

## ೧೧ನೇ ಅಧ್ಯಾಯ.

### ಸುಗ್ರೀವನು ಶ್ರೀರಾಮನನ್ನು ಪರೀಕ್ಷಿಸಿದ್ದು.

ಈ ಮರ್ಯಾದೆಯಲ್ಲಿ ಅನೇಕ ಉತ್ಸಾಹಶಕ್ತಿಯನ್ನೂ ಪರಾಕ್ರಮವನ್ನೂ ಉಂಟುಮಾಡುವ ಶ್ರೀರಾಮನ ಮಾತನ್ನು ಕೇಳಿ ಸುಗ್ರೀವನು ಶ್ರೀರಾಮನನ್ನತಿ ಸನ್ಮಾನದಿಂದ ಕೊಂಡಾಡಿ ಕೈಮುಗಿದುಕೊಂಡು "ಎಲೈ ಶ್ರೀರಾಮನೆ, ನೀನು ಕೋಪಿಸಿದರೆ ಪ್ರಳಯಕಾಲಾಗ್ನಿಯಂತೆ ನಿಶಿತವಾದ ನಿನ್ನ ಶರಗಳಿಂದ ಸಮಸ್ತ ಲೋಕಗಳನ್ನೂ ದಹಿಸಬಲ್ಲೀ; ಹಾಗಾದರೂ ಮಹಾಪರಾಕ್ರಮಿಯಾದ ವಾಲಿಯ ಸಾಮರ್ಥ್ಯವನ್ನೂ ಧೈರ್ಯವನ್ನೂ ಹೇಳುತ್ತೇನೆ—ಸಾವಧಾನವಾಗಿ ಕೇಳು; ವಾಲಿಯು ಪ್ರತಿದಿನವೂ ಪಡುವಣ ಸಮುದ್ರಕ್ಕೆ ಹೋಗಿ ಅಲ್ಲಿಂದ ಮೂಡಲ ಸಮುದ್ರಕ್ಕೆ ಹಾರಿ ಅಲ್ಲಿಂದ ತೆಂಕಣ ಸಮುದ್ರಕ್ಕೆ ಹೋಗಿ ಕಡೆಯಲ್ಲಿ ಬಡಗಣ ಸಮುದ್ರಮಾರ್ಗವಾಗಿ ಸೂರ್ಯೋದಯಕ್ಕೆ ಮುಂಚೆಯೇ ವಿಲಾಸಾರ್ಥವಾಗಿ ಸಂಚರಿಸಿಕೊಂಡು ಬರುವನು; ನಿತ್ಯದಲ್ಲು ದೊಡ್ಡ ಪರ್ವತದ ಕೋಡುಗಲ್ಲುಗಳನ್ನು ವಿನೋದಾರ್ಥವಾಗಿ ಕಿತ್ತೀಡಾಡುವನು; ತನ್ನ ಭುಜಬಲವನ್ನು ತಿಳಿಯಬೇಕೆಂದು ದೊಡ್ಡ ಮರಗಳನ್ನು ಕಿತ್ತಾಡುವನು! ಒಂದು ಸಮಯದಲ್ಲಿ ಕೈಲಾಸಪರ್ವತದ ಕೋಡುಗಲ್ಲಿಗೆ ಸಮಾನವಾದಂಥಾವನಾಗಿ ಸಾವಿರ ಆನೆಗಳ ಶಕ್ತಿಯುಳ್ಳವನಾಗಿ ಮಹಾಪರಾಕ್ರಮಿಯಾದ ದುಂದುಭಿಯೆಂಬ ರಾಕ್ಷಸನು ತನ್ನ ಬಲಗರ್ವದಿಂದ ಕೊಬ್ಬಿ ಬ್ರಹ್ಮದೇವನು ಕೊಟ್ಟ ವರದಿಂದ ಮೈಮರೆತು ಅತ್ಯಂತ ಘನಗಾತ್ರವಾದ ಶರೀರವುಳ್ಳ ಮಹಿಷಾಕಾರನಾಗಿ ಸಮುದ್ರಕ್ಕೆ ಹೋಗಿ 'ಎಲೈ ಸಮುದ್ರರಾಜನೆ, ನಾನು ನಿನ್ನಕೂಡೆ ಯುದ್ಧಮಾಡಬೇಕೆಂದು ನಿನ್ನ ಸಮೀಪಕ್ಕೆ ಬಂದೆನು; ನೀನು ನನ್ನಕೂಡೆ ಯುದ್ಧಮಾಡುವದಕ್ಕೆ ಬಾ' ಎಂದು ಕರೆದನು.

"ಧರ್ಮಾತ್ಮನಾದ ಸಮುದ್ರರಾಜನು ದುಂದುಭಿಯನ್ನು ಕುರಿತು 'ಎಲೈ ದುಂದುಭಿಯೆ, ನಾನು ನಿನ್ನಕೂಡೆ ಯುದ್ಧವನ್ನು ಮಾಡುವದಕ್ಕೆ ಸಮರ್ಥನಲ್ಲ; ನೀನು ಸಮರಾಂಗಣದಲ್ಲಿ ಮಹಾಸಮರ್ಥನು; ಆದರೂ ನಿನ್ನಕೂಡೆ ಯುದ್ಧವನ್ನು ಮಾಡುವದಕ್ಕೆ ಸಮರ್ಥನಾದವನನ್ನು ಹೇಳುತ್ತೇನೆ ಕೇಳು: ಸಮಸ್ತ ತಪಸ್ವಿಗಳಿಗೂ ಆಧಾರವಾಗಿ

ಪರಮೇಶ್ವರನಿಗೆ ಮಾತನಾದ ಹಿಮವತ್ಪರ್ವತನೆಂದು ಪ್ರಸಿದ್ಧನಾದ ಪರ್ವತರಾಜನಿದ್ದಾನೆ ; ಆತನಲ್ಲಿ ಅನೇಕ ದರಿಗಳೂ ವಪ್ರಗಳೂ ಗುಹೆಗಳೂ ಉಂಟು ; ಆತನು ನಿನಗೆ ಯುದ್ಧವನ್ನು ಕೊಟ್ಟು ಅತಿ ಹರ್ಷವನ್ನು ಮಾಡುವನು ’ ಎಂದು ನುಡಿದನು.

“ ಆ ಮಾತನ್ನು ಕೇಳಿ ದುಂದುಭಿಯು ಸಮುದ್ರರಾಜನು ತನ್ನ ಕೂಡೆ ಯುದ್ಧವನ್ನು ಮಾಡ ಕೂಡದ್ದರಿಂದ ಆತನು ಮಹಾ ಹೇಡಿಯೆಂದೆಣಿಸಿ ಹಿಮವತ್ಪರ್ವತಕ್ಕೆ ಹೋಗಿ ಆ ಪರ್ವತದ ಕೋಡುಗಲ್ಲುಗಳನ್ನು ಹತ್ತಿ ಅಲ್ಲಿದ್ದ ಗುಂಡುಗಳನ್ನು ಕಿತ್ತಾಡುತ್ತಿರಲು ಹಿಮವತ್ಪರ್ವತನು ಭಯಪಟ್ಟು ಸೌಮ್ಯರೂಪವನ್ನು ತಾಳಿ ತನ್ನ ಕೋಡುಗಲ್ಲಿನಮೇಲಿದ್ದುಕೊಂಡು ದುಂದುಭಿಯನ್ನು ಕುರಿತು ‘ ಎಲೈ ದುಂದುಭಿಯೆ, ನೀನು ನನ್ನ ಕೋಡುಗಲ್ಲಿನಮೇಲೆ ಕುಳಿತುಕೊಂಡು ಇಲ್ಲಿರುವ ಬೆಳ್ಳೀಗುಂಡುಗಳನ್ನು ಕಿತ್ತಾಡುತ ಯಾಕೆ ನನಗೆ ವ್ಯಥೆಯನ್ನುಂಟುಮಾಡುತ್ತೀ ? ನಾನು ಒಂದು ದಿವಸವಾದರೂ ಜಗಳವನ್ನು ಕಂಡವನಲ್ಲ ; ತಪಸ್ವಿಗಳಿಗೆ ಆಶ್ರಯವಾಗಿರುವೆನು ’ ಎಂದು ನುಡಿಯಿತು.

“ ದುಂದುಭಿಯು ಕೋಪಾಟೋಪದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ‘ ಎಲೈ ಹಿಮವತ್ಪರ್ವತನೆ, ನೀನು ನನ್ನ ಭಯದಿಂದ ಯುದ್ಧಮಾಡುವದಕ್ಕೆ ಸಮರ್ಥನಲ್ಲದಿದ್ದೀ ; ನನ್ನ ಕೂಡೆ ಯುದ್ಧಮಾಡುವದಕ್ಕೆ ಸಮರ್ಥನಾದ ಪುರುಷನನ್ನು ಹೇಳು ” ಎಂದು ಕೇಳಿದನು.

“ ಹಿಮವಂತನು ‘ ಎಲೈ ದುಂದುಭಿಯೆ, ದೇವೇಂದ್ರನ ಮಗನಾದ ವಾಲಿಯು ಮಹಾಸಮರ್ಥನು ; ಆತನು ಕಿಷ್ಕಿಂಧಾಪಟ್ಟಣದಲ್ಲಿದ್ದಾನೆ ; ಆತನು ನಿನ್ನ ಕೂಡೆ ದ್ವಂದ್ವಯುದ್ಧವನ್ನು ಮಾಡುವದಕ್ಕೆ ಸಮರ್ಥನು ; ಪೂರ್ವದಲ್ಲಿ ದೇವೇಂದ್ರನು ನಮುಚಿ ಎಂಬ ರಾಕ್ಷಸನಿಗೆ ಯುದ್ಧವನ್ನು ಕೊಟ್ಟ ಮರ್ಯಾದೆಯಲ್ಲಿ ನಿನಗೆ ವಾಲಿಯು ಯುದ್ಧವನ್ನು ಕೊಡುವನು ; ನೀನು ಯುದ್ಧವನ್ನು ಮಾಡಬೇಕಾದಪಕ್ಷದಲ್ಲಿ ಆತನ ಸಮೀಪಕ್ಕೆ ಹೋಗು ; ವಾಲಿಯು ಮಹಾ ರೋಷವುಳ್ಳವನು ; ಯುದ್ಧರಂಗದಲ್ಲಿ ಮಹಾ ನಿಪುಣನು ’ ಎಂದು ಹೇಳಿದನು.

“ ಆ ಮಾತನ್ನು ಕೇಳಿ ದುಂದುಭಿಯು ಅತ್ಯಂತ ಕೋಪಾಕ್ರಾಂತನಾಗಿ ಕಿಷ್ಕಿಂಧಾಪಟ್ಟಣಕ್ಕೆ ಬಂದು ಬಲವಾದ ಕೊಂಬುಗಳುಳ್ಳ ಕೋಣಸ್ವರೂಪವನ್ನು ತಾಳಿ ವರ್ಷಾಕಾಲದಲ್ಲಿ ತೋರುವ ನೀರುಂಡ ಮೇಘದಂತೆ ಘನಗಾತ್ರವಾದ ಶರೀರವುಳ್ಳವನಾಗಿ ತನ್ನ ಬಲಗರ್ವದಿಂದ ಕಿಷ್ಕಿಂಧಾಪಟ್ಟಣದ ಬಾಗಲನ್ನು ಅಡ್ಡಗಟ್ಟಿಕೊಂಡು ಆ ಪಟ್ಟಣದಲ್ಲಿದ್ದ ಸಮಸ್ತ ಪ್ರಾಣಿಗಳಿಗೂ ಭಯವು ಹುಟ್ಟುವಂತೆ ಭೇರೀಧ್ವನಿಯ ಮರ್ಯಾದೆಯಲ್ಲಿ ಬೊಬ್ಬಿಟ್ಟು ಕೂಗಿ ಸಮೀಪದಲ್ಲಿದ್ದ ಮರಗಳನ್ನು ಕಿತ್ತಾಡುತ ತನ್ನ ತೋಳುಗಳಿಂದ ಭೂಮಿಯನ್ನು ಬಗೆಯುತ್ತ ಮದಸೊಕ್ಕಿದ ಆನೆಯಂತೆ ತನ್ನ ಕೊಂಬುಗಳಿಂದ ಪಟ್ಟಣದ ಬಾಗಲನ್ನು ತಿವಿಯುತ್ತ ಕೋಲಾಹಲವನ್ನು ಮಾಡುತ್ತಿದ್ದನು ; ಅದನ್ನು ಕೇಳಿ ತನ್ನ ಅಂತಃಪುರದಲ್ಲಿದ್ದ ಅತ್ಯಂತ ಕೋಪಿಯಾಗಿದ್ದ ವಾಲಿಯು ನಕ್ಷತ್ರಗಳೊಡಗೂಡಿದ ಚಂದ್ರನು ಹೊರಡುವಂತೆ ತನ್ನ ಅಂತಃಪುರದಲ್ಲಿದ್ದ ಸ್ತ್ರೀಯರಸಮೇತನಾಗಿ ದುಂದುಭಿಯನ್ನು ಅಟ್ಟಿಬಂದು ಆತನನ್ನು ಕುರಿತು ಮೃದುನುಡಿಯಿಂದ ‘ ಎಲೈ ದುಂದುಭಿಯೆ, ನೀನೇನುಕಾರಣವಾಗಿ ಕಿಷ್ಕಿಂಧಾಪಟ್ಟಣದ ಬಾಗಲನ್ನಡ್ಡಗಟ್ಟಿಕೊಂಡು ಬೊಬ್ಬಿಟ್ಟು ಕೂಗುತಿದ್ದೀ ? ನನ್ನ ಪರಾಕ್ರಮವನ್ನು ನೀನು ಬಲ್ಲೆಯಷ್ಟೆ ! ಇಲ್ಲಿರಬೇಡ ; ತಿರಿಗಿಹೋಗಿ ನಿನ್ನ ಪ್ರಾಣಗಳನ್ನು ಳಿಸಿಕೋ ’ ಎಂದು ಹೇಳಿದನು.

“ ದುಂದುಭಿಯು ಅತ್ಯಂತ ಕೋಪಯುಕ್ತನಾಗಿ ಕಣ್ಣುಗಳನ್ನು ಕೆಂಪುಮಾಡಿಕೊಂಡು ‘ ಎಲೈ ವಾಲಿಯೆ, ನೀನು ನಿನ್ನ ಸ್ತ್ರೀಯರ ಸಮೀಪದಲ್ಲಿ ನಿನ್ನ ಪೌರುಷವನ್ನು ಹೇಳಿಕೊಳ್ಳಬೇಡ ; ಈಗ ನನ್ನ ಕೂಡೆ ಯುದ್ಧವನ್ನು ಮಾಡಿದರೆ ನನ್ನ ಸಾಮರ್ಥ್ಯವನ್ನು ಕಾಣುವೆ ; ಈ ದಿನಕ್ಕೆ ನನ್ನ ಕೋಪವನ್ನು ನಿಲ್ಲಿಸಿಕೊಂಡಿರುತ್ತೇನೆ ; ನೀನು ಈ ರಾತ್ರಿಯಲ್ಲಿ ನಿನ್ನ ಸತಿಯರೊಡನೆ ರಮಿಸಿಕೊಂಡು ಸ್ತ್ರೀಸಂಭೋಗಸುಖವನ್ನನುಭವಿಸು ; ನಿನ್ನ ಪರಿ

ವಾರಕ್ಕೆ ಉಚಿತವಾದ ಉಡುಗರೆಗಳನ್ನು ಕೊಟ್ಟು ಸಂತವಿಟ್ಟು ನಿನಗೆ ಸಹಾಯವಾಗಿರುವ ಬಂಧುಗಳನ್ನು ಸನ್ಮಾನಿಸಿ ಪಟ್ಟಣದಲ್ಲಿರುವ ಪ್ರಜೆಗಳನ್ನು ಸಂತವಿಡು; ನೀನು ಸ್ತ್ರೀಲೋಲನಾಗಿದ್ದೀ; ರಾಜನೀತಿಯಲ್ಲಿ ಸ್ತ್ರೀಲೋಲನಾಗಿ ಮದಿಸಿರುವವನಕೂಡೆ ಯುದ್ಧವು ಸಲ್ಲದೆಂದು ಹೇಳಿದೆ; ಕಾಮಗ್ರಹಸೊಕ್ಕಿ ಮದಿಸಿದವನಕೂಡೆಯೂ ಉನ್ಮಾದದಿಂದ ವೈಮರೆತವನ ಕೂಡೆಯೂ ಮಲಗಿದ್ದವನಕೂಡೆಯೂ ಆಯುಧವಿಲ್ಲದವನ ಕೂಡೆಯೂ ಯುದ್ಧವನ್ನು ಮಾಡಿ ಕೊಲ್ಲುವವನು ಭ್ರೂಣಹತ್ಯಪಾಪಫಲವನ್ನೈದುವನು; ಆದಕಾರಣ ಕಾಮಮೋಹಿತನಾಗಿರುವ ನೀನು ತಿರಿಗಿ ಹೋಗಿ ನಿನ್ನಮನಸ್ಸುಬಂದಂತೆ ಭೋಗಗಳನ್ನನುಭವಿಸಿ ನಾಳೇ ಪ್ರಾತಃಕಾಲದಲ್ಲಿ ಬಾ; ಆಗ ನಿನಗೆ ತಕ್ಕ ಬುದ್ಧಿಯನ್ನು ಹೇಳುವೆನು" ಎಂದು ಹೇಳಿದನು.

"ಆ ಮಾತನ್ನು ಕೇಳಿ ವಾಲಿಯು ಅತ್ಯಂತ ಕೋಪಯುಕ್ತನಾಗಿ ತಾರಾದೇವಿ ಮೊದಲಾದ ತನ್ನ ಸ್ತ್ರೀಯರನ್ನು ಮನೆಗೆ ಕಳುಹಿಸಿ 'ಎಲೈ ದುಂದುಭಿಯೆ, ನನ್ನನ್ನು ನೀನು ಮೋಹದಿಂದಮದಿಸಿದವನೆಂದೆಣಿಸಬೇಡ; ನಾನು ಯುದ್ಧರಂಗದಲ್ಲಿ ನಿನ್ನನ್ನು ಕೊಲ್ಲಬೇಕೆಂದು ಮದಸೊಕ್ಕಿದ್ದೇನೆ; ನೀನು ನನ್ನಕೂಡೆ ಯುದ್ಧವನ್ನು ಮಾಡುವದಕ್ಕೆ ಅಂಜದಪಕ್ಷದಲ್ಲಿ ಯುದ್ಧಸನ್ನಾಹನಾಗು' ಎಂದು ನುಡಿದನು.

"ಆ ಬಳಿಕ ವಾಲಿಯು ಅತ್ಯಂತ ಕೋಪಯುಕ್ತನಾಗಿ ತನ್ನ ತಾದೆಯಾದ ದೇವೇಂದ್ರನು ಕೊಟ್ಟ ಸುವರ್ಣ ಪುಷ್ಪಸರವನ್ನು ಹಾಕಿಕೊಂಡು ಯುದ್ಧಸನ್ನದ್ಧನಾಗಿ ಕೋಣಸ್ವರೂಪದಿಂದ ಪರ್ವತದ ಮರ್ಯಾದೆಯಲ್ಲಿದ್ದ ದುಂದುಭಿಯ ಕೊಂಬುಗಳನ್ನಿಡಿದು ತಿರುಗಿ ನೆಲಕ್ಕೆ ಅಪ್ಪಳಿಸಿ ಕೆಡಹಿ ಬೊಬ್ಬಿಟ್ಟು ಕೂಗಲು ಆ ಕೋಣದ ಕಿವಿಗಳಿಂದ ರಕ್ತಪ್ರವಾಹವು ಸುರಿಯುತ್ತಿತ್ತು; ಆ ಬಳಿಕ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಬುದ್ಧಿಯಿಂದ ವಾಲಿದುಂದುಭಿಯರಿಗೆ ಮಹಾ ಘೋರವಾದ ಯುದ್ಧವಾಯಿತು; ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ವಾಲಿಯು ಮುಷ್ಟಿಗಳಿಂದಲೂ ಮೊಣಕಾಲುಗಳಿಂದಲೂ ಕಲ್ಲರೆಗಳಿಂದಲೂ ದೊಡ್ಡಮರಗಳಿಂದಲೂ ಹೊಡೆಯುತ್ತಿರಲು ದುಂದುಭಿಯು ಸತ್ವಗೆಡುತ್ತಿದ್ದನು; ಆಮೇಲೆ ವಾಲಿಯು ಒಂದು ಕ್ಷಣಮಾತ್ರವು ತಳಹರಿಸಿಕೊಂಡು ದುಂದುಭಿಯನ್ನು ಉಗುರುಗಳಿಂದ ಸೀಳಿ ಭೂಮಿಯಮೇಲೆ ಕೆಡೆಹಿ ಕೈಗಳಿಂದ ಶರೀರವನ್ನು ಮುರಿದು ನೆಲಕ್ಕೆ ಅಪ್ಪಳಿಸಲು ಆತನು ಸತ್ತುಹೋದನು! ಆಮೇಲೆ ವಾಲಿಯು ಅಜೀತನಾದ ದುಂದುಭಿಯ ಶರೀರವನ್ನು ತನ್ನ ಭುಜಬಲದಿಂದ ಎಸೆಯಲು ಆ ಶರೀರವು ಒಂದು ಗಾವುದದಾರಿ ಹೋಗಿ ಬಿತ್ತು; ಆ ಸಮಯದಲ್ಲಿ ದುಂದುಭಿಯ ಬಾಯಿಂದ ಸುರಿಯುತ್ತಿದ್ದ ರಕ್ತಬಿಂದುಗಳು ಘಾಳಿಯಿಂದ ಮತಂಗಮುನೀಶ್ವರನ ಆಶ್ರಮದಲ್ಲಿ ಬಿದ್ದವು; ಆ ಮುನೀಶ್ವರನು ಆ ರಕ್ತಬಿಂದುಗಳನ್ನು ನೋಡಿ ಅತ್ಯಂತ ಕೋಪಯುಕ್ತನಾಗಿ ಅವನ್ನು ತನ್ನ ಆಶ್ರಮದಲ್ಲಿ ಚೆಲ್ಲಿಸಿದವರ್ಯಾರೆಂದು ವಿಚಾರಿಸುತ ಹೊರಕ್ಕೆ ಬಂದು ಅಲ್ಲಿ ದೊಡ್ಡ ಪರ್ವತಾಕಾರವಾಗಿ ಬಿದ್ದಿದ್ದ ದುಂದುಭಿಯ ಶರೀರವನ್ನುನೋಡಿ ತನ್ನ ತಪಸ್ಸಾಮರ್ಥ್ಯದಿಂದುಂಟಾದ ಜ್ಞಾನದೃಷ್ಟಿಯಿಂದ ವಾನರಾಧಿಪತಿಯಾದ ವಾಲಿಯು ಮಹಿಷಾಕಾರನಾದ ದುಂದುಭಿಯನ್ನುಕೊಂದು ಆತನ ಶರೀರವನ್ನುಅಲ್ಲಿ ಹಾಕಿದನೆಂದು ತಿಳಿದು ಅತ್ಯಂತ ಕೋಪಯುಕ್ತನಾಗಿ 'ವಾಲಿಯು ಮದೋನ್ಮತ್ತನಾಗಿ ದುಂದುಭಿಯನ್ನುಕೊಂದ ಗರ್ವದಿಂದ ಈ ಶರೀರವನ್ನುಇಲ್ಲಿ ಹಾಕಿದನು; ದುಂದುಭಿಯ ರಕ್ತದಿಂದ ನನ್ನ ತಪೋವನವು ಅಶುಚಿಯಾಯಿತು; ಈ ಶರೀರವು ಬಿದ್ದ ರಭಸದಿಂದ ಈ ಆಶ್ರಮದಲ್ಲಿದ್ದ ವೃಕ್ಷಗಳೆಲ್ಲವು ಮುರಿದವು; ಆದಕಾರಣ ಅಜ್ಞಾನಿಯಾದ ವಾಲಿಯು ಇಲ್ಲಿಗೆ ಸುತ್ತಲಿರುವ ಒಂದು ಗಾವುದದಾರಿಯೊಳಗಾಗಿ ಕಾಲಿಟ್ಟರೆ ಆತನ ಶರೀರವು ಲಯವಾಗಲಿ! ಆತನ ಸಮ್ಮಂಧವುಳ್ಳವಾಗಿ ಈ ವನದಲ್ಲಿರುವ ವಾನರಗಳು ಹೊರಟುಹೋಗಲಿ! ಹೋಗದಿದ್ದರೆ ಅವಕ್ಕೂ ಶಾಪವನ್ನು ಕೊಡುವೆನು! ಮಕ್ಕಳನ್ನು ರಕ್ಷಿಸುವಂತೆ ರಕ್ಷಿಸಿಕೊಂಡಿದ್ದ ನನ್ನ ಆಶ್ರಮದಲ್ಲಿರುವ ಚಿಗುರೆಲೆಗಳನ್ನೂ ಹಣ್ಣುಕಾಯಿಗಳನ್ನೂ ಕೆಡಿಸುತ ಈ ಕಪಿಗಳು ಇಲ್ಲಿದ್ದು ಮಾಡುವದೇನು! ಈ ಆಶ್ರಮದಲ್ಲಿರುವ ಕಪಿಗಳಿಗೆ ಇದೊಂದುದಿನ ಅವಕಾಶವನ್ನು ಕೊಟ್ಟೆನು; ಈಹೊತ್ತು ಹೋಗದೆ ನಾಳೆ ಕಾಣಿಸಿಕೊಳ್ಳುವ ಕಪಿಯು ಅನೇಕಸಾವಿರ ವರುಷಗಳ ಪರ್ಯಂತರ ಶಿಲೆಯಾಗಿ ಹೋಗಲಿ!' ಎಂದು ನುಡಿದನು.

" ಆ ಮಾತುಗಳನ್ನು ಕೇಳಿ ಅಲ್ಲಿದ್ದ ಕಪಿಗಳು ವಾಲಿಯ ಸಮೀಪಕ್ಕೆ ಹೋಗಿ ಕಾಣಿಸಿಕೊಳ್ಳಲು ಆತನು ಆ ಕಪಿಗಳನ್ನು ಕಂಡು ' ಎಲೈ ಕಪಿಗಳಿರಾ, ನೀವೇನುಕಾರಣ ಬಂದಿರೀ ; ನೀವೆಲ್ಲರು ಸುಖದಲ್ಲಿದ್ಧೀರೆ ' ಎಂದು ಕೇಳಿದನು.

" ಆ ಕಪಿಗಳು ' ಎಲೈ ಜೀಯ, ನಾವು ಮತಂಗಮುನೀಶ್ವರನ ಆಶ್ರಮದಲ್ಲಿದ್ದೆವು ; ನಿನ್ನಿಂದ ಹತನಾದ ದುಂದುಭಿಯ ರಕ್ತಬಿಂದುಗಳು ಈಹೊತ್ತು ಆ ಮುನೀಶ್ವರನ ಆಶ್ರಮದಲ್ಲಿ ಬೀಳಲು ಆತನು ಕೋಪಯುಕ್ತನಾಗಿ ಜ್ಞಾನದೃಷ್ಟಿಯಿಂದ ಅದು ನಿನ್ನ ಕೃತ್ಯವೆಂದು ತಿಳಿದು ನೀನು ಆತನ ಆಶ್ರಮದ ಸುತ್ತಲಿರುವ ಒಂದು ಗಾವುದದಾರಿಯೊಳಗಾಗಿ ಮೆಟ್ಟಿದರೆ ಪಂಚತ್ವವನ್ನೈದುವೆಯೆಂದೂ ನಿನ್ನ ಸಮ್ಮಂಧವಾದ ಕಪಿಗಳಲ್ಲಿ ಯಾವ ಕಪಿಯಾದರು ಇದೊಂದು ದಿನವಲ್ಲದೆ ನಾಳೆ ಅಲ್ಲಿ ಕಾಣಿಸಿಕೊಂಡರೆ ಅನೇಕಸಾವಿರ ವರುಷಗಳ ಪರ್ಯಂತರ ದೊಡ್ಡ ಕಲ್ಲಾಗಿ ಹೋಗುವಂತೆಯೂ ಶಾಪವನ್ನು ಕೊಟ್ಟನು ; ಆದಕಾರಣ ನಾವು ಅಂಜಿಕೊಂಡು ಮತಂಗಮುನೀಶ್ವರನ ಆಶ್ರಮವನ್ನು ಬಿಟ್ಟು ಇಲ್ಲಿಗೆ ಬಂದೆವು ' ಎಂದು ಹೇಳಿದವು.

" ಆ ಮಾತನ್ನುಕೇಳಿ ವಾಲಿಯು ಭಯಪಟ್ಟು ಮತಂಗಮುನೀಶ್ವರನ ಸಮೀಪಕ್ಕೆ ಹೋಗಿ ಕೈಮುಗಿದು ಶಾಪವಿಮೋಚನವನ್ನು ಕೊಡೆಂದು ಬಹಳವಾಗಿ ಬೇಡಿಕೊಂಡನು ; ಆ ಮುನೀಶ್ವರನು ವಾಲಿಯನ್ನು ಉದಾಸೀನ ಮಾಡಿ ತನ್ನಆಶ್ರಮಕ್ಕೆ ಹೋದನು ; ಅದರಿಂದ ವಾಲಿಯು ಮತಂಗಮುನೀಶ್ವರನ ಶಾಪಕ್ಕೆ ಭಯಪಟ್ಟು ಋಷ್ಯಮೂಕ ಪರ್ವತಕ್ಕೆ ಬರುವದಿಲ್ಲ ; ಆದಕಾರಣ ನಾನು ಇಲ್ಲಿ ಈ ನಾಲ್ಕುಕಪಿಗಳನ್ನು ಕೂಡಿಕೊಂಡು ಅನೇಕ ದುಃಖದಿಂದ ಸಂಚರಿಸಿಕೊಂಡಿದ್ಧೇನೆ ; ಅಗೋ ದುಂದುಭಿಯ ಒಣಗಿದ ಶರೀರವು ಪರ್ವತಾಕಾರವಾಗಿ ತೋರುತ್ತಿದೆ ; ವಾಲಿಯು ತನ್ನ ಬಲಾತಿಶಯದಿಂದ ಆ ಶರೀರವನ್ನು ಇಲ್ಲಿಗೆ ಹಾಕಿದನು ! ಅದಲ್ಲದೆ ವಾಲಿಯು ಈ ವನದಲ್ಲಿರುವ ಏಳುಮರಗಳಲ್ಲಿ ಒಂದು ಮರದಲ್ಲಿ ಬಾಣವನ್ನೆಸೆದು ಆ ಬಾಣವು ಆ ಮರವನ್ನು ತೂತುಮಾಡಿಕೊಂಡು ಆಚೆಗೆ ಬರುವಹಾಗೆ ಮಾಡಬೇಕೆಂದು ಒಂದು ಬಾಣವನ್ನೆಸೆದು ಆ ಬಾಣವು ಆ ಮರವನ್ನು ಹೊಕ್ಕುಹೋಗದಿರಲು ಆ ಬಾಣವನ್ನು ತೆಗೆದುಹಾಕಿ ಅದರಿಂದಾದ ಸುರಂಗದಲ್ಲಿ ಮತ್ತೊಂದು ಬಾಣವನ್ನೆಸೆದು ಆ ಬಾಣವೂ ತಟಹಾಯ್ದು ಹೋಗದಿರಲು ಅದನ್ನೂ ತೆಗೆದು ಮತ್ತೊಂದು ಬಾಣವನ್ನೆಸೆದು ಈ ಮರ್‍ಯಾದೆಯಲ್ಲಿ ಅನೇಕ ಬಾಣಗಳಿಂದ ಒಂದು ಮರವನ್ನು ಯಜ್ಜಮಾಡಿದನು ; ಅಂಥಾ ಪರಾಕ್ರಮಿಯಾದ ವಾಲಿಯನ್ನ ಕೊಲ್ಲುವದಕ್ಕೆ ಹ್ಯಾಗೆ ನಿನಗೆ ಸಾಮರ್ಥ್ಯವುಂಟಾದೀತು ? " ಎಂದು ನುಡಿದನು.

ಆ ಮಾತನ್ನು ಕೇಳಿ ಲಕ್ಷ್ಮಣನು ಸುಗ್ರೀವನನ್ನು ಕುರಿತು " ಎಲೈ ಸುಗ್ರೀವನೆ, ನೀನು ಹೇಳಿದ ಕಾರ್‍ಯವನ್ನು ಸಾಧ್ಯಮಾಡಿದಮೇಲೆ ಶ್ರೀರಾಮನು ವಾಲಿಯನ್ನು ಸಂಹರಿಸಲಾಪ್ಪನೆಂದು ವಿಶ್ವಾಸಮಾಡು ' ಎಂದು ನುಡಿದನು.

ಸುಗ್ರೀವನು " ಎಲೈ ಲಕ್ಷ್ಮಣ, ಪೂರ್ವದಲ್ಲಿ ವಾಲಿಯು ಈ ಮರಗಳಲ್ಲಿ ಒಂದು ಮರವನ್ನು ಅನೇಕ ಬಾರಿ ಎಸೆದು ಯಜ್ಜಮಾಡಿದನು ; ಇವೊಳಗೊಂದು ಮರವನ್ನು ಶ್ರೀರಾಮನು ಒಂದೇ ಬಾಣದಿಂದ ತಟಹಾಯಿಸಿ ಯಜ್ಜವಾಗುವಂತೆ ಎಸೆದು ವಾಲಿಯಿಂದ ಹತನಾದ ದುಂದುಭಿಯ ಶರೀರವನ್ನು ತನ್ನ ಪಾದಾಂಗುಷ್ಠದಿಂದ ಇನ್ನೂರುಬಿಲ್ಲ ಪ್ರಮಾಣದಲ್ಲೆಸದರೆ ವಾಲಿಯನ್ನು ಕೊಲ್ಲುವನೆಂದು ನನ್ನ ಮನಸ್ಸಿಗೆ ವಿಶ್ವಾಸಹುಟ್ಟುವದು " ಎಂದು ನುಡಿದು ಒಂದು ಕ್ಷಣಮಾತ್ರ ಧ್ಯಾನಮಾಡಿ " ಎಲೈ ಲಕ್ಷ್ಮಣ, ವಾಲಿಯು ಮಹಾ ಸಮರ್ಥನು ; ಅತಿ ಪರಾಕ್ರಮಿಯು ; ಅತ್ಯಂತ ಬಲಪೌರುಷಗಳುಳ್ಳವನು ; ಸಮರಾಂಗಣದಲ್ಲಿ ಹಿಮ್ಮೆಟ್ಟದವನು ; ದೇವತೆಗಳಿಗೂ ಅಸಾಧ್ಯವಾದ ಸಾಹಸವನ್ನು ಮಾಡಿದವನು ; ಆತನ ಸಾಹಸವನ್ನು ನೆನೆದು ಭಯಪಟ್ಟು ಈ ಪರ್ವತದಲ್ಲಿದ್ಧೇನೆ; ಇಲ್ಲಿ ನನಗೆ ಅನುಕೂಲವಾದವರು ಹನುಮಂತನು ಮೊದಲಾದ ನಾಲ್ಕು ಪ್ರಧಾನರಲ್ಲದೆ ಮತ್ಯಾರೂ ಇಲ್ಲ ; ದೈವಾನುಕೂಲ

ದಿಂದ ಈ ವನದಲ್ಲಿ ನನಗೆ ಮಿತ್ರತ್ವವು ದೊರೆಕಿತು; ನಾನು ಮಹಾಮೇರು ಪರ್ವತವನ್ನಾಶ್ರಯಿಸಿದಂತೆ ನಿಮ್ಮನ್ನು ಆಶ್ರಯಿಸಿದೆನು; ಬಲವಂತನಾದ ವಾಲಿಯ ಬಲಪೌರುಷಗಳನ್ನು ಹೇಳಿದೆನು; ನನ್ನ ಪರಾಕ್ರಮವನ್ನು ಹೇಳುತ ನಾನೊಬ್ಬರಿಗೆ ಸರಿಯಾದವನೆಂದು ಹೇಳುವವನಲ್ಲ; ಒಬ್ಬರನ್ನು ಜರೆಯುವವನಲ್ಲ; ಒಬ್ಬರನ್ನು ಅಂಜಿಸುವವನಲ್ಲ; ವಾಲಿಯ ಭಯಂಕರವಾದ ಪರಾಕ್ರಮವನ್ನು ನೋಡಿ ನನ್ನ ಮನಸ್ಸು ಕಂಗೆಡುತ್ತಿದೆ! ಎಲೈ ಶ್ರೀರಾಮನೆ, ನಿನ್ನ ವಾಕ್ಯವು ನೀಮಾಡಿಕೊಟ್ಟ ಪ್ರಮಾಣವು ನಿನ್ನ ಧೈರ್ಯವು ಮೊದಲಾದವೆಲ್ಲವು ಬೂದಿಮುಚ್ಚಿದ ಕೆಂಡದ ಮರ್ಯಾದೆಯಲ್ಲಿರುವ ನಿನ್ನ ತೇಜೋವಿಶೇಷವನ್ನು ಸೂಚಿಸುತ್ತವೆ" ಎಂದು ನುಡಿದನು.

ಆ ಮಾತನ್ನು ಕೇಳಿ ಶ್ರೀರಾಮನು ಸುಗ್ರೀವನನ್ನು ಕುರಿತು "ಎಲೈ ಸುಗ್ರೀವನೆ, ನಿನಗೆ ನನ್ನ ಪರಾಕ್ರಮದಲ್ಲಿ ವಿಶ್ವಾಸವಿಲ್ಲದ ಪಕ್ಷದಲ್ಲಿ ನನ್ನ ಚರಿತ್ರದಿಂದ ನನ್ನ ಪರಾಕ್ರಮವನ್ನು ನೋಡು" ಎಂದು ನುಡಿದು ದುಂದುಭಿಯ ಶರೀರವನ್ನು ಪಾದಾಂಗುಷ್ಠದಿಂದ ಲೀಲಾಮಾತ್ರದಲ್ಲಿ ಮೇಲಕ್ಕೆ ನೆಗೆಹಿ ಒದೆಯಲು ಆ ಶರೀರವು ಹತ್ತುಗಾವುದ ದಾರಿಯನ್ನು ದಾಟಿ ಬಿತ್ತು!

ಅದನ್ನು ನೋಡಿ ಸುಗ್ರೀವನು ಸೂರ್ಯಪ್ರಭೆಯಂತೆ ತನುಕಾಂತಿಯುಳ್ಳ ಶ್ರೀರಾಮನನ್ನು ಕುರಿತು "ಎಲೈ ಶ್ರೀರಾಮನೆ, ನನ್ನ ಅಣ್ಣನಾದ ವಾಲಿಯು ದುಂದುಭಿಯ ಕೂಡೆ ಯುದ್ಧವನ್ನು ಮಾಡಿ ಸತ್ತ್ವಗೆಟ್ಟಿದ್ದ ಸಮಯದಲ್ಲಿ ಮಾಂಸಪೂರಿತವಾದ ದುಂದುಭಿಯ ಹಸೀಶರೀರವನ್ನು ಒಂದು ಗಾವುದದಾರಿ ಪರ್ಯಂತರವಾಗಿ ಎತ್ತಿಹಾಕಿದನು; ಈಗ ಒಣಗಿ ಮಾಂಸವಿಲ್ಲದೆ ಹುಲ್ಲಿನಂತೆ ಲಘುವಾದ ಆ ಶರೀರವನ್ನು ಪಾದಾಂಗುಷ್ಠದಿಂದ ಹತ್ತುಗಾವುದದಾರಿ ಹೋಗಿ ಬೀಳುವಂತೆ ಹಾಕಿದ ಮಾತ್ರದಿಂದಲೆ ನಿನ್ನಲ್ಲಿ ವಾಲಿಗಿಂತಲು ಬಲಾಧಿಕ್ಯವನ್ನು ತಿಳಿಯಲು ಶಕ್ಯವಲ್ಲ! ಎಲೈ ಶ್ರೀರಾಮನೆ, ವಾಲಿಯಿಂದ ಹಸೀಶರೀರವು ಒಂದು ಗಾವುದದಾರಿ ಹೋದದ್ದರಿಂದ ಒಣಶರೀರವು ಹತ್ತುಗಾವುದದಾರಿ ಹೋದದ್ದು ಆಶ್ಚರ್ಯವಲ್ಲ; ಆದಕಾರಣ ನೀನು ವಾಲಿಗಿಂತಲೂ ಬಲಾಧಿಕನೆಂಬದರಲ್ಲಿ ಸಂಶಯವಾಗಿದೆ; ಈ ಸಂಶಯವು ತೀರುವದಕ್ಕಾಗಿ ವಾಲಿಯು ಅನೇಕಾವರ್ತಿ ಎಸೆದು ಜಜ್ಜುವನ್ನು ಕೊರೆದ ಈ ತಾಳೇಮರಗಳಲ್ಲಿ ನೀನು ನಿನ್ನ ಬಿಲ್ಲಿಗೆ ಹೆದೆಯನ್ನೇರಿಸಿ ಕಿವಿಪರ್ಯಂತರ ಸೆಳೆದು ಒಂದೇ ಶರದಿಂದ ಒಂದು ತಾಳೇಮರವನ್ನು ಜಜ್ಜುವಾಗುವಂತೆ ಎಸೆದರೆ ನೀನು ವಾಲಿಗಿಂತಲೂ ಅತಿ ಪರಾಕ್ರಮಿಯೆಂದು ಸಂಶಯವಿಲ್ಲದಿರುವೆನು; ಅದರಮೇಲೆ ನಿನ್ನ ಪರಾಕ್ರಮಾತಿಶಯವನ್ನು ಪರೀಕ್ಷಿಸಿ ನೋಡುವದಕ್ಕೆ ಕಾರಣವಿಲ್ಲ; ನೀನು ತೇಜಸ್ವಿಗಳಾದವರಲ್ಲಿ ಸೂರ್ಯನಂತೆಯೂ ಪರ್ವತಗಳಲ್ಲಿ ಹಿಮವತ್ಪರ್ವತದಂತೆಯೂ ನಾಲ್ಕು ಕಾಲುಗಳುಳ್ಳ ಪ್ರಾಣಿಗಳಲ್ಲಿ ಸಿಂಹರಾಜನಂತೆಯೂ ಮನುಷ್ಯರಲ್ಲಿ ನೀನೇ ಅತ್ಯಂತ ಪರಾಕ್ರಮಿಯಾದ ಪುರುಷನು" ಎಂದು ಹೇಳಿದನು.

---

## ೧೩ನೇ ಅಧ್ಯಾಯ.

### ಶ್ರೀರಾಮನು ವಾಲಿಸುಗ್ರೀವರ ಭೇದವನ್ನು ತಿಳಿಯದೆ ವಾಲಿಯನ್ನು ಬಿಟ್ಟದ್ದು.

ಈ ಮರ್ಯಾದೆಯಲ್ಲಿ ಸುಗ್ರೀವನು ನುಡಿಯಲು ಶ್ರೀರಾಮನು ಆತನಿಗೆ ಸಂಶಯವಿಲ್ಲದಂತೆ ತನ್ನ ಭಯಂಕರವಾದ ಬಿಲ್ಲನ್ನು ತೆಗೆದು ಹೆದೆಯನ್ನೇರಿಸಿ ಆ ಬಿಲ್ಲಿನಲ್ಲಿ ಅತಿ ಭಯಂಕರವಾದ ಒಂದು ಅಂಬನ್ನು ಹೂಡಿ ಸುಗ್ರೀವನು ಹೇಳಿದ ಮರಗಳನ್ನು ಗುರಿಮಾಡಿ ಎಸೆಯಲು ಚಿನ್ನದ ಮುಲಾಮುಳ್ಳ ಆ ಬಾಣವು ಆ ಏಳುಮರಗಳನ್ನೂ ತಟಹಾಯ್ದು ಒಂದು ಪರ್ವತತಪ್ಪಲಲ್ಲಿ ನೆಟ್ಟುಕೊಂಡಿತು; ಸುಗ್ರೀವನು ಆ ಬಾಣದ ಬಲವನ್ನು ಕಂಡು ಪೂರ್ವದಲ್ಲಿ ವಾಲಿಯು ಅನೇಕ ಶರಗಳಿಂದ ಬಹು ಪ್ರಯಾಸಪಟ್ಟು ಒಂದು ಮರಕ್ಕೆ ರಂಧ್ರಮಾಡಿದ್ದನ್ನೂ ಶ್ರೀರಾಮನು ಒಂದೇ ಬಾಣದಿಂದ ಏಳುಮರಗಳನ್ನೂ ತಟಹಾಯಿಸಿ ಉಚ್ಚಳಿಸಿ ಪರ್ವತದ ತಪ್ಪಲಲ್ಲಿ ನೆಟ್ಟುಕೊಳ್ಳುವಂತೆ ಎಸೆದದ್ದನ್ನೂ ಸ್ಮರಿಸಿ ಶ್ರೀರಾಮನಿಗೆ ಸಮಾನವಾದ ಪರಾಕ್ರಮಿಗಳಿಲ್ಲವೆಂದು ಆಶ್ಚರ್ಯಪಟ್ಟು ಆತನು ವಾಲಿಯನ್ನು ಸಂಹ

ರಿಸುವದಕ್ಕೆ ಸಮರ್ಥನೆಂದು ನಿಶ್ಚಯಿಸಿ ಆತನಿಗೆ ಕೈಮುಗಿದು ಅಭಿವಂದಿಸಿ ಅತಿ ಹರ್ಷದಿಂದ " ಎಲೈ ಶ್ರೀರಾಮನೆ, ಲೋಕದಲ್ಲಿ ಧನುರ್ವಿದ್ಯಾಪಾರಂಗತರಾದ ವೀರಭಟರಲ್ಲಿ ನೀನೇ ಶ್ರೇಷ್ಠನು ; ಸಮಸ್ತ ದೇವಾಸುರರನ್ನಾದರೂ ನಿನ್ನ ಬಾಣಗಳಿಂದ ಕೊಲ್ಲುವದಕ್ಕೆ ಸಮರ್ಥನು ; ವಾಲಿಯನ್ನು ಕೊಲ್ಲುವೆಯೆಂದೇಳುವದೇನು ! ಒಂದು ಬಾಣದಿಂದ ಏಳು ಮರಗಳನ್ನು ಕೆಡಹಿ ಭೂಮಿಯಲ್ಲಿ ತಾಗುವಂತೆ ಶರಸಂಧಾನ ಮಾಡುವಂಥಾ ನಿನಗೆದಿರಾಗಿ ರಣರಂಗದಲ್ಲಿ ನಿಲ್ಲುವವರ್‍ಯಾರು ! ನನ್ನ ಮನಸ್ಸಿನಲ್ಲಿದ್ದ ಸಂದೇಹವು ತೀರಿತು ; ನನ್ನ ದುಃಖವೂ ನಿವರ್ತಿಯಾಯಿತು ; ವರುಣ ದೇವೇಂದ್ರರಿಗೆ ಸಮಾನನಾದ ನಿನ್ನ ಸ್ನೇಹವನ್ನು ಪಡೆದು ನನ್ನ ಮನಸ್ಸಿಗೆ ಮಹಾ ಸಂತೋಷವಾಯಿತು ; ಇಂದು ತಾನೇ ನನಗೆ ಶತ್ರುವಾದ ವಾಲಿಯನ್ನು ಕೊಂದು ನನ್ನ ಇಷ್ಟಾರ್ಥವನ್ನು ಸಲ್ಲಿಸಿಕೊಡಬೇಕೆಂದು ನಾನು ನಿನಗೆ ಕೈಮುಗಿದು ಬೇಡಿಕೊಳ್ಳುತ್ತೇನೆ " ಎಂದು ನುಡಿದನು.

ಶ್ರೀರಾಮನು " ಎಲೈ ಸುಗ್ರೀವನೆ, ನಾನು ಇಲ್ಲಿಂದ ಕಿಷ್ಕಿಂಧಾಪಟ್ಟಣಕ್ಕೆ ಬರುತ್ತೇನೆ ; ನೀನು ಮುಂದೇ ಹೋಗಿ ವಾಲಿಯನ್ನು ಯುದ್ಧಕ್ಕೆ ಕರೆದು ಬೊಬ್ಬಿಟ್ಟು ಕೂಗಿ ಆ ಪಟ್ಟಣದ ಸಮೀಪದಲ್ಲಿರುವ ವನದಲ್ಲಿ ಮರೆಯಾಗಿರು ; ನಾನು ನಿನ್ನ ಹಿಂದುಗಡೆಯಲ್ಲಿ ಬರುತ್ತೇನೆ " ಎಂದು ಹೇಳಿದನು.

ಆ ಮಾತನ್ನು ಕೇಳಿ ಸುಗ್ರೀವನು ಅತಿ ವೇಗದಿಂದ ಕಿಷ್ಕಿಂಧಾ ಪಟ್ಟಣಕ್ಕೆ ಹೋಗಿ ವಾಲಿಯನ್ನು ಯುದ್ಧಕ್ಕೆ ಕರೆದು ಬೊಬ್ಬಿಟ್ಟು ಘರ್ಜಿಸಿ ಒಂದು ಮರದಡಿಯಲ್ಲಿ ಮರೆಯಾಗಿದ್ದನು ; ಆ ಘರ್ಜನೇ ಧ್ವನಿಯನ್ನು ಕೇಳಿ ವಾಲಿಯು ಅತ್ಯಂತ ಕೋಪಯುಕ್ತನಾಗಿ ಮಹಾಮೇರು ಪರ್ವತದಿಂದ ಸೂರ್ಯನು ಬರುವಂತೆ ತನ್ನ ಅರಮನೆಯಿಂದ ಬರಲು ಅಂತರಿಕ್ಷಮಾರ್ಗದಲ್ಲಿ ಬುಧ ಮಂಗಳರಿಗೆ ಯುದ್ಧವಾಗುವಂತೆ ಅವರಿಬ್ಬರಿಗೂ ಅತ್ಯಂತ ಭಯಂಕರವಾದ ಯುದ್ಧವಾಯಿತು ; ಸಿಡಿಲಮರ್‍ಯಾದೆಯಲ್ಲಿದ್ದ ಅಂಗೈಗಳಿಂದಲೂ ವಜ್ರಾಯುಧದಂತಿದ್ದ ಮುಷ್ಟಿಗಳಿಂದಲೂ ಒಬ್ಬರನ್ನೊಬ್ಬರು ಹುಯ್ಯುತ ಅತ್ಯಂತ ಕೋಪಾಟೋಪದಿಂದ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಬುದ್ಧಿಯಿಂದ ಹೋರುತ್ತಿರುವ ಸಮಯದಲ್ಲಿ ಶ್ರೀರಾಮನು ವಾಲಿಯನ್ನು ಕೊಲ್ಲಬೇಕೆಂದು ಶರೀರಾಕಾರಸ್ವರೂಪಗಳಿಂದ ಒಬ್ಬರಿಗೊಬ್ಬರು ಭೇದವಿಲ್ಲದೆ ಅಶ್ವಿನೀ ದೇವತೆಗಳಂತೆ ಅತಿ ಪರಾಕ್ರಮಿಗಳಾದ ವಾಲಿ ಸುಗ್ರೀವರನ್ನು ನೋಡಿ ಅವರಿಬ್ಬರಲ್ಲಿ ವಾಲಿಯಾವನು—ಸುಗ್ರೀವನ್ಯಾವನೆಂಬ ಭೇದವನ್ನು ತಿಳಿಯಲಾರದೆ ತನ್ನ ಬಾಣವನ್ನು ಬಿಲ್ಲಿಗೆ ಹೂಡದೆ ಸಂಶಯದಿಂದ ಸುಮ್ಮನಿದ್ದನು ; ಅಷ್ಟರೊಳಗೆ ವಾಲಿಯು ತನ್ನ ಮುಷ್ಟಿಯಿಂದ ಸುಗ್ರೀವನನ್ನು ಹೊಡೆಯಲು ಆತನು ಮುರಿದು ಕಂಗೆಟ್ಟು ಶ್ರೀರಾಮನನ್ನು ನೋಡಿ ಶರೀರವೆಲ್ಲವೂ ವಾಲಿಯ ಪೆಟ್ಟುಗಳಿಂದ ಜರ್ಝರಿತವಾಗಿ ರಕ್ತದಿಂದ ನೆನೆದು ಋಷ್ಯಮೂಕಪರ್ವತಕ್ಕೆ ಹೋದನು ; ವಾಲಿಯು ಮತಂಗಮುನೀಶ್ವರನ ಶಾಪದಿಂದ ಭಯಪಟ್ಟು ಋಷ್ಯಮೂಕಪರ್ವತಕ್ಕೆ ಹಿಂದಟ್ಟಿ ಹೋಗದೆ " ಎಲೇ ಸುಗ್ರೀವನೆ, ನಿನ್ನ ಮೇಲಣ ದಯೆಯಿಂದ ಈ ಹೊತ್ತು ಬಿಟ್ಟೆನು " ಎಂದು ನುಡಿದು ಕಿಷ್ಕಿಂಧಾಪಟ್ಟಣಕ್ಕೆ ಹೋದನು !

ಆಮೇಲೆ ಶ್ರೀರಾಮನು ಚಿಂತಾಕ್ರಾಂತನಾಗಿ ತನ್ನ ತಮ್ಮನಾದ ಲಕ್ಷ್ಮಣನನ್ನೂ ಹನುಮಂತನನ್ನೂ ಕೂಡಿಕೊಂಡು ಸುಗ್ರೀವನ ಬಳಿಗೆ ಬರಲು ಆತನು ಲಜ್ಜೆಯಿಂದ ತಲೆಬೊಗ್ಗಿಸಿಕೊಂಡು " ಎಲೈ ಶ್ರೀರಾಮನೆ, ನನ್ನಿಂದ ವಾಲಿಯನ್ನು ಯುದ್ಧಕ್ಕೆ ಕರೆಯಿಸಿ ನನ್ನ ಸತ್ವವನ್ನು ಆ ವಾಲಿಗೆ ಕಾಣಿಸಿ ಆತನಿಂದ ನನ್ನನ್ನು ಕೊಲ್ಲಿಸಿ ಏನು ಕೃತ್ಯವನ್ನು ಮಾಡಿದೆ ! ಎಲೈ ಶ್ರೀರಾಮನೇ, ನಾನು ವಾಲಿಯಕೂಡೆ ಯುದ್ಧಮಾಡುವ ಸಮಯದಲ್ಲಿ ಆತನನ್ನು ಕೊಲ್ಲುವದಾಗಿ ನುಡಿದು ಯುದ್ಧಮಾಡುತಿದ್ದ ಸಮಯದಲ್ಲಿ ವಾಲಿಯನ್ನು ಕೊಲ್ಲದೆ ಸುಮ್ಮನಿದ್ದೆ ; ಇದು ನಿನಗೆ ಉಚಿತವೆ ! " ಎಂದು ನುಡಿದನು.

ಶ್ರೀರಾಮನು " ಎಲೈ ಸುಗ್ರೀವನೆ, ನನ್ನ ಮಾತನ್ನು ಕೇಳಿ ಕೋಪವನ್ನು ನಿಲ್ಲಿಸು ; ನಾನು ಯಾವಕಾರಣ ವಾಲಿಯಮೇಲೆ ಶರಸಂಧಾನವನ್ನು ಮಾಡದಿದ್ದೆನೆಂದರೆ : ನೀವಿಬ್ಬರೂ ತೊಟ್ಟ ಆಭರಣಗಳಿಂದಲೂ ಶರೀರಾಕಾರಗ

ಳಿಂದಲೂ ನಡೆಯಿಂದಲೂ ಸ್ವರದಿಂದಲೂ ಮಾತಿನಿಂದಲೂ ನೋಟದಿಂದಲೂ ಪರಾಕ್ರಮದಿಂದಲೂ ಸಮಾನರಾಗಿದ್ದಿರಿ ; ನಿಮ್ಮಿಬ್ಬರಲ್ಲಿ ವಾಲಿಯಾರು ನೀನ್ಯಾರು ಎಂಬ ಭೇದವನ್ನು ತಿಳಿಯಲಾರದೆ ಸಮಸ್ತ ಶತ್ರುಗಳ ಪ್ರಾಣಗಳನ್ನಪಹರಿಸುವ ನನ್ನ ಬಾಣಗಳನ್ನು ಸಂಧಾನಮಾಡದಿದ್ದೆನು ; ಮೊದಲು ನಿನ್ನನ್ನು ವಾಲಿಯೆಂದೆಣಿಸಿ ಶರಸಂಧಾನಮಾಡಲಕ್ಷಿಸಿ ಆಮೇಲೆ ನೀನೆಂದು ತಿಳಿದು ಸುಮ್ಮನಾದೆನು ; ನಾನು ತಿಳಿಯದೆ ಬಾಣವನ್ನೆಸೆಯುವದರಿಂದ ನನ್ನ ಪ್ರಾಣಸಖನಾದ ನೀನು ಹೋದರೆ ಆ ಬಳಿಕ ಕೋಪದಿಂದ ವಾಲಿಯಮೇಲೆಯೂ ಅಂಬನ್ನು ತೊಟ್ಟರೆ ನಿಮ್ಮ ವಂಶಕ್ಕೆಲ್ಲಾ ಹಾನಿಬರುವದೆಂದು ಸುಮ್ಮನಿದ್ದೆನು ; ಅದಲ್ಲದೆ ನಿನ್ನನ್ನು ವಾಲಿಯೆಂದು ಶರಸಂಧಾನಮಾಡುವದರಿಂದ ಅಪಾಯವು ಬಂದರೆ ಲೋಕದಲ್ಲಿ ನನ್ನಲ್ಲಿ ಅಜ್ಞಾನವೂ ಮೂಢತ್ವವೂ ಪ್ರಮಾಣಹೀನತೆಯೂ ಮಕ್ಕಳಾಟಿಕೆಯೂ ಪ್ರಕಟವಾಗುವದು ; ಮತ್ತು ವಿಶ್ವಾಸಘಾತಕನೆಂಬ ಮಹತ್ತಾದ ಅಪವಾದವು ಸಂಭವಿಸುವದು ; ನಾನೂ ಲಕ್ಷ್ಮಣನೂ ಸೀತಾದೇವಿಯೂ ನಿನ್ನ ಅಧೀನವಾದವರು ; ನಾವು ಸೀತಾದೇವಿಯ ವಿಯೋಗದುಃಖವನ್ನು ತಾಳಲಾರದೆ ನಿನ್ನ ಮರೆಹೊಕ್ಕೆವು ; ಆದಕಾರಣ ನೀನು ನನ್ನಲ್ಲಿ ಸಂಶಯವನ್ನು ಮಾಡದೆ ತಿರಿಗೂ ವಾಲಿಯಕೂಡೆ ಯುದ್ಧವನ್ನು ಮಾಡು ; ನಾನು ಒಂದು ಕ್ಷಣಮಾತ್ರದಲ್ಲಿ ಆತನನ್ನು ಕೊಲ್ಲುತ್ತೇನೆ ; ಇಂದು ನನ್ನ ಶರಹತಿಯಿಂದ ವಾಲಿಯು ಘಾಯಪಡೆದು ಬಿದ್ದು ಹೊರಳುವದನ್ನು ನೀನು ಕಾಣುವೆ ; ಆದರೆ ನಿಮ್ಮಿಬ್ಬರ ಭೇದವನ್ನು ತಿಳಿಯುವದಕ್ಕೆ ಒಂದು ಉಪಾಯವನ್ನು ಹೇಳುತ್ತೇನೆ ಕೇಳು ; ನೀವಿಬ್ಬರು ಯುದ್ಧವನ್ನು ಮಾಡುವ ಸಮಯದಲ್ಲಿ ನಿನ್ನ ಸ್ವರೂಪವು ತಿಳಿಯುವಂತೆ ಒಂದು ಕುರುಹನ್ನು ಮಾಡಿಕೊ ; ನಾಗಸಂಪಿಗೆಯ ಕುಸುಮಿತವಾದ ಲತೆಯನ್ನು ಕೊರಳಿಗೆ ಅಲಂಕಾರವಾಗಿ ಧರಿಸಿಕೊಂಡರೆ ನೀನು ಸುಗ್ರೀವನೆಂದು ನನಗೆ ಕುರುಹಾಗಿರುವದು ” ಎಂದು ನುಡಿದು ಲಕ್ಷ್ಮಣನನ್ನು ಕರೆದು “ ಎಲೈ ಲಕ್ಷ್ಮಣ, ನೀನು ಮಹಾತ್ಮನಾದ ಸುಗ್ರೀವನಿಗೆ ಈ ವನದಲ್ಲಿ ನಾಗಸಂಪಿಗೆಯ ಪುಷ್ಪಿತವಾದ ಒಂದು ಲತೆಯನ್ನು ತಂದು ಕೊರಳಿಗೆ ಅಲಂಕರಿಸು ” ಎಂದು ಹೇಳಿದನು.

ಆ ಬಳಿಕ ಲಕ್ಷ್ಮಣನು ಆ ವನದಲ್ಲಿ ಹುಡುಕಿ ನಾಗಸಂಪಿಗೆಯ ಕುಸುಮಿತವಾದ ಲತೆಯನ್ನು ತಂದು ಆತನ ಕೊರಳಿಗೆ ಅಲಂಕರಿಸಲು ಸುಗ್ರೀವನು ತನ್ನ ಕೊರಳಲ್ಲಿ ಅಲಂಕರಿಸಲ್ಪಟ್ಟ ಆ ಲತೆಯಿಂದ ಪೌರ್ಣಿಮಾದಿವಸದ ನಕ್ಷತ್ರಮಂಡಲದಿಂದ ಅಲಂಕರಿಸಲ್ಪಟ್ಟ ಪೂರ್ಣಚಂದ್ರನಂತೆ ಒಪ್ಪುತ್ತಿದ್ದನು !

## ೧೩ನೇ ಅಧ್ಯಾಯ.

## ಸಪ್ತಜನಾಶ್ರಮ ವರ್ಣನೆ.

ಆ ಬಳಿಕ ಶ್ರೀರಾಮನು ಸುವರ್ಣಮಯವಾದ ಬಿಲ್ಲಿಗೆ ಹೆದೆಯನ್ನೇರಿಸಿ ಯುದ್ಧಸಾಧನವಾಗಿ ಸೂರ್ಯಪ್ರಭೆಯಂತೆ ಕಾಂತಿಯುಳ್ಳ ಅಂಬುಗಳನ್ನು ತೆಗೆದುಕೊಂಡು ಋಷ್ಯಮೂಕಪರ್ವತವನ್ನು ಬಿಟ್ಟು ವಾಲಿಯ ಭುಜಬಲ ಪರಾಕ್ರಮದಿಂದ ರಕ್ಷಿಸಲ್ಪಟ್ಟ ಕಿಷ್ಕಿಂಧಾಪಟ್ಟಣಕ್ಕಾಗಿ ಸುಗ್ರೀವನನ್ನು ಮುಂದಿಟ್ಟುಕೊಂಡು ಹೊರಡಲು ಆತನ ಹಿಂದೆ ಲಕ್ಷ್ಮಣನೂ ಲಕ್ಷ್ಮಣನ ಹಿಂದೆ ಹನುಮಂತನೂ ಹನುಮಂತನಹಿಂದೆ ನೀಲನೂ ಆತನ ಹಿಂದೆ ನಳನೂ ನಳನಹಿಂದೆ ತಾರನೂ ಹೊರಟರು ; ಹೀಗೆ ಸುಗ್ರೀವನೂ ಶ್ರೀರಾಮನೂ ಲಕ್ಷ್ಮಣನೂ ಸುಗ್ರೀವನ ಪ್ರಧಾನರಾದ ಹನುಮಂತ ನೀಲ ನಳ ತಾರರೆಂಬ ಏಳುಮಂದಿಯೂ ಕೂಡಿಕೊಂಡು ಕಿಷ್ಕಿಂಧಾಪಟ್ಟಣಕ್ಕೆ ಹೋಗುತ ಮಧ್ಯಮಾರ್ಗದಲ್ಲಿ ಅನೇಕ ಪುಷ್ಪಿತವಾದ ವೃಕ್ಷಗಳನ್ನೂ ನಿರ್ಮಲೋದಕವುಳ್ಳವಾಗಿ ಬೇರೆಬೇರೆ ಸಮುದ್ರಗಾಮಿಗಳಾದ ನದಿಗಳನ್ನೂ ಅನೇಕ ಪರ್ವತಗಳನ್ನೂ ಆ ಪರ್ವತಗಳ ವಜ್ಜರೋದಕಗಳನ್ನೂ ಗುಹೆಗಳನ್ನೂ ಕೋಡುಗಲ್ಲುಗಳನ್ನೂ ಭಯಂಕರವಾದ ದೊಡ್ಡ ಗುಂಡುಕಲ್ಲುಗಳ ಮಧ್ಯಪ್ರದೇಶದಲ್ಲಿದ್ದ ಅನೇಕ ಬಿಲಗಳನ್ನೂ ವೈಡೂರ್ಯ ರತ್ನದಂತೆ ನಿರ್ಮಲವಾದ ಎಸಳುಗಳುಳ್ಳ ಕಮಲಗಳಿಂದಲೂ ಅಶೋಕಲತೆ ಮೊಗ್ಗುಗಳಿಂದಲೂ ಒಪ್ಪುತ ಮಾರ್ಗದಲ್ಲಿದ್ದ ಕೆರೆಗಳನ್ನೂ ಆ ಕೆರೆಗಳಲ್ಲಿದ್ದ ಹಂಸಪಕ್ಷಿ ಮಂಡಗೊಳಲೆ ಸಾರಸಪಕ್ಷಿ ನೀರುಕೋಳಿ ಚಕ್ರವಾಕ ಮೊದಲಾದ ಪಕ್ಷಿಗಳನ್ನೂ ಆ ನ

ದಿಗಳ ತೀರಗಳಲ್ಲಿದ್ದ ಅಬ್ಬೇಗಿಡ ಮೊದಲಾದ ಕಿರುಗಿಡಗಳನ್ನೂ ಕಿವಿಗಿಂಪಾಗಿ ಸ್ವರಗೈಯುತ್ತಿದ್ದ ಪಕ್ಷಿಗಳನ್ನೂ ಕೋಮಲವಾದ ಎಳೇಹುಲ್ಲನ್ನು ಮೇಯುತ ಭಯವಿಲ್ಲದೆ ಸಂಚರಿಸುತಿದ್ದ ಮೃಗಗಳನ್ನೂ ಬಳಗೆರೆಗಳನ್ನೂ ಈಡರಿಯುತಿದ್ದ ಬಿಳೇಕಾಡಂದಿಗಳನ್ನೂ ಅಂತರಿಕ್ಷಮಾರ್ಗದಲ್ಲಿ ಸಂಚರಿಸುತಿದ್ದ ಪಕ್ಷಿಗಳನ್ನೂ ನೋಡುತ ಹೋಗುತ್ತಿರುವ ಸಮಯದಲ್ಲಿ ಮನೋಹರವಾದ ಒಂದು ವನವನ್ನು ಕಂಡು ಶ್ರೀರಾಮನು ಸುಗ್ರೀವನನ್ನು ಕುರಿತು “ ಎಲೈ ಸುಗ್ರೀವನೆ, ಮನೋಹರವಾಗಿ ನೀರುಂಡ ಮೇಘದಂತೆ ರಮಣೀಯವಾಗಿ ಸುತ್ತಲೂ ಕದಳೀವನವುಳ್ಳ ಈ ವನವ್ಯಾರದು ? ಯಾವಕಾರಣದಿಂದ ಈ ವನವು ಇಂಥಾ ಗಿರಿಪ್ರದೇಶದಲ್ಲಿಯೂ ಮನೋಹರವಾಗಿದೆ ! ಈ ವನದ ಮಹಿಮೆಯನ್ನು ಕೇಳುವದಕ್ಕೆ ನನ್ನ ಮನಸ್ಸಿಗೆ ಮಹಾ ಲವಲವಿಕೆಯಾಗುತ್ತಿದೆ ; ಈ ವನದ ಮಹಿಮೆಯನ್ನು ಹೇಳು ” ಎಂದು ಕೇಳಿದನು.

ಆ ಮಾತನ್ನು ಕೇಳಿ ಸುಗ್ರೀವನು ದಾರಿನಡೆಯುತ “ ಎಲೈ ಶ್ರೀರಾಮನೆ, ಕೇಳು : ಈ ವನವು ಮಹಾ ವಿಸ್ತೀರ್ಣವಾದಂಥಾದ್ದು ; ಮುನಿಗಳಿಗೆ ಆಶ್ರಮವಾದಂಥಾದ್ದು ; ದಾರಿಯಲ್ಲಿ ಹೋಗುವವರ ಶ್ರಮೆಯನ್ನು ಪರಿಹಾರ ಮಾಡುವಂಥಾದ್ದು ! ನಂದನವನದಂತೆ ಸಂಪನ್ನತೆಯುಳ್ಳದ್ದು ; ಅತ್ಯಂತ ಸ್ವಾದುವಾದ ಕಂದಮೂಲಫಲಗಳುಳ್ಳದ್ದು ; ಈ ಆಶ್ರಮದಲ್ಲಿ ಅನೇಕ ವ್ರತನಿಯಮಗಳುಳ್ಳ ಸಪ್ತಜನರೆಂಬ ತಪಸ್ವಿಗಳಿದ್ದಾರೆ ; ಶಿರಸ್ಸು ಹೊರತಾಗಿ ಕೊರಳಪರ್ಯಂತರ ನೀರೊಳಗೆ ಮುಳುಗಿಕೊಂಡು ವಾಯುವಾಹಾರಮಾಡಿಕೊಂಡು ಏಳುನೂರು ವರುಷಗಳು ತಪಸ್ಸು ಮಾಡಿಕೊಂಡು ಶರೀರಮಾತ್ರವನ್ನುಳಿಸಿಕೊಂಡಿರುವಕಾರಣ ಈ ಋಷಿಗಳಿಗೆ ಸಪ್ತಜನರೆಂಬ ಹೆಸರಾಯಿತು ! ಅಂಥಾ ಋಷಿಗಳ ತಪೋಮಹಿಮೆಯಿಂದ ಈ ಮರಗಳೇ ಒಂದು ಕೋಟೇ ಕೊತ್ತಲವಾಗಿ ದೇವಾಸುರರಿಗೂ ಹೊಕ್ಕು ಹೋಗುವದಕ್ಕೆ ಅಸಾಧ್ಯವಾಗಿವೆ ; ಪಕ್ಷಿಗಳೂ ಈ ವನವನ್ನು ಹೊಕ್ಕು ಹೋಗಲಾರವು ; ಅಜ್ಞಾನದಿಂದ ಈ ವನವನ್ನು ಹೊಕ್ಕ ಮೃಗಪಕ್ಷಿಗಳಾದರೂ ಮನುಷ್ಯರಾದರೂ ತಿರಿಗಿ ಬರುವದಿಲ್ಲ ; ಈ ವನದಲ್ಲಿ ಎಲ್ಲಿನೋಡಿದರೂ ಭೂಷಣಗಳ ಧ್ವನಿಗಳೂ ತಾಳಮದ್ದಳ ಗಾನಸ್ವರಗಳೂ ಕೇಳಲ್ಪಡುವವು ; ಇದು ಯಾವಾಗಲು ದಿವ್ಯವಾದ ಗಂಧ ಪರಿಮಳವುಳ್ಳದ್ದಾಗಿರುವದು ; ಈ ವನಮಧ್ಯದಲ್ಲಿ ಆಹವನೀಯ ಗಾರ್ಹಸ್ಪತ್ಯ ದಕ್ಷಿಣಾಗ್ನಿಗಳೆಂಬ ಅಗ್ನಿತ್ರಯಗಳ ಹೋಮಧೂಮವು ಸುತ್ತಿಕೊಂಡಿರಲು ಅವುಗಳ ಸಮ್ಮಂಧದಿಂದ ವೃಕ್ಷಗಳು ಮೇಘಮಂಡಲದಿಂದ ಆಕ್ರಮಿಸಲ್ಪಟ್ಟ ವೈಡೂರ್ಯಮಯವಾದ ಗಿರಿಗಳಂತೆ ಒಪ್ಪುತ್ತಿವೆ ! ಎಲೈ ಶ್ರೀರಾಮನೆ, ನೀನು ಸಾವಧಾನದಲ್ಲಿ ಲಕ್ಷ್ಮಣಸಮೇತನಾಗಿ ಕೈಮುಗಿದುಕೊಂಡು ಇಲ್ಲಿರುವ ಋಷಿಗಳನ್ನು ಕುರಿತು ನಮಸ್ಕಾರವನ್ನು ಮಾಡು ; ಈ ಋಷಿಗಳಿಗೆ ಅಂತರಂಗ ಶುದ್ಧಿಯಾಗಿ ನಮಸ್ಕಾರವನ್ನು ಮಾಡುವವರ ಶರೀರಕ್ಕೆ ಬಾಧೆಯು ಬರಲಾರದು ” ಎಂದು ಹೇಳಿದನು.

ಆ ಮಾತನ್ನು ಕೇಳಿ ಶ್ರೀರಾಮನು ಲಕ್ಷ್ಮಣನ ಸಮೇತನಾಗಿ ಕೈಮುಗಿದುಕೊಂಡು ಸಪ್ತಜನರೆಂಬ ಆ ತಪಸ್ವಿಗಳಿಗೆ ಅಭಿವಂದಿಸಿ ಹನುಮಂತನು ಮೊದಲಾದ ನಾಲ್ಕುಮಂದಿ ಕಪಿನಾಯಕರೊಡನೆ ಕೂಡಿದ್ದ ಸುಗ್ರೀವನನ್ನು ಮುಂದಿಟ್ಟುಕೊಂಡು ಆತನೊಡನೆ ಅನ್ಯೋನ್ಯ ಸಂಭಾಷಣೆ ಮಾಡುತ ಆ ಆಶ್ರಮವನ್ನು ದಾಟ ವಾಲಿಯ ಭುಜಬಲ ಪರಾಕ್ರಮದಿಂದ ರಕ್ಷಿಸಲ್ಪಟ್ಟ ಕಿಷ್ಕಿಂಧಾ ಪಟ್ಟಣಕ್ಕೆ ಹೋದನು.

## ೧೪ ನೇ ಅಧ್ಯಾಯ.

### ಸುಗ್ರೀವನು ವಾಲಿಯನ್ನು ಯುದ್ಧಕ್ಕೆ ಕರೆದದ್ದು.

ಈ ಮರ್ಯಾದೆಯಲ್ಲಿ ಸುಗ್ರೀವನು ರಾಮಲಕ್ಷ್ಮಣರನ್ನೂ ತನ್ನ ಪ್ರಧಾನರಾದ ಹನುಮಂತನು ಮೊದಲಾದ ನಾಲ್ಕು ಕಪಿನಾಯಕರನ್ನೂ ಕರೆದುಕೊಂಡು ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ಆ ಪಟ್ಟಣದ ಸಮೀಪದ ವನದಲ್ಲಿ ಮರೆಯಾಗಿದ್ದುಕೊಂಡು ನಾಲ್ಕುದಿಕ್ಕುಗಳನ್ನೂ ನೋಡಿ ಅತ್ಯಂತ ಕೋಪಯುಕ್ತನಾಗಿ ತನ್ನ ಪ್ರಧಾನರಾದ ಹನುಮಂತನು ಮೊದಲಾದವರನ್ನು ಕೂಡಿಕೊಂಡು ಏಕಕಾಲದಲ್ಲಿ ಪ್ರಳಯಕಾಲದ ಮೇಘವು ಗುಡುಗುವಂತೆ ಬೊಬ್ಬಿಟ್ಟು ಕೂಗಿ ಮೇಘಮಂಡಲವು ಒಡೆಯುವಂತೆ ಅತಿ ಭಯಂಕರವಾದ ಧ್ವನಿಯಿಂದ ವಾಲಿಯನ್ನು ಯುದ್ಧಕ್ಕೆ ಕರೆದು

ಬಾಲಸೂರ್ಯನಂತೆ ತೇಜಸ್ಸುಳ್ಳವನಾಗಿ ಕೊಬ್ಬಿದ ಸಿಂಹರಾಜನಂತೆ ಸಂಚಾರವುಳ್ಳವನಾಗಿ ಮೆರೆಯುತ ಮಹಾ ದಕ್ಷನಾದ ಶ್ರೀರಾಮನನ್ನು ನೋಡಿ "ಎಲೈ ಶ್ರೀರಾಮನೆ, ಸುತ್ತಲು ಶತ್ರುವಾನರರು ಬರದಂತೆ ಹಾಕಿದ ಉರುಳುಬಲೆಗಳುಳ್ಳದ್ದಾಗಿ ಸುವರ್ಣಮಯವಾದ ಕೊತ್ತಳಗಳುಳ್ಳದ್ದಾಗಿ ತೆಕ್ಕೆಯಗಳು ಮೊದಲಾದ ದುರ್ಗಸಂವರಣಗಳಿಂದ ಸಜ್ಜುಮಾಡಲ್ಪಟ್ಟಂಥಾ ಕಿಷ್ಕಿಂಧಾಪಟ್ಟಣಕ್ಕೆ ನಾವು ಬಂದೆವು; ಕಾಲವು ಲತೆಗಳ ಫಲಕಾಲವು ಬಂದಲ್ಲಿ ಅವುಗಳನ್ನು ಪುಷ್ಪಫಲಾದಿಗಳಿಂದ ಸಫಲಮಾಡುವದು; ಆ ಬಳಿಕ ಮರವು ತನ್ನನ್ನಾಶ್ರಯಿಸಿರುವ ಬಳ್ಳಿಯನ್ನು ಗಾಳಿಯಿಂದ ಉಪದ್ರವವಿಲ್ಲದಹಾಗೆ ಹ್ಯಾಗೆ ರಕ್ಷಿಸುವದೋ ಹಾಗೆ ನೀನು ವಾಲಿಯನ್ನು ಕೊಲ್ಲುವದಾಗಿ ಮಾಡಿದ ಪ್ರತಿಜ್ಞೆಗೆ ಹಾನಿಬರದಂತೆ ಪರಿಪಾಲಿಸಿ ನನ್ನನ್ನು ರಕ್ಷಿಸು" ಎಂದು ಹೇಳಿದನು.

ಶ್ರೀರಾಮನು "ಎಲೈ ಸುಗ್ರೀವನೆ, ಮೊದಲಿನ ದಿನ ಅಣ್ಣತಮ್ಮಂದಿರಾದ ನಿಮ್ಮ ಆಕಾರಭೇದವನ್ನರಿಯದಿದ್ದ ಕಾರಣ ವಾಲಿಯನ್ನು ಕೊಲ್ಲದೆ ಸುಮ್ಮನಿದ್ದೆನು; ಈಗ ಲಕ್ಷ್ಮಣನು ತಂದು ಅಲಂಕರಿಸಿದ ಪುಷ್ಪಲತೆಯ ಗುರುತುಳ್ಳವನಾಗಿ ಆ ಪುಷ್ಪಲತೆಯಿಂದ ಬೆಳ್ಳಕ್ಕಿಗಳ ಸಾಲುಗಳಿಂದ ಮೆರೆಯುತ್ತಿರುವ ಸೂರ್ಯನಂತೆ ಒಪ್ಪುತ್ತಿದ್ದೀ; ಇಂದು ನಿನಗೆ ವಾಲಿಯಿಂದ ಬಂದ ಭಯವನ್ನು ಒಂದು ಬಾಣದಿಂದ ಪರಿಹರಿಸುತ್ತೇನೆ; ನೀನು ನಿನ್ನ ಶತ್ರುವಾದ ವಾಲಿಯನ್ನು ತೋರಿಸಿದ ಮಾತ್ರದಲ್ಲಿಯೆ ನನ್ನ ಬಾಣದಿಂದ ಆತನು ಗಾಯಪಡೆದು ಬಿದ್ದು ಧೂಳಲ್ಲಿ ಹೊರಳುವದನ್ನು ಕಾಣುವೆ; ಇಂದು ನನ್ನ ದೃಷ್ಟಿಗೋಚರವಾದರೆ ವಾಲಿಯು ಹತನಾಗದೆ ಜೀವದಿಂದಿದ್ದರೆ ನೀನು ನನ್ನ ಮೇಲೆ ಕೋಪಿಸು; ಮೊದಲು ನಾನು ಒಂದೇ ಬಾಣದಿಂದ ಏಳು ಮರಗಳನ್ನು ಒಂದೇಬಾರಿ ಎಸೆದು ಕೆಡೆಹಿದಾಗ ನೀನು ಪ್ರತ್ಯಕ್ಷವಾಗಿ ಕಂಡು ನಾನು ವಾಲಿಯನ್ನು ಕೊಲ್ಲುವದರಲ್ಲಿ ಸಂಶಯವಿಲ್ಲವೆಂದು ನಿಶ್ಚಯಿಸಿಕೊಂಡಿದ್ದೆ; ನಾನು ನನಗೆ ಎಂಥಾ ಆಪತ್ತು ಬಂದರೂ ಆಡಿದ ಮಾತನ್ನು ತಪ್ಪುವವನಲ್ಲ! ಎಲೈ ಸುಗ್ರೀವನೆ, ನೀನು ಈಗ ಯುದ್ಧಕ್ಕೆ ಕೂಗಿ ಕರೆದದ್ದು ವಾಲಿಯ ನಾಶಕ್ಕೆ ಸೂಚಕವಾಗಿದೆ; ಮೊದಲೆಂದೂ ನೀನು ಒಂದುಸಾರಿಯಾದರೂ ವಾಲಿಯನ್ನು ಅದ್ದರಿಸಿ ಕರೆದವನಲ್ಲ; ಈಗ ಆರ್ಭಟಿಸಿ ಕೂಗಿ ಕರೆದೆ; ಯುದ್ಧಪ್ರಿಯನಾದ ವಾಲಿಯು ಅತಿ ವೇಗದಿಂದ ಬರುವನು; ಆತನು ನಿನ್ನ ಪರಾಕ್ರಮವನ್ನು ಬಲ್ಲನು; ಸ್ತ್ರೀಯರ ಸಮೀಪದಲ್ಲಿರುವಾಗ ಶತ್ರುಕಟಿಗಳ ಧ್ವನಿಯನ್ನು ಕೇಳಿ ಸಹಿಸಲಾರನು" ಎಂದು ಹೇಳಿದನು.

ಆ ಬಳಿಕ ಸುಗ್ರೀವನು ತಿರಿಗೂ ಮೇಘಮಂಡಲವು ಒಡೆಯುವಂತೆ ಬೊಬ್ಬಿಟ್ಟು ಕೂಗಿದನು; ಅದನ್ನು ಕೇಳಿ ಕಾಮುಕನಾದ ಅರಸನ ದುರ್ನೀತಿಯಿಂದ ಆತನ ರಾಜ್ಯದಲ್ಲಿರುವ ಕುಲಾಂಗನೆಯರು ಭಯಪಟ್ಟು ಓಡುವಂತೆಯೂ ಯುದ್ಧರಂಗದಲ್ಲಿ ಮುರಿದ ರಾವುತರ ಕುದುರೆಗಳು ಪಲಾಯನವಾಗುವಂತೆಯೂ ಆ ವನದಲ್ಲಿದ್ದ ಮೃಗಗಳು ಓಡುತ್ತಿದ್ದವು; ನಕ್ಷತ್ರಗಳು ಭೋಗಾದೃಷ್ಟವು ತೀರಿದಬಳಿಕ ನಕ್ಷತ್ರಲೋಕದಿಂದ ಭೂಲೋಕಕ್ಕೆ ಬೀಳುವಂತೆ ಅಂತರಿಕ್ಷಮಾರ್ಗದಲ್ಲಿ ಸಂಚರಿಸುತಿದ್ದ ಪಕ್ಷಿಗಳು ಭೂಮಿಯಮೇಲೆ ಬೀಳುತ್ತಿದ್ದವು; ಬಿರುಗಾಳಿಯಿಂದೇಳುವ ತೆರೆಗಳಿಂದ ಸಮುದ್ರವು ಉಕ್ಕುವಂತೆ ಪರಾಕ್ರಮಾತಿಶಯದಿಂದ ಹೆಚ್ಚಿದ ತೇಜಸ್ಸುಳ್ಳ ಸುಗ್ರೀವನು ಮೇಘದ ಗುಡುಗಿನಂತೆ ಬೊಬ್ಬಿಟ್ಟು ಕೂಗುತ ಅತ್ಯಂತ ಶೌರ್ಯವುಳ್ಳವನಾಗಿ ಯುದ್ಧಸನ್ನದ್ಧನಾಗಿದ್ದನು.

## ೧೫ನೇ ಅಧ್ಯಾಯ.

## ತಾರಾದೇವಿಯು ವಾಲಿಗೆ ನೀತಿ ಹೇಳಿದ್ದು.

ಎಲೈ ಕುಶಲಮತಿಗಳಿರಾ, ಈ ಮರ್ಯಾದೆಯಲ್ಲಿ ಬೊಬ್ಬಿಟ್ಟು ಕೂಗುತ್ತಿದ್ದ ತನ್ನ ತಮ್ಮನಾದ ಸುಗ್ರೀವನ ಘರ್ಜನೇ ಧ್ವನಿಯನ್ನು ಕೇಳಿ ವಾಲಿಯು ಅತ್ಯಂತ ಕೋಪಯುಕ್ತನಾಗಿ ತನ್ನ ಕಾಮಾತುರವನ್ನು ಬಿಟ್ಟು ಅತಿರೋಷದಿಂದ ಸಂಧ್ಯಾಕಾಲದ ಮೇಘಕ್ಕೆ ಸಮಾನವಾದ ಶರೀರಕಾಂತಿಯುಳ್ಳವನಾಗಿ ರಾಹುತುಡುಕಿದ ಸೂರ್ಯನಂತೆ

ಕಾಂತಿಗುಂದಿ ರೋಷದಿಂವ ಪ್ರಜ್ವಲಿಸುತ್ತಿರುವ ಯಜ್ಞಪುರುಷನಂತೆ ಉಪ್ಪುತ ಎಸಳುಗಳುದುರಿ ಕಟ್ಟುವಪತ್ರ
ವುಳ್ಳ ತಾವರೇ ಕೊಳದಂತೆ ಕಾಂತಿಹೀನನಾಗಿ ಸಹಿಸಲು ಶಕ್ಯವಲ್ಲದ ಸುಗ್ರೀವನ ಆ ಆರ್ಭಟಧ್ವನಿಯನ್ನು ಕೇಳದ
ಮಾತ್ರದಲ್ಲೇ ಅತಿವೇಗದಿಂದ ನೆಗೆದು ಓಡುತ ತನ್ನ ಪಾದಹತಿಯಿಂದ ಭೂಮಿಯನ್ನು ಒಡೆಯುವಂತೆ ಬರುತಿ
ದ್ದನು ; ಆದನ್ನು ಕಂಡು ಆತನ ಸ್ತ್ರೀಯಾದ ತಾರಾದೇವಿಯು ಬೆದರಿ ಕೂಗಿ ಕಂಗೆಟ್ಟು ಆತನನ್ನು ಸ್ನೇಹಾತಿ
ಶಯದಿಂದ ಹಿಡಿದು ತಬ್ಬಿಕೊಂಡು ನಿಲ್ಲಿಸಿ ಆತನಿಗೆ ಶ್ರೇಯಸ್ಕರವಾಗಿ ಹಿತವಾದ ಮಾತುಗಳಿಂದ " ಎಲೈ ಪ್ರಾ
ಣಕಾಂತನೆ, ವರ್ಷಾಕಾಲದ ನದೀಪ್ರವಾಹದಂತೆ ಹೊತ್ತುಹೊತ್ತಿಗೂ ಹೆಚ್ಚುತ್ತಿರುವ ಈ ರೋಷವನ್ನು ಶರೀರ
ಸಂಪರ್ಕದಿಂದ ಕಂದಿದ ಪುಷ್ಪಸರವನ್ನುಬಿಡುವಂತೆ ಬಿಡು ; ನಾಳೇ ಪ್ರಾತಃಕಾಲದಲ್ಲಿ ಸುಗ್ರೀವನ ವೃತ್ತಾಂತವನ್ನು
ಚನ್ನಾಗಿ ವಿಚಾರಿಸಿಕೊಂಡು ಯುದ್ಧಕ್ಕೆ ಹೋಗು ; ಈಗ ಹೋಗಬೇಡ ; ಸುಗ್ರೀವನೊಬ್ಬನೇ ಅಲ್ಲ; ನಿನಗೆ ಬಹಳ
ಮಂದಿ ಶತ್ರುಗಳುಂಟು ; ನೀನು ಹೀಗೆ ಅತಿವೇಗದಿಂದ ಯುದ್ಧಕ್ಕೆ ಹೋಗುವದು ನನ್ನ ಮನಸ್ಸಿಗೆ ಸರಿಯಾಗಿಲ್ಲ ;
ಮೊದಲುದಿನದಲ್ಲಿ ಸುಗ್ರೀವನು ಯುದ್ಧಕ್ಕೆ ಬಂದು ನಿನ್ನ ಮುಷ್ಟಿಪ್ರಹಾರಗಳಿಂದ ಘಾಯಪಡೆದು ನೊಂದು ಮುರಿದು
ಹೋದನು ; ಇಂದು ತಿರಿಗಿಬಂದು ನಿನ್ನನ್ನು ಸಮರಕ್ಕೆ ಕರೆಯುವದು ನನ್ನ ಮನಸ್ಸಿಗೆ ಸಂಶಯವನ್ನುಂಟು
ಮಾಡುತ್ತದೆ ; ನೆನ್ನೆ ಮುರಿದು ಹೋದವನು ಇಂದು ತಿರಿಗಿಬಂದು ಗರ್ವಿತನಾಗಿ ನಿನ್ನನ್ನು ಯುದ್ಧಕ್ಕೆ ಬೊಬ್ಬಿಟ್ಟು
ಕೂಗುವದು ಅಲ್ಪಕಾರ್ಯವಲ್ಲ ! ಏನಾದರು ಒಂದು ಕಾರಣವಿರಬೇಕು ; ಸುಗ್ರೀವನು ಯಾರನ್ನಾದರೂ ಸಹಾಯ
ಮಾಡಿಕೊಂಡಲ್ಲದೆ ಇಲ್ಲಿಗೆ ಬರಲಾರನು ; ಬಬ್ಬರ ಸಹಾಯದಿಂದಲೇ ಇಲ್ಲಿಗೆ ಬಂದು ಘರ್ಜಿಸುತಿದ್ದಾನೆ ; ಸುಗ್ರೀವ
ನು ಸ್ವಭಾವದಿಂದ ಮಹಾನಿಪುಣನು ; ಅತ್ಯಂತ ಬುದ್ಧಿಸಂಪನ್ನನು ; ಬಬ್ಬನ ಪರಾಕ್ರಮವನ್ನು ಪರೀಕ್ಷಿಸಿ ನೋಡದೆ
ಆವನ ಸಹಾಯವನ್ನು ಮಾಡಿಕೊಳ್ಳನು ! ಎಲೈ ಪ್ರಾಣಕಾಂತನೆ, ನಾನು ಒಂದು ವೃತ್ತಾಂತವನ್ನು ಕೇಳದ್ದೇನೆ ;
ಆದೇನಂದರೆ : ಅಂಗದಕುಮಾರನು ವಿನೋದಾರ್ಥವಾಗಿ ವನಕ್ಕೆ ಹೋದಾಗ ಆತನಿಗಾಪ್ತರಾದ ಬೇಹುಗಾರರಿಂದ
ಕೇಳದ ಒಂದು ವೃತ್ತಾಂತವನ್ನುನನ್ನ ಕೂಡೆ ಹೇಳದನು ; ಅದು ಯಾವದಂದರೆ : ಇಬ್ಬರು ಅಯೋಧ್ಯಾಪಟ್ಟಣಕ್ಕೆ
ಒಡೆಯನಾದ ದಶರಥರಾಯನ ಕುಮಾರರು ಬಂದಿದ್ದಾರಂತೆ ; ಅವರ ಹೆಸರು ರಾಮಲಕ್ಷ್ಮಣರಂತೆ ; ಅವರು ಇಕ್ಷ್ವಾಕು
ವಂಶದ ರಾಯರಂತೆ ; ಅವರು ತಮ್ಮ ಇಷ್ಟಾರ್ಥವನ್ನು ಸಲ್ಲಿಸಿಕೊಳ್ಳಬೇಕೆಂದು ಸುಗ್ರೀವನಕೂಡೆ ಸ್ನೇಹವನ್ನು ಮಾ
ಡಿಕೊಂಡಿದ್ದಾರಂತೆ ; ಶ್ರೀರಾಮನು ದಶರಥರಾಯನ ನಾಲ್ಕು ಕುಮಾರರಲ್ಲಿ ಜ್ಯೇಷ್ಠನಾಗಿ ರಣಪಂಡಿತನಾದವನಂತೆ ;
ಪ್ರಳಯಕಾಲಾಗ್ನಿಯಂತೆ ಸಮಸ್ತ ಶತ್ರುಗಳನ್ನು ಸಂಹರಿಸುವವನಂತೆ ಸಮಸ್ತ ಸತ್ಪುರುಷರಿಗೂ ಆಶ್ರಯವಾದವ
ನಂತೆ ; ಕಂಗೆಟ್ಟವರಿಗೆ ಅಭಯವನ್ನು ಕೊಡುವವನಂತೆ ; ಅನಾಥರಕ್ಷಕನಂತೆ ; ಅತಿ ಕೀರ್ತಿವಂತನಂತೆ ; ಮಹಾ
ಜ್ಞಾನಿಯಂತೆ ; ಪರ್ವತವು ಸಮಸ್ತ ಗೈರಿಕಾದಿ ಧಾತುಗಳಿಗೂ ಆಧಾರವಾದಂತೆಯೂ ಸಮುದ್ರವು ಸಮಸ್ತ ರತ್ನಗ
ಳಿಗೂ ಆಧಾರವಾದಂತೆಯೂ ಆತನು ಸಮಸ್ತ ಸದ್ಗುಣಗಳಿಗೂ ಆಧಾರವಾದವನಂತೆ ; ಆದಕಾರಣ ಮಹಾತ್ಮನಾದ
ಶ್ರೀರಾಮನಕೂಡೆ ಯುದ್ಧವನ್ನು ಮಾಡುವದು ನಿನಗುಚಿತವಲ್ಲ ! ಎಲೈ ಪ್ರಾಣಕಾಂತನೆ, ಶ್ರೀರಾಮನಕೂಡೆ ವಿ
ರೋಧಮಾಡುವ ಬುದ್ಧಿಯನ್ನು ಬಿಟ್ಟು ನನ್ನ ಮಾತನ್ನು ಕೇಳ ಹಿತವೆಂದು ವಿಚಾರಿಸು ; ಸುಗ್ರೀವನನ್ನು ಕರೆದು
ಚಿಕ್ಕರಾಯ ಪಟ್ಟವನ್ನು ಕಟ್ಟು ; ನಿನ್ನ ತಮ್ಮನಾದ ಸುಗ್ರೀವನೊಡನೆ ಹಗೆಯನ್ನು ಬೆಳೆಸಬೇಡ ; ನಿನಗೆ ಶ್ರೀ
ರಾಮನೊಡನೆ ಸ್ನೇಹಮಾಡಿಕೊಂಡಿರುವದೇ ಗುಣವು ; ಸುಗ್ರೀವನೊಡನೆ ವೈರವನ್ನು ಬಿಟ್ಟು ಆತನನ್ನು ಸನ್ಮಾನ
ದಿಂದ ಲಾಲಿಸಿ ಆತನಲ್ಲಿ ಪ್ರೀತಿಯನ್ನು ಮಾಡುವದೇ ನಿನಗೆ ಕಾರ್ಯವು ; ಸುಗ್ರೀವನು ಎಲ್ಲಿದ್ದರೂ ನಿನಗೆ ಹಿತವಾದ
ಬಂಧುವಲ್ಲದೆ ಮತ್ತೊಂದಲ್ಲ ; ಆತನಿಗೆ ನಿನಗೆ ಸಮಾನವಾದ ಬಂಧುಗಳನ್ಯಾರಿದ್ದಾರೆ ; ನೀನು ಆತನಿಗೆ ಉಚಿತವಾದ
ಉಡುಗರೆಗಳಿಂದ ಸತ್ಕಾರವನ್ನು ಮಾಡಿ ನಿನ್ನಲ್ಲಿ ವಿಶ್ವಾಸವು ಹುಟ್ಟುವಂತೆ ಮಾಡು ; ಆತನು ನಿನ್ನ ಮೇಲಣ ವೈರ
ವನ್ನು ಬಿಟ್ಟು ನಿನ್ನ ಸಮೀಪದಲ್ಲಿರಲಿ ; ನೀನು ನಿನ್ನ ತಮ್ಮನಾದ ಸುಗ್ರೀವನೊಡನೆ ಸ್ನೇಹವನ್ನು ಮಾಡಿಕೊಂ
ಡಿರುವದೇ ಕಾರ್ಯವಲ್ಲದೆ ಮತ್ತೊಂದು ಕಾರ್ಯವಿಲ್ಲ ; ನಿನ್ನ ಮನಸ್ಸಿನಲ್ಲಿ ನಾನು ನಿನಗೆ ಹಿತಳಾದವಳೆಂದೆಣಿಸಿರುವ
ಪಕ್ಷದಲ್ಲಿ—ನಿನಗೆ ನನ್ನಲ್ಲಿ ಪ್ರೀಯವಿರುವಪಕ್ಷದಲ್ಲಿ ನನ್ನ ಮಾತನ್ನು ಕೇಳು ; ನಾನು ನಿನಗೆ ಕೈಮುಗಿದು ಬೇಡಿ

ಕೊಂಡೆನು ; ನಾನು ಹೇಳಿದಮಾತು ನಿನಗೆ ಹಿತವೆಂದು ನಂಬಿ ಈ ರೋಷವನ್ನು ಬಿಡು ; ಯಾವಪ್ರಕಾರದಲ್ಲಾದರೂ ಶ್ರೀರಾಮನೊಡನೆ ವಿರೋಧವನ್ನು ಮಾಡಿಕೊಳ್ಳುವದು ನಿನಗೆ ಕಾರ್ಯವಲ್ಲ!" ಎಂದು ಅನೇಕ ನೀತಿವಚನಗಳನ್ನು ನುಡಿದಳು.

## ೧೬ನೇ ಅಧ್ಯಾಯ.

### ಶ್ರೀರಾಮನು ವಾಲಿಯ ಮೇಲೆ ಬಾಣವನ್ನು ಪ್ರಯೋಗಿಸಿ ಬೀಳಿಸಿದ್ದು.

"ಎಲೈ ಕುಶಲವರುಗಳಿರಾ, ಈ ಮರ್ಯಾದೆಯಲ್ಲಿ ಒಡಂಬಡಿಕೆಯನ್ನು ಹೇಳುತಿದ್ದ ತಾರಾದೇವಿಯನ್ನು ಅದ್ದರಿಸಿ ವಾಲಿಯು ಆ ದೇವಿಯನ್ನು ಕುರಿತು "ಎಲೇ ತಾರಾದೇವಿಯೆ, ಘರ್ಜಿಸುತ್ತಿರುವ ನನ್ನ ಶತ್ರುವಾದ ಸುಗ್ರೀವನಮೇಲಿರುವ ಕೋಪವನ್ನು ತಡೆಯಲಾರೆನು ; ಯುದ್ಧರಂಗದಲ್ಲಿ ಹಿಮ್ಮೆಟ್ಟದೆ ಯುದ್ಧವನ್ನು ಮಾಡುವ ಪರಾಕ್ರಮಿಗಳಿಗೆ ಶತ್ರುಗಳು ಬೊಬ್ಬಿಡುವ ಧ್ವನಿಯನ್ನು ಕೇಳುವದು ಪರಾಕ್ರಮವಲ್ಲ ; ಹಾಗಿರುವಲ್ಲಿ ಸುಗ್ರೀವನ ಕೋಲಾಹಲಧ್ವನಿಯನ್ನು ಹ್ಯಾಗೆ ಸಹಿಸಿಕೊಂಡಿರಲಿ! ಶತ್ರುಗಳ ಅದ್ದರಣೆಯನ್ನು ಸಹಿಸುವದು ಪರಾಕ್ರಮಿಗಳಿಗೆ ಮರಣಾವಸ್ಥೆಯಾಗಿ ತೋರುವದು; ಸುಗ್ರೀವನು ನನ್ನ ಕೂಡೆ ಯುದ್ಧವನ್ನು ಮಾಡಬೇಕೆಂದು ನನ್ನನ್ನು ಕರೆದು ಆರ್ಭಟಿಸಿ ಕೂಗುವ ಧ್ವನಿಯನ್ನು ನಾನು ಸಹಿಸಲಾರೆನು! ಎಲೇ ತಾರಾದೇವಿಯೇ, ನೀನು ಶ್ರೀರಾಮನ ಕೂಡೆ ಹಗೆಯು ಬೇಡವೆಂದು ಹೇಳಿದರೂ ಕೇಳದೆ ನಾನು ಹೋದನೆಂಬ ಕೋಪವು ನಿನಗೆ ಬೇಡ ; ಶ್ರೀರಾಮನು ಮಹಾ ಧರ್ಮಿಷ್ಠನು ; ಕೃತಾರ್ಥನು ; ಅಂಥಾವನು ನನ್ನಲ್ಲಿ ಪಾಪಬುದ್ಧಿಯನ್ನೆಣಿಸನು ; ನೀನು ಅಂಜಬೇಡ ; ನಿನ್ನ ಸ್ತ್ರೀಯರನ್ನು ಕರೆದುಕೊಂಡು ತಿರಿಗಿಹೋಗು ; ನೀನು ಹೇಳಿದಮಾತು ಮಹಾ ಒಳ್ಳೇದಾಯಿತು ; ನೀನು ನನ್ನಮೇಲಣ ಸ್ನೇಹದಿಂದಲೂ ಭಕ್ತಿಯಿಂದಲೂ ಹಿತವನ್ನು ಮಾಡಬೇಕೆಂಬ ಬುದ್ಧಿಯಿಂದಲೂ ಹೇಳಿದೆಯಲ್ಲದೆ ಮತ್ತೊಂದಲ್ಲ ; ನಾನು ಸುಗ್ರೀವನಕೂಡೆ ಯುದ್ಧವನ್ನುಮಾಡಿ ಆತನ ಗರ್ವವನ್ನುಪರಿಹರಿಸುವೆನಲ್ಲದೆ ಆತನ ಪ್ರಾಣಾಪಹಾರವನ್ನು ಮಾಡೆನು; ಮತ್ತು ಚಂಡಿಸಿ ನನ್ನಕೂಡೆ ಯುದ್ಧಕ್ಕೆ ಬಂದರೆ ನನ್ನ ಮನಸ್ಸಿಗೆ ಬಂದಂತೆ ಮಾಡುವೆನು ; ನಾನು ಮುಷ್ಟಿಪ್ರಹಾರಗಳಿಂದಲೂ ದೊಡ್ಡ ಮರಗಳಿಂದಲೂ ಇಟ್ಟೆನಾದರೆ ಆವನು ಕಂಗೆಟ್ಟು ಓಡುವನು ; ನನ್ನಬಲದಮುಂದೆ ದುರಾತ್ಮನಾದ ಸುಗ್ರೀವನು ನಿಲ್ಲಲಾರನು! ಎಲೈ ತಾರಾದೇವಿಯೇ, ನೀನು ನನ್ನಮೇಲಣ ಪ್ರೀತಿಯಿಂದ ಹೇಳಿದೆಯಷ್ಟೆ! ಅಲ್ಲಿಗೆ ನೀನು ಬರಬೇಡ ; ನನ್ನಾಣೆ ನೀನು ಮನೆಗೆ ತಿರಿಗಿಹೋಗು ; ನಾನು ನನ್ನತಮ್ಮನಾದ ಸುಗ್ರೀವನನ್ನು ಸಮರದಲ್ಲಿ ಜಯಿಸಿ ತಿರಿಗಿ ಬರುತ್ತೇನೆ" ಎಂದು ನುಡಿದು ಆ ದೇವಿಯನ್ನುತಬ್ಬಿಕೊಂಡನು.

ತಾರಾದೇವಿಯು ದುಃಖಾಕ್ರಾಂತೆಯಾಗಿ ಕಣ್ಣೀರುಬಿಡುತ ತನ್ನ ಪತಿಯಾದ ವಾಲಿಗೆ ಪ್ರದಕ್ಷಿಣವನ್ನುಮಾಡಿ ಆತನಿಗೆ ಸಮರಾಂಗಣದಲ್ಲಿ ಜಯವಾಗಬೇಕೆಂದು ಚಂಡಿಕಾದೇವಿಗೆ ಕೈಮುಗಿದು ಬೇಡಿಕೊಂಡು ಚಿಂತಾಕ್ರಾಂತೆಯಾಗಿ ತನ್ನ ಸಂಗಡಬಂದ ದಾದಿಯರನ್ನು ಕೂಡಿಕೊಂಡು ತನ್ನ ಅರಮನೆಗೆ ತಿರಿಗಿ ಹೋದಳು!

ಆಮೇಲೆ ವಾಲಿಯು ಅತ್ಯಂತ ಕೋಪಾಟೋಪದಿಂದ ಸೊಲೆಗಳೆದ ಸರ್ಪದಂತೆ ನಿಟ್ಟುಸುರುಬಿಡುತ ಅತಿವೇಗದಿಂದ ನಡೆದು ಸುಗ್ರೀವನನ್ನು ಕೊಲ್ಲಬೇಕೆಂದು ನಾನಾದಿಕ್ಕುಗಳನ್ನೂ ನೋಡಿ ಒಂದು ದಿಕ್ಕಿನಲ್ಲಿ ತನ್ನ ತನುಕಾಂತಿಯಿಂದ ದಿಕ್ಕುಗಳನ್ನು ಬೆಳಗಿಸುತ ಯಜ್ಞಪುರುಷನಂತೆ ದೇದೀಪ್ಯಮಾನವಾಗಿ ಪ್ರಕಾಶಿಸುತ್ತಿದ್ದ ಸುಗ್ರೀವನನ್ನು ಕಂಡು ಅತ್ಯಂತ ಕೋಪಕೆರಳಿ ಕೈಯನ್ನು ಮೇಲಕ್ಕೆ ನೆಗೆಹಿಕೊಂಡು ಮುಷ್ಟಿಯನ್ನುಘಟ್ಟಿಯಾಗಿ ಹಿಡಿದುಕೊಂಡು ಸುಗ್ರೀವನನ್ನಟ್ಟಿಕೊಂಡು ಆತನು ಎದಿರಾಗಿ ಯುದ್ಧಕ್ಕೆ ಬರಲು ಆತನನ್ನು ಕರೆದು "ಎಲೈ ಸುಗ್ರೀವನೆ, ನಿನ್ನ ಪ್ರಾಣಾಪಹಾರವನ್ನು ಮಾಡುವ ನನ್ನ ಮುಷ್ಟಿಯು ನಿನ್ನ ಶಿರಸ್ಸಿನಮೇಲೆ ಬೀಳುತ್ತಿದೆ ನೋಡು" ಎಂದು ಆರ್ಭಟಿಸಿ ಹೊಡೆದನು. ಸುಗ್ರೀವನು ಆ ಮುಷ್ಟಿಘಾತದಿಂದ ಘಾಯಪಡೆದು ಹಿಮ್ಮೆಟ್ಟ ವಜ್ರಾಯು

ಥದ ಪೆಟ್ಟಿಗೆ ಚೂರ್ಣೀಕೃತವಾದ ಪರ್ವತದಂತೆ ಶರೀರವೆಲ್ಲವೂ ರಕ್ತಮಸಗಿ ಅತ್ಯಂತ ಕೋಪದಿಂದ ಒಂದು ದೊಡ್ಡ ಮರವನ್ನು ಕಿತ್ತು ವಾಲಿಯಮೇಲೆ ಹಾಕಲು ವಜ್ರಾಯುಧದ ಪೆಟ್ಟಿನಿಂದ ಪರ್ವತವು ಒಡೆಯುವಂತೆ ಘಾಯ ಬಡೆದು ಭಾರದಿಂದ ಸಮುದ್ರದಲ್ಲಿ ಮುಳುಗುವ ಹಡಗಿನಂತೆ ವಾಲಿಯು ಕಂಗೆಟ್ಟು ಭೂಮಿಯಲ್ಲಿ ಬಿದ್ದನು ; ಈ ಮರ್ಯಾದೆಯಲ್ಲಿ ಗರುಡವೇಗವುಳ್ಳ ಮಹಾಬಲಪರಾಕ್ರಮಿಗಳಾದ ವಾಲಿ ಸುಗ್ರೀವರಿಬ್ಬರೂ ಅಂತರಿಕ್ಷಮಾರ್ಗದಲ್ಲಿ ಚಂದ್ರಸೂರ್ಯರಂತೆ ಒಪ್ಪುತ ಒಬ್ಬರನ್ನೊಬ್ಬರು ಸಾಧಿಸಬೇಕೆಂದು ರಣಭೂಮಿಯಲ್ಲಿ ಹೋರುತ್ತಿರುವ ಸಮಯದಲ್ಲಿ ಸೂರ್ಯಪುತ್ರನಾದ ಸುಗ್ರೀವನು ಬಲಹೀನನಾಗಿ ವಾಲಿಯಿಂದ ಮುರಿದು ಶ್ರೀರಾಮನಿಗೆ ವಾಲಿಯನ್ನು ಕಣ್ಣುಸನ್ನೆಯಿಂದ ತೋರಿಸುತಿದ್ದನು ; ಈಪ್ರಕಾರದಲ್ಲಿ ಮರಗಳಿಂದಲೂ ಕೊಂಬುಗಳಿಂದಲೂ ವಜ್ರಾಯುಧದ ಅಲಗಿನಂತೆ ಅತಿ ತೀಕ್ಷ್ಣವಾದ ಉಗುರುಗಳಿಂದಲೂ ಮುಷ್ಟಿಗಳಿಂದಲೂ ಘೋರವಾದ ಯುದ್ಧವನ್ನು ಮಾಡುತಿದ್ದ ವಾಲಿಸುಗ್ರೀವರು ದೇವೇಂದ್ರ ವೃತ್ರಾಸುರರಂತೆ ಒಬ್ಬರನ್ನೊಬ್ಬರು ಬೆದರಿಸುತ ಬೊಬ್ಬಿಟ್ಟು ಕೂಗುತ ಅತ್ಯದ್ಭುತವಾಗಿ ಮೆರೆಯುತ್ತಿರಲು ಸುಗ್ರೀವನು ಸೋತು ಕಂಗೆಟ್ಟು ನಾನಾದಿಕ್ಕುಗಳನ್ನೂ ನೋಡುತ ಅಡಿಗಡಿಗೆ ಶ್ರೀರಾಮನನ್ನು ನೋಡುತ್ತಿದ್ದನು ; ಶ್ರೀರಾಮನು ಸುಗ್ರೀವನು ಕಂಗೆಟ್ಟಿದ್ದನ್ನು ಕಂಡು ಆತನು ಮುಂದೆ ವಾಲಿಯಕೂಡೆ ಸಮರದಲ್ಲಿ ನಿಲ್ಲಲಾರನೆಂದೂ ವಾಲಿಯನ್ನು ಕೊಲ್ಲದಿದ್ದರೆ ತನಗೆ ಮಹಾ ಅಪಕೀರ್ತಿ ಬರುವದೆಂದೂ ಮನಸ್ಸಿನಲ್ಲೆಣಿಸಿ ಒಂದು ಬಾಣವನ್ನು ತೆಗೆದು ಬಿಲ್ಲಿಗೆ ಹೂಡಿ ಬಿಲ್ಲನಾರಿಯನ್ನು ಕಿವಿಪರ್ಯಂತರವಾಗಿ ಶಳೆಯಲು ಆ ಧ್ವನಿಗೆ ಮೃಗಪಕ್ಷಿಗಳೆಲ್ಲವು ಹೆದರಿ ಓಡಿದವು ; ಆಗ ಶ್ರೀರಾಮನು ಪ್ರಯೋಗಿಸಲು ಆ ಬಾಣವು ವಜ್ರಾಯುಧದಂತೆ ಮೆರೆಯುತ ಪ್ರಜ್ವಲಿಸುವ ಯಜ್ಞಪುರುಷನಿಗೆ ಸಮಾನವಾದ ಜ್ವಾಲೆಯುಳ್ಳದ್ದಾಗಿ ವಾಲಿಯ ಎದೆಯಲ್ಲಿ ತಾಕಿತು ; ಆದರಿಂದ ಘಾಯ ಪಡೆದು ವಾಲಿಯು ಪರಾಕ್ರಮಗುಂದಿ ದೇವೇಂದ್ರನ ರಥದಲ್ಲಿರುವ ಠೆಕ್ಕೆಯವು ಕತ್ತರಿಸಲ್ಪಟ್ಟು ಭೂಮಿಯಲ್ಲಿ ಬೀಳುವಂತೆ ಭೂಮಿಯಮೇಲೆ ಬಿದ್ದನು ! ಈ ಮರ್ಯಾದೆಯಲ್ಲಿ ಪುರುಷೋತ್ತಮನಾದ ಶ್ರೀರಾಮನು ಚಿನ್ನದ ಮುಲಾಮಿನಿಂದ ಅಲಂಕರಿಸಲ್ಪಟ್ಟು ಪ್ರಳಯಕಾಲದ ಯಮನ ಮರ್ಯಾದೆಯಲ್ಲಿದ್ದ ತನ್ನ ಬಾಣವನ್ನು ಪ್ರಳಯಕಾಲಸಮಯದಲ್ಲಿ ಪರಮೇಶ್ವರನು ತನ್ನ ಹಣೆಯಲ್ಲಿರುವ ಪ್ರಳಯಕಾಲಾಗ್ನಿಯನ್ನು ಸಂಧಾನಮಾಡುವಂತೆ ವಾಲಿಯಮೇಲೆ ಸಂಧಾನಮಾಡಲು ಆ ರಾಮಬಾಣದಿಂದ ಘಾಯಪಡೆದ ವಾಲಿಯ ಶರೀರವು ರಕ್ತದಿಂದ ನೆನೆದು ವಾಯುವಿನಿಂದ ಕೊಡಹಲ್ಪಟ್ಟ ಪುಷ್ಪಗಳಂತೆ ಒಪ್ಪುತ ಅಶೋಕಮರದಂತೆಯೂ ಭೂಲೋಕಕ್ಕೆ ಬಿದ್ದ ದೇವೇಂದ್ರನ ಠೆಕ್ಕೆಯಂತೆಯೂ ಕಂಗೆಟ್ಟು ಮೂರ್ಛಿತನಾಗಿ ಬಿದ್ದನು.

## ೧೭ ನೇ ಅಧ್ಯಾಯ.

## ವಾಲಿಯು ಶ್ರೀರಾಮನನ್ನು ನಿಂದಿಸಿದ್ದು.

ಎಲೈ ಕುಶಲವರುಗಳಿರಾ, ಈ ಮರ್ಯಾದೆಯಲ್ಲಿ ರಾಮಬಾಣದಿಂದ ಎದೆಯಲ್ಲಿ ಘಾಯಪಡೆದವನಾಗಿ ರಣಧೀರನಾಗಿ ಸರ್ವಾಭರಣಭೂಷಿತನಾದ ವಾಲಿಯು ತಾಳನಲ್ಲಿ ಕತ್ತರಿಸಲ್ಪಟ್ಟ ಮರದಂತೆ ಭೂಮಿಯಲ್ಲಿ ಬಿದ್ದು ಕೈಕಾಲುಗಳನ್ನು ನೀಡಿಕೊಂಡು ಬಿದ್ದಿರಲು ಚಂದ್ರೋದಯವಿಲ್ಲದ ಆಕಾಶದಂತೆ ಆ ರಣಭೂಮಿಯು ಭಯಂಕರವಾಗಿ ತೋರುತಿತ್ತು ; ಆತನ ಶರೀರವು ಭೂಮಿಯಲ್ಲಿ ಬಿದ್ದಿದ್ದರೂ ಅತಿ ತೇಜಸ್ಸುಳ್ಳದ್ದಾಗಿ ಒಪ್ಪುತಿತ್ತು ; ಪೂರ್ವದಲ್ಲಿ ವಾಲಿಯ ತಂದೆಯಾದ ದೇವೇಂದ್ರನು ಕೊಟ್ಟ ಸುವರ್ಣಮಯವಾದ ಕಂಠಸರವು ಆತನ ಪ್ರಾಣಗಳನ್ನು ತಡೆದುಕೊಂಡಿದ್ದಂತೆ ಅತ್ಯಂತ ಪ್ರಕಾಶವಾಗಿ ಒಪ್ಪುತಿತ್ತು ; ವಾಲಿಯು ತನ್ನ ಕೊರಳಲ್ಲಿದ್ದ ಆ ಚಿನ್ನದ ಕಂಠಮಾಲೆಯಿಂದ ಸಂಧ್ಯಾಕಾಲದ ಕೆಂಪಿನಿಂದ ಸುತ್ತುವರಿಯಲ್ಪಟ್ಟ ಮೇಘಮಂಡಲದಂತೆ ಒಪ್ಪುತ್ತಿದ್ದನು ; ಘಾಯಪಡೆದು ಬಿದ್ದಿದ್ದ ಆತನ ಕೊರಳಲ್ಲಿದ್ದ ಕಾಂಚನಮಯವಾದ ಕಂಠಮಾಲೆಯೂ ಆತನ ದೇಹಕಾಂತಿಯೂ ಆತನ ಎದೆಯಲ್ಲಿ ಹೂಡಲ್ಪಟ್ಟ

ಸುವರ್ಣಮಯವಾದ ಬಾಣವು ಆತನ ರಾಜ್ಯಲಕ್ಷ್ಮಿಯು ಮೂರುಪ್ರಕಾರವಾಗಿ ಒಪ್ಪುತ್ತಿತ್ತೋ ಎಂಬಂತೆ ಒಪ್ಪುತ್ತಿದ್ದವು ; ಶ್ರೀರಾಮನಿಂದ ಪ್ರಯೋಗಿಸಲ್ಪಟ್ಟ ಆ ಬಾಣವು ಆತನ ಎದೆಯಲ್ಲಿ ತಾಕಿ ಆತನಿಗೆ ಸ್ವರ್ಗದ ದಾರಿಯನ್ನು ತೋರಿಸುತ್ತಿತ್ತೋ ಎಂಬಂತೆ ಒಪ್ಪುತ್ತಿತ್ತು ! ಆಗ ಶ್ರೀರಾಮನು ಜ್ವಾಲೆಯಿಲ್ಲದ ಯಜ್ಞಪುರುಷನಂತೆಯೂ ಋಷಿಗಳ ಶಾಪದಿಂದ ಸ್ವರ್ಗದಿಂದ ಬಿದ್ದ ಯಯಾತಿಯ ತಂದೆಯಾದ ನಹುಷನಂತೆಯೂ ಮಹಾಪ್ರಳಯದಲ್ಲಿ ಅಂತರಿಕ್ಷಲೋಕದಿಂದ ಬಿದ್ದ ಸೂರ್ಯನಂತೆಯೂ ದೇವೇಂದ್ರನಂತೆಯೂ ನೋಡುವದಕ್ಕೆ ಅಶಕ್ಯವಾದ ಕಾಂತಿಯುಳ್ಳದ್ದಾಗಿ ವಿಶಾಲವಾದ ಎದೆಕಟ್ಟುಗಳುಳ್ಳದ್ದಾಗಿ ನಿಡಿದಾದ ತೋಳುಗಳುಳ್ಳದ್ದಾಗಿ ಪ್ರಕಾಶಮಾನವಾದ ಮುಖವುಳ್ಳದ್ದಾಗಿ ಪಚ್ಚೇರತ್ನ ಕಾಂತಿಯಂತೆ ಕಣ್ಣುಗಳುಳ್ಳ ವಾಲಿಯ ಶರೀರವನ್ನು ಕಂಡು ಅತ್ಯಂತ ಆಶ್ಚರ್ಯಪಟ್ಟು ವಾಲಿಯ ಸಮೀಪಕ್ಕೆ ಹೋಗಿ ತನ್ನನ್ನೂ ಲಕ್ಷ್ಮಣನನ್ನೂ ನೋಡುತ್ತಿದ್ದ ವಾಲಿಯನ್ನು ಅತ್ಯಂತವಾಗಿ ಸನ್ಮಾನಿಸಲು ವಾಲಿಯು ಶ್ರೀರಾಮನನ್ನೂ ಮಹಾಬಲವಂತನಾದ ಲಕ್ಷ್ಮಣನನ್ನೂ ನೋಡಿ ಶ್ರೀರಾಮನನ್ನು ಕುರಿತು ಧರ್ಮಶಾಸ್ತ್ರಾನುಸಾರವಾಗಿಯೂ ವಿನಯವಾಗಿಯೂ ನಿಷ್ಠುರವಾಗಿಯೂ ಇರುವ ಮಾತುಗಳಿಂದ " ಎಲೈ ಶ್ರೀರಾಮನೆ, ಹಿಂದುಮುಂದಾಗಿದ್ದ ನನ್ನನ್ನು ಕೊಂದು ಯಾವ ಸದ್ಗುಣವನ್ನು ಪಡೆದೆ ! ನಾನು ಮತ್ತೊಬ್ಬನಕೂಡೆ ಯುದ್ಧವನ್ನು ಮಾಡುತ್ತಿದ್ದು ವ್ಯರ್ಥವಾಗಿ ನಿನ್ನಿಂದ ಮರಣವನ್ನೈದುತಿದ್ದೇನೆ ; ನೀನು ಮಹಾ ಸತ್ಕುಲಪ್ರಸೂತನೂ ಸಾತ್ವಿಕಗುಣಸಂಪನ್ನನೂ ಅತಿತೇಜಸ್ವಿಯೂ ವ್ರತಾಚಾರಗಳನ್ನು ಮಾಡುವವನೂ ಕಾರುಣ್ಯಗುಣವುಳ್ಳವನೂ ಪ್ರಜಾಪಾಲಕನೂ ಸಮಸ್ತ ಪ್ರಾಣಿಗಳಲ್ಲಿಯೂ ದಯೆಯುಳ್ಳವನೂ ಉತ್ಸಾಹಶಕ್ತಿಯುಳ್ಳವನೂ ಕಾಲೋಚಿತವನ್ನು ಬಲ್ಲವನೂ ಧೃಢವ್ರತವುಳ್ಳವನೂ ಎಂದು ಸಮಸ್ತ ಪ್ರಾಣಿಗಳೂ ಹೇಳುತ್ತಿವೆ ; ಲೋಕದಲ್ಲಿ ಅರಸುಗಳ ಲಕ್ಷಣಗಳಾದ ಕ್ಷಮೆ ಬಹಿರಿಂದ್ರಿಯ ಅಂತರಿಂದ್ರಿಯ ನಿಗ್ರಹ ಮನೋನಿಗ್ರಹ ಧೈರ್ಯ ಸತ್ಯ ಪರಾಕ್ರಮ ಅಪರಾಧವನ್ನು ಮಾಡಿದವರನ್ನು ದಂಡಿಸುವದು ಮೊದಲಾದವು ನಿನ್ನಲ್ಲಿರುವವೆಂದು ಮನಸ್ಸಿನಲ್ಲಿ ನಿಶ್ಚಯಿಸಿ ನೀನು ಚಂಚಲಚಿತ್ತನಲ್ಲವೆಂಬ ವಿಶ್ವಾಸದಿಂದ ಇಲ್ಲಿಗೆ ಬಂದೆನು ; ನೀನು ಇಲ್ಲಿಗೆ ಬಂದದ್ದನ್ನು ನಾನು ಮೊದಲೇ ತಿಳಿದಿದ್ದೆನು ; ನಾನು ಕಿಷ್ಕಿಂಧಾಪಟ್ಟಣದಿಂದ ಹೊರಟುಬರುವಾಗ ನನ್ನ ಸ್ತ್ರೀಯಾದ ತಾರಾದೇವಿಯು ನನ್ನನ್ನು ತಡೆದು ನೀನು ಸುಗ್ರೀವನಿಗೆ ಸಹಾಯವಾಗಿ ಬಂದಿರುವದನ್ನು ಹೇಳಿದಳು ; ಈಗ ನನ್ನ ಪ್ರಾರಬ್ಧಕರ್ಮವು ತಟ್ಟಿತು ; ಅದು ಹಾಗಿರಲಿ ; ಮತ್ತೊಬ್ಬನಕೂಡೆ ಯುದ್ಧವನ್ನು ಮಾಡುತ್ತಿದ್ದವನನ್ನು ಮೋಸದಿಂದ ಎಸೆದು ಕೆಡಹುವದು ನಿನಗುಚಿತವೆ ! ನೀನು ಮೋಸದಲ್ಲಿ ನನ್ನ ಕೊಲ್ಲುವೆಯೆಂಬದನ್ನರಿಯದೆ ನೀನಿದ್ದ ದಿಕ್ಕನ್ನು ನೋಡದಿದ್ದೆನು; ಆತ್ಮಘಾತಕನಾಗಿ ಧರ್ಮದ್ರೋಹಿಯಾಗಿ ಮೋಸಗಾರನಾಗಿ ಹುಲ್ಲುಕಾಚಿದ ಹಾಳುಭಾವಿಯ ಮರ್ಯಾದೆಯುಳ್ಳಿರುವ ನಿನ್ನನ್ನು ಅರಿಯದೆ ಹೋದೆನು ; ಬೂದಿಮುಚ್ಚಿದ ಕೆಂಡದಂತೆ ಕಪಟದಿಂದ ನಿನ್ನ ಪಾಪಸ್ವರೂಪವನ್ನು ಮರೆಸಿಕೊಂಡು ತಪಸ್ವಿವೇಷವನ್ನು ಧರಿಸಿ ಧರ್ಮಿಷ್ಠನಂತೆ ಸಂಚರಿಸುತ್ತಿರುವ ನಿನ್ನನ್ನು ಅರಿಯದೆ ಹೋದೆನು ; ನಾನು ನಿನ್ನ ದೇಶಕ್ಕಾದರೂ ನಿನ್ನ ಪಟ್ಟಣಕ್ಕಾದರೂ ಬಂದು ಉಪದ್ರವವನ್ನು ಮಾಡಿದವನಲ್ಲ ; ನಿನ್ನ ಸ್ವರೂಪವನ್ನು ಕಂಡವನಲ್ಲ ; ಇಂಥಾ ನನಗೆ ಲೋಕದಲ್ಲಿ ನಗೆಗೇಡಾದ ದ್ರೋಹವನ್ನು ಮಾಡಿದೆ ; ವನದಲ್ಲಿ ಕಂದಮೂಲ ಫಲಾದಿಗಳನ್ನು ಊಟಮಾಡಿಕೊಂಡು ನಿನ್ನ ಕೂಡೆ ಯುದ್ಧವನ್ನು ಮಾಡದಿದ್ದ ನನ್ನನ್ನು ಕಪಟಾಚಾರವುಳ್ಳ ನೀನು ವ್ಯರ್ಥವಾಗಿ ಕೊಂದೆ ; ಪಾಪಾತ್ಮನಾದ ನೀನು ಧರ್ಮಮಾರ್ಗಪ್ರವರ್ತಕನಾದ ಇಕ್ಷ್ವಾಕುವಂಶದಲ್ಲಿ ಜನಿಸಿ ಧರ್ಮಿಷ್ಠನೆನಿಸಿಕೊಂಡು ಪಾಪಬುದ್ಧಿಯಿಂದ ಸಂಚರಿಸುತ್ತಿದ್ದೀ ! ಎಲೈ ಶ್ರೀರಾಮನೆ, ವನದಲ್ಲಿ ಕಂದಮೂಲ ಫಲಾಹಾರಗಳನ್ನು ಮಾಡಿಕೊಂಡು ಸಂಚರಿಸುವದು ಕಪಿಗಳಾದ ನಮ್ಮ ಸ್ವಭಾವವು ; ನೀನು ಪುರುಷೋತ್ತಮನಾಗಿ ರಾಜಶ್ರೇಷ್ಠರಾಗಿ ರಾಜರ್ಷಿಗಳ ಕುಲದಲ್ಲಿ ಹುಟ್ಟಿದವನು ; ಅರಸರು ಒಂದು ಕಾರಣಕ್ಕಾಗಿ ಭೂಮಿ ಚಿನ್ನ ಬೆಳ್ಳಿ ಮೊದಲಾದ ವಸ್ತುಗಳ್ಯಾವದಾದರೂ ಬೇಕಾಗಿದ್ದರೆ ಒಬ್ಬರನ್ನು ದಂಡಿಸುವರು ; ನನ್ನಲ್ಲಿ ಯಾವ ವಸ್ತುವಿದೆಯೆಂದು ನನ್ನನ್ನು ಕೊಂದೆ ! ಲೋಕದಲ್ಲಿ ನೀತಿ ವಿನಯ ನಿಗ್ರಹಾನುಗ್ರಹಗಳಿಂದ ಬಂದವರಿಂದೊಂದು ಕೆಡದಹಾಗೆ ನಡೆಯಿಸುವದು ರಾಜಧರ್ಮವು ; ಅರಸರು ಕಾಮುಕರಾಗಿ ವಿನಯಾದಿ ಗುಣಗಳನ್ನತಿಕ್ರಮಿಸಿ ತಮ್ಮ ಮನಸ್ಸು ಬಂದಂತೆ ನಡೆಯುವರೇ ! ಎಲೈ ಶ್ರೀರಾಮನೆ, ನೀನು ಪ್ರಧಾನನಾಗಿ ಮರ್ಯಾದೆಯನ್ನು ತಪ್ಪಿ ನನ್ನ ಮೇಲೆ

ಕೋಪವನ್ನು ಮಾಡಿದೆ; ನೀನು ರಾಜಧರ್ಮವನ್ನು ಬಿಟ್ಟು ಬೇಡರಂತೆ ಕೇವಲ ಧನುರ್ವಿದ್ಯಾಪರಾಯಣನಾಗಿ ಧರ್ಮಮಾರ್ಗವನ್ನರಿತವನಲ್ಲ; ನಿನಗೆ ಅರ್ಥವನ್ನು ಸಂಪಾದಿಸುವ ಬುದ್ಧಿಯಿಲ್ಲ; ನೀನು ಇಂದ್ರಿಯಗಳ ವಶವಾಗಿ ಕಾಮಬುದ್ಧಿಯಿಂದ ನಿರಾಪರಾಧಿಯಾದ ನನ್ನನ್ನು ಕೊಂದು ಮಹಾ ಅಪರಾಧವನ್ನು ಮಾಡಿದೆ; ನೀನು ಸತ್ಪುರುಷರ ಸಭೆಗೆ ಹೋದರೆ ಅವರು ಏನುಕೃತ್ಯವನ್ನು ಮಾಡಿದವನೆಂದು ಕೇಳಿದರೆ ಅವರಕೂಡೆ ಏನೆಂದು ಹೇಳುವೆ! ಅಪರಾಧಮಾಡದ ಅರಸನನ್ನು ಕೊಲ್ಲುವವನು, ಬ್ರಾಹ್ಮಣನನ್ನು ಕೊಲ್ಲುವವನು, ಕಳ್ಳನ ಪ್ರಾಣವಧೆಯನ್ನು ಮಾಡದವನು, ದೈವವಿಲ್ಲವೆಂಬುವನು, ಧರ್ಮವೆಲ್ಲೀದೆಂದು ಅಲ್ಲಕಳೆಗು ನುಡಿಯುವವನು, ಚಾಡಿಹೇಳುವವನು, ನಿಂದೆಯನ್ನು ಹೊತ್ತಿರುವವನು, ಸ್ನೇಹಿತನನ್ನು ಕೊಲ್ಲುವವನು, ಗುರುಪತ್ನಿಗಮನನು ಮೊದಲಾದವರು ನರಕಲೋಕವನ್ನೈದುವರು! ಮತ್ತು ಅಣ್ಣನಿಗೆ ವಿವಾಹವಿಲ್ಲದೆ ವಿವಾಹವಾಗುವ ತಮ್ಮನು ಪರವೆತ್ತನೆನಿಸಿಕೊಳ್ಳುವನು; ಅವರಿಬ್ಬರೂ ಸತ್ಕರ್ಮದೂಷಕರಾದ್ದರಿಂದ ನರಕಲೋಕವನ್ನೈದುವರು! ಎಲೈ ಶ್ರೀರಾಮನೆ, ನೀನು ನನ್ನನ್ನು ಕೊಂದದ್ದರಿಂದ ನಿನಗೆ ಬಂದ ಪ್ರಯೋಜನವೇನು! ಸತ್ಪುರುಷರು ಅಸ್ಪೃಶ್ಯವಾದ ಚರ್ಮ ಅಸ್ತಿ ರೋಮಗಳನ್ನು ಮುಟ್ಟರು; ಧರ್ಮಿಷ್ಠರಿಗೆ ನನ್ನ ಮಾಂಸವು ಭಕ್ಷಿಸುವದಕ್ಕೆ ಯೋಗ್ಯವಲ್ಲ; ಉಗುರುಗಳುಳ್ಳ ಐದುಬಗೆಯ ಮೃಗಗಳೇ ಬ್ರಾಹ್ಮಣ ಕ್ಷತ್ರಿಯರಿಗೆ ಭಕ್ಷಣಯೋಗ್ಯವಾದವು; ನಾನು ಅಂಥಾ ಮೃಗಜಾತಿಗಳೊಳಗೆ ಒಂದು ಜಾತಿ ಮೃಗವಲ್ಲ; ಹಾಗಾದರು ನನ್ನನ್ನು ವ್ಯರ್ಥವಾಗಿ ಕೊಂದೆ; ಸರ್ವಜ್ಞೆಯಾಗಿ ನನ್ನ ಪತ್ನಿಯಾದ ತಾರಾದೇವಿಯು ನನ್ನನ್ನು ಹೋಗಬೇಡವೆಂದು ತಡೆದಳು; ಹಾಗಾದರು ನನ್ನ ಕಾಲವು ತುಂಬಿ ಅಜ್ಞಾನದಿಂದ ಇಲ್ಲಿಗೆ ಬಂದೆನು! ಎಲೈ ಶ್ರೀರಾಮನೆ, ಪಂಚತ್ವವನ್ನೈದಿದ ಪುರುಷನಿಂದ ಪತಿವ್ರತೆಯಾಗಿ ಶೀಲವಂತೆಯಾದ ಸ್ತ್ರೀಯು ವಿಧವೆಯಾಗುವಂತೆ ನಿನ್ನಿಂದ ಕೊಲ್ಲಲ್ಪಟ್ಟ ನನ್ನಿಂದ ನನ್ನ ಭೂಮಿಯು ಒಡೆಯನಿಲ್ಲದ್ದಾಯಿತು! ಕಟಕಟಾ—ಅಂತರಂಗದಲ್ಲಿ ಪರರಿಗೆ ದ್ರೋಹವನ್ನೆಣಿಸುವವನಾಗಿ ಹಿಂಸಕನಾಗಿ ಕ್ಷುದ್ರನಾಗಿ ಅನೃತವನ್ನು ನುಡಿಯುವವನಾಗಿ ಪಾಪಿಷ್ಠಯಾದ ನೀನು ಮಹಾತ್ಮನಾದ ದಶರಥರಾಯನ ಉದರದಲ್ಲಿ ಹ್ಯಾಗೆ ಜನಿಸಿದೆ! ಬಿಡಲ್ಪಟ್ಟ ಸಚ್ಚರಿತ್ರವೆಂಬ ಕಾಲುಕಟ್ಟುಳ್ಳದ್ದಾಗಿ ಸನ್ಮಾರ್ಗವನ್ನು ಬಿಟ್ಟು ದುರ್ಮಾರ್ಗದಲ್ಲಿ ನಡೆಯುವದರಿಂದ ಬಿಡಲ್ಪಟ್ಟ ಧರ್ಮವೆಂಬ ಅಂಕುಶವುಳ್ಳ ಶ್ರೀರಾಮನೆಂಬ ಮದ್ದಾನೆಯಿಂದ ನಾನು ವ್ಯರ್ಥವಾಗಿ ಕೊಲ್ಲಲ್ಪಟ್ಟೆನು! ಎಲೈ ಶ್ರೀರಾಮನೆ, ನೀನು ಮಾಡಿದ ಕೃತ್ಯವು ಲೋಕದಲ್ಲಿ ನಿಂದಿತವಾದದ್ದು; ಅಶುಭವಾದದ್ದು; ಅಕೃತ್ಯವಾದದ್ದು; ಇಂಥಾ ದುರಾಚಾರವನ್ನು ಮಾಡಿದ ಬಳಿಕ ಸತ್ಪುರುಷರ ಗೋಷ್ಠಿಗೆ ಹೋದರೆ ನಿನ್ನ ಪರಾಕ್ರಮವನ್ನೇನೆಂದು ಹೇಳುವೆ! ನಿನ್ನ ಸೇವಕರಾದ ನಮ್ಮಲ್ಲಿ ನಿನ್ನ ಪರಾಕ್ರಮವನ್ನು ತೋರಿಸಿದೆ; ನಿನಗೆ ದ್ರೋಹವನ್ನು ಮಾಡಿದವರಲ್ಲಿ ನಿನ್ನ ಪರಾಕ್ರಮವನ್ನು ತೋರಿಸದಿದ್ದೀ; ನೀನು ನನ್ನ ಕಣ್ಣಿಗೆ ಕಾಣಿಸಿಕೊಂಡು ನನ್ನ ಕೂಡೆ ಯುದ್ಧವನ್ನು ಮಾಡಿದ್ದೆಯಾದರೆ ಇಂದುತಾನೇ ನಿನಗೆ ಯಮದರ್ಶನವನ್ನು ಮಾಡಿಸುತಿದ್ದೆನು; ಸಮರದಲ್ಲಿ ಯಾರಿಗೂ ಅಸಾಧ್ಯನಾದ ನನ್ನನ್ನು ದೃಷ್ಟಿಗೆ ಗೋಚರವಲ್ಲದೆ ಮೋಸದಿಂದ ಮಲಗಿಕೊಂಡಿರುವ ಸರ್ಪವು ಮನುಷ್ಯರನ್ನು ಕಚ್ಚಿ ಕೊಲ್ಲುವಂತೆ ಸಂಹರಿಸಿದೆ; ಸುಗ್ರೀವನಿಗೆ ಪ್ರಿಯವನ್ನು ಮಾಡಬೇಕೆಂದು ನನ್ನನ್ನು ಸಂಹರಿಸಿದೆ; ನನ್ನನ್ನು ಕೊಲ್ಲದೆ ನಿನಗಾಗಬೇಕಾದ ಪ್ರಯೋಜನವನ್ನು ನನ್ನ ಕೂಡೆ ಸೂಚಿಸಿದ್ದೆಯಾದರೆ ನಾನೊಬ್ಬನೇ ನಿನ್ನ ಪ್ರಾಣಕಾಂತೆಯಾದ ಸೀತಾದೇವಿಯನ್ನು ತಂದುಕೊಡುತ್ತಿದ್ದೆನು; ನಿನ್ನ ಸ್ತ್ರೀಯನ್ನಪಹರಿಸಿದ ರಾವಣನ ಕೊರಳಿಗೆ ಹಗ್ಗವನ್ನು ಹಾಕಿ ಹಿಡಿತಂದು ನಿನ್ನ ವಶಕ್ಕೆ ಒಪ್ಪಿಸುತಿದ್ದೆನು; ಅಲ್ಲದಿದ್ದರೆ ರಾವಣನನ್ನು ರಣರಂಗದಲ್ಲಿ ಕೊಲ್ಲುತಿದ್ದೆನು; ಸೀತಾದೇವಿಯು ಸಮುದ್ರಮಧ್ಯದಲ್ಲಿದ್ದರೂ ಪಾತಾಳಲೋಕದಲ್ಲಿದ್ದರೂ ನಿನ್ನ ಅಪ್ಪಣೆಯಿಂದ ಲೀಲಾಮಾತ್ರದಿಂದ ತಂದು ನಿನ್ನ ವಶಕ್ಕೆ ಒಪ್ಪಿಸುತಿದ್ದೆನು; ಅಷ್ಟುಮಾತ್ರವೆ ಅಲ್ಲ; ನೀನು ನನ್ನನ್ನು ಕೊಲ್ಲದಿದ್ದ ಪಕ್ಷದಲ್ಲಿ ನನ್ನ ಕಾಲವು ತುಂಬಿ ಸ್ವರ್ಗಸ್ಥನಾದಮೇಲೆ ಸುಗ್ರೀವನು ರಾಜ್ಯವನ್ನು ಪಡೆಯುವನು; ನಾನು ನಿನ್ನ ಕೂಡೆ ಯುದ್ಧಕ್ಕೆ ಬಂದವನಲ್ಲ; ನೀನು ನನ್ನನ್ನು ಕೊಂದದ್ದು ಉಚಿತವಲ್ಲ; ನಾನು ಸುಗ್ರೀವನಕೂಡೆ ಯುದ್ಧವನ್ನು ಮಾಡುವಾಗ ನೀನು ಮೋಸದಿಂದ ನನ್ನನ್ನು ಕೊಂದದ್ದು ನಿನಗೆ ಧರ್ಮವಲ್ಲ; ಹಾಗಾದರೂ ನಿನ್ನಲ್ಲಿ ತಪ್ಪಿಲ್ಲ; ಕಾಲವನ್ನತಿಕ್ರಮಿಸಲು ಯಾರಿಗೂ ಶಕ್ಯವಲ್ಲ; ಕಾಲವು

ಮನುಷ್ಯನಿಗೆ ಸುಖದುಃಖಗಳನ್ನನುಭವಿಸಬೇಕಾದ ಕಾಲಗಳಲ್ಲಿ ಸುಖದುಃಖಭೋಗಗಳನ್ನು ಕೊಡದೆ ಬಿಡದು! ಎಲೈ ಶ್ರೀರಾಮನೆ, ನೀನು ಮುಂದಿನ ಕಾಲೋಚಿತವಾದ ಕಾರ್ಯವನ್ನು ಕಾಣು" ಎಂದು ವ್ಯಥೆಪಡುತ ಸೂರ್ಯಪ್ರಭೆಯಂತೆ ಕಾಂತಿಯುಳ್ಳ ಶ್ರೀರಾಮನನ್ನು ನೋಡುತ ಸುಮ್ಮನಿದ್ದನು.

## ೧೮ ನೇ ಅಧ್ಯಾಯ.

### ವಾಲಿಯು ಶ್ರೀರಾಮನನ್ನು ಸ್ತುತಿಸಿದ್ದು.

ಈ ಮರ್ಯಾದೆಯಲ್ಲಿ ಶ್ರೀರಾಮನ ಬಾಣದಿಂದ ಘಾಯಪಡೆದು ಬಿದ್ದ ವಾಲಿಯು ಶ್ರೀರಾಮನನ್ನು ಅನೇಕ ನಿಷ್ಠುರೋಕ್ತಿಗಳಿಂದ ನುಡಿಯಲು ಆ ಮಾತುಗಳನ್ನು ಕೇಳಿ ಶ್ರೀರಾಮನು ಮಂಜುಮುಸುಕಿದ ಸೂರ್ಯನಂತೆಯೂ ನೀರಿಲ್ಲದ ಮೇಘದಂತೆಯೂ ಕಾಂತಿಗುಂದಿದ ವಾಲಿಯನ್ನು ನೋಡಿ ಧರ್ಮಾರ್ಥಗಳೊಡಗೂಡಿದ ಮಾತುಗಳಿಂದ "ಎಲೈ ವಾಲಿಯೆ, ನೀನು ಧರ್ಮಾರ್ಥಕಾಮಗಳೆಂಬ ಮೂರು ಪುರುಷಾರ್ಥಗಳ ಸ್ವರೂಪವನ್ನರಿತವನಲ್ಲ; ಕಾಲೋಚಿತವಾದ ಸಮಯವನ್ನರಿಯದೆ ಮಕ್ಕಳಾಟಿಕೆಯಿಂದ ನನ್ನನ್ನು ಜರೆದು ನುಡಿಯುತ್ತಿದ್ದೀ; ನೀನು ಬುದ್ಧಿವಂತರಾಗಿ ಪೂಜ್ಯರಾದ ವೃದ್ಧರೊಡನೆ ಯಾವಾಗಲಾದರೂ ಸಂಭಾಷಣೆ ಮಾಡಿದವನಲ್ಲ; ಆದಕಾರಣ ನಿನ್ನ ಚಂಚಲಬುದ್ಧಿಯಿಂದ ನನ್ನನ್ನು ಜರೆದು ನುಡಿಯುತ್ತಿದ್ದಿ! ಸಮಸ್ತ ಭೂಮಂಡಲವೂ ಇಕ್ಷ್ವಾಕುವಂಶದ ರಾಯರ ವಶವಾಗಿರುವದು; ಈ ಭೂಮಂಡಲದೊಳಗಿರುವ ಮನುಷ್ಯ ಮೃಗಪಕ್ಷಿಗಳ ನಿಗ್ರಹಾನುಗ್ರಹಗಳಿಗೆ ಕರ್ತನಾಗಿ ಭರತನು ರಾಜ್ಯಪರಿಪಾಲನವನ್ನು ಮಾಡಿಕೊಂಡಿದ್ದಾನೆ; ಆತನು ಧರ್ಮಾರ್ಥ ಕಾಮಗಳ ತತ್ವವಿಚಾರವನ್ನು ಬಲ್ಲವನು; ದುಷ್ಟನಿಗ್ರಹ ಶಿಷ್ಟಪರಿಪಾಲನಗಳನ್ನು ಮಾಡುವದರಲ್ಲಿ ಮಹಾ ದಕ್ಷನು; ನೀತಿ ನಯಾದಿ ಗುಣಗಳಲ್ಲಿ ನಿಪುಣನು; ಆತನಲ್ಲಿ ಸತ್ಯ ದಯೆ ವಿಕ್ರಮಗಳು ಸಹಜವಾಗಿರುವವು; ಆತನು ದೇಶಕಾಲಗಳನ್ನು ಬಲ್ಲಂಥವನು; ಆತನ ಅಪ್ಪಣೆಯಿಂದ ನಾವೂ ಇನ್ನು ಕೆಲವು ದೊರೆಗಳೂ ಈ ಭೂಮಂಡಲದಲ್ಲಿ ಧರ್ಮವನ್ನು ಪರಿಪಾಲಿಸುವದಕ್ಕಾಗಿ ಸಂಚರಿಸಿಕೊಂಡಿದ್ದೇವೆ; ರಾಜರಾಜೋತ್ತಮನಾಗಿ ಧರ್ಮಮಾರ್ಗಪ್ರವರ್ತಕನಾದ ಭರತನು ಸಮಸ್ತಭೂಮಂಡಲವನ್ನು ಪರಿಪಾಲಿಸಿಕೊಂಡಿರುವದರಿಂದ ಧರ್ಮವನ್ನು ಬಿಟ್ಟು ನಡೆಯುವವರನ್ನು ಆತನ ಅಜ್ಞೆಯಿಂದ ದಂಡಿಸುತಿದ್ದೇವೆ; ನೀನು ಧರ್ಮಮಾರ್ಗವನ್ನು ಬಿಟ್ಟು ಕಾಮುಕನಾಗಿ ರಾಜಧರ್ಮಗಳನ್ನು ಬಿಟ್ಟು ಲೋಕದಲ್ಲಿ ಮಾಡಬಾರದ ಕೃತ್ಯಗಳನ್ನು ಮಾಡಿಕೊಂಡಿದ್ದೆ; ಲೋಕದಲ್ಲಿ ಹಿರೀ ಅಣ್ಣನು, ತಂದೆಯು, ವಿದ್ಯವನ್ನು ಕಲಿಸಿದವನು—ಇವರು ಮೂವರೂ ತಂದೆಗಳು ಎಂಬ ಧರ್ಮಶಾಸ್ತ್ರವುಂಟು; ಆದ್ದರಿಂದ ಮನುಷ್ಯನು ತಮ್ಮನನ್ನೂ ಮಗನನ್ನೂ ಗುಣವಂತನಾದ ಶಿಷ್ಯನನ್ನೂ ತನ್ನ ಮಕ್ಕಳಂತೆಯೇ ಕಾಣಬೇಕು! ಎಲೈ ವಾಲಿಯೆ, ಲೋಕದಲ್ಲಿ ಧರ್ಮವನ್ನು ಕಾಣುವದಕ್ಕೆ ಶಕ್ಯವಲ್ಲ; ಧರ್ಮವನ್ನೂ ಪುಣ್ಯಪಾಪಗಳನ್ನೂ ಹೃದಯಕಮಲದಲ್ಲಿರುವ ಪರಮಾತ್ಮನೇ ಬಲ್ಲನು; ಜಾತ್ಯಾಂಧಕರೊಡಗೂಡಿದವನು ಇತರ ದಾರಿಯನ್ನು ಕಾಣದಂತೆ ನೀನು ಚಪಲಬುದ್ಧಿಯುಳ್ಳವನಾಗಿ ಚಪಲರಾದ ಕಪಿಗಳೊಡನೆ ಕೂಡಿದ್ದದ್ದರಿಂದ ಧರ್ಮರಹಸ್ಯವನ್ನು ಬಲ್ಲವನಲ್ಲ; ನಿನ್ನ ಚಪಲಬುದ್ಧಿಯಿಂದ ನನ್ನನ್ನು ಜರೆದು ನುಡಿಯುತಿದ್ದಿ; ನೀನು ನಿರಪರಾಧಿಯಾಗಿದ್ದರೆ ನಾನು ನಿನ್ನನ್ನು ಕೊಲ್ಲುವದಕ್ಕಿಲ್ಲ; ನೀನು ನಿನ್ನ ಒಡಹುಟ್ಟಿದ ತಮ್ಮನ ಸ್ತ್ರೀಯಲ್ಲಿ ಜಾರತ್ವವನ್ನು ಮಾಡುತಿದ್ದೆ; ಅದಲ್ಲದೆ ಧರ್ಮಮಾರ್ಗವನ್ನು ಬಿಟ್ಟು ನಿನ್ನ ಕುಮಾರನಾದ ಅಂಗದನ ಸ್ತ್ರೀಯಾದ ನಿನ್ನ ಸೊಸೆಯಲ್ಲಿಯೂ ಆಸಕ್ತನಾಗಿದ್ದೆ; ಹೀಗೆ ಧರ್ಮಮಾರ್ಗವನ್ನು ಬಿಟ್ಟು ಅಧರ್ಮಮಾರ್ಗದಲ್ಲಿ ನಡೆದದ್ದರಿಂದ ನಿನ್ನನ್ನು ಸಂಹರಿಸಿದೆನು; ಧರ್ಮವಿರುದ್ಧವಾದ ಮಾರ್ಗದಲ್ಲಿ ನಡೆಯುವವರನ್ನು ದಂಡಿಸಬೇಕಲ್ಲದೆ ಸುಮ್ಮನಿರಬಾರದು; ಆದಕಾರಣ ಕ್ಷತ್ರಿಯಕುಲೋತ್ತಮನಾದ ನನಗೆ ನಿನ್ನನ್ನು ಕೊಂದದ್ದು ಪಾತಕವಲ್ಲ; ಧರ್ಮಶಾಸ್ತ್ರವನ್ನು ಬಲ್ಲವರು ಮಗಳಲ್ಲಿಯೂ ಒಡಹುಟ್ಟಿದವಳಲ್ಲಿಯೂ ತಮ್ಮನ ಸ್ತ್ರೀಯಲ್ಲಿಯೂ ಸೊಸೆಯಲ್ಲಿಯೂ ಕಾಮಬುದ್ಧಿಯಿಂದ ಎರಡೆಣಿಸುವವನನ್ನು ಕೊಲ್ಲಬೇಕೆಂದು ಹೇಳುವರು; ಈಗ ಭರತನು ರಾಜ್ಯಪರಿಪಾಲನವನ್ನು

ಮಾಡಿಕೊಂಡಿದ್ದಾನೆ ; ನಾವು ಆತನು ಹೇಳಿದಹಾಗೆ ಮಾಡಿಕೊಂಡಿರುವವರು ; ಅಂಥಾ ನಾವು ದುರ್ಮಾರ್ಗದಲ್ಲಿ ನಡೆ
ಯುವ ನಿನ್ನನ್ನು ಕೊಲ್ಲದೆ ಹ್ಯಾಗೆ ಉಪೇಕ್ಷೆಮಾಡಿಕೊಂಡಿರುವೆವು ; ಭರತನು ಪ್ರಾಜ್ಞನಾಗಿ ಧರ್ಮದಿಂದ ರಾಜ್ಯ
ಪರಿಪಾಲನವನ್ನು ಮಾಡಿಕೊಂಡು ದುಷ್ಟನಿಗ್ರಹ ಶಿಷ್ಟಪರಿಪಾಲನವನ್ನು ಮಾಡಿಕೊಂಡಿರಲು ನಾವು ಆತನ ಆಜ್ಞೆ
ಯಿಂದ ನಿನ್ನಂಥಾ ದುರ್ಮಾರ್ಗಿಗಳನ್ನು ಶಿಕ್ಷೆಮಾಡಿಕೊಂಡಿದ್ದೇವೆ ; ಸುಗ್ರೀವನು ನನ್ನ ತಮ್ಮನಾದ ಲಕ್ಷ್ಮಣನ
ಮರ್ಯಾದೆಯಲ್ಲಿ ನನ್ನ ಕೂಡೆ ಸ್ನೇಹವನ್ನು ಮಾಡಿಕೊಂಡು ತನ್ನ ರಾಜ್ಯನಿಮಿತ್ತವಾಗಿಯೂ ತನ್ನ ಸ್ತ್ರೀನಿಮಿತ್ತವಾ
ಗಿಯೂ ನನ್ನ ಕೂಡೆ ಸಂಚರಿಸಿಕೊಂಡಿದ್ದಾನೆ ; ನಾನು ಮೊದಲು ಹನುಮಂತನು ಮೊದಲಾದ ಕಪಿನಾಯಕರ ಸಮು
ಖದಲ್ಲಿ ನಿನ್ನನ್ನು ಕೊಂದು ಸುಗ್ರೀವನಿಗೆ ರಾಜ್ಯವನ್ನೂ ಸ್ತ್ರೀಯನ್ನೂ ಬಿಡಿಸಿಕೊಡುವದಾಗಿ ನಂಬಿಕೆಯನ್ನು ಕೊ
ಟ್ಟೆನು ; ಹಾಗೆ ಕೊಟ್ಟಮಾತಿಗೆ ತಪ್ಪಬಾರದಾದಕಾರಣ ನಿನ್ನನ್ನು ಸಂಹರಿಸಿದೆನು ; ನಿನ್ನ ನಿಗ್ರಹವು ನ್ಯಾಯವೋ
ಅನ್ಯಾಯವೋ ಎಂಬದನ್ನು ನೀನೇ ವಿಚಾರಿಸಿಕೊ ; ಧರ್ಮವನ್ನು ಪರಿಪಾಲಿಸಬೇಕೆಂಬವನು ಅವಶ್ಯವಾಗಿ ತನ್ನನ್ನು
ನಂಬಿದ ಸ್ನೇಹಿತನಿಗೆ ಉಪಕಾರವನ್ನು ಮಾಡಬೇಕು ; ಆದಕಾರಣ ನಿನ್ನನ್ನು ನಿಗ್ರಹಮಾಡಿದ್ದು ಧರ್ಮವೆಂದೇ ತಿಳೀ !
ಎಲೈ ವಾಲಿಯೆ, ಮನುವಿನಿಂದ ಹೇಳಲ್ಪಟ್ಟ ಧರ್ಮಗಳನ್ನು ಕೇಳು : ಪಾಪವನ್ನು ಮಾಡಿದ ಮನುಷ್ಯನನ್ನು ಅರ
ಸನು ಧರ್ಮಶಾಸ್ತ್ರೋಕ್ತಪ್ರಕಾರದಲ್ಲಿ ಆ ಪಾಪಕ್ಕೆ ತಕ್ಕಹಾಗೆ ದಂಡಿಸಿದರೆ ಆ ಮನುಷ್ಯನು ಆ ರಾಜದಂಡದಿಂದ
ಶುದ್ಧಾತ್ಮನಾಗಿ ಸತ್ಕರ್ಮಗಳನ್ನು ಮಾಡಿದ ಸತ್ಪುರುಷರೈದುವ ಲೋಕಕ್ಕೆ ಹೋಗುವನು ; ಪಾಪವನ್ನು ಮಾಡಿ
ದವನು ಧರ್ಮಪ್ರವರ್ತಕನಾದ ಅರಸನ ದಂಡನೆಗೊಳಗಾಗದಿದ್ದರೂ ತನ್ನನ್ನು ತಾನೆ ಮನಹೇಸಿ ಗಂಗಾಪ್ರವಾ
ಹ ಮೊದಲಾದವುಗಳಲ್ಲಿ ತನ್ನ ಶರೀರವನ್ನು ಕೆಡಹಿದರೆ ತಾನುಮಾಡಿದ ಪಾಪದಿಂದ ಬಿಡುಗಡೆಯನ್ನೈದುವನು ;
ಅರಸನು ಧರ್ಮಾಧರ್ಮಗಳನ್ನು ಶಾಸ್ತ್ರಾನುಸಾರವಾಗಿ ವಿಚಾರಿಸಿ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡದೆ
ದ್ರವ್ಯಲೋಭದಿಂದ ಉಪೇಕ್ಷೆಮಾಡಿದರೆ ಆ ಪಾಪವನ್ನು ತಾನೇ ಪಡೆಯುವನು ! ಎಲೈ ವಾಲಿಯೆ, ಹೀಗಿರುವದರಿಂ
ದ ನಾನು ನಿನ್ನನ್ನು ಕೊಲ್ಲದಿರಬಾರದು ! ನನ್ನ ವಂಶದ ಮಾಂಧಾತರಾಯನು ಒಬ್ಬ ಮಹಾತ್ಮನನ್ನು ಧಿಕ್ಕರಿಸಿ
ಅಧೋಗತಿಯಾಗಿ ಬಿದ್ದನು ; ನೀನೂ ಆ ರಾಯನ ಮರ್ಯಾದೆಯಲ್ಲಿ ಮಹಾತ್ಮರನ್ನು ಧಿಕ್ಕರಿಸಿ ಪಾಪವನ್ನೈದಿದೆ ;
ಪಾಪವನ್ನು ಮಾಡುವ ಅಜ್ಞಾನಿಗಳಾದ ಮನುಷ್ಯರಿಗೆ ಧರ್ಮಿಷ್ಠರಾದ ಅರಸರು ಧರ್ಮಶಾಸ್ತ್ರಪ್ರಕಾರದಲ್ಲಿ ಅವ
ರ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಕೊಟ್ಟರೆ ಆ ಪಾಪಿಗಳು ತಾವು ಮಾಡಿದ ಪಾಪದಿಂದ ಬಿಡುಗಡೆಯನ್ನೈದಿ
ಶುದ್ಧಾತ್ಮರಾಗುವರು ! ಎಲೈ ವಾಲಿಯೆ, ನೀನು ನಿನ್ನ ಮನಸ್ಸಿನಲ್ಲಿರುವ ದುಃಖವನ್ನು ಬಿಡು ; ನಾವು ಸ್ವತಂತ್ರರ
ಲ್ಲ ; ನಿನ್ನ ಅಪರಾಧಕ್ಕೆ ತಕ್ಕ ದಂಡನೆಯನ್ನು ಮಾಡಿದೆವು ; ನಾವು ಕಾರಣಾಂತರವೇ ಅಲ್ಲದೆ ನಿನ್ನನ್ನು ಕೊಂದವ
ರಲ್ಲ ; ನೀನು ನನ್ನಮೇಲಣ ಕೋಪವನ್ನು ಬಿಟ್ಟು ನನ್ನ ಮಾತನ್ನು ಕೇಳು : ನನಗೆ ನಿನ್ನನ್ನು ಕೊಂದದ್ದರಿಂದ
ಮನಸ್ತಾಪವಿಲ್ಲ ; ನಿನ್ನಮೇಲೆ ಕೋಪವೂ ಇಲ್ಲ ; ಬೇಟೆಗಾರರು ಕಪ್ಪು ಸುತ್ತುಬಲೆ ಉರುಳುಬಲೆ ಮೊದಲಾದ ಸಾ
ಧನಗಳಿಂದ ಕಾಣಿಸಿಕೊಂಡೂ ಕಾಣಿಸಿಕೊಳ್ಳದೆಯೂ ಬೇಟೆಯಾಡುತ ಓಡುವ ಮೃಗಗಳು ಕಪ್ಪುಬಲೆಗಳಲ್ಲಿ ಬಿದ್ದ
ಮೃಗಗಳು ಎದಿರಾಗಿ ನಿಂತ ಮೃಗಗಳು ಕುಳಿತಿರುವ ಮೃಗಗಳು ಮದಸೊಕ್ಕಿದ ಮೃಗಗಳು ಮದರಹಿತವಾದ ಮೃ
ಗಗಳು ಮೊದಲಾದ ಮೃಗಗಳಲ್ಲಿ ಯಾವವನ್ನಾದರೂ ಮಾಂಸವು ಬೇಕೆಂಬ ಬುದ್ಧಿಯಿಂದ ಕೊಲ್ಲುವರಲ್ಲದೆ ಬಿಡರು ;
ನಾವು ವನದಲ್ಲಿ ಬೇಟೆಯಾಡುತ ದುಷ್ಟಮೃಗಗಳನ್ನು ಕೊಲ್ಲುವವರಾದಕಾರಣ ನಿನ್ನನ್ನು ಕೊಂದದ್ದರಿಂದ ನನಗೆ
ದೋಷವಿಲ್ಲ ; ಧರ್ಮಿಷ್ಠರಾದ ರಾಜರ್ಷಿಗಳೂ ಬೇಟೆಯಾಡಿ ಸಿಕ್ಕಿದ ಮೃಗಗಳನ್ನು ಸಂಹರಿಸುವರು ; ಆದ್ದರಿಂದ
ನಾನು ನಿನ್ನನ್ನು ಶಾಖಾಮೃಗವೆಂದು ವಿಚಾರಿಸಿ ಸಂಹರಿಸಿದೆನಲ್ಲದೆ ಮತ್ತೊಂದಲ್ಲ ; ನನ್ನಕೂಡೆ ಯುದ್ಧವನ್ನು
ಮಾಡದಿದ್ದ ನಿನ್ನನ್ನು ಕೊಂದದ್ದು ಉಚಿತವೇ ಸರಿ ; ನನ್ನಕೂಡೆ ಯುದ್ಧವನ್ನು ಮಾಡದಿದ್ದರೂ ಯುದ್ಧವನ್ನು
ಮಾಡಿದರೂ ನೀನು ಶಾಖಾಮೃಗವೆಂಬದು ತಪ್ಪದು ; ರಾಜ್ಯವನ್ನಾಳುವ ಅರಸರು ಸಮಸ್ತ ಪ್ರಾಣಿಗಳಿಗೂ ರಕ್ಷಕ
ರು ; ಅವರ ಸುಖದುಃಖಗಳಿಗೂ ಕರ್ತರು ; ಆದ್ದರಿಂದ ನಾವು ರಾಜ್ಯಪರಿಪಾಲನವನ್ನು ಮಾಡುತ್ತಿರುವ ಭರತನ

ಅಪ್ಪಣೆಯಿಂದ ವನದಲ್ಲಿರುವ ದುಷ್ಟಮೃಗಗಳನ್ನು ಕೊಲ್ಲುತಿದ್ದೇವಲ್ಲದೆ ಮತ್ತೊಂದಲ್ಲ! ಅರಸರು ಮನುಷ್ಯರೂಪದಿಂದ ಸಂಚರಿಸುವ ದೇವತೆಗಳು; ದೇವತೆಗಳ ಮರ್ಯಾದೆಯಲ್ಲಿ ದುಷ್ಟನಿಗ್ರಹ ಶಿಷ್ಟಪರಿಪಾಲನವನ್ನು ಮಾಡುವ ಅರಸರನ್ನು ಉಪೇಕ್ಷಾಬುದ್ಧಿಯಿಂದ ಕಾಣಬಾರದು; ಅವರಕೂಡೆ ನಿಷ್ಠುರವಾಗಿ ನುಡಿಯಬಾರದು; ಅವರನ್ನು ನಿಂದಿಸಬಾರದು; ಅವರನ್ನು ಕೊಲ್ಲಬಾರದು; ನೀನು ಧರ್ಮರಹಸ್ಯವನ್ನರಿಯದೆ ಮನಸ್ಸಿನಲ್ಲಿ ರೋಷವನ್ನುಂಟುಮಾಡಿಕೊಂಡು ಕುಲಾಗತವಾದ ಧರ್ಮದಲ್ಲಿ ನಡೆಯುವ ನನ್ನನ್ನು ದೂಷಣೆಮಾಡುತಿದ್ದಿ!" ಎಂದು ನುಡಿದನು.

ಆ ಮಾತನ್ನು ಕೇಳಿ ವಾಲಿಯು ಅತ್ಯಂತ ವ್ಯಥೆಪಟ್ಟು ಕೈಮುಗಿದುಕೊಂಡು ಶ್ರೀರಾಮನನ್ನು ಕುರಿತು "ಎಲೈ ಶ್ರೀರಾಮನೆ, ನೀನು ಹೇಳಿದ ಮಾತುಗಳೆಲ್ಲವು ಯಥಾರ್ಥವು; ಅದಕ್ಕೆ ಸಂಶಯವಿಲ್ಲ; ಉತ್ತಮನಾದವನು ಆಡುವಮಾತಿಗೆ ಪ್ರತ್ಯುತ್ತರವನ್ನು ಕೊಡಬೇಕಲ್ಲದೆ ಅಧಮನಾದವನು ಆಡುವಮಾತಿಗೆ ಪ್ರತ್ಯುತ್ತರವನ್ನು ಕೊಟ್ಟರೆ ಚನ್ನಾಗಿರದು; ನಾನು ನಿನ್ನಕೂಡೆ ಅಜ್ಞಾನದಿಂದ ನುಡಿದ ಮಾತುಗಳು ಯುಕ್ತವಲ್ಲ; ಆ ಮಾತುಗಳನ್ನು ನೀನು ಸಹಿಸಿಕೊ; ನೀನು ಸಕಲ ತತ್ವಾರ್ಥ ರಹಸ್ಯಗಳನ್ನೂ ಬಲ್ಲವನು; ಸಮಸ್ತ ಪ್ರಾಣಿಗಳಿಗೂ ಹಿತವನ್ನೇ ಚಿಂತಿಸುವವನು; ಕಾರ್ಯಾಕಾರ್ಯಗಳನ್ನು ಬಲ್ಲವನು; ನಾನು ಕೊಬ್ಬಿ ಧರ್ಮಮಾರ್ಗವನ್ನು ಬಿಟ್ಟು ನಡೆದೆನು! ಎಲೈ ಶ್ರೀರಾಮನೆ, ನೀನು ನನಗೆ ಧರ್ಮೋಪದೇಶವನ್ನು ಮಾಡಿ ನನ್ನನ್ನು ರಕ್ಷಿಸು" ಎಂದು ಕಣ್ಣೀರು ತುಂಬಿಕೊಂಡು ಹೀನಸ್ವರದಿಂದ ಕೆಸರಲ್ಲಿ ಬಿದ್ದ ಆನೆಯಂತೆ ಮತ್ತು ಶ್ರೀರಾಮನನ್ನು ನೋಡಿ "ಎಲೈ ಶ್ರೀರಾಮನೆ, ನಾನು ನನ್ನನ್ನು ಕುರಿತಾದರೂ ನನ್ನ ಬಂಧುಗಳನ್ನು ಕುರಿತಾದರೂ ದುಃಖಪಡುವವನಲ್ಲ; ನನ್ನ ಕುಮಾರನಾದ ಅಂಗದನನ್ನು ಕುರಿತು ದುಃಖಪಡುತ್ತಿದ್ದೇನೆ; ಅಂಗದಕುಮಾರನನ್ನು ಬಾಲ್ಯಾವಸ್ಥೆಯಿಂದ ಅತ್ಯಂತವಾಗಿ ಲಾಲಿಸಿ ರಕ್ಷಿಸುತಿದ್ದೆನು; ಆತನು ಒಂದು ಕ್ಷಣಮಾತ್ರವಾದರೂ ನನ್ನನ್ನು ಕಾಣದಿದ್ದರೆ ನೀರು ಬತ್ತಿದ ಕೆರೆಯು ಯಾವ ಪ್ರಕಾರದಲ್ಲಿ ಒಣಗುವದೊ ಆ ಮರ್ಯಾದೆಯಲ್ಲಿ ಒಣಗಿಹೋಗುವನು; ಆತನು ಇನ್ನೂ ಬಾಲಕನು; ಬುದ್ಧಿಯನ್ನರಿತವನಲ್ಲ; ನನಗೆ ಆತನೊಬ್ಬನೇ ಮಗನು! ಎಲೈ ಶ್ರೀರಾಮನೆ, ಆ ಕುಮಾರನನ್ನು ನೀನು ಯಾವ ಪ್ರಕಾರದಲ್ಲಾದರೂ ರಕ್ಷಿಸು; ಸುಗ್ರೀವನನ್ನೂ ಅಂಗದನನ್ನೂ ಸಮವಾಗೆಣಿಸಿ ರಕ್ಷಿಸು; ನೀನು ಕೃತ್ಯಾಕೃತ್ಯಗಳನ್ನು ಬಲ್ಲವನು; ಆದಕಾರಣ ಅವರಿಬ್ಬರಿಗೂ ರಕ್ಷಕನೂ ಶಿಕ್ಷಕನೂ ನೀನೇ ಅಲ್ಲದೆ ಮತ್ತೊಬ್ಬರಿಲ್ಲ! ಎಲೈ ಶ್ರೀರಾಮನೆ, ನೀನು ನಿನ್ನ ತಮ್ಮನಾದ ಲಕ್ಷ್ಮಣನಲ್ಲಿ ಎಂಥಾ ಕೃಪೆಯನ್ನಿಟ್ಟಿದ್ದೀಯೊ ಅಂಥಾ ಕೃಪೆಯನ್ನು ಸುಗ್ರೀವನಲ್ಲಿಯೂ ಅಂಗದನಲ್ಲಿಯೂ ಇಟ್ಟು ರಕ್ಷಿಸು; ನಾನು ಮಾಡಿದ ಅಪರಾಧದಿಂದ ವಿಧವೆಯಾದ ತಾರಾದೇವಿಯನ್ನು ಸುಗ್ರೀವನು ಅವಮನ್ನಣೆಮಾಡದಂತೆ ಕಟ್ಟುಮಾಡು; ನೀನು ಸುಗ್ರೀವನನ್ನು ಅಂಗೀಕರಿಸಿದಮೇಲೆ ಆತನು ನಿನ್ನ ಚಿತ್ತವೃತ್ತಿಗೆ ತಕ್ಕಂತೆ ನಡೆದರೆ ನಿನ್ನ ಕೃಪೆಯಿಂದ ಆತನಿಗೆ ದೇವಲೋಕವಾದರೂ ಸಾಧ್ಯವಾಗುವದು; ನನ್ನ ರಾಜ್ಯಾಧಿಪತ್ಯವನ್ನೇಳುವದೇನು! ನಾನು ನಿನ್ನಿಂದ ಮರಣವನ್ನು ಬಯಸಿಯೇ ತಾರಾದೇವಿಯು ತಡದರೂ ನನ್ನ ತಮ್ಮನಾದ ಸುಗ್ರೀವನಕೂಡೆ ಯುದ್ಧಕ್ಕೆ ಬಂದೆನು" ಎಂದು ನುಡಿದನು.

ಶ್ರೀರಾಮನು ಧರ್ಮರಹಸ್ಯಯುಕ್ತವಾದ ಸಂತಮನ್ನಣೆ ವಾಕ್ಯಗಳಿಂದ ವಾಲಿಯನ್ನು ಸಂತವಿಟ್ಟು "ಎಲೈ ವಾಲಿಯೆ, ನೀನು ಚಿಂತಿಸಬೇಡ; ನಾವು ನಿನಗೆ ಧರ್ಮಲಾಭವಾಗಬೇಕೆಂದೇ ಹೀಗೆಮಾಡಿದೆವು; ಅದು ಹ್ಯಾಗೆಂದರೆ: ಅಪರಾಧವನ್ನು ಮಾಡಿ ಅರಸನಿಂದ ತನ್ನ ಅಪರಾಧಕ್ಕೆ ತಕ್ಕ ದಂಡನೆಯನ್ನು ಪಡೆಯುವವನೂ ದಂಡಕ್ಕೆ ಯೋಗ್ಯನಲ್ಲದಿದ್ದರೂ ಮೋಸಲೋಭಗಳಿಂದ ಅರಸನಿಂದ ದಂಡಿಸಲ್ಪಡುವವನೂ ನರಕಸಾಧನವಾದ ಪಾಪದಿಂದ ಬಿಡುಗಡೆಯನ್ನೈದಿ ಪರಲೋಕದಲ್ಲಿ ಸುಖವನ್ನೈದುವರು! ಆದಕಾರಣ ನಾನು ಮಾಡಿದ ದಂಡನೆಯಿಂದ ನೀನು ಮಾಡಿದ ಪಾಪದಿಂದ ಬಿಡುಗಡೆಯನ್ನೈದುವೆ! ನೀನು ನಿನ್ನ ಅಜ್ಞಾನವನ್ನೂ ದುಃಖವನ್ನೂ ಬಿಡು! ಎಲೈ ವಾಲಿಯೆ, ಬ್ರಹ್ಮಲಿಖಿತವನ್ನು ಮೀರುವದಕ್ಕೆ ಶಕ್ಯವಲ್ಲ; ನಿನ್ನ ಕುಮಾರನಾದ ಅಂಗದನನ್ನು ನೀನು ಕಂಡುಕೊಂಡಿದ್ದ ಮರ್ಯಾದೆಯಲ್ಲಿಯೇ ನಾವೂ ಕಂಡುಕೊಂಡಿರುವೆವು; ಈ ಅರ್ಥದಲ್ಲಿ ಸಂಶಯವಿಲ್ಲ!" ಎಂದು ನುಡಿದನು.

ಧರ್ಮಮಾರ್ಗ ಪ್ರವರ್ತಕನಾಗಿ ಮಹಾತ್ಮನಾದ ಶ್ರೀರಾಮನ ಹಿತವಚನಗಳನ್ನು ಕೇಳಿ ವಾಲಿಯು ಆತನನ್ನು ಕುರಿತು "ಎಲೈ ಶ್ರೀರಾಮನೆ, ನೀನು ದೇವೇಂದ್ರನಂತೆ ಅತಿ ಭಯಂಕರವಾದ ಪರಾಕ್ರಮವುಳ್ಳವನು; ಅಂಥಾ ನಿನ್ನ ಬಾಣದಿಂದ ಘಾಯಪಟ್ಟು ಬಿದ್ದು ದುಃಖದಿಂದ ನಿನ್ನನ್ನು ನಿಷ್ಠುರವಾಗಿ ನುಡಿದೆನು; ನನ್ನ ವಾಕ್ಯದಲ್ಲಿ ಯಾವ ದೋಷವಿದ್ದರೂ ಕ್ಷಮಿಸಿ ರಕ್ಷಿಸು" ಎಂದು ನುಡಿದನು.

## ೧೯ ನೇ ಅಧ್ಯಾಯ.

### ತಾರಾದೇವಿಯು ವಧೆಪಟ್ಟ ವಾಲಿಯನ್ನು ನೋಡಿದ್ದು.

ಈ ಮರ್ಯಾದೆಯಲ್ಲಿ ವಾಲಿಯು ಸುಗ್ರೀವನಿಟ್ಟ ಕಲ್ಲುಗಳಿಂದಲೂ ಮರಗಳಿಂದಲೂ ಘಾಯಪಡೆದು ಶ್ರೀರಾಮನು ಪ್ರಯೋಗಿಸಿದ ಬಾಣದಿಂದ ಮುರಿದು ಬಿದ್ದ ವೃತ್ತಾಂತವನ್ನು ಕೇಳಿ ತಾರಾದೇವಿಯು ತನ್ನ ಅರಮನೆಯಿಂದ ಹೊರಟಳು; ಆಗ ಕಿಷ್ಕಿಂಧಾಪಟ್ಟಣದಲ್ಲಿದ್ದ ಕಪಿನಾಯಕರು ರಣರಂಗದಲ್ಲಿದ್ದ ವಾಲಿಯು ರಾಮಬಾಣದಿಂದ ಘಾಯಪಡೆದು ಬಿದ್ದನೆಂಬ ಜನಜನಿತವಾದ ವಾರ್ತೆಯನ್ನು ಕೇಳಿ ನಾನಾದಿಕ್ಕುಗಳಲ್ಲಿಯೂ ಓಡುತ್ತಿದ್ದರು; ತಾರಾದೇವಿಯು ಅವರನ್ನು ಕುರಿತು "ಎಲೈ ಕಪಿನಾಯಕರುಗಳಿರಾ, ನಿಮ್ಮ ಒಡೆಯನಾದ ಅಂಗದಕುಮಾರನನ್ನು ಬಿಟ್ಟು ಓಡಬಹುದೇ! ಸುಗ್ರೀವನು ತನಗೆ ಶತ್ರುವಾದ ವಾಲಿಯನ್ನು ಶ್ರೀರಾಮನಿಂದ ಕೊಲ್ಲಿಸಿದನಲ್ಲದೆ ನಿಮಗೇನುಮಾಡಿದನು! ಆತನಿಂದ ನಿಮಗೆ ಭಯವೇನು" ಎಂದು ನುಡಿದಳು.

ಆ ಮಾತನ್ನು ಕೇಳಿ ಕಾಮರೂಪಿಗಳಾದ ಆ ಕಪಿನಾಯಕರು ಕಾಲೋಚಿತವಾಗಿ ಹಿತವಾದ ಮಾತುಗಳಿಂದ ಆ ದೇವಿಯನ್ನು ಕುರಿತು "ಎಲೈ ತಾರಾದೇವಿಯೆ, ನೀನು ಬುದ್ಧಿವಂತಳಾದರೆ ನಿನ್ನ ಕುಮಾರನಾದ ಅಂಗದನನ್ನು ರಕ್ಷಿಸಿಕೊಂಡಿರು; ಸಾಕ್ಷಾತ್ ಯಮನೇ ಶ್ರೀರಾಮನ ರೂಪದಿಂದಬಂದು ವಾಲಿಯನ್ನು ಕೊಂದನು; ವಾಲಿಯು ಸುಗ್ರೀವನಕೂಡೆ ಯುದ್ಧವನ್ನು ಮಾಡುತ ಅನೇಕ ವೃಕ್ಷಗಳನ್ನೂ ಕಲ್ಲುಗಳನ್ನೂ ಹಾಕುತ್ತಿರುವ ಸಮಯದಲ್ಲಿ ಶ್ರೀರಾಮನು ವಜ್ರಾಯುಧಕ್ಕೆ ಸಮಾನವಾದ ಬಾಣಗಳನ್ನು ಆತನಮೇಲೆ ಪ್ರಯೋಗಿಸಿದನು; ಆದರಿಂದ ವಾಲಿಯು ಘಾಯಪಡೆದು ಬಲವು ಮುರಿದು ಬಿದ್ದನು; ದೇವೇಂದ್ರನಿಗೆ ಪರಾಕ್ರಮದಲ್ಲಿ ಸಮಾನನಾದ ವಾಲಿಯು ಬಿದ್ದಮೇಲೆ ಅಂಗದನನ್ನು ಕರೆದುಕೊಂಡು ನೀನು ಅಲ್ಲಿಗೆ ಹೋಗುವದು ಕಾರ್ಯವಲ್ಲ; ನೀನು ಅಂಗದನನ್ನು ರಕ್ಷಿಸಿಕೊಂಡು ಆತನಿಗೆ ಪಟ್ಟಾಭಿಷೇಕವನ್ನು ಮಾಡು; ಆತನು ತನ್ನ ಸ್ವಸ್ಥಾನದಲ್ಲಿದ್ದರೆ ನಾವೆಲ್ಲರೂ ಸೇವೆಯನ್ನು ಮಾಡಿಕೊಂಡಿರುವೆವು; ಅಲ್ಲದ ಪಕ್ಷದಲ್ಲಿ ಈಗಲೇ ಅಲ್ಲಲ್ಲಿ ಬೆಟ್ಟಗಳನ್ನು ಸೇರಿಕೊಳ್ಳುವೆವು; ನಮ್ಮಲ್ಲಿ ಕೆಲವರು ಕುಟುಂಬಧಾರಿಗಳು; ಕೆಲವರು ಕುಟುಂಬವಿಲ್ಲದವರು; ನಾವು ಶ್ರೀರಾಮನ ಬಲವನ್ನು ಕಂಡೂ ಇಲ್ಲಿರಲು ಅಂಜುತ್ತೇವೆ" ಎಂದು ದೂರದಲ್ಲಿ ನಿಂತುಕೊಂಡು ನುಡಿದರು.

ತಾರಾದೇವಿಯು ಅವರನ್ನು ಕುರಿತು "ಎಲೈ ಕಪಿಗಳಿರಾ, ನನ್ನ ಪ್ರಾಣಕಾಂತನಾದ ವಾಲಿಯು ಹೋದಮೇಲೆ ನನಗೆ ಈ ರಾಜ್ಯದಿಂದಲಾದರೂ ನನ್ನ ಮಗನಾದ ಅಂಗದನಿಂದಲಾದರೂ ಏನು ಕಾರ್ಯವು! ಕಡೆಗೆ ನನ್ನ ಶರೀರವಿದ್ದುತಾನೇನು ಪ್ರಯೋಜನವು! ರಾಮಬಾಣದಿಂದ ಘಾಯಪಡೆದುಬಿದ್ದ ವಾಲಿಯ ಸಮೀಪಕ್ಕೆಹೋಗಿ ಆತನ ಪಾದಗಳಮೇಲೆ ಬೀಳುವೆನು" ಎಂದು ನುಡಿದು ಅತ್ಯಂತ ದುಃಖಾಕ್ರಾಂತಳಾಗಿ ಕೈಗಳಿಂದ ಎದೆಯನ್ನೂ ಮುಖವನ್ನೂ ಚಚ್ಚಿಕೊಳ್ಳುತ ಅತಿವೇಗದಿಂದಹೋಗಿ ಯುದ್ಧರಂಗದಲ್ಲಿ ಹಿಮ್ಮೆಟ್ಟದವನಾಗಿ ದಾನವರನ್ನು ಸಂಹರಿಸಿದವನಾಗಿ ದೇವೇಂದ್ರನು ವಜ್ರಾಯುಧದ ಪೆಟ್ಟಿನಿಂದ ಸಮಸ್ತ ಪರ್ವತಗಳನ್ನೂ ಚೂರ್ಣಮಾಡುವಂತೆ ತನ್ನ ಮುಷ್ಟಿಯ ಪೆಟ್ಟಿನಿಂದ ಸಮಸ್ತ ಶತ್ರುಗಳನ್ನೂ ಜರ್ಝರಿತಮಾಡಿದವನಾಗಿ ಬಿರುಘಾಳಿಯಿಂದ ಮೇಘವು ಗುಡುಗುವಂತೆ ಆರ್ಭಟಿಸುತಿದ್ದವನಾದ ವಾಲಿಯು ಮಾಂಸಾಪೇಕ್ಷೆಯುಳ್ಳ ಶಾರ್ದೂಲ ಮೃಗದಿಂದ ಹತವಾದ ಸಿಂಹರಾಜನಂತೆ ಮಹಾ

ಬಲಪರಾಕ್ರಮಿಯಾದ ಶ್ರೀರಾಮನ ಬಾಣದಿಂದ ಘಾಯಪಡೆದು ಪೂರ್ವದಲ್ಲಿ ಗರುತ್ಮಂತನು ಸ್ವರ್ಗಲೋಕಕ್ಕೆ ಹೋಗಿ ದೇವೇಂದ್ರನ ಬೊಕ್ಕಸದಲ್ಲಿದ್ದ ಸಮಸ್ತ ದೇವತೆಗಳಿಗೂ ಸೇವಿಸಲು ಯೋಗ್ಯವಾದ ಅಮೃತಕಲಶವನ್ನು ತೆಗೆದುಕೊಂಡು ಬರಲು ಅಮೃತವಿಲ್ಲದ ಆ ಬೊಕ್ಕಸವು ಹ್ಯಾಗೆ ಭಯಂಕರವಾಗಿ ಅಮಾಂಗಲ್ಯವಾಗಿತ್ತೋ ಆ ಮರ್ಯಾದೆಯಲ್ಲಿ ಅತ್ಯಂತ ಅಮಾಂಗಲ್ಯನಾಗಿ ಅತಿ ಭಯಂಕರನಾಗಿದ್ದದ್ದನ್ನು ಕಂಡು ಬಿಲ್ಲುಬಾಣಗಳನ್ನು ಧರಿಸಿಕೊಂಡಿದ್ದ ರಾಮಲಕ್ಷ್ಮಣರನ್ನೂ ಸುಗ್ರೀವನನ್ನೂ ಲೆಕ್ಕಿಸದೆ ತನ್ನ ಪತಿಯ ಸಮೀಪದಲ್ಲಿ ಮೂರ್ಛೆಗೈದು ಬಿದ್ದು ಸ್ವಲ್ಪಹೊತ್ತಿಗೆ ಚೇತರಿಸಿಕೊಂಡೆದ್ದು ಯಮಪಾಶಗಳಿಂದ ಬದ್ಧನಾಗಿ ಬಿದ್ದಿದ್ದ ವಾಲಿಯನ್ನು ನೋಡಿ ಹಂಬಲಿಸಿ ರೋದನ ಮಾಡುತಿದ್ದಳು. ಅದನ್ನು ಕಂಡು ಸುಗ್ರೀವನೂ ಅತ್ಯಂತ ಶೋಕಪಡುತ್ತಿದ್ದನು.

---

## ೨೦ನೇ ಅಧ್ಯಾಯ.

## ತಾರಾದೇವಿಯು ಹಂಬಲಿಸಿದ್ದು.

ಎಲೈ ಕುಶಲವರುಗಳಿರಾ, ಬಿರುಘಾಳಿಯಿಂದ ಬೇರುಸಹಿತವಾಗಿ ಬಿದ್ದ ವೃಕ್ಷದಂತೆ ರಾಮಬಾಣದಿಂದ ರಣರಂಗದಲ್ಲಿ ಬಿದ್ದಿದ್ದ ವಾಲಿಯನ್ನು ಕಂಡು ತಾರಾದೇವಿಯು ಅತ್ಯಂತ ದುಃಖಾಕ್ರಾಂತೆಯಾಗಿ ರೋದನಮಾಡುತ ಹಂಬಲಿಸುತ " ಎಲೈ ಪ್ರಾಣಕಾಂತನೆ, ನಿನ್ನ ಮುಂದುಗಡೆಯಲ್ಲಿರುವ ನನ್ನಕೂಡೆ ಯಾಕೆ ಮಾತನಾಡದಿದ್ದೀ! ನಿನ್ನಂಥಾ ಧೊರೆಗಳು ಹೀಗೆ ಭೂಶಯನಮಾಡುವದುಚಿತವೆ! ಮಂಚದಮೇಲೆ ಮಲಗು ಬಾ! ಕಟಕಟಾ—ನಿನಗೆ ಈ ಭೂದೇವಿಯು ನನಗಿಂತಲು ಅತಿ ಪ್ರಿಯಳೇ!—ಪ್ರಾಣಹೋಗುವ ಸಮಯದಲ್ಲಿ ನಿನ್ನ ಪ್ರಿಯಳಾದ ನನ್ನನ್ನು ಬಿಟ್ಟು ಭೂದೇವಿಯನ್ನು ಬಿಡದೆ ಆಕೆಯಮೇಲೆ ಕೈನೀಡಿಕೊಂಡು ಮಲಗಿದ್ದೀ! ಕಟಕಟಾ—ಈ ಮರ್ಯಾದೆಯಲ್ಲಿ ಘಾಯಪಡೆದು ಬಿದ್ದಿರುವ ನಿನ್ನನ್ನು ಕಂಡು ನನ್ನ ಎದೆಯು ಅನೇಕಭಾಗಗಳಾಗಿ ಒಡೆಯದಿರುವದರಿಂದ ಅದು ಕಲ್ಲೆದೆಯಾಗಿರಬೇಕು! ಎಲೈ ಪ್ರಾಣಕಾಂತನೆ, ಧರ್ಮಮಾರ್ಗಪ್ರವರ್ತಕನಾದ ನಿನಗೆ ನೀನು ಮಾಡಿದ ಧರ್ಮದಿಂದ ಕಿಷ್ಕಿಂಧಾಪಟ್ಟಣವು ಮೀರಿ ಸ್ವರ್ಗಲೋಕವು ಪ್ರಾಪ್ತವಾದ್ದರಿಂದ ಕಿಷ್ಕಿಂಧಾಪಟ್ಟಣದ ವಿಚಾರಣೆಯನ್ನು ಬಿಟ್ಟು ಸ್ವಸ್ಥವಾಗಿ ಮಲಗಿದ್ದೀಯೊ! ನಿನ್ನನ್ನು ಕೂಡಿದ್ದಾಗ ಅತ್ಯಂತ ಪರಿಮಳ ಪುಷ್ಪಗಳುಳ್ಳ ಉದ್ಯಾನವನಗಳಲ್ಲಿ ಅನುಭವಿಸಿಕೊಂಡಿದ್ದ ಭೋಗಗಳು ಈಗ ತೀರಿತೇ! ನಾನು ನಿರಾಶೆಯಿಂದ ಸಂತೋಷಗುಂದಿ ಶೋಕವೆಂಬ ಸಮುದ್ರದಲ್ಲಿ ಮುಳುಗಿದೆನು! ಎಲೈ ಪ್ರಾಣಕಾಂತನೆ, ನೀನು ಸುಗ್ರೀವನ ಸ್ತ್ರೀಯನ್ನು ಅಪಹರಿಸಲು ಆತನು ನಿನ್ನನ್ನು ಈ ಭೂಲೋಕದಿಂದ ಹೊರಡಿಸಿದನು! ಈ ವಿಪತ್ತನ್ನು ನೀನೇ ತಂದುಕೊಂಡೆ! ನಿನ್ನಿಂದ ಶ್ರೇಯಸ್ಸನ್ನು ಪಡೆಯಬೇಕೆಂದಿದ್ದ ನಾನು ಇಂದಿಗೆ ಅಯೋಗ್ಯಳಾದೆನು! ಎಲೈ ಪ್ರಾಣಕಾಂತನೆ, ನಾನು ಯಾವಾಗಲೂ ನಿನಗೆ ಹಿತವನ್ನೇ ಬಯಸಿ ನಿನಗೆ ಹಿತವಾದ ಮಾತುಗಳನ್ನೇ ಆಡುತಿದ್ದೆನು!——ಎಲೈ ಪ್ರಾಣಕಾಂತನೆ, ನಿನ್ನ ಸೌಂದರ್ಯವನ್ನೂ ನಿನ್ನ ರೂಪವನ್ನೂ ನೋಡಿ ತೆಂಕಣರಾಜ್ಯದ ಸ್ತ್ರೀಯರು ಅಪ್ಸರಸ್ತ್ರೀಯರು ಮೊದಲಾದ ಸ್ತ್ರೀಯರು ನಿನಗೆ ಮನಸೋಲುತಿದ್ದರು! ಕಟಕಟಾ—ನೀನು ನನ್ನ ಮಾತನ್ನು ಕೇಳದೆ ಸುಗ್ರೀವನ ವಶಕ್ಕೆ ಒಂದು ಸಿಕ್ಕಿದಾಗಲೆ ನಿನಗೆ ಕಡೇಕಾಲವಾಯಿತೆಂದು ತಿಳಿದೆನು; ಒಂದು ದಿನದಲ್ಲಾದರೂ ದುಃಖವನ್ನು ಕಾಣದಿದ್ದ ನಾನು ಅನೇಕ ದುಃಖಗಳಿಗೆ ಆವಾಸಸ್ಥಾನವಾದ ವೈಧವ್ಯವನ್ನು ಪಡೆದು ದಿಕ್ಕಿಲ್ಲದವಳಂತೆ ಕಾರ್ಪಣ್ಯವೃತ್ತಿಗೊಳಗಾದೆನು! ನಿನ್ನಿಂದ ಅತ್ಯಾಗಿ ಲಾಲಿಸಿ ರಕ್ಷಿಸಲ್ಪಟ್ಟ ಅಂಗದಕುಮಾರನು ಮೊದಲೆಂದೂ ದುಃಖವನ್ನು ಕಾಣದವನು; ಈಗ ತನ್ನ ಚಿಕ್ಕಪ್ಪನಾದ ಸುಗ್ರೀವನು ಕೋಪಿಸಿದರೆ ಹ್ಯಾಗೆ ಸಹಿಸುವನು! ಎಲೈ ಪ್ರಾಣಕಾಂತನೆ, ನಿನ್ನ ಕುಮಾರನಾದ ಅಂಗದನಕೂಡೆ ಸುಗ್ರೀವನ ಸೇವೆಯನ್ನು ಮಾಡಿಕೊಂಡಿರಬೇಕೆಂದು ಸಂತವಿಡು! ಎಲೈ ಪ್ರಾಣಕಾಂತನೆ, ನೀನು ಗ್ರಾಮಾಂತರಕ್ಕೆ ಪ್ರಯಾಣವಾಗಿ ಹೊರಡುತಿದ್ದಾಗ ಅಂಗದನು ಅಭಿವಂದಿಸಿದರೆ ಆತನ ಬ್ರಹ್ಮರಂಧ್ರವನ್ನು ಆಘ್ರಾಣಿಸಿ ಆಶೀರ್ವಾದ

ಮಾಡಿ ಕಳುಹಿಸುತಿದ್ದೆ! ಕಟಕಟಾ! ಶ್ರೀರಾಮನು ನಿನ್ನನ್ನು ಕೊಂದು ಮಹಾ ಅಕೃತ್ಯವನ್ನು ಮಾಡಿದನು; ಸುಗ್ರೀವನಿಗೆ ನಂಬಿಕೆಯನ್ನು ಕೊಟ್ಟು ಆತನ ಕಾರ್ಯವನ್ನು ಸಾಧಿಸಿ ಆತನ ಋಣವನ್ನು ತೀರಿಸಿಕೊಂಡನು—ಎಲೈ ಸುಗ್ರೀವನೆ, ನಿನ್ನ ಮನೋರಥವು ಸಂತಲ್ಲ! ನಿನ್ನ ಸ್ತ್ರೀಯಾದ ರುಮೆಯನ್ನು ಸಾಧಿಸಿಕೊಂಡೆಯಲ್ಲ! ನಿನ್ನ ಶತ್ರುವಾದ ನಿನ್ನ ಅಣ್ಣನನ್ನು ಕೊಂದದ್ದರಿಂದ ಇನ್ನುಮೇಲೆ ನೀನು ಮನಸ್ಸಿನ ಕಾಗೆಡಿಕೆಯನ್ನು ಬಿಟ್ಟು ರಾಜ್ಯ ಭೋಗವನ್ನನುಭವಿಸು!——ಎಲೈ ಪ್ರಾಣಕಾಂತನಾದ ವಾಲಿಯೆ, ಈ ಮರ್ಯಾದೆಯಲ್ಲಿ ಹಂಬಲಿಸುವ ನನ್ನನ್ನು ಯಾವಕಾರಣ ಮಾತನಾಡಿಸದಿದ್ದೀ! ಇಗೋ ನಿನ್ನ ಸ್ತ್ರೀಯರೆಲ್ಲರು ಬಂದಿದ್ದಾರೆ! ಇವರನ್ನು ಯಾವಕಾರಣ ಕಣ್ಣುತೆರೆದು ನೋಡದಿದ್ದೀ!" ಎಂದು ಹಂಬಲಿಸುತ್ತಿದ್ದಳು.

ಆಗ ತಾರಾದೇವಿಯ ಹಂಬಲಿಕೆಯನ್ನು ಕೇಳಿ ವಾನರಸ್ತ್ರೀಯರೆಲ್ಲರೂ ಅತ್ಯಂತ ದುಃಖಾಕ್ರಾಂತೆಯರಾಗಿ ಅಂಗದಕುಮಾರನನ್ನು ತಬ್ಬಿಕೊಂಡು ರೋದನಮಾಡುತಿದ್ದರು; ಮತ್ತೂ ತಾರಾದೇವಿಯು ತನ್ನ ಪತಿಯಾದ ವಾಲಿಯನ್ನು ನೋಡುತ "ಎಲೈ ಪ್ರಾಣಕಾಂತನೆ, ಅಂಗದಕುಮಾರನನ್ನು ಬಿಟ್ಟು ನೀನು ಯಾವಕಾರಣ ದೂರಯಾತ್ರೆ ಹೊರಟೆ! ಎಲೈ ವಾಲಿಯೆ, ನೀನು ನಿನ್ನ ಮಗನಲ್ಲಿ ಅತ್ಯಂತ ವ್ಯಾಮೋಹವುಳ್ಳವನು; ಸದ್ಗುಣಸಂಪನ್ನನಾದ ಈ ಮಗನನ್ನು ಬಿಟ್ಟುಹೋಗುವದು ನಿನಗುಚಿತವೆ! ನಿನಗೆ ಅಂಗದಕುಮಾರನಾದರೂ ನಾನಾದರೂ ಮಾಡಿದ ಅಪರಾಧವೇನು! ನನ್ನನ್ನೂ ಈ ಕುಮಾರನನ್ನೂ ಬಿಟ್ಟು ಯಾಕೆ ದೀರ್ಘಯಾತ್ರೆ ಹೊರಟೆ! ಎಲೈ ಪ್ರಾಣಕಾಂತನೆ, ನಾನು ನಿನಗೆ ಮಾಡಿದ ಅಪರಾಧವೇನಿದ್ದರು ಮನ್ನಿಸಬೇಕೆಂದು ನಿನ್ನ ಪಾದಗಳಿಗಭಿವಂದಿಸಿ ಬೇಡಿಕೊಳ್ಳುತ್ತೇನೆ" ಎಂದು ಅತಿ ದೈನ್ಯದಿಂದ ಹಂಬಲಿಸುತ ಉಳಿದ ವಾನರಸ್ತ್ರೀಯರನ್ನು ಕರೆಯುತ ವಾಲಿಯ ಸಮೀಪದಲ್ಲೇ ಶರೀರವನ್ನು ಬಿಡಬೇಕೆಂದು ನಿಶ್ಚಯಿಸಿಕೊಂಡಿದ್ದಳು.

## ೨೧ನೇ ಅಧ್ಯಾಯ.

### ಹನುಮಂತನು ತಾರಾದೇವಿಗೆ ಸಮಾಧಾನ ಹೇಳಿದ್ದು.

ಆ ಸಮಯದಲ್ಲಿ ಕಪಿನಾಯಕನಾದ ಹನುಮಂತನು ನಕ್ಷತ್ರಲೋಕದಲ್ಲಿದ್ದು ಭೋಗಾದೃಷ್ಟವು ತೀರಲು ಭೂಲೋಕಕ್ಕೆ ಬಿದ್ದ ನಕ್ಷತ್ರವೋ ಎಂಬಂತೆ ಬಿದ್ದಿದ್ದ ತಾರಾದೇವಿಯನ್ನು ಕುರಿತು ಸಂತವಿಟ್ಟು ಆಕೆಯ ಕೂಡೆ "ಎಲೌ ತಾರಾದೇವಿಯೆ, ಲೋಕದಲ್ಲಿ ಮನುಷ್ಯರು ತಾವು ಮಾಡಿದ ಪುಣ್ಯಪಾಪ ಕರ್ಮಗಳಿಂದ ಸುಖದುಃಖಗಳನ್ನು ಶೀಘ್ರದಲ್ಲೇ ಅನುಭವಿಸುವರು; ಯಾವಾಗಲು ನಿತ್ಯವಾದ ಪರಮಾತ್ಮನನ್ನು ಕುರಿತು ಶೋಕಮಾಡುವದುಚಿತವಲ್ಲ; ಜೀವಾತ್ಮನು ಅನಿತ್ಯವಾದದ್ದರಿಂದ ಅದನ್ನು ಕುರಿತೂ ಶೋಕಮಾಡಬಾರದು; ನೀನು ವ್ಯರ್ಥವಾಗಿ ದೈನ್ಯಬಟ್ಟು ಅನಿತ್ಯವಾದ ಈ ಶರೀರದಲ್ಲಿ ಪ್ರೀತಿಯಿಡಬಹುದೇ! ನೀರುಬೊಬ್ಬೆಯಂತಿರುವ ಅನಿತ್ಯವಾದ ಶರೀರದಲ್ಲಿ ಯಾರನ್ನು ಕುರಿತು ಯಾರು ಶೋಕಮಾಡುವರು! ಅಂಗದಕುಮಾರನನ್ನು ನೋಡಿ ಸಮಸ್ತ ದುಃಖಗಳನ್ನೂ ಬಿಟ್ಟು ಆತನಿಗೆ ಮುಂದೆ ಶ್ರೇಯಸ್ಸಾಗುವ ಕಾರ್ಯವನ್ನು ಮಾಡು; ಪ್ರಾಣಿಗಳು ನಿತ್ಯವಲ್ಲವಾದಕಾರಣ ಬಲ್ಲವರು ಶುಭಕಾರ್ಯವನ್ನೇ ನೆನೆಯಬೇಕಲ್ಲದೆ ಅಶುಭಕಾರ್ಯಗಳನ್ನು ಚಿಂತಿಸಬಾರದೆಂಬ ಲೌಕಿಕವಾರ್ತೆಯುಂಟು; ಯಾವನೊಬ್ಬನ ವಶವರ್ತಿಗಳಾಗಿ ಇಪ್ಪತ್ತುಲಕ್ಷ ಕಪಿಗಳು ಆತನು ಹೇಳಿದಂತೆ ಕೇಳಿಕೊಂಡಿದ್ದರೋ ಅಂಥಾ ವಾಲಿಯು ಶ್ರೀರಾಮನ ಒಂದೇ ಬಾಣದಿಂದ ಘಾಯಪಡೆದು ಲೋಕಾಂತರವನ್ನೈದಿದನು; ವಾಲಿಯು ನ್ಯಾಯಶಾಸ್ತ್ರೋಕ್ತ ಪ್ರಕಾರದಲ್ಲಿ ಸಾಮ ದಾನ ಭೇದ ದಂಡಗಳೆಂಬ ಚತುರೋಪಾಯಗಳಲ್ಲಿ ಪ್ರವೀಣನಾಗಿ ಧರ್ಮದಿಂದ ಕ್ಷಮಾಪರನಾಗಿ ರಾಜ್ಯಪರಿಪಾಲನಮಾಡಿದವನಾದರೆ ಆತನನ್ನು ಕುರಿತು ದುಃಖಪಡಬೇಕು; ಆತನು ಹಾಗೆ ಮಾಡಲಿಲ್ಲ! ಎಲೌ ತಾರಾದೇವಿಯೇ, ನಿನ್ನ ಕುಮಾರನಾದ ಅಂಗದನಿಗೆ ರಾಜ್ಯಾಧಿಪತ್ಯವನ್ನು ಕೊಟ್ಟು ಸಮಸ್ತ ಕಪಿನಾಯಕರನ್ನೂ ಆತನ ವಶಮಾಡುವ

ದು ನಿನ್ನ ಭಾರವು; ವಾಲಿಯನ್ನು ಸೇರಿದ್ದ ಕಪಿನಾಯಕರನ್ನು ಸಂತವಿಟ್ಟು ಒಡೆಯನಿಲ್ಲದ ರಾಜ್ಯಕ್ಕೆ ನಿನ್ನ ಮಗನಾದ ಅಂಗದನನ್ನು ಒಡೆಯನಾಗಿ ಮಾಡಿ ಮುಂದೆ ನಿನ್ನ ವಂಶವು ಪಾರಂಪರೆಯಾಗಿ ನಡೆಯುವ ಮರ್ಯಾದೆಯಲ್ಲಿ ಯತ್ನಮಾಡು; ಈಗ ಕಾಲೋಚಿತವಾದ ಕಾರ್ಯವು ವಾಲಿಗೆ ಸಂಸ್ಕಾರಮಾಡಬೇಕಾದದ್ದು; ಆಮೇಲೆ ಅಂಗದನಿಗೆ ಪಟ್ಟವನ್ನು ಕಟ್ಟಿ ಆತನು ಸಿಂಹಾಸನದಮೇಲೆ ಕುಳಿತಿರುವದನ್ನು ನೋಡಿ ನಿನ್ನ ಮನಸ್ಸಿನ ದುಃಖವನ್ನು ಕಳೆದುಕೋ’’ ಎಂದು ನುಡಿದನು.

ಆ ಮಾತನ್ನು ಕೇಳಿ ತಾರಾದೇವಿಯು ಪತಿವಿಯೋಗದುಃಖದಿಂದ ಕಂಗೆಟ್ಟು ಹನುಮಂತನನ್ನು ಕುರಿತು “ಎಲೈ ಹನುಮಂತನೆ, ನನಗೆ ಅಂಗದ ಕುಮಾರರಂಥಾ ಕುಮಾರರು ನೂರುಮಂದಿಯಿದ್ದರೂ ಘಾಯಪಡೆದು ಬಿದ್ದಿರುವ ಈ ನನ್ನ ಪತಿಯ ಶರೀರವನ್ನು ತಬ್ಬಿಕೊಂಡಿರುವ ಸುಖಕ್ಕೆ ಸರಿಬಾರದು; ನಾನು ಈ ರಾಜ್ಯವನ್ನು ಬಯಸುವವಳಲ್ಲ; ಅಂಗದನನ್ನು ಬಯಸುವವಳಲ್ಲ; ಮುಂದಣ ಕಾರ್ಯವನ್ನು ಅಂಗದನ ಚಿಕ್ಕಪ್ಪನಾದ ಸುಗ್ರೀವನು ವಿಚಾರಿಸಿಕೊಳ್ಳಲಿ! ಎಲೈ ಹನುಮಂತನೆ, ನಾನು ಅಂಗದನಿಗೆ ರಾಜ್ಯಾಧಿಪತ್ಯವಾಗಬೇಕೆಂದು ಬಯಸುವವಳಲ್ಲ; ಮಗನಿಗೆ ತಂದೆಯೇ ಗತಿಯಲ್ಲದೆ ತಾಯಲ್ಲ! ನನಗೆ ಕಪಿನಾಯಕನಾದ ವಾಲಿಯೆ ಗತಿಯಲ್ಲದೆ ಮತ್ತೊಬ್ಬನು ಗತಿಯಲ್ಲ; ರಣರಂಗದಲ್ಲಿ ಹಿಮ್ಮೆಟ್ಟದೆ ಯುದ್ಧಮಾಡಿ ಘಾಯಪಡೆದು ರಣಭೂಮಿಯಲ್ಲಿ ಶಯನಮಾಡಿಕೊಂಡಿರುವ ವಾಲಿಯ ಸೇವೆಯನ್ನು ಮಾಡಿಕೊಂಡಿರುವದೆ ನನಗೆ ಯೋಗ್ಯವಲ್ಲದೆ ಮತ್ತೊಂದಲ್ಲ’’ ಎಂದು ನುಡಿದಳು.

## ೨೨ನೇ ಅಧ್ಯಾಯ.

## ವಾಲಿಯ ಮರಣವು.

ಈ ಮರ್ಯಾದೆಯಲ್ಲಿ ತಾರಾದೇವಿಯು ಹಂಬಲಿಸುತ್ತಿರಲು ಕಂಠಗತಪ್ರಾಣವುಳ್ಳ ವಾಲಿಯು ನಿಟ್ಟುಸುರುಬಿಡುತ ಅಂಗದನನ್ನು ಕರೆದು “ಎಲೈ ಅಂಗದನೆ, ನಿನ್ನ ಚಿಕ್ಕಪ್ಪನಾದ ಸುಗ್ರೀವನನ್ನು ನೋಡು’’ ಎಂದು ನುಡಿದು ಸುಗ್ರೀವನನ್ನು ಕರೆದು ಮೆಲ್ಲಗೆ ಆತನನ್ನು ಕುರಿತು “ಎಲೈ ಸುಗ್ರೀವನೆ, ನೀನು ಇನ್ನು ದೋಷಗಳನ್ನೆಣಿಸಬೇಡ; ಮುಂದೇಬರುತಿದ್ದ ಆಪತ್ತು ನನಗೆ ದುರ್ಬುದ್ಧಿಯನ್ನುಂಟುಮಾಡಿತು; ಅದರಿಂದ ನಾನು ಅಜ್ಞಾನವುಳ್ಳವನಾಗಿ ಅಕೃತ್ಯಗಳನ್ನು ಮಾಡಿದೆನು; ನಾನು ಮಾಡಿದ ಅಕೃತ್ಯದಿಂದ ನನಗೂ ನಿನಗೂ ಒಂದೇಬಾರಿ ದುಃಖವುಂಟಾಯಿತು; ಲೋಕದಲ್ಲಿ ಅಣ್ಣ ತಮ್ಮಂದರ ಮಿತ್ರತ್ವವೇ ಸ್ಥಿರವಲ್ಲದೆ ಪರರ ಮಿತ್ರತ್ವವು ಸ್ಥಿರವಲ್ಲ; ನಾನು ಇಂದು ತಾನೆ ಯಮನ ಮಂದಿರವನ್ನೈದಲುಳ್ಳವನು; ನೀನು ಕೂಡ್ಲೇ ರಾಜ್ಯಾಧಿಪತ್ಯವನ್ನು ಕಟ್ಟಿಕೊ; ನಾನು ರಾಜ್ಯಾಧಿಪತ್ಯವನ್ನೂ ಅಪರಿಮಿತವಾದ ಐಶ್ವರ್ಯವನ್ನೂ ಮಹತ್ತಾದ ಕೀರ್ತಿಯನ್ನೂ ನನ್ನ ಜೀವವನ್ನೂ ಬಿಟ್ಟು ಹೋಗುತಿದ್ದೇನೆ; ಇಂಥಾ ಅವಸ್ಥೆಯಲ್ಲಿ ನಾನು ಒಂದು ಮಾತು ಹೇಳುತ್ತೇನೆ; ಆ ಮಾತು ನಿನಗೆ ಕೇಳುವದಕ್ಕೆ ಅಸಹ್ಯವಾಗಿದ್ದರೂ ಹಿತವಾದದ್ದೆಂದೇ ವಿಚಾರಿಸು! ಎಂದೂ ದುಃಖವನ್ನರಿಯದವನಾಗಿ ಬುದ್ಧಿವಂತನಾದ ಅಂಗದ ಕುಮಾರನು ದುಃಖಾತಿಶಯದಿಂದ ಕಣ್ಣೀರುಬಿಡುತ ಕಂಗೆಟ್ಟು ಭೂಮಿಯಲ್ಲಿ ಬಿದ್ದಿದ್ದಾನೆ ನೋಡು; ಈ ಕುಮಾರನು ನನ್ನ ಪ್ರಾಣಗಳಿಗಿಂತಲು ಅಧಿಕವಾದವನು; ನಾನು ಹೋದಮೇಲೆ ಈತನಿಗೆ ಕಂಗೆಡಿಕೆಯಿಲ್ಲದಂತೆ ರಕ್ಷಿಸು; ಈ ಕುಮಾರನಿಗೆ ನೀನೇ ತಂದೆಯು; ನೀನೇ ರಕ್ಷಕನು; ಅಂಗದನು ನಿನಗೆ ಸಮಾನವಾದ ಪರಾಕ್ರಮವುಳ್ಳವನು; ಆದಕಾರಣ ಈತನನ್ನು ವೇಳೆವೇಳೆಗೆ ಅಂಜದಿರುವಹಾಗೆ ಅಭಯವನ್ನು ಕೊಟ್ಟು ರಕ್ಷಿಸಿಕೊಂಡಿರು; ನಿನಗೆ ರಾಕ್ಷಸರೊಡನೆ ಕದನ ಬಂದಲ್ಲಿ ಈತನು ನಿನಗಿಂತಲು ಮೊದಲೇ ಹೋಗಿ ಅವರಕೂಡೆ ಯುದ್ಧಮಾಡುವನು; ಈತನು ಮಹಾ ಬಲವುಳ್ಳವನು; ಮಹಾ ಪರಾಕ್ರಮಿಯು; ರಣರಂಗದಲ್ಲಿ ನಿನ್ನ ಚಿತ್ತಕ್ಕೆ ಸಂತೋಷವುಂಟಾಗುವಂತೆ ಕಾರ್ಯವನ್ನು ಮಾಡುವನು! ತಾರಾದೇವಿಯು ಸುಷೇಣನ ಮಗಳು; ಇವಳು ಸೂಕ್ಷ್ಮವಾದ ಕಾರ್ಯಗಳನ್ನು ನಿಶ್ಚಯಿಸುವದರಲ್ಲಿ ಮಹಾ ನಿಪುಣತೆಯುಳ್ಳವಳು; ದೊಡ್ಡ ಆಪತ್ತು ಬರುವ ಸಮಯದಲ್ಲಿ ಈ ದೇವಿಯು

ಯೋಚನೆಮಾಡಿ ಮಾಡಬೇಕಾದ ಕಾರ್ಯವನ್ನು ನಿಶ್ಚಯಿಸಿ ಹೇಳುವಳು ; ಆ ಕಾರ್ಯವನ್ನು ಮಾಡುವದರಿಂದ ಆ ಆಪತ್ತು ತೊಲಗುವದು ; ಈ ಅರ್ಥದಲ್ಲಿ ಸಂಶಯವಿಲ್ಲ ! ನೀನು ಈ ದೇವಿಯ ವಾಕ್ಯವನ್ನು ಮೀರಬೇಡ ! ಮತ್ತು ನೀನು ಶ್ರೀರಾಮನ ಕಾರ್ಯವನ್ನು ಸಾಧ್ಯಮಾಡಿಕೊಡದಿದ್ದರೆ ನಿನಗೆ ದೋಷವು ಸಂಭವಿಸುವದು ! ಎಲೈ ಸುಗ್ರೀವನೆ, ಪೂರ್ವದಲ್ಲಿ ದೇವೇಂದ್ರನು ನನಗೆ ಕೊಟ್ಟ ಸುವರ್ಣಮಯವಾದ ಕಂಠಮಾಲೆಯನ್ನು ಧರಿಸಿಕೊ ; ಈ ಕಂಠಮಾಲೆಯಲ್ಲಿ ಐಶ್ವರ್ಯವು ಸ್ಥಿರವಾಗಿರುವದು" ಎಂದು ನುಡಿದನು.

ಸುಗ್ರೀವನು ಮನಗರಗಿ ಹರ್ಷಗುಂದಿ ರಾಹುತುಡುಕಿದ ಚಂದ್ರಮಂಡಲದಂತೆ ಕಾಂತಿಹೀನನಾಗಿದ್ದ ವಾಲಿಯ ಮಾತನ್ನು ಮೀರದೆ ಕೋಪಶಾಂತನಾಗಿ ಆ ಕಂಠಮಾಲೆಯನ್ನು ತೆಗೆದುಕೊಂಡನು. ಆ ಬಳಿಕ ವಾಲಿಯು ಪ್ರಾಣಗಳು ಕಂಠಾಂತವಾಗುತ್ತಿರಲು ಅಂಗದನನ್ನು ಕರೆದು "ಎಲೈ ಅಂಗದಕುಮಾರನೆ, ನೀನು ದೇಶಕಾಲಗಳನ್ನರಿತು ಕ್ಷಮೆಯನ್ನು ತಾಳಿ ಸುಖದುಃಖಗಳು ಬಂದಲ್ಲಿ ಹೆಚ್ಚಿ ಕುಂದದೆ ಸುಗ್ರೀವನು ಹೇಳುವಂತೆ ಕೇಳಿಕೊಂಡಿರು ; ನಾನು ರಕ್ಷಿಸಿಕೊಂಡಿದ್ದ ಮರ್ಯಾದೆಯಲ್ಲಿಯೇ ಸುಗ್ರೀವನೂ ನಿನ್ನನ್ನು ರಕ್ಷಿಸಿಕೊಂಡಿರುವನು ; ನೀನು ಬಲ್ಲವರು ನಡೆಯುವ ಮಾರ್ಗದಲ್ಲಿಯೇ ನಡೆ ; ಶತ್ರುಗಳು ಹೇಳಿದಂತೆ ಕೇಳಬೇಡ ! ಎಲೈ ಅಂಗದಕುಮಾರನೆ, ನೀನು ಯಾವಾಗಲು ಸ್ವಾಮಿಕಾರ್ಯಹಿತನಾಗಿ ಮನಸ್ಸಿನಲ್ಲಿ ರೋಷವನ್ನು ತಾಳದೆ ಸುಗ್ರೀವನು ಹೇಳಿದಂತೆ ಕೇಳಿಕೊಂಡಿರು ; ಅರಸುಗಳಲ್ಲಿ ಅತಿ ಸ್ನೇಹವನ್ನು ಮಾಡಬೇಡ ; ಸ್ನೇಹಮಾಡದೆಯೂ ಇರಬೇಡ ; ಅವರಕೂಡೆ ಅತಿ ಸ್ನೇಹವನ್ನು ಮಾಡುವವನೂ ಸ್ನೇಹವನ್ನು ಮಾಡದೆ ಉಪೇಕ್ಷೆಮಾಡುವವನೂ ಕೆಡುವರು ; ಆದಕಾರಣ ನೀನು ಮುಂದಣ ಕಾರ್ಯವನ್ನು ನಿನ್ನ ಆತ್ಮಬುದ್ಧಿಯಿಂದ ತಿಳಿದು ನಡೆದುಕೊಂಡು ಸುಖವಾಗಿರು" ಎಂದು ಕಣ್ಣುಬಾಯಿಗಳನ್ನು ಬಿಡುತ ದಂತಗಳೂ ಭಯಂಕರವಾದ ಕೋರದಾಡೆಗಳೂ ಕಾಣಿಸಿಕೊಳ್ಳಲು ಲೋಕಾಂತರವನ್ನೈದಿದನು. ಅದನ್ನು ನೋಡಿ ಹನುಮಂತನು ಮೊದಲಾದ ಕಪಿಶ್ರೇಷ್ಠರು ಕಣ್ಣೀರುಬಿಟ್ಟು ಶೋಕಪಡುತಿದ್ದರು ; ಕಿಷ್ಕಿಂಧಾಪಟ್ಟಣವು ಶೂನ್ಯವಾಗಿ ತೋರುತಿತ್ತು ; ಉದ್ಯಾನವನಗಳೂ ಆ ಪಟ್ಟಣವನ್ನು ಬಳಸಿದ್ದ ಉಪವನಗಳೂ ಕಪಿಗಳ ಸಂಚಾರವಿಲ್ಲದೆ ಭಯಂಕರವಾಗಿದ್ದವು ! ವಾಲಿಯು ಸ್ವರ್ಗಸ್ಥನಾದಮೇಲೆ ವನದಲ್ಲಿದ್ದ ಪಕ್ಷಿಗಳು ಯಾರಿಗೆ ಭೋಗಯೋಗ್ಯವಾದಾವು ! ಪೂರ್ವದಲ್ಲಿ ವಾಲಿಯು ಗೋವಿಲನೆಂಬ ದಾನವನಕೂಡೆ ಹದಿನೈದುವರುಷಗಳ ಪರ್ಯಂತರ ಹಗಲಿರುಳುಗಳಲ್ಲಿಯೂ ಬಿಡುಗಡೆಯಿಲ್ಲದೆ ಯುದ್ಧಮಾಡಿ ಆತನನ್ನು ಕೊಂದನು ; ಅಂಥಾ ಪರಾಕ್ರಮಿಯಾಗಿ ಕೋರದಾಡೆಗಳಿಂದ ಅತಿ ಭಯಂಕರನಾದ ವಾನರಾಧಿಪತಿಯೂ ರಣರಂಗದಲ್ಲಿ ಬಿದ್ದನು ! ಮಹಾ ಪರಾಕ್ರಮವುಳ್ಳ ಸಿಂಹರಾಜನ ಕೂಡೆ ಯುದ್ಧಮಾಡಿ ಗೋವುಗಳಗಧಿಪತಿಯಾದ ವೃಷಭರಾಜನು ಬಿದ್ದರೆ ಗೋವುಗಳು ಕಂಗೆಡುವಂತೆ ವಾಲಿಯು ಶ್ರೀರಾಮನಿಂದ ಸ್ವರ್ಗಸ್ಥನಾಗಲು ಸಮಸ್ತ ಕಪಿಕುಲದವರೂ ಕಂಗೆಟ್ಟು ರೋದನಮಾಡುತಿದ್ದರು ! ತಾಳು ಕತ್ತರಿಸಲ್ಪಟ್ಟು ಬಿದ್ದ ಮರವನ್ನು ಹಬ್ಬಿಕೊಂಡಿರುವ ಬಳ್ಳಿಯು ಯಾವ ಮರ್ಯಾದೆಯಲ್ಲಿ ಆ ಮರವನ್ನೇ ಹಬ್ಬಿಕೊಂಡು ಬೀಳುವದೋ ಆ ಮರ್ಯಾದೆಯಲ್ಲಿ ಶ್ರೀರಾಮನ ಬಾಣದಿಂದ ಘಾಯಪಡೆದು ಬಿದ್ದ ವಾಲಿಯ ಸಮೀಪದಲ್ಲಿದ್ದ ತಾರಾದೇವಿಯು ಆತನ ಮುಖದಲ್ಲಿ ಮುಖವನ್ನಿಟ್ಟು ಶರೀರವನ್ನು ತಬ್ಬಿಕೊಂಡು ಭೂಮಿಯಮೇಲೆ ಬಿದ್ದು ಹಂಬಲಿಸುತ್ತಿದ್ದಳು.

## ೨೩ನೇ ಅಧ್ಯಾಯ.

### ತಾರಾದೇವಿಯು ಮತ್ತು ಹಂಬಲಿಸಿದ್ದು.

ಆಮೇಲೆ ತಾರಾದೇವಿಯು ರಾಮಬಾಣದಿಂದ ಘಾಯಪಡೆದು ಬಿದ್ದ ವಾಲಿಯ ಮುಖವನ್ನು ಆಘ್ರಾಣಿಸುತ "ಎಲೈ ವಾಲಿಯೆ, ಹರಳು ಕಲ್ಲುಗಳಿಂದ ಇಟ್ಟಣಿಸಿದ ವೀರಶಯನಸ್ಥಾನವಾದ ಈ ರಣಭೂಮಿಯಲ್ಲಿ ಯಾಕೆ ಮಲಗಿದ್ದೀ ! ನನ್ನ ಮಾತನ್ನು ಯಾಕೆ ವಿಚಾರಿಸದಿದ್ದೀ ! ಕಟಕಟಾ—ನಿನಗೆ ಈ ಭೂದೇವಿಯು ನನಗಿಂತಲು ಅತಿ

ಪ್ರಿಯಳಾದವಳೇ! ಅಲ್ಲದಿದ್ದರೆ ನಿನ್ನ ಪ್ರಾಣವು ಹೋಗುವ ಕಾಲದಲ್ಲಿ ನನ್ನನ್ನು ಬಿಟ್ಟು ಭೂದೇವಿಯನ್ನು ಆಲಿಂಗನ ಮಾಡಿಕೊಂಡು ಮಲಗುವೆಯೆ! ಮಹಾ ಪರಾಕ್ರಮಿಯಾದ ನೀನು ಸುಗ್ರೀವನ ವಶವಾಗಿ ಪ್ರಾಣವನ್ನು ಬಿಟ್ಟದ್ದು ದೈವಗತಿಯಲ್ಲದೆ ಮತ್ತೊಂದಲ್ಲ!——ಎಲೈ ಸುಗ್ರೀವನೆ, ನೀನು ಪರಾಕ್ರಮದಲ್ಲಿ ಮಹಾದೊಡ್ಡವನು; ಅತಿಸಾಹಸಿಯು; ಇಂಥಾ ಬಲವಂತನಾದ ನಿನ್ನನ್ನು ಸಮಸ್ತ ಕಪಿನಾಯಕರೂ ಸೇರಿ ಬದುಕಲುಳ್ಳವರು!——ಎಲೈ ವಾಲಿಯೆ, ಇಷ್ಟುಮಂದಿ ಕಪಿನಾಯಕರ ಹಂಬಲಿಕೆಯನ್ನೂ ಅಂಗದನ ರೋದನಧ್ವನಿಯನ್ನೂ ನನ್ನ ಮಾತುಗಳನ್ನೂ ಕೇಳದೆ ನೀನು ಮಲಗಿರಬಹುದೆ! ಮಹಾಪರಾಕ್ರಮಿಗಳಿಗೆ ಶಯನಸ್ಥಳವಾದ ಈ ರಣರಂಗದಲ್ಲಿ ನಿನ್ನಿಂದ ಹತರಾಗಿ ಬಹುಮಂದಿ ಶತ್ರುಗಳು ವೀರಶಯನವನ್ನು ಮಾಡಿದರು; ಅಂಥಾ ವೀರಭೂಮಿಯಲ್ಲಿ ರಾಮಬಾಣದಿಂದ ಹತನಾಗಿ ಈಗ ನೀನೊಬ್ಬನೇ ಶಯನಮಾಡುತಿದ್ದೀ! ರಣಪ್ರಿಯನಾದ ಎಲೈ ವಾಲಿಯೆ, ನೀನು ಸತ್ಪುರುಷರನ್ನು ಸತ್ಕಾರಮಾಡಿದವನು; ಅಂಥವನು ಅನಾಥೆಯಾದ ನನ್ನನ್ನು ಬಿಟ್ಟು ಎಲ್ಲಿಗೆ ಹೋದೆ! ಶೂರನಾದವನಿಗೆ ಹೆಣ್ಣು ಕೊಡಬಾರದೆಂಬ ನೀತಿಯು ನಿನ್ನಲ್ಲಿ ಪ್ರತ್ಯಕ್ಷವಾಯಿತು; ಅತಿಪರಾಕ್ರಮಿಯಾದ ನಿನಗೆ ಪತ್ನಿಯಾದ ನಾನು ವಿಧವೆಯಾದೆನು; ನನ್ನ ಅಭಿಮಾನವೂ ಸ್ಥಿರವಾದ ಐಶ್ವರ್ಯವೂ ಇಂದಿಗೆ ತೊಲಗಿದವು; ಆಳವರಿಯಕೂಡದ್ದಾಗಿ ಅತಿ ವಿಶಾಲವಾದ ಶೋಕವೆಂಬ ಸಮುದ್ರದಲ್ಲಿ ಮುಳುಗಿದೆನು! ನನ್ನ ಪ್ರಾಣಕಾಂತನಾದ ನಿನ್ನ ಮರಣವನ್ನು ಕಂಡೂ ಅನೇಕಭಾಗವಾಗಿ ಒಡೆಯದಿರುವ ನನ್ನ ಎದೆಯು ಕಲ್ಲೆದೆಯಾಗಿರಬೇಕು! ಎಲೈ ವಾಲಿಯೆ, ನಿನಗೆ ನಾನೇ ಪ್ರಿಯಸಖಿಯೂ ನನಗೆ ನೀನೇ ಪ್ರಾಣಕಾಂತನೂ ಆಗಿದ್ದೆವು! ಕಟಕಟಾ—ಅತಿ ಪರಾಕ್ರಮಿಯಾದ ನೀನು ರಣರಂಗದಲ್ಲಿ ಮಡಿದು ಲೋಕಾಂತರವನ್ನೈದಿದೆಯಲ್ಲ! ಲೋಕದಲ್ಲಿ ಮಕ್ಕಳೂ ಐಶ್ವರ್ಯವೂ ಧನಧಾನ್ಯಗಳೂ ಉಳ್ಳವಳಾದರು ಪತಿಯಿಲ್ಲದವಳು ವಿಧವೆಯೆನಿಸಿಕೊಳ್ಳುವಳು! ಎಲೈ ವಾಲಿಯೆ, ಉತ್ತಮವಾಗಿ ಮೃದುವಾದ ಸುಪ್ಪತ್ತಿಗೆಯಮೇಲೆ ಮಲಗಿದ್ದ ನೀನು ಈಗ ರಕ್ತದಿಂದ ನೆನೆಯಲ್ಪಟ್ಟ ಭೂಮಿಯಮೇಲೆ ಹ್ಯಾಗೆ ಮಲಗಿದ್ದೀ! ಎಲೈ ವಾಲಿಯೆ, ಧೂಳುಬೆರೆದು ರಕ್ತಮೊಸಗಿದ ನಿನ್ನ ಶರೀರವನ್ನು ನನ್ನ ಭುಜಗಳಿಂದ ಹ್ಯಾಗೆ ತಬ್ಬಿಕೊಳ್ಳಲೀ! ಸುಗ್ರೀವನು ಶ್ರೀರಾಮನ ಒಂದೇ ಬಾಣದಿಂದ ತನ್ನ ಭಯವನ್ನು ಪರಿಹರಿಸಿಕೊಂಡು ಈ ಭಯಂಕರವಾದ ರಣರಂಗದಲ್ಲಿ ಜಯಸ್ಥನಾಗಿ ಕೃತಾರ್ಥನಾದನು!" ಎಂದು ಹಂಬಲಿಸುತ್ತಿದ್ದಳು.

ಆ ಸಮಯದಲ್ಲಿ ಸುಗ್ರೀವನ ಪ್ರಧಾನನಾದ ನೀಲನು ಪರ್ವತದ ಗುಹೆಯಲ್ಲಿ ಅಡಗಿದ್ದ ಕೃಷ್ಣಸರ್ಪವನ್ನು ಎಳೆದು ತೆಗೆಯುವಂತೆ ವಾಲಿಯ ಶರೀರದಲ್ಲಿ ನೆಟ್ಟಿದ್ದ ರಾಮಬಾಣವನ್ನು ಕೀಳಲು ರಕ್ತದಿಂದ ನೆನೆದ ಆ ರಾಮಬಾಣವು ಅಸ್ತಾಚಲವನ್ನೈದಿದ ಸೂರ್ಯನ ಪ್ರಭೆಯಿಂದ ಒಪ್ಪುತಿತ್ತು! ಆಗ ವಾಲಿಯ ಶರೀರದಿಂದ ಸುರಿಯುತಿದ್ದ ರಕ್ತಧಾರೆಗಳು ಪರ್ವತದ ಗೈರಿಕಾದಿ ಧಾತುಗಳೊಡಗೂಡಿದ ಉದಕಧಾರೆಗಳಂತೆ ಒಪ್ಪುತ್ತಿದ್ದವು! ಹಾಗೆ ರಾಮಬಾಣದಿಂದ ಘಾಯಪಡೆದು ರಕ್ತದಿಂದ ನೆನೆದು ಧೂಳುಮೊಸಗಿದ ವಾಲಿಯ ಶರೀರವನ್ನು ತನ್ನ ಕಣ್ಣೀರಿಂದ ತೊಳೆಯುತ್ತಿದ್ದಳೋ ಎಂಬಂತೆ ತಾರಾದೇವಿಯು ಧಾರಾವರ್ತವಾಗಿ ಕಣ್ಣೀರನ್ನು ಬಿಡುತ ರಣಭೂಮಿಯಲ್ಲಿ ರಕ್ತದಿಂದ ನೆನೆದ ಸರ್ವಾಂಗವುಳ್ಳ ತನ್ನ ಪತಿಯನ್ನು ನೋಡಿ ಅತ್ಯಂತ ದುಃಖಾಕ್ರಾಂತೆಯಾಗಿ ತನ್ನ ಮಗನಾದ ಅಂಗದನನ್ನು ಕುರಿತು "ಎಲೈ ಅಂಗದನೆ, ನಿನ್ನ ತಂದೆಯಾದ ವಾಲಿಯ ಅತಿ ಭಯಂಕರವಾದ ಮರಣಾವಸ್ಥೆಯನ್ನು ನೋಡು; ಅತಿ ಪರಾಕ್ರಮಿಯಾದ ವಾಲಿಯ ಪ್ರಾಣವು ಈ ಪಾಪಿಯಿಂದ ಹೋಯಿತು; ಬಾಲಸೂರ್ಯನಂತೆ ಹೊಳೆಯುತ ಯಮನ ಮಂದಿರಕ್ಕೆ ಹೋಗುತ್ತಿರುವ ನಿನ್ನ ತಂದೆಗೆ ನಮಸ್ಕಾರವನ್ನು ಮಾಡು" ಎಂದು ಹೇಳಿದಳು.

ಅಂಗದನು ತನ್ನ ಕೋಮಲವಾದ ಕೈಗಳಿಂದ ಅಭಿವಂದಿಸಿ "ಎಲೈ ತಂದೆಯೆ, ನಾನು ನಿನಗೆ ಅಭಿವಂದನೆ ಮಾಡಿದರೆ ನೀನು 'ದೀರ್ಘಾಯುಷ್ಮಂತನಾಗಿರು' ಎಂದು ಹರಸುತಿದ್ದೆ; ಈಗ ಯಾಕೆ ನನ್ನ ಕೂಡೆ ಮಾತನಾಡದಿದ್ದೀ!" ಎಂದು ಹಂಬಲಿಸುತಿದ್ದನು.

ಆಗ ತಾರಾದೇವಿಯು ವಾಲಿಯನ್ನು ಕರೆಯುತ "ಎಲೈ ಪ್ರಾಣಕಾಂತನೆ, ವನದಲ್ಲಿರುವ ಸಿಂಹರಾಜನಿಂದ ಅತಿ ಪರಾಕ್ರಮವುಳ್ಳ ವೃಷಭವು ಬಿದ್ದರೆ ಗೋವು ತನ್ನ ಕರುವಿನಸಹಿತವಾಗಿ ಹ್ಯಾಗೆ ಶರೀರವನ್ನು ಬಿಡುವದೋ ಆ ಮರ್ಯಾದೆಯಲ್ಲಿ ಅಂಗದಕುಮಾರನೊಡನೆ ನಾನು ನಿನ್ನ ಸಮೀಪದಲ್ಲಿ ಶರೀರವನ್ನು ಬಿಡುವೆನು! ಎಲೈ ಪ್ರಾಣಕಾಂತನೆ, ನೀನು ಸಂಗ್ರಾಮಯಾಗವನ್ನು ಮಾಡಿ ಅನೇಕ ಆಯುಧಗಳಿಂದ ಹೊರಟ ರಕ್ತಪ್ರವಾಹಗಳೆಂಬ ಅವಭೃತದಲ್ಲಿ ನಿನ್ನ ಪತ್ನಿಯನ್ನು ಬಿಟ್ಟು ಸ್ನಾನಮಾಡಬಹುದೆ! ಎಲೈ ವಾಲಿಯೆ, ಪೂರ್ವದಲ್ಲಿ ನಿನ್ನ ತಂದೆಯಾದ ದೇವೇಂದ್ರನು ನಿನಗೆ ಕೊಟ್ಟ ಸುವರ್ಣ ಕಂಠಮಾಲೆಯು ಏನಾಯಿತು! ಮಹಾಮೇರು ಪರ್ವತವನ್ನು ಪ್ರದಕ್ಷಿಣಮಾಡುವ ಸೂರ್ಯಪ್ರಭೆಯು ಮಹಾಮೇರುಪರ್ವತವನ್ನು ಬೆಂಬಿಡದಿರುವಂತೆ ನೀನು ಪಂಚತ್ವವನ್ನೈದಿಯೂ ರಾಜಚಿಹ್ನವಾದ ನಿನ್ನ ಮುಖಕಾಂತಿಯು ಗುಂದದಿದೆ! ಎಲೈ ಪ್ರಾಣಕಾಂತನೆ, ನೀನು ನನ್ನ ಮಾತನ್ನು ಹಿತವೆಂದು ವಿಚಾರಿಸದೆ ಹೋದ್ದರಿಂದ ನಾನು ನಿನ್ನನ್ನು ತಡೆದು ನಿಲ್ಲಿಸುವದಕ್ಕೆ ಸಮರ್ಥೆಯಲ್ಲದಿದ್ದೆನು; ಈಗ ನೀನು ರಣರಂಗದಲ್ಲಿ ಲೋಕಾಂತರವನ್ನೈದಿದ್ದರಿಂದ ಅಂಗದಕುಮಾರನನ್ನು ಕೂಡಿಕೊಂಡು ನಾನೂ ನಿನ್ನ ಲೋಕವನ್ನೈದಲುಳ್ಳವಳು; ರಾಜ್ಯಲಕ್ಷ್ಮಿಯು ನಿನ್ನ ಕೂಡೆಯೇ ತೊಲಗಿದಳು!" ಎಂದು ಹಂಬಲಿಸುತ್ತಿದ್ದಳು.

## ೨೪ನೇ ಅಧ್ಯಾಯ.

### ಶ್ರೀರಾಮನು ತಾರಾದೇವಿಯನ್ನು ಸಂತವಿಟ್ಟದ್ದು.

ಆವೇಳೆ ಸುಗ್ರೀವನು ಶೋಕವೆಂಬ ಸಮುದ್ರದಲ್ಲಿ ಮುಳುಗಿದ್ದ ತಾರಾದೇವಿಯನ್ನೂ ತನ್ನ ಹಿರೀ ಅಣ್ಣನಾದ ವಾಲಿಯ ವಧೆಯನ್ನೂ ಕಂಡು ಕಂಗೆಟ್ಟು ಕಣ್ಣೀರು ತುಂಬಿ ತನ್ನ ಭೃತ್ಯರನ್ನು ಕೂಡಿಕೊಂಡು ಶ್ರೀರಾಮನ ಸಮೀಪಕ್ಕೆ ಹೋಗಿ ಆತನನ್ನು ಕುರಿತು "ಎಲೈ ಶ್ರೀರಾಮನೆ, ವಾಲಿಯ ಸ್ತ್ರೀಯಾದ ತಾರಾದೇವಿಯು ಶೋಕಪಡುತ್ತಿದ್ದಾಳೆ; ಅಂಗದಕುಮಾರನೂ ದುಃಖಪಡುತ್ತಿದ್ದಾನೆ; ನನಗೆ ರಾಜ್ಯಾಧಿಪತ್ಯದಲ್ಲಿ ಮನಸ್ಸಿಲ್ಲ; ನಾನು ನನ್ನ ದೇಶದಿಂದಲೂ ಕೋಶದಿಂದಲೂ ಹೊರಡಿಸಲ್ಪಟ್ಟದ್ದರಿಂದ ವೈಮರೆತು ವಾಲಿಯ ಕೊಲೆಗೆ ಒಡಂಬಟ್ಟೆನು; ಆತನು ರಣರಂಗದಲ್ಲಿ ಲೋಕಾಂತರವನ್ನೈದಿದಮೇಲೆ ನನ್ನ ಮನಸ್ಸಿಗೆ ಮಹಾ ವ್ಯಥೆಯಾಗುತ್ತಿದೆ; ನನಗೆ ರಾಜ್ಯಾಧಿಪತ್ಯಕ್ಕಿಂತಲೂ ಕಂದಮೂಲ ಫಲಾಹಾರಗಳನ್ನು ಮಾಡಿಕೊಂಡು ಋಷ್ಯಮೂಕಪರ್ವತದಲ್ಲಿರುವದು ಉತ್ತಮವೆಂದು ತೋರುತ್ತದೆ; ವಾಲಿಯು ಹೋದಮೇಲೆ ನನಗೆ ಸ್ವರ್ಗಾಧಿಪತ್ಯವನ್ನು ಮಾಡಿದರೂ ಮನಸ್ಸಿಗೆ ಸಂತೋಷವು ತೋರದು! ಎಲೈ ಶ್ರೀರಾಮನೆ, ಅಂಗದನು ಅಲ್ಲಿರುವವರನ್ನು ಕುರಿತು 'ಶ್ರೀರಾಮನು ನನ್ನನ್ನು ಕೃಪಾದೃಷ್ಟಿಯಿಂದ ನೋಡಿ ಅಭಯವನ್ನು ಕೊಟ್ಟು ಸುಗ್ರೀವನನ್ನು ಕೊಲ್ಲುವದಾಗಿ ನಂಬಿಕೆ ಕೊಟ್ಟು ರಾಜ್ಯಾಧಿಪತ್ಯವನ್ನು ಮಾಡಹೇಳದರೆ ನಾನು ಆತನ ಅಪ್ಪಣೆಯಿಂದ ರಾಜ್ಯಪರಿಪಾಲನವನ್ನು ಮಾಡಿಕೊಂಡಿರುತ್ತೇನೆ' ಎಂದು ನುಡಿಯುತ್ತಿದ್ದಾನೆ; ನಿನಗೆ ಸಮ್ಮತವಾಗಿ ನಿನ್ನ ಕೃಪೆಯಿಂದ ಅಂಗದನಿಗೆ ಅಭಯವನ್ನು ಕೊಟ್ಟೆಯಾದರೆ ಅದು ನನಗೂ ಸಮ್ಮತವು! ಎಲೈ ಶ್ರೀರಾಮನೆ, ನೀನೇ ನನಗೆ ರಕ್ಷಕನು; ನಾನು ನನ್ನ ಹಿರೀ ಅಣ್ಣನಾಗಿ ಮಹಾತ್ಮನಾದ ವಾಲಿಯನ್ನು ಕೊಂದೂ ರಾಜ್ಯಪರಿಪಾಲನವನ್ನು ಮಾಡಿಕೊಂಡಿರುವದಕ್ಕೆ ಹ್ಯಾಗೆ ಒಡಂಬಡಲಿ! ನನಗೆ ಕಿಷ್ಕಿಂಧಾಪಟ್ಟಣವನ್ನು ಪ್ರವೇಶಿಸುವದಕ್ಕೆ ಮನಸ್ಸು ಬರಲಿಲ್ಲ! ಎಲೈ ಶ್ರೀರಾಮನೆ, ನನಗೆ ವಾಲಿಯ ಕೊಲೆಯು ಸಮ್ಮತವಾಗಿ ನನ್ನ ದುರ್ಬುದ್ಧಿಯಿಂದ ಮಾಡಬಾರದ ಕೃತ್ಯಗಳನ್ನು ಮಾಡಿ ದುರಾತ್ಮನಾದೆನೆಂದು ಈಗ ನನ್ನ ಪ್ರಾಣಗಳು ತಲ್ಲಣಿಸುತ್ತಿವೆ; ನಾನು ಕೊಂಬುಮುರಿದ ಮೋಟುಮರದಂತೆ ಚಿಂತೆಗೆ ಪಾತ್ರನಾದೆನು; ನನ್ನ ವಿಜ್ಞಾಪನೆಯನ್ನು ಕೇಳಿ ನನ್ನನ್ನು ರಾಜ್ಯಾಧಿಪತ್ಯದಲ್ಲಿರಿಸಬೇಡ; ವಾಲಿಯು ಸತ್ಪುರುಷನು; ನನಗೆ ಒಡಹುಟ್ಟಿದ ಹಿರೀ ಅಣ್ಣನು; ಧರ್ಮದಿಂದಲೇ ನನ್ನನ್ನು ರಕ್ಷಿಸಿಕೊಂಡು ಬಂದನು; ನಾನು ನನ್ನ ದುರ್ಬುದ್ಧಿಯಿಂದ ನನ್ನ ಕ್ರೋಧವನ್ನೂ ಕಾಮುಕತ್ವವನ್ನೂ ಕಪಿಲಕ್ಷಣವನ್ನೂ ತೋರಿಸಿದೆನು; ದೇವೇಂದ್ರನು ತನ್ನ ಅಣ್ಣನಾದ ತ್ವಷ್ಟೃಬ್ರ

ಹ್ಮನನ್ನು ಕೊಂದು ಅಪರಿಮಿತವಾದ ಪಾಪವನ್ನೈದಿದಂತೆ ನಾನು ಲೋಕದಲ್ಲಿ ಯಾರೂ ಮನಸ್ಸಿನಲ್ಲಾದರೂ ನೆನೆಯಬಾರದ್ದಾಗಿ ಬಯಸುವದಕ್ಕೆ ಯೋಗ್ಯವಲ್ಲದ್ದಾಗಿ ಮಾತಬಾರದ್ದಾಗಿ ಘೋರವಾದ ಪಾಪಕ್ಕೊಳಗಾದೆನು; ಇಂದ್ರನು ಭ್ರಾತೃವಧೆಯನ್ನು ಮಾಡಿ ಆ ಪಾಪವನ್ನು ಕಳೆದುಕೊಳ್ಳಬೇಕೆಂದು ಭೂಲೋಕದಲ್ಲಿ ಆ ಪಾಪವನ್ನು ತಕ್ಕೊಂಡವರಿಗೆ ಬೇಡಿದ ಇಷ್ಟಾರ್ಥವನ್ನು ಕೊಡುವದಾಗಿ ಸಾರಿಸಲು ಭೂಮಿಯೂ ಮರಗಳೂ ಉದಕವೂ ಸ್ತ್ರೀಯರೂ ಆ ಪಾಪವನ್ನು ನಾಲ್ಕುಪಾಲಾಗಿ ಹಂಚಿ ತೆಗೆದುಕೊಂಡು ತಮ್ಮ ತಮ್ಮ ಮನಸ್ಸಿಗೆ ಬೇಕಾದ ಇಷ್ಟಾರ್ಥಗಳನ್ನು ಬೇಡಿಕೊಂಡರು; ಭೂಮಿಯು ತನ್ನಲ್ಲಿ ಅಗದ ಹಳ್ಳವು ಕಾಲಾಂತರದಲ್ಲಿ ತಾನೆ ಮುಚ್ಚಿಕೊಳ್ಳಬೇಕೆಂದೂ ಸ್ತ್ರೀಯರು ಗರ್ಭವು ನಿಂತಮೇಲೆ ಪುರುಷ ಸಂಯೋಗವಾದರೂ ಕರಗದಿರಬೇಕೆಂದೂ ವೃಕ್ಷಗಳು ಕೊಂಬುಗಳು ಕತ್ತರಿಸಲ್ಪಟ್ಟರೂ ತಿರಿಗಿ ಚಿಗರಬೇಕೆಂತಲೂ ನೀರು ಕದಡಲ್ಪಟ್ಟರೂ ತಾನಾಗಿಯೇ ತಿಳಿವುಹೊಂದಬೇಕೆಂತಲೂ ವರಗಳನ್ನು ಬೇಡಿಕೊಳ್ಳಲು ದೇವೇಂದ್ರನ ಬ್ರಹ್ಮಹತ್ಯೆ ದೋಷವು ಸ್ತ್ರೀಯರಲ್ಲಿ ಸೂತಕ ಸ್ವರೂಪವಾಗಿಯೂ ಭೂಮಿಯಲ್ಲಿ ಚೌಳುಮಣ್ಣು ಸ್ವರೂಪವಾಗಿಯೂ ನೀರಿನಲ್ಲಿ ನೊರೆಯುಸ್ವರೂಪವಾಗಿಯೂ ವೃಕ್ಷದಲ್ಲಿ ಹಗಿನುಸ್ವರೂಪವಾಗಿಯೂ ನಿಂತಿದೆ! ಎಲೈ ಶ್ರೀರಾಮನೆ, ದೇವೇಂದ್ರನು ಈ ಮರ್ಯಾದೆಯಲ್ಲಿ ತನ್ನ ಪಾಪವನ್ನು ಕಳೆದುಕೊಂಡನು; ಕಪಿಯಾದ ನನ್ನ ಪಾಪವನ್ನು ಯಾರು ವಹಿಸಿಕೊಳ್ಳುವರು! ನಾನು ಈ ರಾಜ್ಯಾಧಿಪತ್ಯವನ್ನೊಲ್ಲೆನು; ಈ ಪ್ರಜೆಗಳನ್ನು ಸಂತವಿಡಲಾರೆನು; ನಾನು ನನ್ನ ವಂಶವು ಕ್ಷಯವಾಗುವಹಾಗೆ ಲೋಕನಿಂದಿತವಾಗಿ ಕ್ಷುದ್ರಕೃತ್ಯವಾದ ಅಧರ್ಮವನ್ನು ಮಾಡಿದೆನು; ಮಳೆಕಾಲದಲ್ಲಿ ಮೇಘಗಳಿಂದ ಬೀಳುವ ಮಳೇಹನಿಗಳು ಬಂದನ್ನೊಂದು ಕೂಡಿ ಹಳ್ಳಗಳನ್ನು ತುಂಬುತ ತ್ವರೆಯಾದ ಪ್ರವಾಹವಾಗುವಂತೆ ವಾಲಿಯ ವಧೆಯು ನನಗೆ ಹೊತ್ತುಹೊತ್ತಿಗೂ ದುಃಖವನ್ನು ಅಧಿಕವಾಗಿ ಮಾಡುತ್ತಿದೆ; ದುರ್ಬುದ್ಧಿಯೆಂಬ ಬಲವುಳ್ಳದ್ದಾಗಿ ಮನಸ್ತಾಪವೆಂಬ ಮಸ್ತಕ ಕೊಂಬು ಕಣ್ಣುಗಳುಳ್ಳದ್ದಾದ ಪಾಪನೆಂಬ ಮದಸೊಕ್ಕಿದ ಆನೆಯು ನನ್ನ ಮನಸ್ಸೆಂಬ ನದಿಯ ತಡಿಯನ್ನು ಇರಿಯುತ್ತಿದೆ; ಅಗ್ನಿಯಲ್ಲಿ ಹಾಕಿದ ಸುವರ್ಣವು ತನ್ನಲ್ಲಿರುವ ಮಷ್ಟುವರ್ಣಗಳನ್ನು ಬಿಟ್ಟು ಅಗ್ನಿಯ ರೂಪವನ್ನು ಹೊಂದುವಂತೆ ನನ್ನ ಸದ್ವರ್ತನವು ನನ್ನ ಹೃದಯದಲ್ಲಿದ್ದ ದುರ್ಬುದ್ಧಿಯೆಂಬ ಅಗ್ನಿಯಿಂದ ಬೆಂದು ಪಾಪಸ್ವರೂಪವನ್ನು ಹೊಂದಿತು! ಎಲೈ ಶ್ರೀರಾಮನೆ, ನನ್ನಿಂದ ಕಪಿವಂಶವೂ ಅಂಗದನ ಪ್ರಾಣಗಳೂ ಅರ್ಧಹೋಗಿ ಅರ್ಧ ಉಳಿಯಿತೆಂದು ನನ್ನ ಮನಸ್ಸಿನಲ್ಲಿ ತೋರುತ್ತದೆ! ಎಲೈ ಶ್ರೀರಾಮನೆ, ಅಂಗದಕುಮಾರನು ಮಹಾ ಸೌಜನ್ಯಗುಣವುಳ್ಳವನು; ಮಹಾ ಸುಪುತ್ರನು; ಸತ್ಪುರುಷರಿಂದ ಕೊಂಡಾಡಿಕೊಳ್ಳಲು ಯೋಗ್ಯನು; ಆತನಿಗೆ ಸರಿಯಾದವರಿಲ್ಲ; ಮಹಾ ಪರಾಕ್ರಮಿಯಾದ ವಾಲಿಯು ಹೋದಮೇಲೆ ಇನ್ನು ಬಂಟತನವೆತ್ತಣದು! ಎಲೈ ಶ್ರೀರಾಮನೆ, ಅಂಗದಕುಮಾರನು ಜೀವದಿಂದಿದ್ದುಕೊಂಡು ರಾಜ್ಯಪರಿಪಾಲನವನ್ನು ಮಾಡಿಕೊಂಡಿದ್ದರೆ ಆತನನ್ನು ನೋಡಿಕೊಂಡು ತಾರಾದೇವಿಯೂ ಜೀವದಿಂದಿರುವಳು; ಆತನು ಜೀವಿಸದಪಕ್ಷದಲ್ಲಿ ತಾರಾದೇವಿಯು ಜೀವದಿಂದಿರಲಾರಳು; ಈ ಅರ್ಥದಲ್ಲಿ ಸಂಶಯವಿಲ್ಲ! ಎಲೈ ಶ್ರೀರಾಮನೆ, ನಾನು ನನ್ನ ಅಣ್ಣನಲ್ಲಿ ಪ್ರಿಯವುಳ್ಳವನೆಂದು ತಿಳಿಯುವದಕ್ಕಾಗಿಯೂ ಆತನಲ್ಲಿ ನನಗಿದ್ದ ವಿಶ್ವಾಸವನ್ನು ತೋರಿಸುವದಕ್ಕಾಗಿಯೂ ಅಂಗದನಿಗೆ ಪ್ರಿಯವನ್ನುಂಟುಮಾಡುವದಕ್ಕಾಗಿಯೂ ಅಗ್ನಿಪ್ರವೇಶವನ್ನು ಮಾಡಿ ಶರೀರತ್ಯಾಗವನ್ನು ಮಾಡುತ್ತೇನೆ; ಅದಕ್ಕೆ ನೀನು ಸಮ್ಮತಿಸು; ಸೀತಾದೇವಿಯನ್ನರಿಸಿಕೊಂಡು ಬರುವದಾಗಿ ಹೇಳಿದ ನನ್ನ ಪ್ರತಿಜ್ಞೆಯನ್ನು ಹನುಮಂತನು ಮೊದಲಾದ ಕಪಿಶ್ರೇಷ್ಠರು ಪರಿಪಾಲಿಸುವರು; ಅವರು ನಿನ್ನ ಪತ್ನಿಯಾದ ಸೀತಾದೇವಿಯನ್ನು ಹುಡುಕಿ ತಂದುಕೊಡುವರು! ಎಲೈ ಶ್ರೀರಾಮನೆ, ನಾನು ಹೋದರೂ ನಿನ್ನ ಕಾರ್ಯವು ಈ ಕಪಿಶ್ರೇಷ್ಠರಿಂದ ಸಾಧ್ಯವಾಗುವದು; ಕುಲಗೆಡಿಕನಾಗಿ ಪಾಪಿಯಾದ ನಾನು ಈ ಭೂಮಿಯಲ್ಲಿ ಜೀವದಿಂದಿರುವದು ಕಾರ್ಯವಲ್ಲ '' ಎಂದು ದುಃಖಾತಿಶಯದಿಂದ ನುಡಿದನು.

ಆ ಮಾತನ್ನು ಕೇಳಿ ಲೋಕರಕ್ಷಕನಾದ ಶ್ರೀರಾಮನು ಅತ್ಯಂತ ದುಃಖಾಕ್ರಾಂತನಾಗಿ ಬಂದು ಕ್ಷಣಮಾತ್ರವು ಧ್ಯಾನಮಾಡಿ ಭೂಮಿಯನ್ನು ನೋಡುತ ಕಣ್ಣೀರುಬಿಡುತ ಪತಿವಿಯೋಗದಿಂದ ಕಂಗೆಟ್ಟು ರೋದನಮಾಡುತ ತನ್ನ ಪತಿಯ ಶರೀರವನ್ನು ತಬ್ಬಿಕೊಂಡು ಹಂಬಲಿಸುತ್ತಿದ್ದ ತಾರಾದೇವಿಯನ್ನು ಕೃಪಾದೃಷ್ಟಿಯಿಂದ ನೋಡ

ಲು ಹನುಮಂತನು ಮೊದಲಾದ ಕಪಿನಾಯಕರು ಆತನ ಮನೋಭಾವವನ್ನು ತಿಳಿದು ತಾರಾದೇವಿಯನ್ನು ಹಿಡಿದೆಬ್ಬಿಸಿ ಆತನ ಸಮೀಪಕ್ಕೆ ಕರತಂದರು ; ತಾರಾದೇವಿಯು ಬಿಲ್ಲು ಬಾಣಗಳನ್ನು ಧರಿಸಿಕೊಂಡು ತನ್ನ ತನುಕಾಂತಿಯಿಂದ ಸೂರ್ಯನಂತೆ ಬೆಳಗುತ ಲಕ್ಷ್ಮಣಸಮೇತನಾಗಿದ್ದ ಶ್ರೀರಾಮನನ್ನು ಕಂಡು ಆತನ ಪುರುಷಲಕ್ಷಣವನ್ನೂ ಆಕಾರವನ್ನೂ ತೇಜಸ್ಸನ್ನೂ ನೋಡಿ ಆತನು ಶ್ರೀರಾಮನೆಂದು ತಿಳಿದು ಅತಿ ವೇಗದಿಂದ ಶ್ರೀರಾಮನ ಸಮೀಪಕ್ಕೆ ಹೋಗಿ ಅತ್ಯಂತ ಶೋಕಾಕ್ರಾಂತಳಾಗಿ ರಣರಂಗದಲ್ಲಿ ಅಸಹಾಯಶೂರನಾದ ಆ ಸ್ವಾಮಿಯನ್ನು ಕುರಿತು "ಎಲೈ ಶ್ರೀರಾಮನೆ, ಯಾರಿಗೂ ದೃಷ್ಟಿಗೋಚರವಲ್ಲದವನಾಗಿ ಅಪ್ರಮೇಯನಾಗಿ ಜಿತೇಂದ್ರಿಯನಾಗಿ ಧರ್ಮಿಷ್ಠನಾಗಿ ನಿತ್ಯಸ್ವರೂಪನಾಗಿ ಅತಿ ಕೀರ್ತಿವಂತನಾಗಿ ವಿಚಕ್ಷಣನಾಗಿ ಕ್ಷಮೆಯಲ್ಲಿ ಭೂಮಿಗೆ ಸಮಾನನಾಗಿ ಕೆಂಪಾದ ಕಣ್ಣುಗಳುಳ್ಳವನಾಗಿ ಬಿಲ್ಲುಬಾಣಗಳನ್ನು ಧರಿಸಿದ ಮಹಾ ಬಲವಂತನಾಗಿ ಅತ್ಯಂತ ತನುಸೊಬಗುಳ್ಳ ಮನುಷ್ಯಾವತಾರನಾಗಿ ದಿವ್ಯದೇಹವನ್ನು ತಾಳಿದ ಪುರುಷೋತ್ತಮನೆ, ಕಮಲದಳಾಯತಾಕ್ಷನೆ, ನೀನು ನನ್ನ ಪತಿಯಾದ ವಾಲಿಯನ್ನು ಯಾವ ಬಾಣದಿಂದ ಸಂಹರಿಸಿದೆಯೋ ಆ ಬಾಣದಿಂದಲೇ ನನ್ನನ್ನೂ ಕೊಂದರೆ ನಾನು ನನ್ನ ಪತಿಯಾದ ವಾಲಿಯ ಸಮೀಪಕ್ಕೆ ಹೋಗುತ್ತೇನೆ ! ಎಲೈ ಶ್ರೀರಾಮನೆ, ನನ್ನ ಪತಿಯಾದ ವಾಲಿಯು ಸ್ವರ್ಗಲೋಕಕ್ಕೆ ಹೋದರೂ ನನ್ನನ್ನು ಕಾಣದೆ ನಿಲ್ಲಲಾರನು ; ಸ್ವರ್ಗಲೋಕದಲ್ಲಿ ದೇವಸ್ತ್ರೀಯರನ್ನು ಪಡೆದರೂ ನಾನಿಲ್ಲದಿದ್ದರೆ—ಸೀತಾದೇವಿಯ ವಿರಹಶೋಕದಿಂದ ಕಂಗೆಟ್ಟು ನೀನು ಹ್ಯಾಗೆ ಶೋಕಪಡುತ್ತಿದ್ದಿಯೋ ಹಾಗೇ ನನ್ನ ಪತಿಯಾದ ವಾಲಿಯೂ ಶೋಕಪಡುತ್ತಿರುವನು ! ಎಲೈ ಶ್ರೀರಾಮನೆ, ಯೌವನಾವಸ್ಥೆಯುಳ್ಳ ಪುರುಷನು ಸ್ತ್ರೀಯನ್ನಗಲಿದರೆ ಎಂಥಾ ದುಃಖವನ್ನು ಪಡೆಯುವನೋ ಅದನ್ನು ನೀನು ಬಲ್ಲೆ ; ಅಂಥಾ ದುಃಖವನ್ನು ಬಲ್ಲಂಥಾ ನೀನು ವಿಚಾರಿಸಿ ವಾಲಿಯು ನನ್ನನ್ನು ಕಾಣದೆ ದುಃಖಪಡದಿರುವ ಮರ್ಯಾದೆಯಲ್ಲಿ ನನ್ನನ್ನು ನಿನ್ನ ಬಾಣಕ್ಕೆ ಗುರಿಮಾಡು ; ಸ್ತ್ರೀವಧೆಯನ್ನು ಮಾಡಬಾರದಾದರೂ ನನ್ನ ವಧೆಯಿಂದ ನಿನಗೆ ಪಾಪವು ಬರಲಾರದು ; ವಾಲಿಯ ಅರ್ಧ ಶರೀರವೆಂದು ಭಾವಿಸಿ ನನ್ನನ್ನು ಕೊಂದೆಯಾದರೆ ಅದರಿಂದ ಸ್ತ್ರೀವಧೆಮಾಡಿದ ದೋಷವು ತಟ್ಟದು ; ಸ್ತ್ರೀಯರು ಪುರುಷರ ಅರ್ಧಶರೀರವಾದ್ದರಿಂದ ಅವರನ್ನು ಕೊಂದರೆ ಅರ್ಧ ಶರೀರವನ್ನು ಕೊಂದಹಾಗಲ್ಲದೆ ಸ್ತ್ರೀವಧೆಯಲ್ಲ ! ಎಲೈ ಶ್ರೀರಾಮನೆ, ಲೋಕದಲ್ಲಿ ಜ್ಞಾನಿಗಳಿಗೆ ಸಮಸ್ತ ದಾನಗಳಿಗೂ ಪ್ರಧಾನವಾದದ್ದು ಕನ್ಯಾದಾನವು ; ನೀನು ನನ್ನ ಪ್ರಾಣಕಾಂತನಾದ ವಾಲಿಗೆ ಸ್ವರ್ಗಲೋಕವನ್ನು ಕೊಟ್ಟದ್ದರಿಂದ ಧರ್ಮಶಾಸ್ತ್ರವನ್ನು ವಿಚಾರಿಸಿಕೊಂಡು ನನ್ನನ್ನು ನಿನ್ನ ಬಾಣಕ್ಕೆ ಗುರಿಮಾಡಿ ಸ್ವರ್ಗಲೋಕದಲ್ಲಿರುವ ವಾಲಿಗೆ ನನ್ನನ್ನು ದಾನಮಾಡಿದರೆ ನಿನಗೆ ಧರ್ಮವುಂಟಾಗುವದಲ್ಲದೆ ಸ್ತ್ರೀವಧೇ ದೋಷವುಂಟಾಗದು ; ಪತಿವಿಯೋಗದಿಂದ ಕಂಗೆಟ್ಟು ಅನಾಥೆಯಾದ ನನ್ನನ್ನು ಕೊಲ್ಲದಿರುವದುಚಿತವಲ್ಲ ! ಎಲೈ ಶ್ರೀರಾಮನೆ, ಕಪಿಶ್ರೇಷ್ಠನಾದ ವಾಲಿಯ ಬಲದಿಂದ ನಾನು ಮದ್ದಾನೆಯನ್ನೇರಿಕೊಂಡು ಸಂಚರಿಸುತಿದ್ದೆನು ! ಆತನನ್ನು ಬಿಟ್ಟು ನಾನು ಒಂದು ಕ್ಷಣಮಾತ್ರವಾದರೂ ಜೀವಿಸಲಾರೆನು " ಎಂದು ನುಡಿದಳು.

ಮಹಾತ್ಮನಾದ ಶ್ರೀರಾಮನು ತಾರಾದೇವಿಯನ್ನು ಸಂತವಿಟ್ಟು ಆಕೆಯನ್ನು ಕುರಿತು " ಎಲೈ ವೀರಪತ್ನಿಯಾದ ತಾರಾದೇವಿಯೆ, ನೀನು ನಿನ್ನ ಮನಸ್ಸಿನಲ್ಲಿ ದುಃಖಪಡಬೇಡ ; ಲೋಕದಲ್ಲಿ ಬ್ರಹ್ಮಲಿಖಿತವನ್ನು ಮೀರಿದವರಿಲ್ಲ ; ಬ್ರಹ್ಮದೇವನು ಸಮಸ್ತ ಪ್ರಾಣಿಗಳಿಗೂ ಸುಖದುಃಖಗಳನ್ನು ಕೊಡುತ್ತಿರುವನು ; ಆಯಾ ಕಾಲಗಳಲ್ಲಿ ಸ್ವರ್ಗ ಮರ್ತ್ಯ ಪಾತಾಳಗಳೆಂಬ ಮೂರು ಲೋಕಗಳೂ ಬ್ರಹ್ಮದೇವನ ಕಟ್ಟಳೆಯಲ್ಲಿರುವವಲ್ಲದೆ ಆತನನ್ನು ಮೀರಲಾರವು ; ನೀನು ನಿನ್ನ ಮಗಸಿಗೆ ರಾಜ್ಯಾಧಿಪತ್ಯವನ್ನು ಕೊಟ್ಟು ಸುಖವಾಗಿರು ; ಲೋಕದಲ್ಲಿ ಪರಾಕ್ರಮಿಗಳ ಸ್ತ್ರೀಯರಿಗೆ ವೈಧವ್ಯವನ್ನು ಬ್ರಹ್ಮದೇವನು ಕಲ್ಪಿಸಿದನು ; ಆದಕಾರಣ ವೀರಪತ್ನಿಯರು ದುಃಖಪಡಕೂಡದು " ಎಂದು ಸಂತವಿಟ್ಟನು.

ಮಹಾತ್ಮನಾದ ಶ್ರೀರಾಮನ ವಾಕ್ಯವನ್ನು ಕೇಳಿ ವೀರಪತ್ನಿಯಾದ ತಾರಾದೇವಿಯು ಆತನ ಮಾತನ್ನಂಗೀಕರಿಸಿ ಸ್ವಸ್ಥಚಿತ್ತವುಳ್ಳವಳಾಗಿದ್ದಳು.

## ೨೫ನೇ ಅಧ್ಯಾಯ.

### ಅಂಗದನು ವಾಲಿಗೆ ಅಗ್ನಿಸಂಸ್ಕಾರ ಮಾಡಿದ್ದು.

ಆಮೇಲೆ ಲಕ್ಷ್ಮಣಸಮೇತನಾದ ಶ್ರೀರಾಮನು ಸುಗ್ರೀವನನ್ನೂ ತಾರಾದೇವಿಯನ್ನೂ ಅಂಗದನನ್ನೂ ಸಂತವಿಡುತ ಅವರನ್ನು ಕುರಿತು "ಎಲೈ ಸುಗ್ರೀವನೆ—ಎಲೌ ತಾರಾದೇವಿಯೆ—ಎಲೈ ಅಂಗದನೆ, ನೀವು ಇನ್ನು ಶೋಕಪಡುವದರಿಂದ ಆಗುವ ಕಾರ್ಯವೇನು! ಲೋಕದಲ್ಲಿ ಅತಿ ಶೋಕವನ್ನು ಮಾಡುವವರಿಗೆ ಮಂಗಳವುಂಟಾಗಲಾರದು; ಕಾಲಗತಿಯನ್ನಾರೂ ಮೀರುವವರಿಲ್ಲ; ಕಾಲವು ಸ್ವತಂತ್ರವಾಗಿ ಮನುಷ್ಯರು ಮಾಡಿದ ಪುಣ್ಯಪಾಪಗಳಿಗೆ ತಕ್ಕಹಾಗೆ ಸುಖದುಃಖಗಳನ್ನು ಕೊಡದೆ ಬಿಡದು; ಕಾಲವು ಒಬ್ಬರ ಆಜ್ಞೆಗೊಳಗಾಗದು; ಕಾಲಕ್ಕೆ ಬಂಧುತ್ವವಿಲ್ಲ; ಕಾಲದಮುಂದೆ ಪರಾಕ್ರಮವು ನಡೆಯದು; ಕಾಲಕ್ಕೆ ಮಿತ್ರರೂ ಇಲ್ಲ—ಜ್ಞಾತಿ ಬಂಧುಗಳೂ ಇಲ್ಲ; ಅದಕ್ಕೆ ಒಂದು ಕಾರಣವೂ ಇಲ್ಲ; ಅದು ಒಬ್ಬರಿಗೂ ವಶವಾಗುವದಲ್ಲ; ಲೋಕದಲ್ಲಿ ಬುದ್ಧಿವಂತನು ಕಾಲದ ಪ್ರಮಾಣವನ್ನು ಕಂಡುಕೊಳ್ಳಬೇಕು; ಕಾಲವು ಮನುಷ್ಯರಿಗೆ ಧರ್ಮಬುದ್ಧಿಯನ್ನು ಹುಟ್ಟಿಸಬೇಕಾದ ಸಮಯದಲ್ಲಿ ಧರ್ಮಬುದ್ಧಿಯನ್ನೂ ಅರ್ಥಪ್ರಾಪ್ತಿಯನ್ನುಂಟುಮಾಡಬೇಕಾದ ಸಮಯದಲ್ಲಿ ಅರ್ಥಲಾಭವನ್ನೂ ಕಾಮವನ್ನುಂಟುಮಾಡಬೇಕಾದ ಸಮಯದಲ್ಲಿ ಕಾಮವನ್ನೂ ಉಂಟುಮಾಡುವದು; ವಾಲಿಯು ತನ್ನ ಜನ್ಮಾಂತರದಲ್ಲಿ ಪ್ರಕೃತಿಗುಣದಿಂದಲೂ ಸಾಮದಾನಾದಿ ನಾಲ್ಕು ಉಪಾಯಗಳಿಂದಲೂ ನಡೆಸಿದ ಕರ್ಮಗಳಿಗೆ ತಕ್ಕ ಫಲವನ್ನು ಪಡೆವನು; ಆತನು ಮೊದಲೇ ತನ್ನ ಜಾತಿಧರ್ಮದಲ್ಲಿ ನಡೆದು ಸ್ವರ್ಗಸಾಧನವಾದ ಸತ್ಕರ್ಮವನ್ನು ಮಾಡಿದ್ದನು; ಈಗ ರಣರಂಗದಲ್ಲಿ ಹಿಮ್ಮೆಟ್ಟದೆ ಶರೀರವನ್ನು ಬಿಟ್ಟು ವೀರಸ್ವರ್ಗವನ್ನು ಪಡೆದನು; ಆತನಿಗೆ ಈ ಅವಸ್ಥೆಯು ಬಂದದ್ದು ಕಾಲಗತಿಯಲ್ಲದೆ ಮತ್ತೊಂದಲ್ಲ! ಆದಕಾರಣ ನೀವಿನ್ನು ಶೋಕವನ್ನು ಸಾಕುಮಾಡಿ ಮುಂದಣ ಕಾಲೋಚಿತವಾದ ಕಾರ್ಯವನ್ನು ಮಾಡೀ" ಎಂದು ನುಡಿದನು.

ಆಗ ಅಸಹಾಯಶೂರನಾದ ಲಕ್ಷ್ಮಣನು ಸುಗ್ರೀವನನ್ನು ಕುರಿತು ಅತಿ ವಿನಯದಿಂದ "ಎಲೈ ಸುಗ್ರೀವನೆ, ನೀನು ಪರಾಕ್ರಮಿಯಾದ ವಾಲಿಗೆ ಅಂತ್ಯಕರ್ಮವನ್ನು ತೀರಿಸು; ತಾರಾದೇವಿಯು ನೀನು ಅಂಗದನು ಮೂವರೂ ಯೋಚನೆಯನ್ನು ಮಾಡಿಕೊಂಡು ಒಣಗಿದ ಶ್ರೀಗಂಧದ ಮರದ ಕೊರಡುಗಳನ್ನು ಕತ್ತರಿಸಿ ವಾಲಿಗೆ ಅಗ್ನಿಸಂಸ್ಕಾರವನ್ನು ಮಾಡೀ! ಕಂಗೆಟ್ಟಿರುವ ಅಂಗದನನ್ನು ಸಂತವಿಡು; ಈ ಮಕ್ಕಳಾಟಬುದ್ಧಿಯನ್ನು ಬಿಡು; ಕಿಷ್ಕಿಂಧಾಪಟ್ಟಣವು ನಿನ್ನ ಅಧೀನವಾದದ್ದು; ಅಂಗದನು ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ವಾಲಿಯ ಸಂಸ್ಕಾರಕ್ಕೆ ತಕ್ಕ ಪುಷ್ಪಮಾಲಿಕೆ ಎಣ್ಣೆ ತುಪ್ಪ ಗಂಧಮಾಲ್ಯಾದಿ ವಸ್ತುಗಳನ್ನು ತರಿಸಲಿ!——ಎಲೈ ತಾರನೆಂಬ ಕಪಿಶ್ರೇಷ್ಠನೆ, ನೀನು ಶೀಘ್ರವಾಗಿ ಹೋಗಿ ವಾಲಿಯ ಪಾಲಕಿಯನ್ನೆತ್ತಿಸಿಕೊಂಡು ಬಾ; ತಾರಾದೇವಿಗೆ ವಿಶೇಷವಾದ ಅಲಂಕಾರವನ್ನು ಮಾಡಿಸು" ಎಂದು ನುಡಿದು ಶ್ರೀರಾಮನ ಸಮೀಪದಲ್ಲಿ ಕೈಮುಗಿದುಕೊಂಡಿದ್ದನು.

ತಾರನು ಶೀಘ್ರವಾಗಿ ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ಮೃತನಾದ ವಾಲಿಗೆ ತಕ್ಕದ್ದಾಗಿ ದಿವ್ಯವಾದ ಸಿಂಹಪೀಠವುಳ್ಳದ್ದಾಗಿ ದೇವೇಂದ್ರನ ವಿಮಾನಕ್ಕೆ ಸಮಾನವಾದ್ದಾಗಿ ಚಿನ್ನದ ಮುಲಾಮಿನಿಂದ ನಾನಾವಿಚಿತ್ರವಾಗಿ ನಿರ್ಮಿಸಲ್ಪಟ್ಟದ್ದಾಗಿ ಸುವರ್ಣ ಪ್ರತಿಮೆಗಳುಳ್ಳದ್ದಾಗಿ ಮಾಲೇತಗಡು ಕೀಲುಗಳಿಂದ ಮನೋಹರವಾದ್ದಾಗಿ ಸಿದ್ಧರ ವಿಮಾನದೋಪಾದಿಯಲ್ಲಿ ಮನೋಹರವಾದ್ದಾಗಿ ಜಾಲಾಂತರಗಳುಳ್ಳದ್ದಾಗಿ ಕಿರುಗವಾಕ್ಷಿಗಳುಳ್ಳದ್ದಾಗಿ ಶಿಲ್ಪಿಗಳಿಂದ ಸಂದುಬಿಡದಂತೆ ಜತನವಾಗಿ ಅಮರಿಸಿದ್ದಾಗಿ ಮರಕೆಲಸಗಳಿಂದ ನಿರ್ಮಿಸಲ್ಪಟ್ಟ ಶಕುನಿಗಳುಳ್ಳದ್ದಾಗಿ ದಿವ್ಯವಾದ ಪುಷ್ಪಮಾಲಿಕೆಗಳಿಂದ ಅಲಂಕರಿಸಲ್ಪಟ್ಟದ್ದಾಗಿ ಸಮವಾಗಿ ಚತುರಶ್ರವಾದ ಚೌಮಾಳಿಗೆಗಳುಳ್ಳದ್ದಾಗಿ ಹೊಂದಾವರೇ ಕಮಲಗಳಿಂದ ಮನೋಹರವಾದ ಒಂದು ಪಾಲಕಿಯನ್ನು ಹೊರಿಸಿಕೊಂಡು ಬಂದನು; ಅದನ್ನು ನೋಡಿ ಲಕ್ಷ್ಮಣನು ಸುಗ್ರೀವನನ್ನು ಕುರಿತು "ಎಲೈ ಸುಗ್ರೀವನೆ, ಶೀಘ್ರವಾಗಿ ವಾಲಿಯ ಶರೀರವನ್ನು ಈ ಪಾಲಕಿಯಲ್ಲಿರಿಸಿಕೊಂಡು ಹೋಗು" ಎಂದು ಹೇಳಿದನು.

ಸುಗ್ರೀವನು ಲಕ್ಷ್ಮಣನ ವಾಕ್ಯವನ್ನು ಕೇಳಿ ವಾಲಿಯ ಶರೀರವನ್ನು ವಸ್ತ್ರಾಭರಣಗಳಿಂದ ಅಲಂಕರಿಸಿ ಅಂಗದನನ್ನು ಕರೆದು "ಎಲೈ ಅಂಗದನೆ, ವಾಲಿಯ ಅಗ್ನಿಸಂಸ್ಕಾರಕಾಲಕ್ಕೆ ಉಚಿತವಾದ ದಾನಗಳನ್ನು ಮಾಡಿ ಈತನ ಶರೀರವನ್ನು ಸಾಗಿಸಿಕೊಂಡು ಹೊರಡು" ಎಂದು ಹೇಳಿ ಕಪಿನಾಯಕರನ್ನು ಕರೆದು "ಎಲೈ ಮಕ್ಕಳಿರಾ, ನಿಮ್ಮ ಒಡೆಯನಾದ ವಾಲಿಯು ಜೀವದಿಂದ ರಾಜ್ಯವನ್ನಾಳುವ ಸಮಯದಲ್ಲಿ ಅತಿ ಸಂಭ್ರಮದಿಂದ ಹ್ಯಾಗೆ ಹೋಗುತ್ತಿದ್ದನೋ ಆ ಮರ್ಯಾದೆಯಲ್ಲೀ ಈಗಲು ಸಮಸ್ತ ವಾದ್ಯಘೋಷಗಳಿಂದ ಅತಿ ಸಂಭ್ರಮವಾಗಿ ಆತನ ಶರೀರವನ್ನು ತಕ್ಕೊಂಡು ಬನ್ನೀ" ಎಂದು ಆಜ್ಞಾಪಿಸಿದನು.

ಆಗ ಕಪಿನಾಯಕರು ಪ್ರೇತನಾದ ವಾಲಿಗೆ ಸರ್ವಾಲಂಕಾರವನ್ನು ಮಾಡಿ ಪಾಲಕಿಯಮೇಲಿಟ್ಟು ಆತನನ್ನೆತ್ತಿಕೊಂಡು ಹೋಗುತ್ತಿರಲು ತಾರಾದೇವಿ ಮೊದಲಾದ ವಾನರಸ್ತ್ರೀಯರು ಉರಸ್ತಾಡನ ಶಿರಸ್ತಾಡನಗಳೊಡನೆ ರೋದನಮಾಡುತ ಹಿಂದೆ ಹೋಗುತ್ತಿದ್ದರು!

ಆ ಬಳಿಕ ಸುಗ್ರೀವನು ನದೀತೀರದಲ್ಲಿ ಮನೋಹರವಾಗಿದ್ದ ಮಳಲೊಟ್ಟುಗಳನ್ನು ಸೇರಿ ನೀರು ಸಮೀಪದಲ್ಲಿದ್ದ ರಮ್ಯವಾದ ಒಂದು ಸ್ಥಳದಲ್ಲಿ ಪಾಲಕಿಯನ್ನಿಳಿಯಿಸಲು ತಾರಾದೇವಿಯು ಪಾಲಕಿಯಲ್ಲಿದ್ದ ವಾಲಿಯ ಶರೀರವನ್ನು ನೋಡಿ ಅತ್ಯಂತ ದುಃಖಾಕ್ರಾಂತೆಯಾಗಿ "ಎಲೈ ವಾಲಿಯೆ, ಇಲ್ಲಿ ನೆರೆದಿರುವ ಪ್ರಜೆಗಳನ್ಯಾಕೆ ನೋಡದಿದ್ದೀ! ನನ್ನಕೂಡೆ ಸಂಭಾಷಣವನ್ಯಾಕೆ ಮಾಡದಿದ್ದೀ! ನೀನು ಲೋಕಾಂತರವನ್ನೈದಿದರೂ ನಿನ್ನ ಮುಖಕಾಂತಿಯು ಅಸ್ತಾಚಲವನ್ನೈದಿದ ಸೂರ್ಯಪ್ರಭೆಯಂತೆ ಒಪ್ಪುತಿದೆ; ಸ್ವಲ್ಪವಾದರೂ ನಿನ್ನ ಮುಖವು ಕಾಂತಿಗುಂದಿಲ್ಲ; ಕಾಲನೇ ಶ್ರೀರಾಮನ ರೂಪವಾಗಿ ಬಂದು ನಿನ್ನ ಪ್ರಾಣಗಳನ್ನಪಹರಿಸಿದನು; ನಿನ್ನ ಪ್ರಾಣಕಾಂತೆಯರಾದ ವಾನರಸ್ತ್ರೀಯರು ಇಷ್ಟುದೂರಪರ್ಯಂತರ ಕಾಲುನಡೆಯಿಂದ ಬಂದಿದ್ದಾರೆ; ಇವರನ್ನು ಕಣ್ಣುತೆರೆದು ನೋಡಿ ಎದ್ದುಕುಳಿತುಕೊ; ನಮ್ಮ ಸಮೀಪದಲ್ಲಿರುವ ಸುಗ್ರೀವನನ್ಯಾಕೆ ಕಣ್ಣುತೆರೆದು ನೋಡದಿದ್ದೀ! ಸಮಸ್ತ ಕಪಿನಾಯಕರೂ ಪರಿಜನ ಪುರಜನರೂ ನಿನ್ನನ್ನು ಸುತ್ತುವರಿದು ನಿಂತಿದ್ದಾರೆ; ಇವರನ್ನು ಮನೆಗೆ ಕಳುಹಿಸಿ ಶ್ರೀರಾಮನ ಆಜ್ಞೆಯಿಂದ ಈ ನದೀತೀರದಲ್ಲಿರುವ ಮಳಲೊಟ್ಟುಗಳಲ್ಲಿ ನನ್ನೊಡನೆ ನಿನ್ನ ಮನಸ್ಸುಬಂದಂತೆ ರಮಿಸಿಕೊಂಡಿರು" ಎಂದು ವಾನರಸ್ತ್ರೀಯರೊಡನೆ ಕೂಡಿ ಹಂಬಲಿಸಿ ರೋದನಮಾಡುತ್ತಿದ್ದಳು; ಆ ಧ್ವನಿಯಿಂದ ಸಮಸ್ತ ವನಗಳೂ ರೋದನಮಾಡುತಿದ್ದವೋ ಎಂಬಂತೆ ಪ್ರತಿಧ್ವನಿಯುಂಟಾಗಿ ಒಪ್ಪುತಿದ್ದವು!

ಈ ಮರ್ಯಾದೆಯಲ್ಲಿ ಬಿದ್ದು ಹೊರಳುತಿದ್ದ ತಾರಾದೇವಿಯನ್ನು ಉಳಿದ ಸ್ತ್ರೀಯರು ಹಿಡಿದೆತ್ತಲು ಸುಗ್ರೀವನು ಅಂಗದನನ್ನು ಕೂಡಿಕೊಂಡು ರೋದನಮಾಡುತ ವಾಲಿಯ ಶರೀರವನ್ನು ಸುಗಂಧ ಕಾಷ್ಠಗಳ ಚಿತಿಯಮೇಲಿರಿಸಿ ವಿಧ್ಯುಕ್ತಪ್ರಕಾರವಾಗಿ ಅಪಸವ್ಯದಿಂದ ತತ್ಕಾಲೋಚಿತವಾದ ಹೋಮವನ್ನು ಮಾಡಿ ಆ ಚಿತಿಗೆ ಅಗ್ನಿಯನ್ನತ್ತಿಸಿ ಸಂಸ್ಕಾರವನ್ನು ಮಾಡಿ ಅತ್ಯಂತ ವ್ಯಾಕುಲಚಿತ್ತನಾಗಿ ಶ್ರೀರಾಮನ ಸಮೀಪಕ್ಕೆ ಹೋದನು.

## ೨೬ ನೇ ಅಧ್ಯಾಯ.

## ಸುಗ್ರೀವನ ಪಟ್ಟಾಭಿಷೇಕವು.

ಈ ಮರ್ಯಾದೆಯಲ್ಲಿ ಅಂಗದಕುಮಾರನು ವಾಲಿಗೆ ಸಂಸ್ಕಾರವನ್ನು ಮಾಡಿದಮೇಲೆ ಸುಗ್ರೀವನು ಅಂಗದಸಹಿತನಾಗಿ ಶ್ರೀರಾಮನ ಸಮೀಪಕ್ಕೆ ಹೋಗಲು ಹನುಮಂತನು ಮೊದಲಾದ ಕಪಿನಾಯಕರು ಕೈಮುಗಿದುಕೊಂಡು ಸುಗ್ರೀವನೊಡಗೂಡಿ ಬ್ರಹ್ಮರ್ಷಿಗಳು ಬ್ರಹ್ಮದೇವನನ್ನು ಸುತ್ತಿಕೊಂಡಿರುವಂತೆ ಶ್ರೀರಾಮನನ್ನು ಸುತ್ತಿಕೊಂಡಿದ್ದರು; ಆ ಬಳಿಕ ಹನುಮಂತನು ಕೈಮುಗಿದುಕೊಂಡು ಶ್ರೀರಾಮನನ್ನು ಕುರಿತು "ಎಲೈ ಶ್ರೀರಾಮನೆ,

ನಿನ್ನ ಕೃಪೆಯಿಂದ ಸುಗ್ರೀವನಿಗೆ ಅನೇಕ ಬಲಸಂಪನ್ನರಾಗಿ ತೀಕ್ಷ್ಣವಾದ ಕೋರೆದಾಡೆಗಳಿಂದ ಭಯಂಕರರಾಗಿ ಮಹಾಪರಾಕ್ರಮಿಗಳಾದ ಕಪಿನಾಯಕರಿಗೆ ಅಸಾಧ್ಯವಾದದ್ದಾಗಿ ತನ್ನ ವಂಶಪಾರಂಪರೆಯಿಂದ ಬಂದ ಕಿಷ್ಕಿಂಧಾಧಿಪತ್ಯವು ಪ್ರಾಪ್ತವಾಯಿತು; ಇನ್ನು ನಿನ್ನ ಕೃಪಾದೃಷ್ಟಿಪೂರ್ವಕವಾದ ಅಪ್ಪಣೆಯಿಂದ ಈತನು ಅಂಗದನ ಸಮೇತನಾಗಿ ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ವಾಲಿಗೆ ಮುಂದೆ ಮಾಡಬೇಕಾದ ಕಾರ್ಯಗಳನ್ನು ಮಾಡಿ ಮಂಗಳಸ್ನಾನವನ್ನು ಮಾಡಿ ನಾನಾಪ್ರಕಾರವಾದ ಸುಗಂಧಾನುಲೇಪನ ಸುಗಂಧ ಪುಷ್ಪಮಾಲಿಕೆಗಳಿಂದ ನಿನ್ನನ್ನು ಅರ್ಚನೆಮಾಡುವನು; ನೀನು ಕಿಷ್ಕಿಂಧಾಪಟ್ಟಣಕ್ಕೆ ಬಂದು ಸುಗ್ರೀವನು ಮಾಡುವ ಸತ್ಕಾರವನ್ನು ಕೈಕೊಂಡು ಆತನಿಗೆ ಒಡೆಯನಾಗಿ ಅಭಯವನ್ನು ಕೊಟ್ಟು ಪರಿಪಾಲಿಸಿಕೊಂಡಿರಬೇಕು" ಎಂದು ನುಡಿದನು.

ಶ್ರೀರಾಮನು ಹನುಮಂತನನ್ನು ಕುರಿತು "ಎಲೈ ಹನುಮಂತನೆ, ನಾನು ಅಯೋಧ್ಯಾಪಟ್ಟಣದಿಂದ ಬಂದಾಗ ನನ್ನ ತಂದೆಯಾದ ದಶರಥರಾಯನಕೂಡೆ ಹದಿನಾಲ್ಕು ವರುಷಗಳ ಪರ್ಯಂತರ ಪಟ್ಟಣಗಳಲ್ಲಾದರೂ ಗ್ರಾಮಗಳಲ್ಲಾದರೂ ವಾಸಮಾಡಿಕೊಂಡಿರದೆ ವನಗಳಲ್ಲಿಯೇ ಇರುವದಾಗಿ ಪ್ರತಿಜ್ಞೆಯನ್ನು ಮಾಡಿ ಬಂದೆನು; ಆ ಪ್ರತಿಜ್ಞೆಯನ್ನು ಪರಿಪಾಲಿಸಬೇಕಲ್ಲದೆ ಅದನ್ನು ತಪ್ಪಿ ಪಟ್ಟಣಗಳಿಗೆ ಪ್ರವೇಶಮಾಡಬಾರದು; ಸುಗ್ರೀವನು ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ಪಟ್ಟಾಭಿಷೇಕವನ್ನು ಮಾಡಿಕೊಂಡು ಕಪಿರಾಜ್ಯವನ್ನು ಪರಿಪಾಲಿಸಿಕೊಂಡು ಸುಖವಾಗಿರಲೀ" ಎಂದು ನುಡಿದು ಸುಗ್ರೀವನನ್ನು ಕುರಿತು "ಎಲೈ ಸುಗ್ರೀವನೆ, ನೀನು ಸರ್ವಜ್ಞನು; ಮಹಾ ಬಲವಂತನು; ಪರಾಕ್ರಮವುಳ್ಳವನು; ನೀನು ಪಟ್ಟಾಭಿಷಿಕ್ತನಾಗಿ ಅಂಗದನಿಗೆ ಯುವರಾಜಪಟ್ಟವನ್ನು ಕಟ್ಟು; ಅಂಗದನು ತನ್ನ ತಂದೆಯಾದ ವಾಲಿಗೆ ಸಮಾನಪರಾಕ್ರಮವುಳ್ಳವನು; ಈತನು ಯುವರಾಜಪಟ್ಟಕ್ಕೆ ಯೋಗ್ಯನು. ಈಗ ವರ್ಷಾಕಾಲದ ಮೊದಲನೇ ತಿಂಗಳಾದ ಶ್ರಾವಣಮಾಸವು ಬಂದಿದೆ; ಎಲ್ಲಿ ನೋಡಿದರೂ ಹಳ್ಳಕೊಳ್ಳಗಳು ತುಂಬಿಕೊಂಡು ಸಂಚರಿಸುವದಕ್ಕೆ ಅಸಾಧ್ಯವಾಗಿದೆ; ಇದು ರಾಜಕಾರ್ಯಕ್ಕೆ ಸಮಯವಲ್ಲ; ನೀನು ಕಿಷ್ಕಿಂಧಾಪಟ್ಟಣಕ್ಕೆ ಹೋಗು; ನಾನು ಈ ಮಾಲ್ಯವತ್ಪರ್ವತದಲ್ಲಿ ಲಕ್ಷ್ಮಣನ ಸಮೇತನಾಗಿ ಈ ವರ್ಷಾಕಾಲವನ್ನು ಕಳೆಯುತ್ತೇನೆ; ಈ ಪರ್ವತದಲ್ಲಿ ತಂಘೊಳತೀಡುವ ವಿಶಾಲವಾದ ಒಂದು ಗುಹೆಯಿದೆ; ಆ ಗುಹೆಯ ಸಮೀಪದಲ್ಲಿ ನಿರ್ಮಲೋದಕವುಳ್ಳ ತಾವರೇ ಕೊಳಗಳಿವೆ; ಕಾರ್ತೀಕಮಾಸವುಬಂದು ಶರತ್ಕಾಲವು ಬಂದರೆ ರಾವಣನ ವಧೆಯನ್ನು ಮಾಡುವದಕ್ಕೆ ಸಮಯವು! ಎಲೈ ಸುಗ್ರೀವನೆ, ನೀನು ನಿನ್ನ ಅರಮನೆಗೆ ಹೋಗಿ ಪಟ್ಟಾಭಿಷೇಕವನ್ನು ಮಾಡಿಕೊಂಡು ರಾಜ್ಯಪರಿಪಾಲನವನ್ನು ಮಾಡುತ ನಿನ್ನ ಸ್ನೇಹಿತರನ್ನು ರಕ್ಷಿಸಿಕೊಂಡಿರು" ಎಂದು ಆಜ್ಞಾಪಿಸಿದನು.

ಆ ಬಳಿಕ ಸುಗ್ರೀವನು ವಾಲಿಯಿಂದ ರಕ್ಷಿಸಲ್ಪಟ್ಟದ್ದ ಕಿಷ್ಕಿಂಧಾ ಪಟ್ಟಣಕ್ಕೆ ಹೋಗಿ ಮಂತ್ರಿಗಳನ್ನು ಕರೆಸಲು ಅವರು ಸುಗ್ರೀವನಿಗೆ ಪಟ್ಟಾಭಿಷೇಕಮಾಡುವದಕ್ಕಾಗಿ ನಾಲ್ಕು ಸಮುದ್ರಗಳಿಂದಲೂ ಗಂಗಾದಿ ಸಕಲ ಪುಣ್ಯತೀರ್ಥಗಳಿಂದಲೂ ಪುಣ್ಯಸರಸ್ಸುಗಳಿಂದಲೂ ಸುವರ್ಣ ಕಲಶಗಳಲ್ಲಿ ಉದಕಗಳನ್ನು ತರಿಸಿ ಹದಿನಾರುಮಂದಿ ಕೊಡಗೂಸು ಹೆಣ್ಣುಮಕ್ಕಳನ್ನು ಕರೆಸಿ ಬಿಳೀ ಪುಷ್ಪಮಾಲೆ, ಲೇಪನಯೋಗ್ಯವಾದ ಬಿಳೀ ಚಂದನ, ಗಂಧ, ಬಿಳೀ ಅಕ್ಷತೆ, ಜೇನುತುಪ್ಪ, ತುಪ್ಪ, ಗೋರೋಚನ, ಕರ್ಪೂರ, ವ್ಯಾಘ್ರಚರ್ಮ, ಪರಿಮಳದ್ರವ್ಯ, ಹಾಲುಳ್ಳ ಮರಗಳ ಚಿಗುರುಗಳು, ಪಂಚಧಾನ್ಯ, ಪಂಚರತ್ನ, ಶತೌಷಧಿ ಎಂಬ ಬಿಳೀಕೊಡೆ, ಚಿನ್ನದ ಚಾಮರ—ಈ ಹದಿನಾರು ವಸ್ತುಗಳನ್ನು ಸಂಪಾದಿಸಿ ಆ ಕೊಡಗೂಸು ಹೆಣ್ಣುಮಕ್ಕಳ ಕೈಯಿಂದ ಪಂಚರತ್ನ ಪಂಚಪಲ್ಲವ ಗೋರೋಚನ ಕರ್ಪೂರ ಪುಷ್ಪ ಶ್ರೀಗಂಧ ಪುಷ್ಪಮಾಲಿಕೆ ಚಂದನ ಗಂಧ ಜೇನುತುಪ್ಪ ತುಪ್ಪ ಮೊಸರು ಬಿಳೀಅಕ್ಷತೆಗಳಿಂದಲೂ ವರುಣದೇವತಾಕವಾದ ಮಂತ್ರಗಳಿಂದ ಮಂತ್ರಿಸಲ್ಪಟ್ಟ ಸುವರ್ಣ ಕಲಶೋದಕಗಳಿಂದಲೂ ಅಭಿಷೇಕವನ್ನು ಮಾಡಿಸಿ ಸಮಿಚ್ಛರುವುಗಳನ್ನು ಹೋಮಮಾಡಿಸಿದರು! ಆ ಬಳಿಕ ಸುಗ್ರೀವನನ್ನು ವಸ್ತ್ರಾಭರಣ ದಿವ್ಯಗಂಧಾನುಲೇಪನಗಳಿಂದ ಅಲಂಕರಿಸಿ ಆಸ್ಥಾನಮಂಟಪದಲ್ಲಿ ಸಿಂಹಾಸನದಮೇಲೆ ಮೂಡಣ ಮುಖವಾಗಿ ಕುಳ್ಳಿರಿಸಿ ದೇವತೆಗಳು ದೇವೇಂದ್ರನಿಗೆ ಸ್ವರ್ಗಾಧಿಪತ್ಯವನ್ನು ಕೊಟ್ಟು ಪಟ್ಟಾಭಿಷೇಕವನ್ನು ಮಾಡುವಂತೆ ಗಜ ಗವಾಕ್ಷ ಗವಯ

ಶರಭ ಗಂಧಮಾದನ ಮೈಂದ ದ್ವಿವಿದ ಹನುಮಂತರು ಮೊದಲಾದ ಕಪಿಶ್ರೇಷ್ಠರು ಆತನಿಗೆ ಪಟ್ಟಾಭಿಷೇಕವನ್ನು ಮಾಡಿ ಆತನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದರು; ಸುಗ್ರೀವನು ಅವರನ್ನು ಕೈಹಿಡಿದೆಬ್ಬಿಸಿ ಅವರಿಗೆ ವಸ್ತ್ರಾಭರಣಾದಿ ಉಡುಗರೆಗಳನ್ನು ಕೊಟ್ಟು ವ್ಯಾಘ್ರಚರ್ಮ ಸಹಿತವಾಗಿ ರತ್ನಖಚಿತವಾದ ಸಿಂಹಪೀಠವಮೇಲೆ ಕುಳಿತು ಪರಿಜನ ಪುರಜನರನ್ನು ಕಾಣಿಸಿಕೊಂಡು ಸನ್ಮಾನಿಸಿ ಅಂಗದಕುಮಾರನಿಗೆ ಯುವರಾಜ ಪಟ್ಟವನ್ನು ಕಟ್ಟಿದನು! ಆ ಸಮಯದಲ್ಲಿ ಸಕಲ ಪ್ರಧಾನರೂ ಕಪಿನಾಯಕರೂ ಪರಿಜನ ಪುರಜನರೂ ಸುಗ್ರೀವನನ್ನು ನೋಡಿ ಜಯಜಯಾ! ಎಂದು ನುಡಿಯುತ ಸಾಕ್ಷಾತ್ ಪುರುಷೋತ್ತಮನಾಗಿ ಲಕ್ಷ್ಮಣಸಮೇತನಾದ ಶ್ರೀರಾಮನು ಸರ್ವೋತ್ತಮನೆಂದು ಕೊಂಡಾಡಿದರು!

ಈ ಪ್ರಕಾರದಲ್ಲಿ ಶ್ರೀರಾಮನ ಅನುಗ್ರಹದಿಂದ ಕಿಷ್ಕಿಂಧಾಧಿಪತಿಯಾದ ಸುಗ್ರೀವನು ಪಟ್ಟಾಭಿಷೇಕವನ್ನು ಮಾಡಿಕೊಂಡು ತೋರಣ ಪತಾಕಾದಿಗಳಿಂದ ಅಲಂಕರಿಸಲ್ಪಟ್ಟ ಕಿಷ್ಕಿಂಧಾ ಪಟ್ಟಣದಲ್ಲಿ ತನ್ನ ಪತ್ನಿಯಾದ ರುಮಾದೇವಿಯನ್ನು ಕೂಡಿಕೊಂಡು ಸ್ವರ್ಗಲೋಕದಲ್ಲಿ ಶಚೀದೇವಿಯೊಡನೆ ವಿನೋದಿಸಿಕೊಂಡಿರುವ ದೇವೇಂದ್ರನಂತೆ ಅತ್ಯಂತ ಹರ್ಷೋತ್ಸವದಿಂದಿದ್ದನು!

---

## ೨೭ ನೇ ಅಧ್ಯಾಯ.

## ರಾಮಲಕ್ಷ್ಮಣರು ಮಾಲ್ಯವತ್ಪರ್ವತವನ್ನು ಸೇರಿದ್ದು.

ಎಲೈ ಕುಶಲವರುಗಳಿರಾ, ಈ ಮರ್ಯಾದೆಯಲ್ಲಿ ಸುಗ್ರೀವನು ಪಟ್ಟಾಭಿಷಿಕ್ತನಾಗಿ ತನ್ನ ಅರಮನೆಯಲ್ಲಿ ಸುಖವಾಗಿರಲು ಲಕ್ಷ್ಮಣಸಮೇತನಾದ ಶ್ರೀರಾಮನು ಸಿಂಹಶಾರ್ದೂಲಾದಿ ಮೃಗಗಳಿಂದ ಇಟ್ಟಣಿಸಿ ಮೇರುಪರ್ವತಕ್ಕೆ ಸಮಾನವಾಗಿ ಅತ್ಯಂತ ಪವಿತ್ರವಾಗಿ ಮಂಗಳಪ್ರದವಾದ ಮಾಲ್ಯವತ್ಪರ್ವತಕ್ಕೆ ಹೋಗಿ ಆ ಪರ್ವತದ ಮೇಲುಭಾಗದಲ್ಲಿ ಮನೋಹರವಾದ ಒಂದು ಗುಹೆಯನ್ನು ಕಂಡು ಲಕ್ಷ್ಮಣನನ್ನು ಕುರಿತು "ಎಲೈ ಲಕ್ಷ್ಮಣ, ಈ ಪರ್ವತದಲ್ಲಿ ತಂಪೊಳಿಯುಳ್ಳದ್ದಾಗಿ ಅತಿ ರಮಣೀಯವಾದ್ದಾಗಿ ವಿಶಾಲವಾಗಿರುವ ಈ ಗುಹೆಯನ್ನು ನೋಡು; ನಾವು ಈ ವರ್ಷಾಕಾಲವು ಕಳೆಯುವ ಪರ್ಯಂತರ ಈ ಗುಹೆಯಲ್ಲಿರೋಣ; ಈ ಪರ್ವತದ ಕೋಡುಗಲ್ಲು ಕರೀಶಿಲೆಗಳಿಂದಲೂ ಕೆಂಪು ಶಿಲೆಗಳಿಂದಲೂ ಬಿಳೀ ಶಿಲೆಗಳಿಂದಲೂ ಅತಿ ಮನೋಹರವಾಗಿದೆ; ಮತ್ತು ನಾನಾ ಗೈರಿಕಾದಿ ಧಾತುಗಳಿಂದಲೂ ವಜ್ಜರೋದಕಗಳಿಂದಲೂ ಕುಸುಮಿತವಾದ ವೃಕ್ಷಗಳಿಂದಲೂ ಪಲ್ಲವಿತವಾದ ಲತೆಗಳಿಂದಲೂ ಪುಷ್ಪಿತವಾದ ಆದುರಗಂಚಿ ಮೊಲ್ಲೆ ಮಲ್ಲಿಗೆ ಇರುವಂತಿಗೆ ಮೊದಲಾದ ಲತೆಗಳಿಂದಲೂ ಕಡಬ ಮತ್ತಿ ಸಜ್ಜರಸ ವೃಕ್ಷಗಳಿಂದಲೂ ಅತಿ ರಮಣೀಯವಾಗಿದೆ; ಅನೇಕ ತಾವರೇಕಮಲಗಳಿಂದ ರಮಣೀಯವಾದ ಒಂದು ಕೊಳವು ಈ ಗುಹೆಯ ಸಮೀಪದಲ್ಲಿದೆ; ಈ ಗುಹೆಯು ನೈಋತ್ಯದಿಕ್ಕಿನಿಂದ ಈಶಾನ್ಯದಿಕ್ಕಾಗಿ ವಿಶಾಲವಾಗಿದೆ; ಇದರ ಪಡುವಣಭಾಗವು ಉನ್ನತವಾಗಿರುವದರಿಂದ ವಾಸಮಾಡುವದಕ್ಕೆ ಅನುಕೂಲವಾಗಿದೆ; ಈ ಗುಹೆಯ ಬಾಗಲಲ್ಲಿ ವಿಶಾಲವಾಗಿ ನಿಡಿದಾಗಿ ನಯವಾಗಿ ಕರೀದಾಗಿ ಮನೋಹರವಾದ ಕಲ್ಲರೆಯಿದೆ; ಈ ಕಲ್ಲು ಬಡಗಣದಿಕ್ಕಿನಲ್ಲಿ ಹೆಚ್ಚಿ ಸಮುದ್ರದಂತೆ ನೀಲವರ್ಣವಾಗಿ ಒಪ್ಪುತ್ತಿದೆ; ತ್ರಿಕೂಟಪರ್ವತದಂತೆ ಈ ಗುಹೆಯ ತೆಂಕಣಭಾಗದಲ್ಲಿ ನಾನಾಧಾತುಗಳಿಂದ ಮನೋಹರವಾಗಿ ಕೈಲಾಸಪರ್ವತದಂತೆ ಬಿಳುಪಾದ ಒಂದು ಕೋಡುಗಲ್ಲಿದೆ; ತ್ರಿಕೂಟಪರ್ವತದ ಸಮೀಪದಲ್ಲಿ ಗಂಗೆಯು ಇರುವಂತೆ ಇಲ್ಲಿ ಮೂಡಣಪ್ರವಾಹವುಳ್ಳ ಒಂದು ನದಿಯಿದೆ; ಈ ನದಿಯು ಕುಸುಮಿತವಾಗಿ ಮನೋಹರವಾದ ಸಂಪಿಗೆ ಅಶೋಕ ಬೆಟ್ಟದಾವರೆ ತಿಲಕ ಸಾಲವೃಕ್ಷ ತಮಾಲವೃಕ್ಷ ಗೊರಟೆ ಬಕುಳ ತಾಳೆ ಹಿರಿತಾಳೆ ಕದ್ದಾಳೆ ಮಾವು ಹಲಸು ನೇರಳೆ ಮೊದಲಾದ ವೃಕ್ಷಗಳಿಂದ ಅಲಂಕರಿಸಲ್ಪಟ್ಟದ್ದಾಗಿ ವಸ್ತ್ರಾಭರಣಗಳಿಂದ ಅಲಂಕರಿಸಲ್ಪಟ್ಟ ಸ್ತ್ರೀಯ ಮರ್ಯಾದೆಯಲ್ಲಿ ಒಪ್ಪುತ್ತಿದೆ; ಅನ್ಯೋನ್ಯ ಪ್ರೀತಿಯುಳ್ಳ ಚಕ್ರವಾಕಪಕ್ಷಿ ಹಂಸಪಕ್ಷಿ ಸಾರಸಪಕ್ಷಿ ಮಂಡಗೊರಳೆ

ನವಿಲು ಮೊದಲಾದ ಪಕ್ಷಿಗಳ ಧ್ವನಿಗಳಿಂದ ರಮಣೀಯವಾಗಿ ಮಳಲೊಟ್ಟುಗಳಿಂದಲೂ ದಿಕ್ಕುದಿಕ್ಕುಗಳಲ್ಲಿರುವ ಚಂದನ ವೃಕ್ಷಗಳಿಂದಲೂ ಅಲಂಕರಿಸಲ್ಪಟ್ಟಿದ್ದಾಗಿ ಮನೋಹರವಾಗಿದೆ ; ಇಂಥಾ ಪರ್ವತದಲ್ಲಿ ಇಂಥಾ ನದೀತೀರದಲ್ಲಿ ಇಂಥಾ ಗುಹೆಯಲ್ಲಿ ವಾಸಮಾಡಿಕೊಂಡಿರೋಣ ! ಎಲೈ ಲಕ್ಷ್ಮಣ, ಇದರ ಸಮೀಪದಲ್ಲಿ ಸುಗ್ರೀವನ ಪಟ್ಟಣವಿರುವದು ; ಹ್ಯಾಗೆಂದರೆ : ಇಲ್ಲಿ ಅನೇಕ ಮೃದಂಗ ಗೀತ ಧ್ವನಿಗಳೂ ಆನಂದಾತಿಶಯದಿಂದ ಬೊಬ್ಬಿಡುವ ಕಪಿಗಳ ಧ್ವನಿಗಳೂ ಕೇಳಿಸುತ್ತವೆ ; ಸುಗ್ರೀವನು ತನ್ನ ರಾಜ್ಯವನ್ನು ಪಡೆದು ತನ್ನ ಪತ್ನಿಯನ್ನೂ ಸ್ನೇಹಿತರನ್ನೂ ಕೂಡಿಕೊಂಡು ಅತ್ಯಂತ ಐಶ್ವರ್ಯವುಳ್ಳವನಾಗಿ ಸುಖಿಸಿಕೊಂಡಿರುವನು " ಎಂದು ನುಡಿದು ಲಕ್ಷ್ಮಣನ ಸಮೇತನಾಗಿ ಆ ಗುಹೆಯಲ್ಲಿ ವಾಸಮಾಡುತ ತನ್ನ ಪ್ರಾಣಕ್ಕಿಂತಲು ಅತ್ಯಧಿಕವಾದ ಸೀತಾದೇವಿಯನ್ನು ಸ್ಮರಿಸಿ ದುಃಖಾಕ್ರಾಂತನಾಗಿ ಕಣ್ಣೀರುಬಿಡುತ ಹಗಲಿರುಳಲ್ಲಿಯೂ ಆಹಾರ ನಿದ್ರೆಗಳನ್ನು ಬಿಟ್ಟು ಪ್ರಲಾಪಿಸುತ್ತಿದ್ದನು.

ಅದನ್ನು ಕಂಡು ಲಕ್ಷ್ಮಣನು ಚಿಂತಾಕ್ರಾಂತನಾಗಿ ಶ್ರೀರಾಮನನ್ನು ಕುರಿತು " ಎಲೈ ಶ್ರೀರಾಮನೆ, ನೀನು ವ್ಯಥೆಪಡಬೇಡ ; ಯಾವಾಗಲೂ ಶೋಕಪಡುವವರಿಗೆ ಸಮಸ್ತ ಕಾರ್ಯಗಳೂ ಕೆಡುವವು ; ಈಗ ನೀನು ಕಾರ್ಯಾರ್ಥಿಯಾಗಿದ್ದೀ ; ಆದ್ದರಿಂದ ದೈವಸಹಾಯವನ್ನು ಬಯಸಿಕೊಂಡು ನಿನ್ನ ಇಷ್ಟದೇವತೆಯಲ್ಲಿ ವಿಶ್ವಾಸವುಳ್ಳವನಾಗಿ ಧರ್ಮಶೀಲನಾಗಿ ಮುಂದೆ ಕಾರ್ಯಸಿದ್ಧಿಯಾಗುವ ಮಾರ್ಗವನ್ನು ಕಾಣು ; ನೀನು ಕುಟಿಲಮಾರ್ಗದಲ್ಲಿ ನಡೆಯುವ ಶತ್ರುಗಳನ್ನು ಸಂಹರಿಸುವದರಲ್ಲಿ ಮಹಾ ಸಮರ್ಥನು ; ಆದಕಾರಣ ನಿನಗೆ ಶತ್ರುವಾದ ರಾವಣನನ್ನು ಸಮೂಲವಾಗಿ ಕೊಂದು ಜಯಲಕ್ಷ್ಮಿಯನ್ನು ಪಡೆದು ಸಮುದ್ರಪರ್ಯಂತವಾದ ಭೂಮಂಡಲವನ್ನು ಪರಿಪಾಲಿಸು ; ನೀನು ಭೂಮಿ ಆಕಾಶಗಳನ್ನು ತಾರುಮಾರು ಮಾಡುವದಕ್ಕೆ ಸಮರ್ಥನಾಗಿರುವದರಿಂದ ರಾವಣನನ್ನು ಕೊಲ್ಲುವದು ಆಶ್ಚರ್ಯವಲ್ಲ ! ಈ ವರ್ಷಾಕಾಲವು ಹೋಗಿ ಶರತ್ಕಾಲವು ಬರುವ ಪರ್ಯಂತರ ಸಹಿಸಿಕೊಂಡಿದ್ದರೆ ಸಮಸ್ತ ಬಲ ಸಮೇತನಾದ ರಾವಣನನ್ನು ಕೊಲ್ಲುವೆ ; ಈಗ ನಿನ್ನ ಪರಾಕ್ರಮವು ಬೂದಿಮುಚ್ಚಿದ ಕೆಂಡದಂತೆ ಕಾಣಿಸದಿದೆ ; ಆದಕಾರಣ ನಾನು ನಿನ್ನಪರಾಕ್ರಮವನ್ನು ತಿಳಿಸಿ ನಿನ್ನನ್ನು ಎಚ್ಚರಿಸುತ್ತೇನೆ " ಎಂದು ನುಡಿದನು.

ಶ್ರೀರಾಮನು ಲಕ್ಷ್ಮಣನ ಹಿತವಾಕ್ಯವನ್ನು ಕೇಳಿ ಆತನನ್ನು ಕುರಿತು " ಎಲೈ ಲಕ್ಷ್ಮಣ, ನೀನು ಹೇಳಿದಮಾತು ಯಥಾರ್ಥವೇ ಸರಿ ; ಸಮಸ್ತ ಕಾರ್ಯವನ್ನೂ ಕೆಡಿಸುವಂಥಾ ದುಃಖವನ್ನು ಬಿಟ್ಟೆನು ; ಪರಾಕ್ರಮವನ್ನುಂಟುಮಾಡುವ ಉತ್ಸಾಹಶಕ್ತಿಯನ್ನು ಕೈಕೊಂಡೆನು ; ನೀನು ಹೇಳಿದ ಮರ್ಯಾದೆಯಲ್ಲಿ ಶರತ್ಕಾಲವು ಬರುವ ಪರ್ಯಂತರ ತಾಳಹರಿಸಿಕೊಂಡಿರುತ್ತೇನೆ ; ಶರತ್ಕಾಲವು ಬಂದರೆ ನದಿಗಳು ತಗ್ಗುವವು ; ಸುಗ್ರೀವನ ಮನಸ್ಸು ನಮ್ಮ ಕಾರ್ಯವನ್ನು ಮಾಡಿಕೊಡಬೇಕೆಂದು ಪ್ರಸನ್ನವಾಗುವದು ; ಲೋಕದಲ್ಲಿ ಧೈರ್ಯಗುಣ ಸಂಪನ್ನನಾದ ಪುರುಷನು ಉಪಕಾರಕ್ಕೆ ತಕ್ಕ ಪ್ರತ್ಯುಪಕಾರವನ್ನು ಮಾಡುವನಲ್ಲದೆ ಮಾಡದಿರನು " ಎಂದು ನುಡಿದನು.

ಆ ಮಾತನ್ನು ಕೇಳಿ ಲಕ್ಷ್ಮಣನು ಕೈಮುಗಿದುಕೊಂಡು ತನ್ನ ವಿನಯಗುಣ ಸಂಪತ್ತಿಯನ್ನು ತೋರಿಸುತ " ಎಲೈ ಶ್ರೀರಾಮನೆ, ನೀನು ಹೇಳಿದ ಮಾತುಗಳೆಲ್ಲವು ಸತ್ಯವೇ ಸರಿ ; ಶರತ್ಕಾಲವು ಬಂದಮೇಲೆ ಸುಗ್ರೀವನು ಅತಿ ಶೀಘ್ರವಾಗಿ ನಿನ್ನ ಕಾರ್ಯವನ್ನು ಸಾಧ್ಯಮಾಡುವನು ; ಆದಕಾರಣ ನೀನು ಶತ್ರುನಿಗ್ರಹವನ್ನು ಮಾಡುವದಕ್ಕಾಗಿ ನದೀಪ್ರವಾಹಗಳ ಉಬ್ಬು ತಗ್ಗುವಪರ್ಯಂತರವು ಶರತ್ಕಾಲದ ಬರವನ್ನು ಎದುರುನೋಡುತ ಕೋಪವನ್ನು ಸಹಿಸಿಕೊಂಡಿರು ; ನಾವು ನಾಲ್ಕುತಿಂಗಳುಗಳ ಪರ್ಯಂತರ ಇಲ್ಲಿರೋಣ ; ಆಮೇಲೆ ಶತ್ರುಸಂಹಾರವನ್ನು ಮಾಡು " ಎಂದು ಬಡಂಬಡಿಕೆಯನ್ನು ಹೇಳುತ್ತಿದ್ದನು.

## ೨೮ನೇ ಅಧ್ಯಾಯ.

### ವರ್ಷಾಕಾಲ ವರ್ಣನೆ.

ಆ ಬಳಿಕ ಶ್ರೀರಾಮನು ಲಕ್ಷ್ಮಣನನ್ನು ಕುರಿತು "ಎಲೈ ಲಕ್ಷ್ಮಣ, ವರ್ಷಾಕಾಲವು ಸಿದ್ಧವಾಯಿತು; ಎಲ್ಲಿ ನೋಡಿದರು ಆಕಾಶವು ಪರ್ವತಾಕಾರವಾಗಿ ನೀರುಂಡ ಮೇಘಗಳಿಂದ ಇಟ್ಟಣಿಸಲ್ಪಟ್ಟಿದೆ; ಆಕಾಶವು ಸೂರ್ಯಕಿರಣಗಳಿಂದ ಭೂಸಾರವನ್ನೂ ವೃಕ್ಷಗಳ ಸಾರವನ್ನೂ ತೆಗೆದುಕೊಂಡು ಕಾರ್ತೀಕಮಾಸಾರಭ್ಯವಾಗಿ ಆಷಾಢಮಾಸ ಪರ್ಯಂತರ ಒಂಭತ್ತು ತಿಂಗಳು ಉದಕಗರ್ಭವನ್ನು ಧರಿಸಿ ಶ್ರಾವಣಮಾಸದಲ್ಲಿ ಸಮಸ್ತ ಷಡ್ರಸಗಳಿಗೂ ಆಧಾರವಾದ ಮಳೆಯನ್ನು ಕರೆಯುತ್ತಿದೆ; ವರ್ಷಾಕಾಲದಲ್ಲಾಗುವ ಕೊಡಸೀಗೆ ಮತ್ತಿ ಮೊದಲಾದ ಪುಷ್ಪಗಳನ್ನು ತಂದು ಮಾಲೆಯನ್ನು ಕಟ್ಟಿ ಈ ಮೇಘಪಙ್ಕ್ತಿಗಳೆಂಬ ಸೋಪಾನವನ್ನೇರಿ ಸೂರ್ಯಮಂಡಲಕ್ಕೆ ಹೋಗಿ ಸೂರ್ಯನನ್ನು ಅರ್ಚನೆಮಾಡಬಹುದೆಂಬಂತೆ ಮೇಘಗಳ ಸಾಲುಗಳು ಒಪ್ಪುತ್ತಿವೆ! ಸಂಧ್ಯಾಕಾಲದ ಕೆಂಪುಳ್ಳದ್ದಾಗಿ ನಡುವೆ ಬಿಳುಪಾದ ಮೇಘಗಳೆಂಬ ವಸ್ತ್ರದ ತುಂಡುಗಳಿಂದ ಮಂದಿಹಾಕಿ ಕಟ್ಟಲ್ಪಟ್ಟ ಗಾಯವುಳ್ಳದ್ದೋ ಎಂಬಂತೆ ಆಕಾಶವು ಒಪ್ಪುತ್ತಿದೆ; ಮತ್ತು ಬಿಳುಪಾದ ಮೇಘಗಳುಳ್ಳದ್ದಾಗಿ ಸಾಯಂಕಾಲದ ಕೆಂಪೆಂಬ ಕುಂಕುಮ ಗಂಧಾನುಲೇಪನವುಳ್ಳದ್ದಾಗಿ ಮಂದಮಾರುತವೆಂಬ ನಿಟ್ಟುಸುರುಳ್ಳದ್ದಾಗಿ ಕಾಮುಕನಾದ ಪುರುಷನಂತೆ ಒಪ್ಪುತ್ತಿದೆ; ಮೊದಲು ಗ್ರೀಷ್ಮಕಾಲದಲ್ಲಿ ಸೂರ್ಯಕಿರಣಗಳಿಂದ ಪರಿತಪಿಸಲ್ಪಟ್ಟು ಈಗ ಮಳೇಹನಿಗಳಿಂದ ನೆನೆದು ಶೆಕೆಯನ್ನೆಬ್ಬಿಸುವ ಈ ಭೂಮಿಯು ವಿರಹಶೋಕವನ್ನು ಸಹಿಸಲಾರದೆ ನಿಟ್ಟುಸುರುಬಿಡುತಿರುವ ಸೀತಾದೇವಿಯಂತೆ ಒಪ್ಪುತ್ತಿದೆ! ಮೇಘಮಂಡಲದಿಂದ ಬಿಡಲ್ಪಟ್ಟ ಆಬಲದ ಹೂವಂತೆ ಅತಿ ಶೈತ್ಯವಾದ ಉದಕಧಾರೆಗಳು ವಿರಹಜ್ವಾಲೆಯನ್ನು ನಿಲ್ಲಿಸಿ ಸ್ನಾನಮಾಡುವದಕ್ಕೆ ಯೋಗ್ಯವಾಗಿವೆ; ವಿಕಸಿತವಾದ ಮತ್ತೀಮರಗಳಿಂದಲೂ ತಾಳೇಗಿಡಗಳಿಂದಲೂ ಮನೋಹರವಾದ ಈ ಪರ್ವತವು ವರ್ಷಧಾರೆಗಳಿಂದ ಪಟ್ಟಾಭಿಷೇಕವನ್ನು ಮಾಡಿಕೊಳ್ಳುವ ಸುಗ್ರೀವನೋ ಎಂಬಂತೆ ಒಪ್ಪುತ್ತಿದೆ; ಪರ್ವತಗಳು ಮೇಘಗಳೆಂಬ ಕೃಷ್ಣಾಜಿನ ಯಜ್ಞೋಪವೀತಗಳನ್ನು ಧರಿಸಿಕೊಂಡು ಸುತ್ತಲುಂಟಾಗುವ ಧ್ವನಿಗೆ ಪ್ರತಿಧ್ವನಿ ಕೊಡುತ್ತಿರುವ ತಮ್ಮ ಗುಹೆಗಳಲ್ಲಿ ಹೊಕ್ಕ ಗಾಳಿಯ ಧ್ವನಿಯೆಂಬ ಅಧ್ಯಯನಧ್ವನಿಯುಳ್ಳ ಬ್ರಹ್ಮಚಾರಿಗಳೋ ಎಂಬಂತೆ ಒಪ್ಪುತ್ತಿವೆ; ಗುಡುಗುತ್ತಿರುವ ನೀಲಮೇಘಗಳು ಮಿಂಚುಗಳೆಂಬ ಚಬುಕು ಪೆಟ್ಟಿನ ವೇದನೆಯಿಂದ ಮೆಲ್ಲಗೆ ತೆರಳುತ್ತಿವೆ; ನೀಲವರ್ಣವಾದ ಮೇಘಮಂಡಲದಲ್ಲಿ ಹೊಳೆಯುವ ಮಿಂಚುಗಳು ಶ್ಯಾಮಲವರ್ಣವಾದ ರಾವಣನ ತೊಡೆಯಮೇಲೆ ಕುಳಿತುಕೊಂಡು ಬಿಸುಸುಯ್ಯುತಿದ್ದ ಸೀತಾದೇವಿಯಂತೆ ಒಪ್ಪುತ್ತಿವೆ! ದಿಕ್ಕುಗಳು ಮೇಘಗಳಿಂದ ವ್ಯಾಪಿಸಲ್ಪಟ್ಟಂಥಾವಾಗಿ ಚಂದ್ರಸೂರ್ಯರು ಕಾಣಿಸದಿರುವದರಿಂದ ಕತ್ತಲೆಗವಿದಂಥಾವಾಗಿ ಕಾಮುಕರಾದವರಿಗೆ ಅನುಕೂಲವಾಗಿವೆ! ಎಲೈ ಲಕ್ಷ್ಮಣ, ವಿರಹಶೋಕದಿಂದ ಕಂಗೆಟ್ಟಿರುವ ನನಗೆ ವಿರಹಾಗ್ನಿಯನ್ನುಂಟುಮಾಡುತ ಪರ್ವತತಪ್ಪಲುಗಳಲ್ಲಿ ಮಳೇಹನಿಗಳನ್ನು ಒಯುಸುತ ಪುಷ್ಪಿತವಾಗಿ ಕೊರಟೆಪುಷ್ಪಗಳುಳ್ಳ ಈ ವೃಕ್ಷಗಳನ್ನು ನೋಡು; ಈ ವರ್ಷಾಕಾಲದಲ್ಲಿ ಭೂಮಿಯ ಧೂಳು ತಗ್ಗಿದೆ; ಗಾಳಿಯು ಅತಿ ಶೀತವಾಗಿದೆ; ಎಲ್ಲಿನೋಡಿದರು ಮಳೆಯಿಂದ ನೆನೆದ ಭೂಮಿಯಲ್ಲಿ ಶೆಕೆಯುಂಟಾಗುತ್ತಿದೆ; ದಾರಿಸಂಚಾರಕರ ಸಂಚಾರವು ಅಡಗಿದೆ; ಅರಸುಗಳ ದಂಡಯಾತ್ರೆಯು ನಿಲ್ಲಲು ಭಟರು ತಮ್ಮ ಸ್ತ್ರೀಯರಿರುವ ಸ್ಥಳಕ್ಕೆ ತಿರಿಗಿ ಹೋಗುತ್ತಿದ್ದಾರೆ; ಚಕ್ರವಾಕಪಕ್ಷಿಗಳು ಮಾನಸಸರೋವರದಲ್ಲಿದ್ದುಕೊಂಡು ವರ್ಷಾಕಾಲವನ್ನು ಕಳೆಯಬೇಕೆಂದು ತಮ್ಮ ಸ್ತ್ರೀಪಕ್ಷಿಗಳನ್ನು ಕೂಡಿಕೊಂಡು ಹೋಗುತ್ತಿವೆ! ಮಾರ್ಗಗಳಲ್ಲಿ ಕುದುರೆ ಮೊದಲಾದ ವಾಹನಗಳ ಸಂಚಾರವಿಲ್ಲ; ಮೇಘಗಳಿಂದ ಮುಚ್ಚಲ್ಪಟ್ಟ ಆಕಾಶಮಂಡಲವು ಒಂದು ದಿಕ್ಕಿನಲ್ಲಿ ಬೆಳಕಾಗಿಯೂ ಮತ್ತೊಂದು ದಿಕ್ಕಿನಲ್ಲಿ ಕತ್ತಲೆಗವಿದೂ ಇದೆ; ಪರ್ವತಗಳು ಕೆಂಪಾದ ಗೈರಿಕಾದಿ ಧಾತುಗಳಿಂದಲೂ ನವಿಲುಗಳ ಧ್ವನಿಗಳಿಂದಲೂ ಉದಕಗಳನ್ನು ವಹಿಸುವ ಗಿರಿನದಿಗಳಿಂದಲೂ ಅತಿ ಮನೋಹರವಾಗಿವೆ; ಎಲ್ಲಿನೋಡಿದರು ಪಲ್ಲವಿತವಾದ ಮಾವಿನಮರಗಳಲ್ಲಿ ಅತಿ ರಸವತ್ತಾದ ತುಂಬಿಗಳ ತನುಕಾಂತಿಗೆ ಸಮಾನವರ್ಣವಾಗಿ ಮತ್ತು ಅನೇಕವರ್ಣವಾದ ಮಾವಿನಹಣ್ಣು

ಗಳು ಘೋಷದಿಂದ ತೊಟ್ಟುಕಳೆದು ಬೀಳುತ್ತಿವೆ; ಮಿಂಚುಗಳೆಂಬ ಪತಾಕೆಗಳುಳ್ಳವಾಗಿ ಬೆಳ್ಳಕ್ಕಿಯಪಜ್ತ್ತಿಗಳೆಂಬ ಸರಪಣಿಗಳುಳ್ಳವಾಗಿ ಪರ್ವತಾಕಾರವಾದ ಮೇಘಗಳು ಗುಡುಗಿನ ಧ್ವನಿಗಳಿಂದ ಯುದ್ಧರಂಗದಲ್ಲಿ ಪರಬಲದಿಂದ ಮುರಿದೋಡುವ ಆನೆಗಳೋ ಎಂಬಂತೆ ಒಪ್ಪುತ್ತಿವೆ; ಪರ್ವತ ತಪ್ಪಲುಗಳು ಮಳೇ ಉದಕಗಳ ಪ್ರವಾಹದಿಂದ ಲೂ ಎಳೇ ಗರಿಕೆಗಳಮೇಲೆ ನರ್ತನಮಾಡುವ ನವಿಲುಗಳಿಂದಲೂ ಕುಳಿತಿರುವ ಬೆಳ್ಳಕ್ಕಿಗಳಿಂದಲೂ ಮೆರೆಯುವ ಘನಗಳುಳ್ಳವಾಗಿ ಅತಿ ಮನೋಹರವಾಗಿ ಒಪ್ಪುತ್ತಿವೆ; ಉದಕಗರ್ಭಿತವಾಗಿ ಅತ್ಯಂತ ಭಾರವನ್ನು ಧರಿಸಿರುವ ಮೇಘಗಳು ಬೆಳ್ಳಕ್ಕಿಗಳುಳ್ಳವಾಗಿ ಗುಡುಗುತ ಮಹತ್ತಾದ ಪರ್ವತದ ಕೋಡುಗಲ್ಲುಗಳಲ್ಲಿ ನಿಂತು ಶ್ರಮೆಯ ನ್ನು ಪರಿಹರಿಸಿಕೊಂಡು ಮುಂದಕ್ಕೆ ಹೋಗುತ್ತಿವೆಯೋ ಎಂಬಂತೆ ಒಪ್ಪುತ್ತಿವೆ; ನೀರುಂಡ ಮೇಘಗಳ ನ್ನು ಬಯಸಿ ಸಾಲಾಗಿ ಹೋಗುವ ಬೆಳ್ಳಕ್ಕಿಗಳು ಬಿರುಘಾಳಿಯಿಂದ ಚದರಿ ಮೇಘಮಂಡಲಕ್ಕೆ ಅಲಂಕರಿಸಲ್ಪಟ್ಟ ಬಿಳೀ ತಾವರೆಕಮಲಗಳ ಮಾಲೆಯೊ ಎಂಬಂತೆ ಒಪ್ಪುತ್ತಿವೆ; ಭೂಮಿಯು ಇಂದ್ರಗೋಪ ಹುಳಗಳಿಂದ ಬೆರ ಸಲ್ಪಟ್ಟ ಎಳೇ ಹುಲ್ಲುಳ್ಳದ್ದಾಗಿ ಗಿಣಿಗಳ ಚಿತ್ರವುಳ್ಳ ವಸ್ತ್ರವನ್ನು ಹೊದ್ದಿರುವ ಸ್ತ್ರೀಯಂತೆ ಒಪ್ಪುತ್ತಿದೆ! ವರ್ಷಾಕಾಲವು ಪ್ರಾಪ್ತವಾದ್ದರಿಂದ ನದಿಗಳು ಅತಿ ವೇಗದಿಂದ ಸಮುದ್ರವನ್ನೈದುತ್ತಿವೆ; ಬೆಳ್ಳಕ್ಕಿಗಳು ಅತಿ ಹರ್ಷದಿಂದ ಮೇಘಮಂಡಲವನ್ನೈದುತ್ತಿವೆ; ಈಗ ಕಾಮುಕಿಯರಾದ ಸ್ತ್ರೀಯರು ತಮ್ಮ ಪುರುಷರ ಬಳಿಗೈ ದುತ್ತಿರುವರು! ವನಗಳು ನರ್ತನಮಾಡುವ ನವಿಲುಗಳುಳ್ಳವಾಗಿವೆ; ಕಡಬ ವೃಕ್ಷಗಳು ಕುಸುಮಿತವಾಗಿವೆ; ವೃಷಭಗಳು ಗೋವುಗಳಲ್ಲಿ ಕಾಮಾತುರವುಳ್ಳವಾಗಿವೆ; ಭೂಮಿಯು ಪೈರುಪಚ್ಚೆಗಳಿಂದ ರಮಣೀಯವಾಗಿದೆ; ನದಿಗಳು ವೆಗ್ಗಳವಾಗಿ ಪ್ರವಹಿಸುತ್ತಿವೆ; ಮೇಘಗಳು ಮಳೆಗರೆಯುತ್ತಿವೆ; ಮದ್ದಾನೆಗಳು ಆನಂದದಿಂದ ಬೃಂಹಿ ತಧ್ವನಿ ಮಾಡುತ್ತಿವೆ; ವನಗಳು ಪುಷ್ಪಿತವಾಗಿ ಫಲಿತವಾಗಿ ರಮಣೀಯವಾಗಿ ಒಪ್ಪುತ್ತಿವೆ; ಈಗ ವಿರಹಿಗಳು ತಮ್ಮ ಪ್ರಾಣವಲ್ಲಭರನ್ನು ನೆನೆದು ಧ್ಯಾನಮಾಡುತ್ತಿರುವರು! ಎಲ್ಲಿನೋಡಿದರೂ ನವಿಲುಗಳು ಕುಣಿಯುತ್ತಿವೆ; ಕಪಿಗಳು ಪರಿಣಮಿಸುತ್ತಿವೆ; ಆನೆಗಳೂ ನವಿಲುಗಳೂ ಪರ್ವತ ತಾಳೇ ಪುಷ್ಪಗಳನ್ನು ಆಘ್ರಾಣಿಸಿ ಧ್ವನಿಗೈ ಯುತ್ತಿವೆ; ತುಂಬಿಗಳು ಕುಸುಮಿತವಾದ ಕಡಬಪುಷ್ಪಗಳಲ್ಲರಗಿ ಮಳೇಧಾರೆಗಳಿಂದ ಹುಯ್ಯಲ್ಪಡುತ ಪುಷ್ಪ ರಸವನ್ನಾಸ್ವಾದಿಸುವದರಿಂದುಂಟಾಗುವ ಸಂತೋಷವನ್ನು ಪಡೆಯುತ್ತಿವೆ; ಮಸಿಯ ಚೂರ್ಣಕ್ಕೆ ಸಮಾನವಾದ ಕಾಂತಿಯುಳ್ಳ ರಸಭರಿತವಾದ ವೃಕ್ಷಫಲಗಳಿಂದ ಇಟ್ಟಣಿಸಿರುವ ನೇರಳೆಮರದ ಕೊಂಬುಗಳು ಮರೆಯಾಗಿರುವ ತುಂಬಿಗಳಿಂದ ಕೈಗಳಂತೆ ಒಪ್ಪುತ್ತಿವೆ; ಮಿಂಚೆಂಬ ಪತಾಕೆಗಳಿಂದ ಅಲಂಕರಿಸಲ್ಪಟ್ಟದ್ದಾಗಿ ಘರ್ಜನೆಯೆಂಬ ಗಂಭೀ ರಧ್ವನಿಯುಳ್ಳ ಮೇಘಗಳು ಯುದ್ಧಸನ್ನಾಹವಾಗಿ ನಿಂತಿರುವ ಆನೆಗಳಂತೆ ಒಪ್ಪುತ್ತಿವೆ; ಪರ್ವತ ವನಾಂತರಗಳಲ್ಲಿ ಸಂಚರಿಸುವ ಕಾಡಾನೆಗಳು ಗುಡುಗಿನ ಧ್ವನಿಯನ್ನು ಕೇಳಿ ಪ್ರತಿಯಾನೆಯ ಧ್ವನಿಯೆಂಬ ಸಂಶಯದಿಂದ ತಿರಿಗಿ ಬರು ತ್ತಿವೆ; ಅನೇಕ ಮೃಗಪಕ್ಷಿಗಳಿಗೆ ಆಶ್ರಯವಾದ ವನಗಳು ತಮ್ಮಲ್ಲಿರುವ ತುಂಬಿಗಳ ಝೇಂಕಾರಗಳಿಂದ ಗಾನಮಾ ಡುವಂತೆಯೂ ಪುಷ್ಪಿತವಾದ ಕಡಬ ಸಜ್ಜರಸ ಅಶ್ವತ್ಥ ಮತ್ತಿ ಅಣಬೆಗಳಲ್ಲಿರುವ ನವಿಲುಗಳಿಂದ ನರ್ತನಮಾಡು ವಂತೆಯೂ ಒಪ್ಪುತ್ತಿವೆ! ಎಲೆಗಳಮೇಲೆ ಬೀಳುವ ಮಳೇಹನಿಗಳನ್ನು ಪಕ್ಷಿಗಳು ಅಮೃತವೆಂದೆಣಿಸುತ್ತಿವೆಯೊ ಎಂಬಂತೆ ತೃಷೆಯಿಂದ ಕಂಗೆಟ್ಟು ಬಂದು ಅತ್ಯಂತ ಸಂತೋಷದಿಂದ ಪಾನಮಾಡುತ್ತಿವೆ; ತಂತಿಯು ಮಧುರಸ್ವರದಿಂ ದಲೂ ತಾಳಮದ್ದಳೇ ಧ್ವನಿಯಿಂದಲೂ ಕೂಡಿದ ಸಂಗೀತವೋ ಎಂಬಂತೆ ತುಂಬಿಗಳ ಝೇಂಕಾರವು ಕಪಿಗಳ ಕಂ ಠಸ್ವರದಿಂದಲೂ ಗುಡುಗಿನ ಧ್ವನಿಯಿಂದಲೂ ಕೂಡಿ ಒಪ್ಪುತ್ತಿದೆ; ತಮ್ಮ ಸ್ಥಾನಗಳಲ್ಲಿ ಮಲಗಿರುವ ಕಪಿಗಳು ಗು ಡುಗಿನ ಧ್ವನಿಯಿಂದೆದ್ದು ನಿದ್ರೆಯನ್ನು ಬಿಟ್ಟು ಮಳೆಯಲ್ಲಿ ನೆನೆದು ಆನಂದದಿಂದ ಸಂಚರಿಸುತ್ತಿವೆ; ನದಿಗಳು ಚಕ್ರ ವಾಕಪಕ್ಷಿಗಳು ಬೆಂಬಿಡಿದು ಬರಲು ಇಕ್ಕೆಲದ ತಡಿಗಳನ್ನು ತಾಕುತ ಅತಿ ಸಂಭ್ರಮದಿಂದ ತಮಗೆ ಪತಿಯಾದ ಸ ಮುದ್ರರಾಜನ ಬಳಿಗೆ ಹೋಗುತ್ತಿವೆ; ನೀರುಂಡ ಕಪ್ಪಾದ ಮೇಘಗಳು ನೀಲವರ್ಣವಾದ ಮೇಘಗಳಲ್ಲಿ ಬೆರೆದು ಕಾಡುಗಿಚ್ಚಿನಿಂದ ಬೆಂದ ಪರ್ವತಗಳಂತೆ ಒಪ್ಪುತ್ತಿವೆ; ಆನೆಗಳು ಮದದಿಂದ ಧ್ವನಿಗೈಯುತ್ತಿರಲು ನವಿಲುಗಳು

ವೃಕ್ಷಗಳಲ್ಲಿ ಅತಿ ಮನೋಹರವಾಗಿ ಸಂಚರಿಸುತ್ತಿವೆ; ಇಂದ್ರಗೋಪಹುಳಗಳು ಎಳೇಗರಿಕೆಗಳಿಂದಲೂ ಕುಸುಮಿತವಾದ ಕಡಬವೃಕ್ಷ ಮತ್ತೀವೃಕ್ಷಗಳ ಪುಷ್ಪಗಳಿಂದಲೂ ಪರಿಮಳವುಳ್ಳವಾಗಿ ರಮಣೀಯವಾದ ವನಗಳಲ್ಲಿ ಸಂಚರಿಸುತ್ತಿವೆ; ತುಂಬಿಗಳು ಮಳೇಧಾರೆಗಳಿಂದ ಉದುರಿದ ಕೇಸರಗಳುಳ್ಳ ಕಮಲಗಳನ್ನು ಬಿಟ್ಟು ಕಡಬವೃಕ್ಷಗಳ ಕುಸುಮರಸವನ್ನು ಪಾನಮಾಡುತ್ತಿವೆ! ವರ್ಷಾಕಾಲದಲ್ಲಿ ಆನೆಗಳು ಅತಿಹರ್ಷದಿಂದ ಸಂಚರಿಸುತ್ತಿರುವವು; ವನಗಳಲ್ಲಿ ಸಿಂಹಗಳು ಸಂತೋಷದಿಂದಿರುವವು! ಪರ್ವತಗಳು ರಮಣೀಯವಾದ ವನಗಳುಳ್ಳವಾಗಿ ಅತಿ ಮನೋಹರವಾಗಿರುವವು; ದೇವತೆಗಳು ಮೇಘಗಳಿಂದ ಮಳೆಗರಿಯುತ್ತಿರುವರು! ಮೇಘಗಳು ಉದಕದಿಂದ ಪರಿಪೂರ್ಣವಾಗಿ ಅಂತರಿಕ್ಷಮಾರ್ಗವನ್ನು ವ್ಯಾಪಿಸಿಕೊಂಡು ಮದಸೊಕ್ಕಿದ ಆನೆಗಳಂತೆ ಘರ್ಜಿಸುತ್ತಿವೆ; ಕೆರೆಗಳೂ ನದಿಗಳೂ ಕೊಳಗಳೂ ಭಾವಿಗಳೂ ತುಂಬಿ ಉದಕಪ್ರವಾಹಗಳಿಂದ ಭೂಮಂಡಲವೆಲ್ಲವೂ ಪರಿಪೂರ್ಣವಾಗಿದೆ; ಮಳೆಯ ಆರ್ಭಟೆಯಿಂದ ಘಾಳಿಯು ಅತಿ ಕೋಲಾಹಲವಾಗಿ ಬೀಸುತ್ತಿದೆ; ಎಲ್ಲಿನೋಡಿದರು ನದಿಗಳು ಉಕ್ಕಿತ ಮಾರ್ಗವಲ್ಲದ ಮಾರ್ಗದಲ್ಲಿ ಹರಿಯುತ್ತಿವೆ; ಅರಸರು ಮನುಷ್ಯರಿಂದ ತರಲ್ಪಡುವ ಉದಕಕುಂಭಗಳಿಂದ ಅಭಿಷೇಕಮಾಡಿಸಿಕೊಳ್ಳುವಂತೆ ಪರ್ವತಗಳು ದೇವತೆಗಳಿಂದ ಕೊಡಲ್ಪಟ್ಟ ವಾಯುವಿನೊಡನೆ ಕೂಡಿದ ಮೇಘಗಳೆಂಬ ಉದಕಕುಂಭಗಳಿಂದ ಅಭಿಷೇಕಮಾಡಲ್ಪಡುತ್ತಿವೆಯೊ ಎಂಬಂತೆ ಒಪ್ಪುತ್ತಿವೆ; ಮೇಘಮಂಡಲದಿಂದ ಮರೆಸಲ್ಪಟ್ಟ ಅಂತರಿಕ್ಷದಲ್ಲಿ ಸೂರ್ಯನು ಕಾಣಿಸುವದಿಲ್ಲ; ಹೊಸ ಉದಕಪ್ರವಾಹಗಳಿಂದ ಭೂಮಂಡಲವೆಲ್ಲವು ಪರಿಪೂರ್ಣವಾಗಿದೆ! ಅಂಧಕಾರದಿಂದ ಕವಿಯಲ್ಪಟ್ಟ ದಿಕ್ಕುಗಳು ಪ್ರಕಾಶವಿಲ್ಲದಿರುವದರಿಂದ ಮಹತ್ತಾದ ಪರ್ವತದ ಕೋಡುಗಲ್ಲುಗಳು ಕಾಣಿಸುವದಿಲ್ಲ; ಪರ್ವತದ ತಪ್ಪಲುಗಳ ಕೋಡುಕಲ್ಲುಗಳ ಕಲ್ಲರೆಗಳಮೇಲೆ ಬೀಳುವ ವಜ್ರೋದಕಗಳು ಆ ಪರ್ವತಕ್ಕೆ ಅಲಂಕರಿಸಲ್ಪಟ್ಟ ಮುತ್ತಿನ ಸರಗಳಂತೆ ಒಪ್ಪುತ್ತಿವೆ; ಈ ಗುಹೆಯ ಬಾಗಲ ಕಲ್ಲರೆಗಳಮೇಲೆ ಬಿದ್ದು ಪುಟಹಾರಿ ದಿಕ್ಕುಗಳಲ್ಲಿ ಕೆದರಿ ಬೀಳುತ್ತಿರುವ ಉದಕಬಿಂದುಗಳು ಸುರತಕೇಳಿಯಲ್ಲಿರುವ ದೇವಸ್ತ್ರೀಯರ ಸ್ತನಭಾರದಿಂದ ಹರಿದು ಬೀಳುತ್ತಿರುವ ಮುತ್ತಿನ ಸರಗಳೊ ಎಂಬಂತೆ ಒಪ್ಪುತ್ತಿವೆ! ಈಗ ಸೂರ್ಯಾಸ್ತಮಯಸಮಯವನ್ನು ತಮ್ಮ ಗೂಡುಗಳನ್ನು ಸೇರುತ್ತಿರುವ ಪಕ್ಷಿಗಳಿಂದಲೂ ಮುಕುಳಿತವಾಗುವ ಕಮಲಗಳಿಂದಲೂ ವಿಕಸಿತವಾಗುವ ಇರುವಂತಿಗೆಗಳಿಂದಲೂ ಮಾತ್ರವೇ ತಿಳಿಯಕೂಡುವದು; ಉದಕಪ್ರವಾಹದಿಂದ ಮರೆಸಲ್ಪಟ್ಟ ಮಾರ್ಗಗಳು ದಂಡಯಾತ್ರೆ ಹೊರಡುವ ಅರಸರ ಸೇನೆಯನ್ನು ತಡೆಯುವದರಿಂದ ಶತ್ರುಮಾರ್ಗಗಳಿಗೆ ಸಮಾನವಾಗಿವೆ! ಎಲೈ ಲಕ್ಷ್ಮಣ, ಈ ಶ್ರಾವಣಮಾಸದಲ್ಲಿ ಸಾಮಶಾಖಾಧ್ಯಾಯಿಗಳಾದ ಬ್ರಾಹ್ಮಣರಿಗೆ ಸಾಮಗಾನಮಾಡುವದಕ್ಕೆ ಸಮಯವಾಗಿದೆ; ಈಗ ಭರತನು ಸಮಸ್ತ ಸಾಮಗ್ರಿಗಳನ್ನು ಸಂಪಾದಿಸಿಕೊಂಡು ಸ್ವಸ್ಥಚಿತ್ತನಾಗಿರುವನು! ಎಲೈ ಲಕ್ಷ್ಮಣ, ಈ ಸಮಯದಲ್ಲಿ ಸರಯೂ ನದಿಯು ಪ್ರವಾಹ ಉಬ್ಬಿ ಮೊರೆಯುತ್ತಿದ್ದರೆ ಅಯೋಧ್ಯಾಪಟ್ಟಣವು ನನ್ನ ಬರವನ್ನು ನೋಡುತ ಕೂಗುತ್ತಿದೆಯೋ ಎಂಬಂತೆ ಒಪ್ಪುತ್ತಿರುವದು! ಈ ಸಮಯದಲ್ಲಿ ಶತ್ರುವನ್ನು ಜಯಿಸಿ ರಾಜ್ಯಾಧಿಪತ್ಯವನ್ನು ವಹಿಸಿಕೊಂಡು ತನ್ನ ಸ್ತ್ರೀಸಮೇತನಾಗಿರುವ ಸುಗ್ರೀವನು ಅತಿ ಹರ್ಷದಿಂದ ಸುಖಿಸಿಕೊಂಡಿರುವನು! ಎಲೈ ಲಕ್ಷ್ಮಣ, ಮೊದಲು ರಾಜ್ಯಭ್ರಷ್ಟನಾಗಿ ಆಮೇಲೆ ಸೀತಾರಹಿತನಾದ ನಾನು ಪ್ರವಾಹದಿಂದ ಕೊರೆದು ಬಿದ್ದ ನದಿಯ ತಡಿಯಂತೆ ದುಃಖಪಡುತ್ತಿದ್ದೇನೆ! ಎಲೈ ಲಕ್ಷ್ಮಣ, ನನಗೆ ಸೀತಾವಿಯೋಗದಿಂದುಂಟಾದ ದುಃಖದಿಂದ ನಮ್ಮ ಶತ್ರುವಾದ ರಾವಣನು ಅಸಾಧ್ಯನೆಂದು ತೋರುತ್ತಿದೆ! ಎಲೈ ಲಕ್ಷ್ಮಣ, ಸಂಚರಿಸುವದಕ್ಕೆ ಶಕ್ಯವಲ್ಲದ ಈ ಮಾರ್ಗಗಳನ್ನು ನೋಡು; ಶರಣಾಗತನಾದ ಸುಗ್ರೀವನನ್ನು ನಿಂದಿಸುವದಕ್ಕೆ ಅವಕಾಶವಿಲ್ಲ; ಬಹುಕಾಲವು ಸ್ತ್ರೀವಿಯೋಗದಿಂದ ನೊಂದು ಈಗ ಆಕೆಯೊಡನೆ ಕೂಡಿರುವ ಸುಗ್ರೀವನನ್ನು ನನ್ನ ಕಾರ್ಯನಿಮಿತ್ತವಾಗಿ ನಿಷ್ಠುರವಾಗಿ ನುಡಿಯುವದಕ್ಕೆ ಮನಸ್ಸು ಬರಲಿಲ್ಲ; ಆತನು ಈ ವರ್ಷಾಕಾಲದಲ್ಲಿ ಸುಖವಾಗಿದ್ದು ಶರತ್ಕಾಲವು ಬಂದ ಮೇಲೆ ನಾವು ಮಾಡಿದ ಉಪಕಾರವನ್ನು ಮರೆಯದೆ ನಮ್ಮ ಕಾರ್ಯವನ್ನು ಮಾಡುವನು; ಧೈರ್ಯವಂತನಾದ ಪುರುಷನು ಮಾಡಿದ ಉಪಕಾರಕ್ಕೆ ತಕ್ಕ ಪ್ರತ್ಯುಪಕಾರವನ್ನು ಮಾಡುವನಲ್ಲದೆ ಮಾಡದಿರನು!" ಎಂದು ನುಡಿದನು.

ಆ ಮಾತನ್ನು ಕೇಳಿ ಲಕ್ಷ್ಮಣನು ಕೈಮುಗಿದುಕೊಂಡು ತನ್ನ ವಿನಯಗುಣ ಸಂಪತ್ತಿಯನ್ನು ತೋರಿಸುತ ಶ್ರೀರಾಮನನ್ನು ಕುರಿತು "ಎಲೈ ಶ್ರೀರಾಮನೆ, ನೀನು ಹೇಳಿದ್ದೆಲ್ಲವು ಯಥಾರ್ಥವು; ಸುಗ್ರೀವನು ಶತ್ರುಗಳನ್ನು ನಿಗ್ರಹಿಸುವದರಲ್ಲಿ ಕಾಲವಿಳಂಬವನ್ನು ಮಾಡುವವನಲ್ಲ; ನೀನು ಈ ವರ್ಷಾಕಾಲವು ಕಳೆದು ಶರತ್ಕಾಲವು ಬರುವ ಪರ್ಯಂತರವು ಕ್ಷಮಿಸಿಕೊಂಡಿರು" ಎಂದು ಬಿನ್ನವಿಸಿದನು.

## ೨೯ನೇ ಅಧ್ಯಾಯ.

### ಹನುಮಂತನು ಶ್ರೀರಾಮನ ಕಾರ್ಯವನ್ನು ಮಾಡಬೇಕೆಂದು ಸುಗ್ರೀವನಿಗೆ ಹೇಳಿದ್ದು.

ಎಲೈ ಕುಶಲವರುಗಳಿರಾ, ಅತ್ತಲ ಹನುಮಂತನು ವರ್ಷಾಕಾಲವು ಕಳೆದುಹೋಗುತ ಶರತ್ಕಾಲವು ಬರುತ್ತಿರಲು ಬೆಳದಿಂಗಳಿಂದ ನಿರ್ಮಲವಾಗಿ ಸಾರಸಪಕ್ಷಿಗಳಿಂದ ಪರಿಪೂರ್ಣವಾಗಿ ಮಿಂಚುಗಳೂ ಬೆಳ್ಳಕ್ಕಿಗಳೂ ಇಲ್ಲದಿದ್ದ ಮೇಘಮಂಡಲವನ್ನು ನೋಡಿ ಸಮಸ್ತ ಇಷ್ಟಾರ್ಥಗಳನ್ನೂ ಮನಸ್ಸಿಗನುಕೂಲವಾದ ಸ್ತ್ರೀಯನ್ನೂ ರಾಜ್ಯವನ್ನೂ ಪಡೆದು ಸ್ತ್ರೀಲೋಲನಾಗಿ ಸನ್ಮಾರ್ಗವನ್ನು ಬಿಟ್ಟು ಹಗಲಿರುಳೂ ಆಲಸ್ಯವಿಲ್ಲದೆ ದೇವಸ್ತ್ರೀಯರೊಡನೆ ರಮಿಸಿಕೊಂಡಿರುವ ದೇವೇಂದ್ರನಂತೆ ತನ್ನ ಸ್ತ್ರೀಯರೊಡನೆ ರಮಿಸಿಕೊಂಡು ಸಮಸ್ತ ರಾಜ್ಯಭಾರವನ್ನು ಮಂತ್ರಿಗಳವಶಮಾಡಿ ರಾಜ್ಯಭಾರ ಚಿಂತೆಯಿಲ್ಲದೆ ಕಾಮುಕನಾಗಿದ್ದ ಸುಗ್ರೀವನನ್ನು ಕುರಿತು "ಎಲೈ ಸುಗ್ರೀವನೆ, ಕಾಲದೇಶಗಳ ತತ್ವವಿಚಾರವನ್ನು ಬಲ್ಲ ಶ್ರೀರಾಮನು ನಿನ್ನನ್ನು ಧರ್ಮಜ್ಞನೆಂದೆಣಿಸಿಕೊಂಡಿದ್ದಾನೆ; ಆತನು ಅಪರಿಮಿತವಾದ ಪ್ರಭಾವವುಳ್ಳವನು; ಸದ್ಗುಣಗಳಿಂದ ಆತನಿಗೆ ಸಮಾನವಾದವರಿಲ್ಲ! ಅಂಥಾ ಸ್ವಾಮಿಯು ಮೊದಲು ನಿನ್ನ ಕಾರ್ಯವನ್ನು ಸಾಧ್ಯಮಾಡಿಕೊಟ್ಟನು; ನೀನು ವಿಳಂಬವಿಲ್ಲದೆ ಆತನ ಕಾರ್ಯವನ್ನು ಮಾಡಿಕೊಡು; ಕಪಿನಾಯಕರನ್ನು ಕರೇಕಳುಹಿಸು; ಕಾಲಾತಿಕ್ರಮವಾದೀತೆಂಬ ಅಂಜಿಕೆಯಿಲ್ಲದಿದ್ದರೆ ಕಾರ್ಯವು ಕೆಡುವದು; ಶ್ರೀರಾಮನು ನಿನಗೊಂದು ಕಾರ್ಯವನ್ನು ಮಾಡದಿದ್ದರೂ ನೀನು ಆತನ ಕಾರ್ಯವನ್ನು ಮಾಡಿಕೊಡಬೇಕು; ಆತನು ಮೊದಲೇ ನಿನ್ನ ಕಾರ್ಯವನ್ನು ಆಗಮಾಡಿಕೊಟ್ಟಮೇಲೆ ನೀನು ರಾಜ್ಯಕೋಶಗಳಿಗೆ ಸತ್ಯವಾಗಿ ನಡೆಯುವವನಾದರೆ ಆತನ ಕಾರ್ಯವನ್ನು ಮಾಡಿಕೊಡಬೇಕು; ನೀನು ಶ್ರೀರಾಮನಿಗೆ ಪ್ರೀತಿಯನ್ನುಂಟುಮಾಡಬೇಕೆಂದಿದ್ದರೆ ಯಾವಕಾರಣ ಆತನ ಕಾರ್ಯವನ್ನು ಮಾಡದಿದ್ಧೀ! ಸಮಸ್ತ ದೇವಾಸುರ ನರೋರಗಾದಿಗಳನ್ನೂ ತನ್ನ ಬಾಣಗಳಿಂದ ಕ್ಷಯಮಾಡುವದಕ್ಕೆ ಸಮರ್ಥನಾದ ಶ್ರೀರಾಮನು ನಿನ್ನ ಸಹಾಯವನ್ನು ಬಯಸಿಕೊಂಡಿದ್ಧಾನೆ; ಆತನು ತನ್ನ ಬಾಣತ್ಯಾಗದಿಂದ ಶಂಕಾತಂಕವಿಲ್ಲದೆ ನಿನ್ನ ಕಾರ್ಯವನ್ನು ಸಾಧ್ಯಮಾಡಿದನು; ಅಂಥಾವನ ಪ್ರಾಣಕಾಂತೆಯಾದ ಸೀತಾದೇವಿಯು ಭೂಮಿಯಮೇಲಿದ್ದರೂ ಅಂತರಿಕ್ಷಮಾರ್ಗದಲ್ಲಿದ್ದರೂ ದೇವ ದಾನವ ಗಂಧರ್ವರು ಮೊದಲಾದವರೂ ಆ ದೇವಿಗೆ ದ್ರೋಹವನ್ನು ಮಾಡಲಾರರು; ಇನ್ನು ರಾಕ್ಷಸರ ಪಾಡೇನು! ಎಲೈ ಸುಗ್ರೀವನೆ, ಮೊದಲು ನಿನಗೆ ಉಪಕಾರವನ್ನು ಮಾಡಿದ ಬಲವಂತನಾದ ಶ್ರೀರಾಮನಿಗೆ ನೀನು ಅವಶ್ಯವಾಗಿ ಪ್ರಿಯವಾದ ಕಾರ್ಯವನ್ನು ಮಾಡು. ಎಲೈ ಸುಗ್ರೀವನೆ, ಪಾತಾಳಲೋಕದಲ್ಲಿ ಭೂಲೋಕದಲ್ಲಿ ಉದಕಮಧ್ಯದಲ್ಲಿ ಅಂತರಿಕ್ಷಮಾರ್ಗದಲ್ಲಿ—ಎಲ್ಲಿ ಬೇಕಾದರು ನಮಗೆ ಸಂಚಾರವುಂಟು! ನಿನ್ನ ಆಜ್ಞಾಬಲದಿಂದ ನಾವ್ಯಾರಿಗೂ ಅಂಜೆವು; ನೀನ್ಯಾಕೆ ನಮಗೆ ಆಜ್ಞಾಪಿಸದಿದ್ಧೀ! ನಾವು ಎಲ್ಲಿಗೆ ಹೋಗಲಿ—ಎಲ್ಲಿರಲೀ!" ಎಂದು ಬಿನ್ನವಿಸಿದನು.

ಆ ಮಾತನ್ನು ಕೇಳಿ ಸುಗ್ರೀವನು ಸತ್ವಗುಣ ಸಂಪನ್ನನಾಗಿ ಸದ್ಬುದ್ಧಿಯುಳ್ಳವನಾಗಿ ಕಪಿನಾಯಕನಾದ ನೀಲನನ್ನು ಕರೆದು "ಎಲೈ ನೀಲನೆ, ಸಮಸ್ತ ಸೇನಾಪತಿಗಳನ್ನೂ ಕರೆಸಿ ಶೀಘ್ರವಾಗಿ ಸೇನೆಯನ್ನು ಕೂಡಿಸುವದಕ್ಕೆ ಯತ್ನಮಾಡು; ಗಡಿಗಳಲ್ಲಿರುವ ಕಪಿನಾಯಕರನ್ನು ಕರೇಕಳುಹಿಸು; ಮುಂದಣ ಕಾರ್ಯದೃಷ್ಟಿಯನ್ನು ನೀನು

ಬಲ್ಲೆ; ಎಂಟುದಿವಸಗಳೊಳಗಾಗಿ ಯಾವ ಕಪಿನಾಯಕನಾದರೂ ತನ್ನ ಸೇನೆಯನ್ನು ಕೂಡಿಕೊಂಡು ಬರದಿದ್ದರೆ ಆತನಿಗೆ ಶರೀರಾಂತವಾದ ಆಜ್ಞೆಯನ್ನು ಮಾಡಿಸುವೆನು; ಈ ಅರ್ಥದಲ್ಲಿ ಸಂಶಯವಿಲ್ಲ; ನೀನು ವೃದ್ಧರಾಗಿ ಬಲ್ಲವರಾದ ಕಪಿನಾಯಕರನ್ನು ಕರೆಸು" ಎಂದು ಆಸ್ಥಾನಮಂಟಪದಿಂದ ಅರಮನೆಗೆ ಹೋದನು.

## ೩೦ನೇ ಅಧ್ಯಾಯ.

### ಶರತ್ಕಾಲವರ್ಣನೆ—ಶ್ರೀರಾಮನು ಸುಗ್ರೀವನಮೇಲೆ ಕೋಪಿಸಿದ್ದು.

ಇತ್ತಲು ಶ್ರೀರಾಮನು ವರ್ಷಾಕಾಲವನ್ನು ಕಳೆದು ಶೋಕಪಡುತ ನಿರ್ಮಲವಾದ ಚಂದ್ರಮಂಡಲವನ್ನೂ ಬಿಳುಪಾದ ಮೇಘಮಂಡಲವನ್ನೂ ಬೆಳದಿಂಗಳಿಂದ ಬಿಳುಪಾದ ಆಕಾಶದಲ್ಲಿದ್ದ ತೆರೆಗಳನ್ನೂ ನೋಡುತ ಸುಗ್ರೀವನು ಕಾಮಾತುರದಿಂದ ಸ್ತ್ರೀಲೋಲನಾಗಿ ಅಂತಃಪುರದಲ್ಲಿದ್ದ ವರ್ತಮಾನವನ್ನು ಕೇಳಿ ಸೀತಾದೇವಿಯ ವಿಯೋಗದುಃಖದಿಂದ ಮೂರ್ಛಿತನಾಗಿ ಬಂದು ಕ್ಷಣದಲ್ಲಿ ಎಚ್ಚತ್ತು ಮಿಂಚುಗಳಿಲ್ಲದೆ ನಿರ್ಮಲವಾದ ಗಗನವನ್ನು ನೋಡಿ ನಾನಾ ಧಾತುಗಳಿಂದ ಅಲಂಕರಿಸಲ್ಪಟ್ಟ ಮಾಲ್ಯವತ್ಪರ್ವತದ ಕೋಡುಗಲ್ಲುಗಳನ್ನು ನೋಡುತ ತನ್ನ ಪ್ರಾಣಕಾಂತೆಯಾದ ಸೀತಾದೇವಿಯನ್ನು ನೆನೆದು "ಸಾರಸಪಕ್ಷಿಯ ಧ್ವನಿಯಂತೆ ಮನೋಹರವಾದ ನುಡಿಗಳುಳ್ಳವಳಾಗಿ ಬಾಲಕಿಯಾದ ಜಾನಕಿಯು ನನ್ನಮೇಲಣ ವಿರಹದುಃಖವನ್ನು ಹ್ಯಾಗೆ ತಾಳುವಳು! ಸುವರ್ಣದ ಮರ್ಯಾದೆಯಲ್ಲಿ ನಿರ್ಮಲವಾದ ಕಾಂತಿಯುಳ್ಳ ಬಂದುಗೆಯ ಪುಷ್ಪಗಳನ್ನು ನೋಡಿ ನನ್ನನ್ನು ಕಾಣದೆ ಸೀತಾದೇವಿಯು ಹ್ಯಾಗೆ ತಳಹರಿಸಿಕೊಂಡಿರುವಳು! ತನುಸೊಬಗುಳ್ಳವಳಾಗಿ ಅಮೃತದಂತೆ ಮಧುರವಾದ ನುಡಿಯುಳ್ಳ ಸೀತಾದೇವಿಯು ಮಲಗಿರುವಾಗ ಕಳಹಂಸಪಕ್ಷಿಗಳ ಧ್ವನಿಯುಂಟಾದರೂ ಎಚ್ಚತ್ತು ಏಳುವಳು; ಅಂಥಾವಳು ಈಗ ಯಾವ ಅವಸ್ಥೆಯಲ್ಲಿದ್ದಾಳೋ! ನನ್ನ ಕೂಡೆ ಸಂಚರಿಸುತ ವಿನೋದಾರ್ಥವಾಗಿ ಚಕ್ರವಾಕಪಕ್ಷಿಗಳ ಮನೋಹರವಾದ ಧ್ವನಿಯನ್ನು ಕೇಳಿ ಪರಿಣಮಿಸಿಕೊಂಡಿದ್ದವಳಾಗಿ ಕಮಲದ ಎಸಳಿನಂತೆ ವಿಶಾಲವಾದ ಕಣ್ಣುಗಳುಳ್ಳಂಥಾ ಸೀತಾದೇವಿಯು ಹ್ಯಾಗಿದ್ದಾಳೋ! ಈ ಶರತ್ಕಾಲದಲ್ಲಿ ನಿರ್ಮಲೋದಕವುಳ್ಳ ನದಿಗಳನ್ನೂ ಕೊಳಗಳನ್ನೂ ಪಕ್ಕರಣೆ ಭಾವಿಗಳನ್ನೂ ಪುಷ್ಪಿತವಾದ ವನಗಳನ್ನೂ ನೋಡಿ ಹುಲ್ಲೆಯ ಕಣ್ಣಿನಂತೆ ಕಣ್ಣುಗಳುಳ್ಳ ಸೀತಾದೇವಿಯನ್ನು ಕಾಣದೆ ಮನಸ್ಸಿಗೆ ವ್ಯಥೆಯಾಗುತ್ತಿದೆ! ಕಟಕಟಾ—ಮನ್ಮಥನು ಶರತ್ಕಾಲದಲ್ಲಿ ಮದಿಸಿರುವನು; ಆತನಾದರು ನನ್ನ ವಿರಹದಿಂದ ಕಂಗೆಟ್ಟ ಸೀತಾದೇವಿಯ ಕೋಮಲವಾದ ಶರೀರವನ್ನು ಕಂಡು ದಯೆಯಿಂದ ಬಾಧಿಸದಿರಬಾರದೇ!" ಎಂದು ಹಂಬಲಿಸುತ್ತಿದ್ದನು.

ಆಗ ಪುಷ್ಪಗಳನ್ನು ತರಬೇಕೆಂದು ಹೋದ ಲಕ್ಷ್ಮಣನು ಉದಕಸಾರವನ್ನು ಸ್ವೀಕರಿಸುವ ಚಾತಕಪಕ್ಷಿಯು ಅಂತರಿಕ್ಷದಿಂದ ಬೀಳುವ ಉದಕವನ್ನು ಹ್ಯಾಗೆ ತೆಗೆದುಕೊಳ್ಳುವದೊ ಆ ಮರ್ಯಾದೆಯಲ್ಲಿ ಪರ್ವತದ ತಪ್ಪಲುಗಳಲ್ಲಿ ಸಂಚರಿಸಿ ಫಲವುಳ್ಳ ಮರಗಳಿಂದ ರಸವತ್ತಾದ ಫಲಗಳನ್ನು ಸಂಗ್ರಹಿಸಿಕೊಂಡು ಬಂದು ಸೀತಾದೇವಿಯ ವಿರಹತಾಪದಿಂದ ಮೌನಸ್ಥನಾಗಿ ನಿರ್ಜನಪ್ರದೇಶದಲ್ಲಿ ಏಕಾಂಕಿಯಾಗಿದ್ದ ಶ್ರೀರಾಮನನ್ನು ಕಂಡು ಮಹಾ ದುಃಖಿತನಾಗಿ ಆತನನ್ನು ಕುರಿತು "ಎಲೈ ಶ್ರೀರಾಮನೆ, ಲೋಕದಲ್ಲಿ ಮನುಷ್ಯರು ಧೈರ್ಯಗೆಟ್ಟಮೇಲೇನುಪ್ರಯೋಜನವು! ತನ್ನ ಪರಾಕ್ರಮಕ್ಕೆ ಹಾನಿಬಂದಂತೆ ಚಿಂತಿಸಿ ಪ್ರಯೋಜನವೇನು! ತೊಡಗಿದ ಕಾರ್ಯಕ್ಕೆ ಯತ್ನವನ್ನು ಮಾಡದಿದ್ದರೆ ಪ್ರಯೋಜನವೇನು! ಎಲೈ ಶ್ರೀರಾಮನೆ, ನೀನು ಏಕಾಗ್ರಚಿತ್ತನಾಗಿ ಉತ್ಸಾಹಶಕ್ತಿಯೊಡಗೂಡಿ ಕಾಲಕ್ಕೆ ತಕ್ಕ ಮಿತ್ರಸಂಪತ್ತಿಯನ್ನು ಮಾಡಿಕೊಂಡು ಕಂಗೆಡದೆ ನಿನ್ನ ಜನ್ಮಾಂತರದ ಪುಣ್ಯಕರ್ಮಕ್ಕನುಸಾರವಾದ ದೇವಕಾರ್ಯವನ್ನು ಮಾಡು! ಎಲೈ ಮನುವಂಶಕುಲೋದ್ಧಾರಕನಾದ ಶ್ರೀರಾಮನೆ, ನಿನ್ನ ಪ್ರಾಣಕಾಂತೆಯಾದ ಸೀತಾದೇವಿಯು ಒಡೆಯರಿಲ್ಲದವಳೆಂದು ತಿಳಿಯಬೇಡ; ಆ ದೇವಿಯು ಯಾರಿಗೂ ಸಾಧ್ಯವಾದವಳಲ್ಲ; ಲೋಕದಲ್ಲಿ ಎಷ್ಟು ಪರಾಕ್ರಮಿಯಾದರು ಅಗ್ನಿಜ್ವಾಲೆಯನ್ನು ಹೊಕ್ಕು ಜೀವಿಸಲಾರನು; ಆ ಮರ್ಯಾದೆಯಲ್ಲಿ ಶತ್ರುಗಳಿಗಸಾಧ್ಯಳಾದ ಸೀತಾದೇವಿಗೆದಿರಾಗಿ ನಿಂತು ಜೀವಿಸುವವನಿಲ್ಲ!" ಎಂದು ನುಡಿದನು.

ಆ ಮಾತನ್ನು ಕೇಳಿ ಶ್ರೀರಾಮನು ಲಕ್ಷ್ಮಣನನ್ನು ಕುರಿತು "ಎಲೈ ಲಕ್ಷ್ಮಣ, ನೀನು ಹೇಳಿದ ಮಾತು ಹಿತವಾಗಿ ನೀತಿಯೊಡಗೂಡಿದಂಥಾದ್ದು; ಇನ್ನು ಮುಂದೆ ಅವಶ್ಯವಾಗಿ ಸೀತಾದೇವಿಯನ್ನರಸಿ ಕಾಣುವದಕ್ಕೆ ತಕ್ಕ ಕಾರ್ಯವನ್ನು ಕಾಣಬೇಕು; ಈ ಅರ್ಥದಲ್ಲಿ ಸಂಶಯವಿಲ್ಲ! ಎಲೈ ಲಕ್ಷ್ಮಣ, ಮನುವಂಶದಲ್ಲಿ ಹುಟ್ಟಿದ ರಾಯರು ತೊಡಗಿದ ಕಾರ್ಯಕ್ಕೆ ಫಲವಾಗದೆಂಬ ಸಂಶಯವಿಲ್ಲ! ಎಲೈ ಲಕ್ಷ್ಮಣ, ದೇವೇಂದ್ರನು ಮಳೆಗರೆದು ಭೂಮಿಯನ್ನು ತೃಪ್ತಿಪಡಿಸಿ ಬೆಳೆಗಳನ್ನುಂಟುಮಾಡಿ ಕೃತಕೃತ್ಯನಾಗಿ ತನ್ನ ಕಾರ್ಯವನ್ನು ತೀರಿಸಿಕೊಂಡನು; ಮೇಘಗಳು ಗಂಭೀರವಾಗಿ ಘರ್ಜಿಸುತ ಉದಕಗಳನ್ನು ಭೂಮಿಗೆ ಕರೆದು ಬಳಲಿದವು; ನೀಲವರ್ಣವಾದ ಮೇಘಗಳು ಸಮಸ್ತ ದಿಕ್ಕುಗಳನ್ನೂ ನೀಲವರ್ಣವಾಗಿ ಮಾಡಿ ಮದಾವಸ್ಥೆಯುಳ್ಳ ಆನೆಗಳಂತೆ ಮಂದಗತಿಯುಳ್ಳವುಗಳಾದವು; ಮಳೆಯ ವೇಗದೊಡನೆ ಕೂಡಿಕೊಂಡು ಅತಿ ವೇಗವುಳ್ಳದ್ದಾಗಿ ಕೊಡಸಿಗೆಯ ಪುಷ್ಪಮರಿಮಳವುಳ್ಳದ್ದಾಗಿ ಅತಿ ಭಯಂಕರವಾದ ಗಾಳಿಯು ನಿಲುಗಡೆಯಾಯಿತು! ಎಲೈ ಲಕ್ಷ್ಮಣ, ಮೇಘಗಳೂ ಆನೆಗಳೂ ನವಿಲುಗಳೂ ನಿರ್ಝರೋದಕಧ್ವನಿಗಳೂ ಶಾಂತವಾದವು; ಮಳೆಯ ಧಾರೆಗಳಿಂದ ತೊಳೆಯಲ್ಪಟ್ಟ ತಪ್ಪಲುಗಳುಳ್ಳ ಪರ್ವತಗಳು ಚಂದ್ರಕಿರಣಗಳಿಂದ ಅನುಲೇಪಿಸಲ್ಪಟ್ಟಂತೆ ಒಪ್ಪುತ್ತಿವೆ! ಎಲೈ ಲಕ್ಷ್ಮಣ, ಈಗ ಶರತ್ಕಾಲವು ಎಳೇ ಬಾಳೆಗಳಲ್ಲಿಯೂ ಚಂದ್ರ ಸೂರ್ಯ ನಕ್ಷತ್ರಗಳ ಕಾಂತಿಗಳಲ್ಲಿಯೂ ಕಪಿನಾಯಕರ ನಡಿ ಸೊಬಗುಗಳಲ್ಲಿಯೂ ತನ್ನ ಬಿಳುಪಾದ ಕಾಂತಿಯನ್ನು ಭಾಗಮಾಡಿರಿಸಿದಂತೆ ಒಪ್ಪುತಿದೆ! ಎಲೈ ಲಕ್ಷ್ಮಣ, ಶರತ್ಕಾಲವು ಬಂದೂ ಲಕ್ಷ್ಮೀದೇವಿಯಿಂದ ಅಲಂಕರಿಸಲ್ಪಟ್ಟಂಥಾ ಅಶೋಕಪುಷ್ಪಗಳೂ ಸೂರ್ಯಕಿರಣಗಳಿಂದ ಕುಸುಮಿತವಾದ ತಾವರೇಕಮಲಗಳೂ ವೆಗ್ಗಳವಾಗಿ ಒಪ್ಪುತ್ತಿವೆ! ಗಾಳಿಯು ಕರ್ಪೂರಬಾಳೆಗಳ ಪರಿಮಳವುಳ್ಳದ್ದಾಗಿ ತುಂಬಿಗಳ ಗಾನವುಳ್ಳದ್ದಾಗಿ ಮದ್ದಾನೆಗಳ ಮದಗಂಧದೊಡನೆ ಕೂಡಿ ಸಮಸ್ತ ವನಗಳಿಗೂ ಗಂಭೀರವನ್ನುಂಟುಮಾಡುತ್ತಿದೆ; ವಿಕಸಿತವಾದ ತಾವರೇಕೊಳಗಳಲ್ಲಿ ಪ್ರಿಯವುಳ್ಳವಾಗಿ ಮನೋಹರವಾದ ವಿಲಾಸವುಳ್ಳ ಗರಿಗಳುಳ್ಳವಾಗಿ ಪದ್ಮಪುಷ್ಪಧೂಳಿಯಿಂದ ಕೆದರಲ್ಪಟ್ಟ ಮಾನಸಸರೋವರದಿಂದ ಬಂದ ಚಕ್ರವಾಕಪಕ್ಷಿಗಳೊಡನೆ ಹಂಸಪಕ್ಷಿಗಳು ಆನಂದದಿಂದ ಸಂಚರಿಸಿಕೊಂಡಿವೆ! ಎಲೈ ಲಕ್ಷ್ಮಣ, ಮದಸೊಕ್ಕಿದ ಆನೆಗಳೂ ಉಬ್ಬಿಕೊಬ್ಬಿದ ಗೋಸಮೂಹಗಳೂ ಕಾಂತಿಲಕ್ಷ್ಮಿಯು ತನ್ನ ಸ್ವರೂಪವನ್ನು ಬಹುವಿಧವಾಗಿ ಮಾಡಿಕೊಂಡು ತಮ್ಮಲ್ಲಿ ನೆಲೆಗೊಂಡಿರುವಂತೆ ಒಪ್ಪುತ್ತಿವೆ; ನವಿಲುಗಳು ಮೇಘೋದಯವಿಲ್ಲದ ಆಕಾಶಮಂಡಲವನ್ನು ನೋಡಿ ದುಃಖಾತಿಶಯದಿಂದ ತಮ್ಮ ಗರಿಗಳೆಂಬ ಆಭರಣಗಳನ್ನು ಸಡಲಿಸಿ ತಮ್ಮ ಸ್ತ್ರೀಯರಲ್ಲಿ ಇಚ್ಛೆಯಿಲ್ಲದೆ ಕಾಂತಿಗುಂದಿವೆ; ಸುವರ್ಣದೋಪಾದಿಯಲ್ಲಿ ಕಾಂತಿಯುಳ್ಳದ್ದಾಗಿ ಮನೋಹರವಾದ ಪುಷ್ಪಗಳಿಂದ ಇಟ್ಟಣಿಸಿದ ಅಗ್ರಭಾಗದ ಕೊಂಬುಗಳುಳ್ಳ ಬಂದುಗೆಯ ಮರಗಳು ನೀರಾಜನವನ್ನು ಹೋಲುತ್ತಿರಲು ವನಗಳು ಮನೋಹರವಾಗಿ ಒಪ್ಪುತ್ತಿವೆ; ಅನೇಕ ಹೆಣ್ಣಾನೆಗಳ ಸಮೂಹಗಳಲ್ಲಿ ಪ್ರಿಯವುಳ್ಳವಾಗಿ ಮದದಿಂದಲೂ ವಿಲಾಸಚೇಷ್ಟೆಗಳಿಂದಲೂ ವನಾಂತರಗಳಲ್ಲಿ ಸಂಚರಿಸಿಕೊಂಡಿರುವ ಮದ್ದಾನೆಗಳ ಗಮನವು ಮಂದವೇಗವುಳ್ಳದ್ದಾಗಿದೆ; ಮೇಘೋದಯವಿಲ್ಲದಿರುವ ಆಕಾಶವು ಸಿಕಲಿಮಾಡಿದ ಆಯುಧದಂತೆ ಒಪ್ಪುತ್ತಿದೆ; ನದಿಗಳ ಉದಕಪ್ರವಾಹವು ತಗ್ಗಿವೆ; ಆಬಲಪುಷ್ಪದಂತೆ ಶೈತ್ಯವಾದ ತಂಗಾಳಿ ಬೀಸುತ್ತಿದೆ; ಮೇಘಾಂಧಕಾರದಿಂದ ಬಿಡಲ್ಪಟ್ಟ ದಿಕ್ಕುಗಳು ಪ್ರಕಾಶವಾಗಿವೆ; ಸೂರ್ಯನ ಜ್ವಾಲೆಯಿಂದ ಭೂಮಿಯಲ್ಲಿದ್ದ ಕೆಸರು ತಗ್ಗಲು ಅಲ್ಲಲ್ಲಿ ಧೂಳುಗಳು ಏಳುತ್ತಿವೆ; ಅನ್ಯೋನ್ಯವೈರವುಳ್ಳ ಅರಸರ ದಂಡಯಾತ್ರೆಗೆ ಸಮಯವು ಬಂದಿದೆ; ಈ ಶರತ್ಕಾಲದಲ್ಲಿ ಮೇವಿನಿಂದ ಉಬ್ಬಿ ಕೊಬ್ಬಿದ ವೃಷಭಗಳು ಮೈಗಳು ಧೂಳುಮಸಗಲು ಯುದ್ಧದಲ್ಲಿ ಪ್ರೀತಿಯುಂಟಾಗಿ ಗೋಸಮೂಹಗಳಲ್ಲಿ ಗುಟ್ರುಹಾಕುತ್ತಿವೆ; ಹೆಣ್ಣಾನೆಗಳು ವನದಲ್ಲಿ ಸಂಚರಿಸುತ ಮನ್ಮಥವಿಕಾರವುಳ್ಳ ತಮ್ಮ ಪತಿಗಳಾದ ಮದ್ದಾನೆಗಳ ಬೆನ್ನಿಡಿದು ಹೋಗುತ್ತಿವೆ; ನವಿಲುಗಳು ತಮಗೆ ಭೂಷಣವಾದ ಗರಿಗಳನ್ನು ಕೊಡಹಿಬಿಟ್ಟು ನದೀತೀರದಲ್ಲಿ ಸಾರಸಪಕ್ಷಿಗಳ ಸಮೂಹದಿಂದ ನಿರಾಕರಿಸಲ್ಪಟ್ಟಂತೆ ಸಂಚರಿಸುತ್ತಿವೆ; ಕಾಡಾನೆಗಳು ಭೂಮಿಗೆ ಭೂಷಣಗಳಾದ ತಾವರೇ ಕೊಳಗಳಲ್ಲಿರುವ ಕೊಳರ್ವಕ್ಕಿ ಚಕ್ರವಾಕ ಮೊದಲಾದ ಪಕ್ಷಿಗಳನ್ನು ಬೆದರಿಸಿ ಸುಂಡಿಲುಗಳಿಂದ ಉದಕವನ್ನು ಹುಯ್ದು ಅಪ್ಪಳಿಸಿ ಪಾನಮಾಡುತ್ತಿವೆ; ಹಂಸಪಕ್ಷಿಗಳು ಕೆಸರಿಲ್ಲದ ಮಳಲೊಟ್ಟುಗಳೂ ನಿರ್ಮಲೋದಕವುಳ್ಳ ಸಾ

ರಸಪಕ್ಷಿಗಳ ಮನೋಹರವಾದ ಧ್ವನಿಗಳೂ ಉಳ್ಳ ನದಿಗಳಲ್ಲಿ ಅತಿ ಹರ್ಷದಿಂದ ಎರಗುತ್ತಿವೆ ; ದೊಡ್ಡ ನದಿಗಳು ವಜ್ರರೋದಕಗಳು ಹೆಚ್ಚಿದ ಘೋಷಗಳು ಕೊಬ್ಬಿದ ನವಿಲುಗಳು ಸಂತೋಷಯುಕ್ತವಾದ ಕಪಿಗಳು ಮೊದಲಾದವು ಗಳ ಧ್ವನಿಗಳು ತಗ್ಗಿದವು ; ಸರ್ಪಗಳು ಮಳೆಗಾಲದಲ್ಲಿ ಕುಂಡಲಾಕೃತವಾಗಿ ಸುತ್ತಿಕೊಂಡು ಹೊರಗೆ ಬರದೆ ಕ್ಷುಧೆಯಿಂದ ಕಂಗೆಟ್ಟಿದ್ದು ಈಗ ತಮ್ಮ ಬಿಲಗಳಿಂದ ಮೆಲ್ಲಗೆ ಹೊರಡುತ್ತಿವೆ ; ಚಂದ್ರಮಂಡಲದಿಂದ ಪ್ರಕಾಶಮಾನ ವಾಗಿ ನಕ್ಷತ್ರಗಳೆಂಬ ಕಣ್ಣುಗಳುಳ್ಳದ್ದಾಗಿ ಬೆಳದಿಂಗಳೆಂಬ ಶ್ವೇತವಸ್ತ್ರವುಳ್ಳ ರಾತ್ರಿಯು ಬಿಳೀವಸ್ತ್ರವನ್ನುಟ್ಟ ಸ್ತ್ರೀಯಂತೆ ಒಪ್ಪುತ್ತಿದೆ ; ಚನ್ನಾಗಿ ಬೆಳದ ಭತ್ತದ ತೆನೆಗಳನ್ನು ಭಕ್ಷಣಮಾಡಿ ಹರ್ಷಯುಕ್ತವಾದ ಸಾರಸಪಕ್ಷಿ ಗಳ ಸಮೂಹವು ಅಂತರಿಕ್ಷಮಾರ್ಗದಲ್ಲಿ ಹೋಗುತ ಬಿರುಘೋಷಯಿಂದ ಚೆದರಿಸಲ್ಪಟ್ಟ ಆಕಾಶಕ್ಕೆ ಅಲಂಕರಿಸಿದ ಪುಷ್ಪಸರವೋ ಎಂಬಂತೆ ಒಪ್ಪುತ್ತಿವೆ ; ವಿಕಸಿತವಾದ ನೈದಲುಪುಷ್ಪಗಳುಳ್ಳ ಮಡುಗಳು ಮೇಘೋದಯವಿಲ್ಲದೆ ಪೂರ್ಣಚಂದ್ರನನ್ನು ಬಳಸಿರುವ ನಕ್ಷತ್ರಗಳಿಂದ ಇಟ್ಟಣಿಸಿದ ಅಂತರಿಕ್ಷಮಾರ್ಗದಂತೆ ಒಪ್ಪುತ್ತಿವೆ ; ಕುಸುಮಿತ ವಾದ ಕಮಲಗಳು ಮರೆಯಾಗಿರುವ ಹಂಸಪಕ್ಷಿಗಳೆಂಬ ಕಾಂಚೀಧಾಮವುಳ್ಳವಾಗಿ ವಿಕಸಿತವಾದ ಕಮಲಗಳೆಂಬ ಮುಡಿಹೂವುಳ್ಳವಾಗಿ ಮಾರುತದಿಂದ ಕೊಡಹಲ್ಪಟ್ಟ ದರ್ಭೆಯ ಕುಸುಮಗಳಿಂದ ಒಪ್ಪುತ್ತಿವೆ ; ಪುಷ್ಪಿತವಾದ ವನ ದಲ್ಲಿ ಸಂಚಾರಮಾಡುತ ಪಟುವಾದ ಮಕರಂದ ಪಾನದಲ್ಲಿ ಲೋಲುಪ್ತಿಯುಳ್ಳ ಹೆಣ್ಣುದುಂಬಿಗಳೊಡಗೂಡಿ ಗಂಡು ದುಂಬಿಗಳು ಅತ್ಯಂತ ಸಂತೋಷಯುಕ್ತವಾಗಿ ಮದಿಸಿ ತಾವರೇ ಪುಷ್ಪದಳಗಳಿಂದ ಕೆದರಲ್ಪಟ್ಟ ಬಿಳೀಛಾಯೆಯುಳ್ಳ ಪರಿಮಳಯುಕ್ತವಾದ ತಂಘೋಳಯನ್ನು ಬೆನ್ನು ಬಿಡದೆ ಹೋಗುತ್ತಿವೆ ; ನಿರ್ಮಲವಾದ ಉದಕವು ವಿಕಸಿತವಾದ ನೈ ದಿಲು ಕ್ರೌಂಚಪಕ್ಷಿಗಳ ಧ್ವನಿಗಳು ಮಂದಗತಿಯುಳ್ಳ ವಾಯುವು ನಿರ್ಮಲವಾದ ಚಂದ್ರಮಂಡಲವು—ಇವೆಲ್ಲವೂ ಶರತ್ಕಾಲದ ಸಮಯವನ್ನು ಸೂಚಿಸುತ್ತಿವೆ ; ಮತ್ಸ್ಯಗಳೆಂಬ ಕಾಂಚೀದಾಮವುಳ್ಳ ನದಿಗಳ ಮಂದಗಮನವು ರಾತ್ರಿಯಲ್ಲಿ ಪ್ರಾಣಕಾಂತರ ಸಂಭೋಗದಿಂದ ಆಲಸಿದ ಸ್ತ್ರೀಯರ ಮಂದಗಮನದಂತೆ ಒಪ್ಪುತ್ತಿದೆ ; ಚಕ್ರವಾಕ ಪಕ್ಷಿಗಳೊಡಗೂಡಿದ್ದಾಗಿ ದುಕೂಲದ ಮರ್ಯಾದೆಯುಳ್ಳಿರುವ ದರ್ಭೇ ಕುಸುಮಗಳಿಂದ ಕೌಚಲ್ಪಟ್ಟ ಕೆರೆಗಳುಳ್ಳ ನದಿಗಳು ಮಕರಿಕಾಪತ್ರ ರಚನೆಯುಳ್ಳ ಗೋರೋಚನ ತಿಲಕವನ್ನಿಟ್ಟು ಬಿಳೀಪಟ್ಟೆಯನ್ನುಟ್ಟಿರುವ ಸ್ತ್ರೀಯ ಮುಖದಂತೆ ಒಪ್ಪುತ್ತಿವೆ ; ಚಕ್ರವಾಕಪಕ್ಷಿಗಳೊಡಗೂಡಿ ವಿಕಸಿತವಾದ ಬೆಟ್ಟದಾವರೇ ಪುಷ್ಪಗಳಿಂದ ಅಲಂಕ ರಿಸಲ್ಪಟ್ಟು ತುಂಬಿಗಳಿಂದ ಝೇಂಕರಿಸಲ್ಪಟ್ಟ ವನಗಳು ಮನ್ಮಥನು ಬಿಲ್ಲಿಗೆ ಹೆದೆಯನ್ನೇರಿಸಿ ಪುಷ್ಪಬಾಣವಿಡಿದು ನಿಂತಿದ್ದಾನೋ ಎಂಬಂತೆ ತೋರುತ್ತಿವೆ ; ಮೇಘಗಳು ಸಮಸ್ತ ಲೋಕಗಳಿಗೂ ಮಳೆಗರೆದು ನದಿಗಳನ್ನೂ ಕೆರೆಗ ಳನ್ನೂ ತುಂಬಿಸಿ ಪೈರು ಪಚ್ಚೆಗಳ ಬೆಳೆಯನ್ನುಂಟುಮಾಡಿ ತೊಲಗಿ ಹೋದವು ; ಶರತ್ಕಾಲದಲ್ಲಿ ನದಿಗಳು ಒಂ ದೊಂದಾಗಿ ಮಳಲೊಟ್ಟುಗಳು ಕಾಣಿಸುತ್ತಿರಲು ಪುರುಷರ ಪ್ರಥಮಸಂಗಮದಲ್ಲಿ ಸಂತೋಷವು ಹುಟ್ಟಿ ಮೆಲ್ಲಮೆ ಲ್ಲಗೆ ಮೊಣಕಾಲುಗಳಿಂದ ಉಪರಿಭಾಗವನ್ನು ಕಾಣಿಸುತ್ತಿರುವ ಸ್ತ್ರೀಯರೋ ಎಂಬಂತೆ ಒಪ್ಪುತ್ತಿವೆ ! ಎಲೈ ಲಕ್ಷ್ಮಣ, ದಂಡಯಾತ್ರೆ ಹೊರಡುವ ಅರಸರಿಗೆ ಇದೇ ಪ್ರಥಮಯಾತ್ರೆಯ ಕಾಲವು ; ಇನ್ನೂ ಸುಗ್ರೀವನನ್ನು ಕಾಣೆನು ; ಕಳೆದ ವರ್ಷಾಕಾಲದಲ್ಲಿ ಆತನು ಮಾಡಿರುವ ಸನ್ನಾಹವನ್ನೂ ಕಾಣೆನು ; ಕಳೆದ ನಾಲ್ಕು ತಿಂಗ ಳುಗಳನ್ನು ನಾನು ಸೀತಾದೇವಿಯನ್ನು ಕಾಣದೆ ವಿರಹಶೋಕದಿಂದ ನೊಂದು ನೂರುವರುಷಗಳನ್ನು ಕಳೆದಂತೆ ಕಳೆದೆನು ; ಚಕ್ರವಾಕಪಕ್ಷಿಯು ವನಮಧ್ಯದಲ್ಲಿ ತನ್ನ ಪತಿಯೊಡನೆ ವಿಲಾಸವಾಗಿ ಸಂಚರಿಸುವಂತೆ ನನ್ನ ಪ್ರಾಣ ಕಾಂತೆಯಾದ ಸೀತಾದೇವಿಯು ಈ ವಿಷಮವಾದ ದಂಡಕಾರಣ್ಯದಲ್ಲಿ ನನ್ನ ಬೆನ್ನಿಡಿದು ಉದ್ಯಾನವನದಲ್ಲಿ ಸಂಚರಿಸು ವಂತೆ ಸಂಚರಿಸಿಕೊಂಡಿದ್ದಳು ; ಅಂಥಾವಳ ವಿಯೋಗವಾಗಿ ತಿರುಗುತ್ತಿರುವ ನನ್ನಮೇಲೆ ಸುಗ್ರೀವನಿಗೆ ಯಾಕೆ ದ ಯೆಹುಟ್ಟದು ! ವಾಲಿಯು ರಾಜ್ಯವನ್ನೂ ಸ್ತ್ರೀಯನ್ನೂ ಅಪಹರಿಸಿಕೊಂಡು ಹೊರಡಿಸಲು ಸುಗ್ರೀವನು ಅನಾಥನಾದ ನು ; ಮಹಾ ಬಡವನು ; ಅತಿ ಕಾಮುಕನು ; ಆತನು ನನಗೆ ಶರಣಾಗತನಾದ ಕಾರಣದಿಂದ ದಯೆಹುಟ್ಟಿ ಆ ದುರಾ ತ್ಮನ ತಿರಸ್ಕಾರಕ್ಕೊಳಗಾದೆನು ; ಆತನು ತನ್ನ ಕಾರ್ಯವು ಸಾಧ್ಯವಾದಮೇಲೆ ಸೀತಾದೇವಿಯನ್ನರಸಿ ತರುವದಕ್ಕೆ

ತಕ್ಕ ಉಪಾಯವನ್ನು ಕಾಣದೆ ಯಾಕೆ ಸುಮ್ಮನಿದ್ದಾನೆ! ಎಲೈ ಲಕ್ಷ್ಮಣ, ನೀನು ಕಿಷ್ಕಿಂಧಾಪಟ್ಟಣಕ್ಕೆ ಹೋಗು; ಸುಗ್ರೀವನು ತನ್ನ ಮೂರ್ಖತನದಿಂದ ಸ್ತ್ರೀಲೋಲನಾಗಿದ್ದಾನೆ; ಲೋಕದಲ್ಲಿ ಕಾರ್ಯಾರ್ಥವಾಗಿ ಬಂದು ಮೊದಲು ಬಂದು ಉಪಕಾರವನ್ನು ಮಾಡಿದವರಿಗೆ ಯಾವನು ಪ್ರತ್ಯುಪಕಾರವನ್ನು ಮಾಡುವದಾಗಿ ಮಾತು ಕೊಟ್ಟು ಆ ಮಾತಿಗೆ ತಪ್ಪುವನೋ ಆತನೇ ಪುರುಷಾಧಮನು; ಲೋಕಸಮ್ಮತವಾದ ಕಾರ್ಯವನ್ನಾದರೂ ಲೋಕವಿರುದ್ಧವಾದ ಕಾರ್ಯವನ್ನಾದರೂ ಮಾಡಿಕೊಡುವದಾಗಿ ಮಾತು ಕೊಟ್ಟಬಳಿಕ ಪರಾಕ್ರಮಿಯಾದವನು ಆ ಮಾತಿಗೆ ತಪ್ಪಬಾರದು; ಉಪಕಾರವನ್ನು ಮಾಡಿದವರಿಗೆ ಪ್ರತ್ಯುಪಕಾರವನ್ನು ಮಾಡದವನ ಶರೀರವನ್ನು ಮಾಂಸಾಹಾರಿಗಳಾದ ನರಿಗಳು ಮೊದಲಾದವೂ ಮುಟ್ಟವು; ಮಿಂಚಿನ ಹೊಳೆಯಂತೆ ಹೊಳೆಯುತ ಚಿನ್ನದ ಕಟ್ಟುಗಳುಳ್ಳ ನನ್ನ ಬಿಲ್ಲನ್ನು ನೋಡಬೇಕೆಂದು ಸುಗ್ರೀವನಿಗೆ ಇಚ್ಛೆಯುಂಟಾಗಿರಬೇಕು; ರಣರಂಗದಲ್ಲಿ ದೇವೇಂದ್ರನ ವಜ್ರಾಯುಧದ ಮೊರೆವಿನಂತೆ ಮೊರವುಳ್ಳ ನನ್ನ ಬಿಲ್ಲವಡೆಯ ಧ್ವನಿಯನ್ನು ಸುಗ್ರೀವನು ಕೇಳಲಿಚ್ಛೈಸಿದ್ದಾನೊ ಏನೋ ತಿಳಿಯಲಿಲ್ಲ; ಪರಾಕ್ರಮಿಯಾದ ನಿನ್ನ ಸಹಾಯವಿರುವಾಗ ನನ್ನ ಕಾರ್ಯಕ್ಕೆ ಯೋಚನೆಯೇನು! ಎಲೈ ಲಕ್ಷ್ಮಣ, ಯಾವ ಕಾರ್ಯನಿಮಿತ್ತವಾಗಿ ಸುಗ್ರೀವನಿಗೆ ಸಹಾಯವನ್ನು ಮಾಡಿದೆವೋ ಆ ಕಾರ್ಯದ ಕಷ್ಟವನ್ನು ಆತನು ಅರಿಯದೆ ಹೋದನು; ವರ್ಷಾಕಾಲದ ನಾಲ್ಕುತಿಂಗಳು ಕಳೆದಮೇಲೆ ನಮ್ಮ ಕಾರ್ಯವನ್ನು ಆಗಮಾಡಿಕೊಡುವದಾಗಿ ಮಾತುಕೊಟ್ಟು ನಾಲ್ಕು ತಿಂಗಳು ಕಳೆದಮೇಲೂ ಸ್ತ್ರೀಲೋಲನಾಗಿ ಏನೂ ಮಾಡದಿದ್ದಾನೆ; ಸುಗ್ರೀವನು ತನ್ನ ಪ್ರಧಾನರನ್ನೂ ಪರಿವಾರವನ್ನೂ ಕೂಡಿಕೊಂಡು ನನ್ನಲ್ಲಿ ದಯೆಮಾಡದೆಹೋದನು; ನೀನು ಸುಗ್ರೀವನಕೂಡೆ ನನ್ನ ರೋಷದ ಮಹಿಮೆಯನ್ನು ಹೇಳು; ನನ್ನ ಬಾಣದಿಂದ ವಾಲಿಯೊಬ್ಬನೇ ಹತನಾದರೂ ಸ್ವರ್ಗಸ್ಥನಾದ ಆತನ ಮಾರ್ಗವು ಕೆಡಲಿಲ್ಲವೆಂದೂ ಕಾಲೋಚಿತವನ್ನರಿತು ವಾಲಿಯು ಹೋದಮಾರ್ಗಕ್ಕೆ ಹೋಗದೆ ನಾನು ಹೇಳುವಂತೆ ನನ್ನ ಸಮಯವನ್ನು ಕಾದಿರಬೇಕೆಂದೂ ನನ್ನ ಮಾತನ್ನು ಮೀರಿದರೆ ಆತನನ್ನೂ ಆತನ ಬಂಧುಗಳನ್ನೂ ಸಂಹರಿಸುವೆನೆಂದೂ ಹೇಳು! ಎಲೈ ಲಕ್ಷ್ಮಣ, ನೀನು ಕಾಲೋಚಿತವನ್ನರಿತು ಕಾರ್ಯಕ್ಕೆ ಹಿತವಾದ ಮಾತುಗಳೆಲ್ಲವನ್ನು ಹೇಳು; ನನಗೆ ಆತನು ಕೊಟ್ಟ ಮಾತನ್ನು ವಿಚಾರಿಸಿಕೊಂಡು ನನ್ನ ಬಾಣಗಳಿಂದ ಹತನಾಗಿ ಯಮಲೋಕದಲ್ಲಿರುವ ವಾಲಿಯನ್ನು ನೋಡುವದಕ್ಕೆ ತಕ್ಕ ಯೋಚನೆಯನ್ನು ಮಾಡದಿರುವ ಹಾಗೂ ಹೇಳು" ಎಂದು ಸುಗ್ರೀವನಲ್ಲಿ ಅತ್ಯಂತ ಕೋಪಯುಕ್ತನಾಗಿ ನುಡಿದನು.

## ೩೧ನೇ ಅಧ್ಯಾಯ.

### ಲಕ್ಷ್ಮಣನು ಸುಗ್ರೀವನ ಬಳಿಗೆ ಹೋದದ್ದು.

ಎಲೈ ಕುಶಲಮತಿಗಳಿರಾ, ಈ ಮರ್ಯಾದೆಯಲ್ಲಿ ಸೀತಾದೇವಿಯ ವಿರಹಶೋಕದಿಂದ ಕಂಗೆಟ್ಟು ಕೋಪಕೆರಳಿ ಸುಗ್ರೀವನಮೇಲೆ ಕೋಪಿಸಿಕೊಂಡು ನುಡಿಯುತ್ತಿದ್ದ ಶ್ರೀರಾಮನನ್ನು ಕುರಿತು ಮಹಾಬಲಾಧಿಕನಾದ ಲಕ್ಷ್ಮಣನು "ಎಲೈ ಶ್ರೀರಾಮನೆ, ಸುಗ್ರೀವನು ಸನ್ಮಾರ್ಗದಲ್ಲಿರಲಾರನು; ತನ್ನ ಕಾರ್ಯವು ಸಾಧ್ಯವಾದಮೇಲೆ ನಮ್ಮನ್ನು ಲೆಕ್ಕಿಸನು; ಆತನು ಬುದ್ಧಿವಂತನಾಗಿ ಸುಖವನ್ನನುಭವಿಸುವದಕ್ಕಿಲ್ಲ; ಅಜ್ಞಾನದಿಂದ ಸ್ತ್ರೀಲೋಲನಾಗಿದ್ದಾನೆ; ನಿನ್ನ ಅಪ್ಪಣೆಯಿಂದ ನಾನು ಆತನಿಗೆ ತಕ್ಕ ಬುದ್ಧಿಯನ್ನು ಹೇಳುವೆನು; ಮೊದಲು ಸ್ವರ್ಗಸ್ಥನಾದ ವಾಲಿಯ ವೃತ್ತಾಂತವನ್ನು ವಿಚಾರಿಸಿಕೊಳ್ಳಲಿ; ದುರ್ಗುಣವುಳ್ಳವನಾದ ಸುಗ್ರೀವನಿಗೆ ರಾಜ್ಯಾಧಿಪತ್ಯವನ್ನು ಕೊಡಬೇಡ; ನನಗೆ ಕೋಪೋದ್ರೇಕವು ಹುಟ್ಟಿದೆ; ಇಂದುತಾನೆ ಸುಗ್ರೀವನನ್ನು ಕೊಲ್ಲುತ್ತೇನೆ; ವಾಲಿಯ ಮಗನಾದ ಅಂಗದನು ಸಮಸ್ತ ಕಪಿನಾಯಕರನ್ನೂ ಕೂಡಿಕೊಂಡು ಸೀತಾದೇವಿಯನ್ನರಸಿ ತರುವನು" ಎಂದು ಬಿನ್ನವಿಸಿ ಅತ್ಯಂತ ಕೋಪಯುಕ್ತನಾಗಿ ಬಿಲ್ಲು ಬಾಣಗಳನ್ನು ತೆಗೆದುಕೊಂಡು ಹೊರಡುತ್ತಿದ್ದನು.

ಅದನ್ನು ನೋಡಿ ಸಮಸ್ತ ಧರ್ಮರಹಸ್ಯವನ್ನು ಬಲ್ಲ ಶ್ರೀರಾಮನು ಆತನನ್ನು ಕುರಿತು ಸಂತಮನ್ನಣೆಯ ಮಾತುಗಳಿಂದ "ಎಲೈ ಲಕ್ಷ್ಮಣ, ಲೋಕದಲ್ಲಿ ನಿನ್ನಂಥಾ ಪರಾಕ್ರಮಿಗಳಿಲ್ಲ ; ಈ ಮರ್ಯಾದೆಯಲ್ಲಿ ನೀನು ಕೋಪಮಾಡಸಲ್ಲದು ; ಹೆಚ್ಚಿದ ಕೋಪವನ್ನು ಧೈರ್ಯಗುಣದಿಂದ ಮೆಟ್ಟುವವನೇ ಪುರುಷೋತ್ತಮನೆನಿಸಿಕೊಳ್ಳುವನು ; ಸದ್ವರ್ತನವುಳ್ಳ ನೀನು ಇಂಥಾ ಕೋಪವನ್ನು ಮಾಡಬೇಡ ; ಸುಗ್ರೀವನಲ್ಲಿ ಮೊದಲಿನಂತೆ ಸ್ನೇಹದಿಂದಲೂ ಸಂತಮನ್ನಣೆಯಿಂದಲೂ ಕಾಲವು ಮೀರಿತೆಂದು ನುಡಿ " ಎಂದು ಹೇಳಿದನು.

ಆ ಮಾತನ್ನು ಕೇಳಿದಂಥಾ ಪುರುಷೋತ್ತಮನಾದ ಲಕ್ಷ್ಮಣನು ಕಾಮಕ್ರೋಧಗಳಿಂದ ಹುಟ್ಟಿದ ಶೋಕಾಗ್ನಿಯಿಂದ ಪರಿತಪಿಸುತ ಇಂದ್ರಚಾಪಕ್ಕೆ ಸರಿಮಿಗಿಲೆನಿಸಿಕೊಳ್ಳುವಂಥಾದ್ದಾಗಿ ಪ್ರಳಯಕಾಲದ ಯಮನಂತೆ ಭಯಂಕರವಾಗಿ ಪರ್ವತಕ್ಕೆ ಸಮಾನವಾದ ಬಿಲ್ಲನ್ನು ತೆಗೆದುಕೊಂಡು ಕೋಡುಗಲ್ಲುಸಹಿತವಾದ ಪರ್ವತಕ್ಕೆ ಸಮಾನವಾದ ಆಕಾರವುಳ್ಳವನಾಗಿ ಚಂಡವಾಯುವಿನ ವೇಗದಂತೆ ಹೊರಟಂಥಾ ಕೋಪವನ್ನು ಅಡಗಿಸಿಕೊಂಡು ಮಾರ್ಗದಲ್ಲಿದ್ದ ಮರಗಳನ್ನೂ ಕಲ್ಲರೆಗಳನ್ನೂ ತನ್ನ ಗಮನವೇಗದಿಂದ ಮದ್ದಾನೆಯಂತೆ ತುಮುರುಮಾಡುತ ಅತಿವೇಗದಿಂದ ಸುಗ್ರೀವನಿಂದ ಪರಿಪಾಲಿಸಲ್ಪಟ್ಟ ಕಿಷ್ಕಿಂಧಾಪಟ್ಟಣವನ್ನು ಸೇರಿ ಆ ಪಟ್ಟಣದ ಬಳಿ ಸಂಚರಿಸುತ್ತಿದ್ದ ಭೀಮಬಲ ಪರಾಕ್ರಮಿಗಳಾದ ಕಪಿಗಳನ್ನು ಕಂಡನು ; ಆ ಕಪಿಗಳು ಮಹಾಬಲ ಪರಾಕ್ರಮಿಯಾದ ಲಕ್ಷ್ಮಣನನ್ನು ಕಂಡು ಪರ್ವತ ವನಾಂತರಗಳಲ್ಲಿದ್ದ ದೊಡ್ಡ ಮರಗಳನ್ನೂ ಕಲ್ಲರೆಗಳನ್ನೂ ಕೋಡುಗಲ್ಲುಗಳನ್ನೂ ತೆಗೆದುಕೊಂಡು ಸನ್ನಾಹವಾಗಿ ನಿಂತಿದ್ದರು ; ಲಕ್ಷ್ಮಣನು ಆ ಕಪಿಗಳು ತನ್ನ ಕೂಡೆ ಯುದ್ಧಕ್ಕೆ ಬಂದದ್ದನ್ನು ಕಂಡು ಬಣಕಾಷ್ಠಗಳಲ್ಲಿ ಅಗ್ನಿಜ್ವಾಲೆಯು ಹೊಳೆಯುವಂತೆ ಅತ್ಯಂತ ವೆಗ್ಗಳವಾಗಿ ಕೋಪಯುಕ್ತನಾದನು ; ಪ್ರಳಯಕಾಲದ ಮೃತ್ಯುವಿನಂತೆ ಅತಿ ಭಯಂಕರನಾದ ಲಕ್ಷ್ಮಣನನ್ನು ಕಂಡು ಆ ಕಪಿಗಳು ದಿಕ್ಕುದಿಕ್ಕಿಗೆ ಓಡಿದವು ; ಕೆಲವು ಕಪಿಗಳು ಸುಗ್ರೀವನ ಅರಮನೆಗೆ ಹೋಗಿ ಲಕ್ಷ್ಮಣನು ಮಹಾ ಕೋಪದಿಂದ ಬಂದಿದ್ದ ವೃತ್ತಾಂತವನ್ನು ತಿಳುಹಿಸಲು ಕಾಮುಕನಾಗಿ ತಾರಾದೇವಿಯೊಡಗೂಡಿದ್ದ ಸುಗ್ರೀವನು ತನ್ನ ಪ್ರಧಾನಿಗಳನ್ನು ಕರೆದು ಲಕ್ಷ್ಮಣನು ಬಂದ ಕಾರ್ಯವನ್ನು ವಿಚಾರಿಸಹೇಳಿ ಕಟ್ಟುಮಾಡಿದನು ; ಆ ಪ್ರಧಾನಿಗಳು ಕಪಿನಾಯಕರಿಗೆ ಆಜ್ಞಾಪಿಸಲು ಮೇಘಗಳಿಗೂ ಆನೆಗಳಿಗೂ ಸಮಾನವಾದ ಆಕಾರವುಳ್ಳವರಾಗಿ ಕೋರೆದಾಡೆ ಉಗುರುಗಳನ್ನೇ ಆಯುಧಗಳಾಗುಳ್ಳವರಾಗಿ ಭಯಂಕರವಾದ ಆಕಾರವುಳ್ಳ ಆ ಕಪಿನಾಯಕರು ಕಿಷ್ಕಿಂಧಾಪಟ್ಟಣದಿಂದ ಹೊರಟು ಬರುತ್ತಿದ್ದರು ; ಅವರಲ್ಲಿ ಕೆಲವರು ನೂರು ಆನೆಗಳ ಬಲವುಳ್ಳವರು ; ಕೆಲವರು ಸಾವಿರ ಆನೆಗಳ ಸತ್ವವುಳ್ಳವರು ; ಅಂಥಾ ಸಾಮರ್ಥ್ಯವುಳ್ಳ ಅನೇಕ ಕಪಿಗಳು ಮರಗಳನ್ನು ಬೇರುಸಹಿತವಾಗಿ ಕಿತ್ತುಕೊಂಡು ಕೋಟೆಯ ಹೊರವಳಯದಲ್ಲಿ ನಿಂತಿರಲು ಅವರನ್ನು ಕಂಡು ಲಕ್ಷ್ಮಣನು ಆತಿ ಕೋಪಯುಕ್ತನಾಗಿ ಸುಗ್ರೀವನ ಸಾಹಸವನ್ನೂ ಶ್ರೀರಾಮನ ಕಾರ್ಯಗತಿಯನ್ನೂ ವಿಚಾರಿಸಿ ಮುಂದಕ್ಕೆ ನಡೆಯುತ್ತ ಕೋಪದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ಬಾಣದ ಅಲಗೆಂಬ ನಾಲಿಗೆಯುಳ್ಳವನಾಗಿ ಬಿಲ್ಲೆಂಬ ಹೆಡೆಯುಳ್ಳವನಾಗಿ ಪರಾಕ್ರಮವೆಂಬ ವಿಷವುಳ್ಳವನಾಗಿ ಐದುಹೆಡೆಯ ಸರ್ಪದಮರ್ಯಾದೆಯುಳ್ಳೊಪ್ಪುತ ಪ್ರಳಯಕಾಲಾಗ್ನಿಯಂತೆ ಪ್ರಜ್ವಲಿಸುತ ಕೋಪಕೆರಳಿದ ಮದ್ದಾನೆಯ ಮರ್ಯಾದೆಯುಳ್ಳದ್ದುಕೊಂಡು ಅಂಗದ ಕುಮಾರನು ಬಂದು ಕಾಣಿಸಿಕೊಂಡು ತನ್ನ ಕೋಪಾಟೋಪವನ್ನು ಕಂಡು ಭಯಪಟ್ಟು ಕಂಗೆಡಲು ಆ ಕುಮಾರನನ್ನು ಕುರಿತು "ಎಲೈ ಅಂಗದನೆ, ನಿನ್ನ ಚಿಕ್ಕಪ್ಪನಾದ ಸುಗ್ರೀವನಕೂಡೆ 'ಶ್ರೀರಾಮನ ತಮ್ಮನಾದ ಲಕ್ಷ್ಮಣನು ವಿರಹಶೋಕದಿಂದ ಕಂಗೆಟ್ಟಿರುವ ಶ್ರೀರಾಮನ ದುಃಖವನ್ನು ಕಂಡು ತಾಳಲಾರದೆ ಬಂದು ಹೊರಬಾಗಿಲಲ್ಲಿದ್ದಾನೆ ; ಆತನ ಮಾತು ನಿನಗೆ ಪ್ರಿಯವಾದಪಕ್ಷದಲ್ಲಿ ಶೀಘ್ರವಾಗಿ ಹೊರಟು ಬಾ' ಎಂದು ಹೇಳಿ ಶೀಘ್ರವಾಗಿ ತಿರಿಗಿ ಬಂದು ನನಗೆ ಹೇಳು" ಎಂದು ಹೇಳಿದನು.

ಅಂಗದನು ಅತ್ಯಂತ ಭಯಪಟ್ಟು ಸುಗ್ರೀವನ ಸಮೀಪಕ್ಕೆ ಹೋಗಿ ಲಕ್ಷ್ಮಣನು ಬಂದ ವೃತ್ತಾಂತವನ್ನು ಹೇಳಿ ಕಿರೀ ತಾಯಾದ ರುಮಾದೇವಿಯ ಸಮೀಪಕ್ಕೆ ಹೋಗಿ ಆಕೆಗೆ ಅಭಿವಂದಿಸಿ ಲಕ್ಷ್ಮಣನು ಬಂದ ವೃತ್ತಾಂತವನ್ನು

ಹೇಳಿ ಮತ್ತು ಸುಗ್ರೀವನಕೂಡೆ ಲಕ್ಷ್ಮಣನು ಮಹಾ ಕೋಪಯುಕ್ತನಾಗಿ ಹೊರಬಾಗಿಲಲ್ಲಿದ್ದನೆಂದು ಹೇಳಿದನು. ಅದನ್ನು ಕೇಳಿಯೂ ಸುಗ್ರೀವನು ಸಿದ್ರಾಂಗನೆಯ ಸಮ್ಮಂಧವನ್ನು ಬಿಡದೆ ಕಾಮಮೋಹಿತನಾಗಿ ಮೈಮರೆತಿದ್ದನು!

ಇತ್ತಲ ಲಕ್ಷ್ಮಣನ ಕೋಪಾಟೋಪವನ್ನು ಕಂಡಂಥಾ ಕಪಿಗಳು ಕಿಲಕಿಲ ಶಬ್ದಗಳಿಂದ ಭಯಪಟ್ಟು ಬೊಬ್ಬಿಡುತ ಕಂಗೆಟ್ಟು ಲಕ್ಷ್ಮಣನನ್ನು ಸಂತವಿಡುತ್ತಿದ್ದರು; ದೇವೇಂದ್ರನ ವಜ್ರಾಯುಧಕ್ಕೆ ಸಮಾನವಾದ ಬಲವುಳ್ಳ ಬಿಲ್ಲನ್ನಿಡಿದ ಲಕ್ಷ್ಮಣನನ್ನು ಕಂಡು ಸಮಸ್ತ ಕಪಿಗಳೂ ಕೂಗುತ್ತಿರಲು ಆ ಮಹತ್ತಾದ ಧ್ವನಿಯನ್ನು ಕೇಳಿ ಸುಗ್ರೀವನು ಎಚ್ಚತ್ತು ಮಂದಬುದ್ಧಿಯುಳ್ಳವನಾಗಿ ತಾನು ಧರಿಸಿಕೊಂಡಿದ್ದ ಪುಷ್ಪದ ಸರಗಳು ಮದನಾಗ್ನಿಯಿಂದ ಕಂದಿ ಕುಂದಲು ಕೆಂಪಾದ ಕಣ್ಣುಗಳುಳ್ಳವನಾಗಿ ಮತ್ತು ಅಂಗದನು ಲಕ್ಷ್ಮಣನು ಬಂದಿದ್ದ ವೃತ್ತಾಂತವನ್ನು ಹೇಳಲು ಅದನ್ನು ಗ್ರಹಿಸುವದಕ್ಕೆ ಶಕ್ತನಲ್ಲದವನಾಗಿದ್ದನು; ಆಗ ಸುಗ್ರೀವನಿಗೆ ಪ್ರಾಣಸಖರಾದ ಪ್ಲಕ್ಷನು ಪ್ರಭಾಸನು ಎಂಬ ಇಬ್ಬರು ಪ್ರಧಾನರು ಸುಗ್ರೀವನನ್ನು ಕುರಿತು “ ಎಲೇ ಸುಗ್ರೀವನೆ, ಲಕ್ಷ್ಮಣನು ಬಹು ನಿಷ್ಠುರವಚನಗಳನ್ನು ನುಡಿಯುತ ಕೋಪದಿಂದ ಬಂದಿದ್ದಾನೆ; ಅದರಿಂದ ಹಾನಿಬರುವದಕ್ಕೆ ಮೊದಲೇ ಆತನನ್ನು ಸಂತವಿಟ್ಟು ಆತನ ಕೋಪವನ್ನು ತಗ್ಗಿಸು! ಎಲೈ ಸುಗ್ರೀವನೆ, ಶ್ರೀರಾಮಲಕ್ಷ್ಮಣರಿಬ್ಬರೂ ಮಹಾ ಸತ್ಯಸಂಧರು; ಮಹಾತ್ಮರು; ಅಂಥಾ ಪುಣ್ಯವಂತರು ನಿನಗೆ ಸ್ನೇಹಿತರಾಗಿ ಹೋದ ರಾಜ್ಯವನ್ನು ತಿರುಗಿಸಿಕೊಟ್ಟರು; ಶ್ರೀರಾಮನ ತಮ್ಮನಾದ ಲಕ್ಷ್ಮಣನು ಬಿಲ್ಲುಬಾಣಗಳನ್ನು ಧರಿಸಿಕೊಂಡು ಹೊರಬಾಗಿಲಲ್ಲಿ ಬಂದಿದ್ದಾನೆ; ಆತನನ್ನು ಕಂಡು ಕಪಿಗಳು ನಡುಗುತ ಮೊರೆಯಿಟ್ಟು ಕೂಗುತ್ತಿವೆ; ಲಕ್ಷ್ಮಣನು ಮಹಾ ನುಡಿಜಾಣ್ಮೆಯುಳ್ಳವನು; ಕಾರ್ಯಾರ್ಥಿಯಾದ ಶ್ರೀರಾಮನ ಅಪ್ಪಣೆಯಿಂದ ಬಂದು ತಾನು ಬಂದ ವೃತ್ತಾಂತವನ್ನು ನಿನ್ನ ಮಗನಾದ ಅಂಗದನಕೂಡೆ ಹೇಳಿ ಕಳುಹಿಸಿದನು! ಎಲೈ ಸುಗ್ರೀವನೆ, ಲಕ್ಷ್ಮಣನು ಅತ್ಯಂತ ಕೋಪದೃಷ್ಟಿಯಿಂದ ಕಪಿಗಳನ್ನು ನೋಡುತಲಿದ್ದಾನೆ; ನೀನು ನಿನ್ನ ಕೋಪವನ್ನು ತಳಹರಿಸಿಕೊಂಡು ನಿನ್ನ ಸ್ತ್ರೀಯರು ಮಕ್ಕಳು ಬಂಧುಬಳಗಗಳ ಸಮೇತನಾಗಿ ಆತನನ್ನು ಕಾಣಿಸಿಕೊಂಡು ಸಾಷ್ಟಾಂಗವೆರಗಿ ಸಂತವಿಟ್ಟು ಶ್ರೀರಾಮನು ಹೇಳಿ ಕಳುಹಿಸಿದ ಮಾತನ್ನು ಕೇಳಿ ಸತ್ಯವನ್ನು ಬಿಡದೆ ಶ್ರೀರಾಮನ ಸಮಯವನ್ನು ಕಾದು ಆತನು ಹೇಳುವಂತೆ ಮಾಡುವದೇ ಕಾರ್ಯವು ” ಎಂದು ಹೇಳಿದರು.

## ೩೧ನೇ ಅಧ್ಯಾಯ.

### ಹನುಮಂತನು ಸುಗ್ರೀವನಿಗೆ ನೀತಿ ಹೇಳಿದ್ದು.

ಆಮೇಲೆ ಸುಗ್ರೀವನು ಅಂಗದನ ಮುಖಾಂತ್ರವಾಗಿ ಲಕ್ಷ್ಮಣನು ಮಹಾಕೋಪಯುಕ್ತನಾಗಿ ಬಂದಿದ್ದ ವೃತ್ತಾಂತವನ್ನು ಕೇಳಿ ತನ್ನ ಶಯ್ಯಾಗೃಹದಿಂದ ಹೊರಟು ಲಕ್ಷ್ಮಣನು ಬಂದ ಕಾರ್ಯದ ಗುರುಲಘುತ್ವಗಳನ್ನು ವಿಚಾರಿಸಲು ಮಂತ್ರಾಲೋಚನೆಯಲ್ಲಿ ನಿಪುಣರಾದ ಮಂತ್ರಿಗಳನ್ನು ಕರೆಸಿ ಅವರನ್ನು ಕುರಿತು “ ಎಲೈ ಮಂತ್ರಿಗಳಿರಾ, ನಾನು ಶ್ರೀರಾಮನನ್ನು ನಿಷ್ಠುರವಾಗಿ ನುಡಿದವನಲ್ಲ; ಆತನಿಗೆ ಮತ್ಯಾವ ದ್ರೋಹವನ್ನಾದರೂ ಮಾಡಿದವನಲ್ಲ; ಲಕ್ಷ್ಮಣನು ಯಾವಕಾರಣ ಕೋಪಮಾಡಿಕೊಂಡಿದ್ದಾನೋ ಅದನ್ನು ತಿಳಿದು ಹೇಳೀ; ಯಾವಾಗಲು ನನ್ನ ಮರ್ಮವನ್ನು ತಿಳಿಯುತ ಸಂದುಸುಳುಹುಗಳಲ್ಲಿ ಸಿಕ್ಕಿದಾಗ ನನ್ನನ್ನು ಕೆಡಿಸಬೇಕೆಂದಿರುವ ಶತ್ರುಗಳು ಈಗ ಭೇದವನ್ನುಂಟುಮಾಡಿದಹಾಗಿದೆ; ಇನ್ನು ನಾವು ಮುಂದೆ ಮಾಡುವ ಕಾರ್ಯವೇನು! ನಮಗೆ ಬುದ್ಧಿಯಾವದು! ನಾವು ಇರಬೇಕಾದ ಮೋರೆಯೇನು! ಲಕ್ಷ್ಮಣನ ಅಭಿಪ್ರಾಯವೇನು! ಈ ವಿವರಗಳಿಗೆ ಯೋಚನೆಯನ್ನು ಕಾಣಿರೀ ” ಎಂದು ಹೇಳಿದನು.

ಅದನ್ನು ಕೇಳಿ ಆ ಪ್ರಧಾನರಲ್ಲಿ ಮುಖ್ಯನಾದ ಹನುಮಂತನು ಒಂದು ಮುಹೂರ್ತಮಾತ್ರವು ಯೋಚನೆ ಮಾಡಿ ಕಾರ್ಯವನ್ನು ನಿಶ್ಚಯಿಸಿ ಸಮಸ್ತ ಮಂತ್ರಿಗಳ ಮಧ್ಯದಲ್ಲಿದ್ದ ಸುಗ್ರೀವನನ್ನು ಕುರಿತು "ಎಲೈ ಸುಗ್ರೀವನೇ, ನೀನು ಸರ್ವಥಾ ಶ್ರೀರಾಮನು ನಿನಗೆ ಮಾಡಿದ ಉಪಕಾರವನ್ನು ಮರತೆ; ಆತನು ಮಹಾ ಪರಾಕ್ರಮಿಯು; ಭಯಪಟ್ಟಿದ್ದ ನಿನಗೆ ಪ್ರಿಯವನ್ನು ಮಾಡಬೇಕೆಂದು ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ವಾಲಿಯನ್ನು ಕೊಂದನು; ಮಳೆಕಾಲ ಹೋಗಿ ಶರತ್ಕಾಲವು ಬಂದರೂ ನೀನು ಆತನ ಬಳಿಗೆ ಹೋಗದ್ದರಿಂದ ನಿನ್ನಮೇಲಣ ಸ್ನೇಹಾತಿಶಯದಿಂದ ಕೋಪಮಾಡಿಕೊಂಡು ಲಕ್ಷ್ಮಣನನ್ನು ಕಳುಹಿಸಿದನಲ್ಲದೆ ಮತ್ತೊಂದಲ್ಲ; ನೀನು ಮದಗರ್ವದಿಂದ ಕಾಲವನ್ನರಿಯದೆ ಹೋದೆ; ಎಲ್ಲಿನೋಡಿದರು ಸಪ್ತಚ್ಛದಗಳು ಪುಷ್ಪಿತವಾಗಿ ಚಂದ್ರಸೂರ್ಯ ನಕ್ಷತ್ರಗಳು ನಿರ್ಮಲಗಳಾಗಿ ಆಕಾಶವು ಮೇಘಗಳಿಂದ ಬಿಡಲ್ಪಟ್ಟಂಥಾವಾಗಿ ಸಮಸ್ತ ದಿಕ್ಕುಗಳೂ ಪ್ರಕಾಶವಾಗಿ ನದಿಗಳೂ ಕೊಳಗಳೂ ಪ್ರವಾಹ ತಗ್ಗಿ ನಿರ್ಮಲೋದಕವುಳ್ಳವಾಗಿರಲು ಈಗ ಶರತ್ಕಾಲವು ಮಹಾ ಮನೋಹರವಾಗಿದೆ; ಈಗ ಅರಸರಿಗೆ ಶತ್ರುಗಳಮೇಲೆ ದಂಡೆತ್ತುವದಕ್ಕೆ ಯೋಗ್ಯವಾದ ಕಾಲವು; ನೀನು ಸ್ತ್ರೀಲೋಲನಾಗಿ ಮದಿಸಿ ಕಾಲವನ್ನರಿಯದೇ ಹೋದೆ; ಆದಕಾರಣ ಲಕ್ಷ್ಮಣನು ಕೋಪಿಸಿಕೊಂಡು ಬಂದಿದ್ದಾನೆ; ಸ್ತ್ರೀವಿಯೋಗದಿಂದ ನೊಂದ ಮಹಾತ್ಮನಾದ ಶ್ರೀರಾಮನು ನಿಟ್ಟುಸುರುಬಿಡುತ ನಿಷ್ಠುರವಾಗಿ ನುಡಿದನೆಂದು ಕಪಿನಾಯಕರ ಮಕ್ಕಳು ಬಂದು ಹೇಳಿದರೆ ಅದಕ್ಕೆ ಕೋಪಿಸುವದು ನಿನಗೆ ಉಚಿತವಲ್ಲ; ಅಪರಾಧವನ್ನು ಮಾಡಿದ ನೀನು ಲಕ್ಷ್ಮಣನಿಗೆ ಕೈಮುಗಿದು ವಿನಯವಚನಗಳನ್ನು ನುಡಿಯುವದೇ ಕಾರ್ಯವಲ್ಲದೆ ಮತ್ತೊಂದು ಕಾರ್ಯವಿಲ್ಲ; ಲೋಕದಲ್ಲಿ ಅರಸರು ಮಂತ್ರಿಗಳನ್ನು ಕರೆದು ಕಾರ್ಯಸ್ಥಿತಿಯನ್ನು ಕೇಳಿದರೆ ಆಹೊತ್ತಿಗೆ ನಿಷ್ಠುರವಾದದ್ದಾದರೂ ಮುಂದಕ್ಕೆ ಹಿತವಾದ ಕಾರ್ಯಸ್ಥಿತಿಯನ್ನೇ ಹೇಳಬೇಕಲ್ಲದೆ ಅರಸನ ಕೋಪಕ್ಕೆ ಭಯಪಟ್ಟು ಮುಂದೇ ಹಾನಿಬರುವದಾಗಿದ್ದರೂ ಆಹೊತ್ತಿಗೆ ಪ್ರಿಯವಾದದ್ದನ್ನು ನುಡಿಯಬಾರದು; ಆದಕಾರಣ ನಾನು ಭಯವಿಲ್ಲದೆ ಇಂಥಾ ಮಾತನ್ನು ಬಿನ್ನಹಮಾಡಿದೆನಲ್ಲದೆ ಮತ್ತೊಂದಲ್ಲ; ಶ್ರೀರಾಮನು ಕೋಪಕೆರಳಿ ಬಿಲ್ಲುಬಾಣಗಳನ್ನು ತೆಗೆದುಕೊಂಡನಾದರೆ ದೇವಾಸುರಗಂಧರ್ವರಸಹಿತವಾದ ಸಮಸ್ತ ಜಗತ್ತನ್ನೂ ಒಂದು ಕ್ಷಣದೊಳಗೆ ಕೈವಶಮಾಡಿಕೊಳ್ಳಲಾಪನು; ಲೋಕದಲ್ಲಿ ಸಂತಮನ್ನಣೆಗೊಳಗಾಗಿರುವವನಕೂಡೆ ವಿರೋಧವನ್ನು ಮಾಡಿಕೊಳ್ಳುವದುಚಿತವಲ್ಲ; ಮೊದಲು ನಿನಗೆ ಶ್ರೀರಾಮನು ಮಾಡಿದ ಉಪಕಾರವನ್ನು ಬಲ್ಲ ನೀನು ನಿನ್ನ ಸ್ತ್ರೀಪುತ್ರ ಜ್ಞಾತಿ ದಾಯಾದಿಗಳಸಹಿತನಾಗಿ ಆತನಿಗೆ ಸಾಷ್ಟಾಂಗವೆರಗಿ ಕೈಮುಗಿದು ಸಂತವಿಡುತಿರುವದೆ ನೀತಿಯಲ್ಲದೆ ಪ್ರತಿಯಾಗಿ ಕೋಪವನ್ನು ಮಾಡುವದು ನೀತಿಯಲ್ಲ; ಪತಿವ್ರತಾಸ್ತ್ರೀಯು ತನ್ನ ಪತಿಹೇಳಿದಂತೆ ಕೇಳಿಕೊಂಡು ಆತನ ವಶವಾಗಿರುವ ಮರ್ಯಾದೆಯಲ್ಲಿ ನೀನು ಶ್ರೀರಾಮನ ಆಜ್ಞೆಯನ್ನು ಮೀರದೆಯೂ ಮನಸ್ಸಿನಲ್ಲಾದರೂ ನೆನೆಯದೆಯೂ ಇರು; ದೇವೇಂದ್ರನ ಪರಾಕ್ರಮಕ್ಕೆ ಸರಿಮಿಗಿಲೆನಿಪ ಶ್ರೀರಾಮನ ಬಲವನ್ನು ನಿನ್ನ ಮನಸ್ಸೇ ಬಲ್ಲದು" ಎಂದು ಒಡಂಬಡಿಕೆಯನ್ನು ಹೇಳಿದನು.

## ೩೩ನೇ ಅಧ್ಯಾಯ.

### ತಾರಾದೇವಿಯು ಲಕ್ಷ್ಮಣನನ್ನು ಸಂತವಿಟ್ಟದ್ದು.

ಆಮೇಲೆ ಅಂಗದನಿಂದ ಕರೆಯಲ್ಪಟ್ಟ ಲಕ್ಷ್ಮಣನು ಕಿಷ್ಕಿಂಧಾ ಪಟ್ಟಣದಲ್ಲಿ ಸುಗ್ರೀವನಿದ್ದ ಗುಹೆಯ ಬಾಗಲಿಗೆ ಹೋಗಿ ಅಲ್ಲಿ ಕಾವಲಿದ್ದ ಮಹಾಬಲವಂತರಾದ ಕಪಿನಾಯಕರು ಕೋಪದಿಂದ ನಿಟ್ಟುಸುರುಬಿಡುತಿದ್ದ ತನ್ನನ್ನು ಕಂಡು ಭಯಪಟ್ಟು ಕೈಮುಗಿದುಕೊಂಡು ಬಾಗಲಲ್ಲಿ ತಡೆಯದಿರಲು ಒಳಹೊಕ್ಕು ದಿವ್ಯವಾಗಿ ಎಲ್ಲಿನೋಡಿದರೂ ರತ್ನಮಯವಾಗಿ ಅಲ್ಲಲ್ಲಿ ಕುಸುಮಿತವಾದ ಉದ್ಯಾನವನವುಳ್ಳದ್ದಾಗಿ ಉಪ್ಪರಿಗೆ ಮೇಲುಮಚ್ಚುಗಳಿಂದ ರಮಣೀಯವಾಗಿ ನಾನಾವರ್ಣವಾದ ಚಿತ್ರಗಳಿಂದ ಮನೋಹರವಾದ್ದಾಗಿ ಕಾಮರೂಪಿಗಳಾಗಿ ದೇವಗಂಧರ್ವರ ಕುಮಾರರಾಗಿ

ದಿವ್ಯದುಕೂಲ ದಿವ್ಯಭೂಷಣ ದಿವ್ಯಮಾಲೆಗಳಿಂದ ಅಲಂಕರಿಸಲ್ಪಟ್ಟು ಚಂದನ ಅಗಿಲು ಕರ್ಪೂರ ಕುಂಕುಮ ಗಂಧಾನುಲೇಪನಗಳಿಂದ ಕಣ್ಗೊಳಿಪ ಕಪಿನಾಯಕರಿಂದ ಇಟ್ಟಣಿಸಿದ್ದಾಗಿ ಚೌಬೀದಿಗಳಲ್ಲಿ ಮಧುಪಾನಗೋಷ್ಠಿಗಳುಳ್ಳದ್ದಾಗಿ ಮಹಾಮೇರು ವಿಂಧ್ಯಪರ್ವತಗಳಿಗೆ ಸಮಾನವಾದ ಕೋಟೆಗಳಿಂದ ರಮಣೀಯವಾಗಿ ಪರ್ವತ ವಜ್ರೋದಕ ಪ್ರವಾಹಗಳಿಂದ ಮನೋಹರವಾದ ಮುಂದಣ ರಾಜಬೀದಿಯಲ್ಲಿದ್ದ ಅಂಗದನ ಅರಮನೆಯನ್ನು ಕಂಡು ಆಮೇಲೆ ಗುರಿಕಾರರಾದ ಮೈಂದ ದ್ವಿವಿದ ಗವ ಗವಾಕ್ಷ ಗಜ ಶರಭ ವಿದ್ಯುನ್ಮಾಲಿ ಸಂಪಾತಿ ಸೂರ್ಯಾಕ್ಷ ಹನುಮಂತ ವೀರಬಾಹು ಸುಬಾಹು ನಳ ಕುಮುದ ಸುಷೇಣ ತಾರ ಜಾಂಬವ ದಧಿವಕ್ತ್ರ ನೀಲ ಸುಪಾಟಲ ಸುನೇತ್ರರು ಮೊದಲಾದ ಕಪಿನಾಯಕರ ಅರಮನೆಗಳನ್ನು ನೋಡುತ ಎಲ್ಲಿ ನೋಡಿದರೂ ಧನಧಾನ್ಯಗಳಿಂದಲೂ ತನುಸೊಬಗುಳ್ಳ ಸ್ತ್ರೀರತ್ನಗಳಿಂದಲೂ ಮನೋಹರವಾಗಿ ಅರ್ಧಸ್ಫಟಿಕದ ಕಲ್ಲರೆಗಳ ಹೊರಬಾಗಲುಳ್ಳದ್ದಾಗಿ ದೇವೇಂದ್ರನ ಅರಮನೆಗೆ ಸಮಾನವಾಗಿ ಕೈಲಾಸಪರ್ವತಕ್ಕೆ ಸಮಾನವಾದ ಬಿಳೀ ಗೋಪುರಗಳಿಂದ ಮನೋಹರವಾಗಿ ನಾನಾಫಲಪುಷ್ಪಗಳಿಂದ ಇಟ್ಟಣಿಸಿದ್ದಾಗಿ ಕಾಮರ್ಗಿಲಿಗೆ ಸಮಾನವಾದ ಉದ್ಯಾನವನಗಳಿಂದ ರಮಣೀಯವಾಗಿ ಅತಿ ಶೈತ್ಯವಾದ ಸಳಲುಳ್ಳದ್ದಾಗಿ ಶಸ್ತ್ರಪಾಣಿಗಳಾಗಿದ್ದ ಮಹಾಬಲವಂತರಾದ ಕಪಿನಾಯಕರಿಂದ ಮನೋಹರವಾಗಿ ದೇವತಾಯೋಗ್ಯವಾದ ಪುಷ್ಪಮಾಲಿಕೆಗಳಿಂದಲೂ ಸುವರ್ಣಮಯವಾದ ತೋರಣಗಳಿಂದಲೂ ಒಪ್ಪುತಿದ್ದ ಸುಗ್ರೀವನ ಅರಮನೆಯನ್ನು ಕಂಡು ಮೇಘಮಂಡಲದಿಂದ ಆಕಾಶವನ್ನು ಸೂರ್ಯನು ಪ್ರವೇಶಿಸುವಂತೆ ಪ್ರವೇಶಿಸಿ ಮೊದಲಂತರವನ್ನು ದಟಿ ಮುಂದೇ ಹೋಗುತ ಏಳನೇ ಅಂತರವನ್ನು ಸೇರಿ ಎಲ್ಲಿನೋಡಿದರೂ ಚಿನ್ನದ ಮಂಚಗಳು ಬೆಳ್ಳೀಮಂಚಗಳು ರತ್ನಖಚಿತವಾದ ಸಿಂಹಪೀಠಗಳು ರತ್ನಗಂಬಳಿಗಳು ಮೊದಲಾದ ವಸ್ತುಗಳಿಂದ ಮನೋಹರವಾಗಿ ತಾಳ ಮದ್ದಳೆ ವೀಣೆ ಗಾನ ಮೊದಲಾದವುಗಳಿಂದ ರಮಣೀಯವಾಗಿದ್ದ ಸುಗ್ರೀವನ ಅಂತಃಪುರವನ್ನು ಹೊಕ್ಕು ಅಲ್ಲಿ ಯೌವನದೇಳಿಗೆಯಿಂದ ಉಬ್ಬಿ ಕೊಬ್ಬಿದ ಪ್ರೌಢೆಯರಾಗಿ ತನುಸೊಬಗುಳ್ಳವರಾಗಿ ದಿವ್ಯಗಂಧಾನುಲೇಪನವುಳ್ಳವರಾಗಿ ದಿವ್ಯಮಾಲ್ಯ ದಿವ್ಯವಸ್ತ್ರಾಭರಣ ಭೂಷಿತೆಯರಾಗಿ ಕಾಲಂದಿಗೆ ಕಾಂಚೀದಾಮಗಳ ಕಿರುಘಂಟೆಗಳ ಧ್ವನಿಗಳಿಂದಲೂ ಕಿಲಕಿಲಸ್ವರದ ನುಡಿಗಳಿಂದಲೂ ಮನೋಹರವಾಗಿದ್ದ ಅನೇಕ ಸ್ತ್ರೀಯರನ್ನು ಕಂಡು ಲಜ್ಜಿತನಾಗಿ ಸುಗ್ರೀವನು ಐಶ್ವರ್ಯಾತಿಶಯದಿಂದ ಮೈಮರೆತಿದ್ದದ್ದನ್ನು ಸ್ಮರಿಸಿ ರೋಷಾತಿಶಯದಿಂದ ತನ್ನ ಬಿಲ್ಲಿಗೆ ಹೆದೆಯನ್ನೇರಿಸಿ ಸಮಸ್ತ ದಿಕ್ಕುಗಳಲ್ಲಿಯೂ ವ್ಯಾಪಿಸುವಂತೆ ಬಿಲ್ಲುನಾರಿಯಿಂದ ಝಾಂಕಾರಧ್ವನಿಯನ್ನು ಮಾಡಿ ಮರ್ಯಾದೆಯನ್ನು ಬಿಟ್ಟು ಅತ್ಯಂತ ಕೋಪಯುಕ್ತನಾಗಿದ್ದನು.

ಆಗ ಅಂತಃಪುರದಲ್ಲಿದ್ದ ಸುಗ್ರೀವನು ಆ ಧ್ವನಿಯನ್ನು ಕೇಳಿ ಲಕ್ಷ್ಮಣನು ಸಮೀಪಕ್ಕೆ ಬಂದನೆಂದು ತಿಳಿದು ಅಂಗದನ ವಾಕ್ಯವು ಸತ್ಯವೆಂದು ಮನಸ್ಸಿಗೆ ತಂದುಕೊಂಡು ತಾರಾದೇವಿಯನ್ನು ಕರೆದು "ಎಲೇ ತಾರಾದೇವಿಯೇ, ಲಕ್ಷ್ಮಣನು ಸ್ವಭಾವದಿಂದ ಮಹಾ ಮೃದುಹೃದಯ ; ಈಗ ಆತನ ಭಾವವನ್ನು ಕಂಡರೆ ಕೋಪಯುಕ್ತನಾಗಿ ಬಂದಿರುವಹಾಗೆ ಕಾಣುತ್ತದೆ ; ಆತನಿಗೆ ಕೋಪಬರುವದಕ್ಕೆ ಕಾರಣವೇನೋ ತಿಳಿಯಲಿಲ್ಲ ; ನೀನು ಆ ಕಾರಣವನ್ನು ಯುಕ್ತಿಯಿಂದ ವಿಚಾರಿಸು ; ಲಕ್ಷ್ಮಣನು ನಿಷ್ಕಾರಣವಾಗಿ ಕೋಪಿಸುವವನಲ್ಲ ; ಆತನಿಗೆ ನಾವು ಅಪರಾಧವನ್ನು ಮಾಡಿದೆವೆಂದು ಮನಸ್ಸಿನಲ್ಲೆಣಿಸಿಕೊಂಡಿದ್ದಾನೋ ಏನೋ ತಿಳಿಯಲಿಲ್ಲ ; ಈ ಕಾರ್ಯವನ್ನು ಯೋಚನೆಯಿಂದ ತಿಳಿದು ಹೇಳು ; ಅಲ್ಲದ ಪಕ್ಷದಲ್ಲಿ ನೀನೇ ಹೋಗಿ ಆತನ ಮನಸ್ಸಿನಲ್ಲಿರುವದನ್ನು ತಿಳಿದು ಬಂದು ಹೇಳು ; ಆತನಕೂಡೆ ಮಾತನಾಡುವಾಗ ಒಡಂಬಡಿಕೆಯನ್ನೂ ಮೃದುನುಡಿಗಳನ್ನೂ ಆಶ್ರಯಿಸು ; ಆ ಪರಮಪುರುಷನ ಸಮೀಪಕ್ಕೆ ನಾನು ಹೋಗಬಹುದಾದ ಸಮಯವನ್ನು ಬಂದು ಹೇಳು ; ಚಿತ್ತಶುದ್ಧಿಯುಳ್ಳವರಾದ ಮಹಾತ್ಮರು ಪರಸ್ತ್ರೀಯರಲ್ಲಿ ಕೋಪವನ್ನು ಮಾಡಿ ಅಲ್ಲದ ಕಾರ್ಯವನ್ನೆಣಿಸರು ; ನೀನು ಹೋಗಿ ಸಂತಮನ್ನಣೆ ವಾಕ್ಯಗಳಿಂದ ಸಂತವಿಟ್ಟು ಕೋಪಶಾಂತಿಯನ್ನು ಮಾಡು ; ಆಮೇಲೆ ನಾನು ಬಂದು ಕಾಣಿಸಿಕೊಂಡು ಮಾತನಾಡುತ್ತೇನೆ" ಎಂದು ಹೇಳಿದನು.

ತಾರಾದೇವಿಯು ಮಧುವಿನ ಆಲಸ್ಯದಿಂದ ಎಡೆಹುತ ಕಾಂಚೀದಾಮವನ್ನು ಧ್ವನಿಮಾಡುತ ಯೌವನದೇಳಗೆ ಯಿಂದ ಕಿಂಚಿನ್ಮಾತ್ರ ಮುಂಬಾಗವುಳ್ಳ ಶರೀರವುಳ್ಳವಳಾಗಿ ಲಕ್ಷ್ಮಣನ ಸಮೀಪಕ್ಕೆ ಹೋಗಿ ನಿಲ್ಲಲು ಮಹಾತ್ಮನಾದ ಲಕ್ಷ್ಮಣನು ಉದಾಸೀನಬುದ್ಧಿಯಿಂದ ತಾರಾದೇವಿಯನ್ನು ನೋಡದೆ ನೆಲವನ್ನು ನೋಡುತ ಸುಗ್ರೀವನ ಸ್ತ್ರೀಯೇ ತನ್ನ ಸಮೀಪಕ್ಕೆ ಬಂದವಳಲ್ಲವೆಂದು ಕೋಪವನ್ನು ಕ್ಷಮಿಸಿದನು; ಆಗ ಮಧುಪಾನವನ್ನು ಮಾಡಿದ್ದ ತಾರಾದೇವಿಯು ಲಜ್ಜೆದೊರೆದು ದೃಷ್ಟಿಗಳಿಂದ ಲಕ್ಷ್ಮಣನನ್ನು ನೋಡಿ ಆತನನ್ನು ಕುರಿತು ಸ್ನೇಹದಿಂದಲೂ ಪ್ರೌಢತ್ವದಿಂದಲೂ ಸಂತಮನ್ನಣೆ ಪೂರ್ವಕವಾಗಿಯೂ " ಎಲೈ ಲಕ್ಷ್ಮಣ, ನಿನಗೆ ಕೋಪವು ಬರುವದಕ್ಕೆ ಕಾರಣವೇನು! ಸುಗ್ರೀವ ನು ನೀನು ಹೇಳಿದ ಮಾತುಗಳನ್ನು ಮೀರಲಿಲ್ಲ; ನೀನು ಹೀಗೆ ಕೋಪಿಸಿದರೆ ಬಣಮರಗಳುಳ್ಳ ವನದಲ್ಲಿ ಹತ್ತಿ ಬರು ತ್ತಿರುವ ಕಾಡುಗಿಚ್ಚಿಗೆದಿರಾಗಿ ಬರುವವರಿಲ್ಲದಂತೆ ನಿನ್ನ ಎದಿರಲ್ಲಿ ಶಂಕಾತಂಕವಿಲ್ಲದೆ ನಿಲ್ಲುವವರ್‍ಯಾರು!" ಎಂದು ಕೇಳಿದಳು.

ಸಂತಮನ್ನಣೆಪೂರ್ವಕವಾಗಿ ಸ್ನೇಹವೆರಸಿದ ತಾರಾದೇವಿಯ ಮಾತನ್ನು ಕೇಳಿದ ಲಕ್ಷ್ಮಣನು ಅತ್ಯಂತ ಹರ್ಷಯುಕ್ತನಾಗಿ ತಾನೂ ಸ್ನೇಹಪೂರ್ವಕವಾಗಿ ತಾರಾದೇವಿಯನ್ನು ಕುರಿತು "ಎಲೇ ತಾರಾದೇವಿಯೇ, ನಿನ್ನ ಪತಿಯಾದ ಸುಗ್ರೀವನು ಕಾಮುಕನಾಗಿ ಧರ್ಮಾರ್ಥಗಳನ್ನು ಕೆಡಿಸಿಕೊಂಡನು; ತನ್ನ ಒಡೆಯನಿಗೆ ಹಿತವಾದ ಕಾರ್ಯವನ್ನರಿಯದೆಯೂ ರಾಜಧರ್ಮವನ್ನರಿಯದೆಯೂ ದುಃಖಿತರಾದ ನಮ್ಮನ್ನು ವಿಚಾರಿಸದೆ ತನ್ನ ಮಂತ್ರಿಗಳ ನ್ನು ಕೂಡಿಕೊಂಡು ಮಧುಪಾನವನ್ನು ಮಾಡುತ್ತಿದ್ದಾನೆ; ಮೊದಲು ನಾಲ್ಕುತಿಂಗಳವರಿಗೂ ಮಳೇಕಾಲವನ್ನು ಸಹಿ ಸಿಕೊಂಡಿರಹೇಳಿ ಆ ಕಾಲಮಿತಿಯನ್ನು ಮಾಡಿದನು; ಆ ನಾಲ್ಕುತಿಂಗಳುಗಳು ಕಳೆದಮೇಲೂ ಸ್ತ್ರೀಲೋಲನಾಗಿ ನಮ್ಮನ್ನು ಮರೆತನು; ಮದ್ಯಪಾನವು ಧರ್ಮಾರ್ಥಗಳನ್ನು ಕೆಡಿಸುವಂಥಾದ್ದು; ಆತನು ಉಪಕಾರಮಾಡಿದವರಿಗೆ ಪ್ರತ್ಯುಪಕಾರವನ್ನು ಮಾಡದೆ ಧರ್ಮವನ್ನು ಕೆಡಿಸಿದನು; ದಂಡಯಾತ್ರೆ ಹೊರಡುವ ಕಾಲದಲ್ಲಿ ಶತ್ರುಗಳಮೇಲೆ ಯಾತ್ರೆಹೊರಡದಂತೆ ಮಾಡಿ ನಮ್ಮ ಕಾರ್ಯವನ್ನು ಕೆಡಿಸಿ ಧರ್ಮಾರ್ಥಗಳೆರಡನ್ನೂ ಕೆಡಿಸಿದನು! ಎಲೇ ತಾರಾ ದೇವಿಯೇ, ನೀನು ಸಮಸ್ತ ಕಾರ್ಯರಹಸ್ಯವನ್ನು ಬಲ್ಲವಳು; ನಮ್ಮ ಕಾರ್ಯವು ಕೆಟ್ಟಮೇಲೆ ಅದಕ್ಕೆ ತಕ್ಕ ಪ್ರತಿಕಾ ರ್ಯವಾಗಿ ನಾವು ಏನುಮಾಡಬೇಕೊ ಅದನ್ನು ನೀನೇ ವಿಚಾರಿಸಿ ಹೇಳು" ಎಂದು ನುಡಿದನು.

ಧರ್ಮಾರ್ಥಯುಕ್ತವಾಗಿ ನೀತಿಯೊಡಗೂಡಿದ ಲಕ್ಷ್ಮಣನ ವಾಕ್ಯವನ್ನು ಕೇಳಿ ತಾರಾದೇವಿಯು ಶ್ರೀರಾಮ ನ ಕಾರ್ಯದಲ್ಲಿ ವಿಶ್ವಾಸಯುಕ್ತವಾದ ಮಾತುಗಳಿಂದ ಆತನನ್ನು ಕುರಿತು "ಎಲೈ ಲಕ್ಷ್ಮಣ, ನಿಮ್ಮ ಕಾರ್ಯವನ್ನು ಮಾಡುವದಕ್ಕೆ ತಕ್ಕ ಕಾಲವು ಮೀರಿತೆಂದೆಣಿಸಬೇಡ; ಹಾಗೆ ಮೀರಿದರೂ ನಿನ್ನ ಸೇವಕನಾದ ಸುಗ್ರೀವನಲ್ಲಿ ಕೋಪ ಮಾಡಸಲ್ಲದು; ಯಾವಾಗಲೂ ನಿಮ್ಮ ಸೇವೆಯನ್ನೇ ಮಾಡಬೇಕೆಂದು ಯತ್ನಮಾಡಿಕೊಂಡಿರುವವನು ಒಂದುಬಾರಿ ತಪ್ಪಿದರೂ ನೀವು ಸಹಿಸಿಕೊಳ್ಳಬೇಕು; ರಾಜಕುಮಾರರಲ್ಲಿ ಉತ್ತಮನಾದ ನೀನು ಈ ಕ್ಷುದ್ರಪ್ರಾಣಿಗಳಲ್ಲಿ ಕೋ ಪಮಾಡುವದು ನೀತಿಯಲ್ಲ; ಸತ್ಯಸಂಧನಾಗಿ ತಪಸ್ವಿಯಾದ ನಿನ್ನಂಥಾ ಪರಮಪುರುಷನು ಕೋಪಮಾಡಬಹುದೆ! ಎಲೈ ಲಕ್ಷ್ಮಣ, ನಿಮ್ಮ ಕಾರ್ಯವನ್ನು ತೊಡಗುವ ಕಾಲವನ್ನೂ ನಿನ್ನ ರೋಷವನ್ನೂ ಬಲ್ಲೆನು; ನೀವು ಮೊದ ಲು ಸುಗ್ರೀವನಿಗೆ ಮಾಡಿದ ಉಪಕಾರವನ್ನೂ ಬಲ್ಲೆನು; ನೀವು ಮಾಡಿದ ಉಪಕಾರಕ್ಕೆ ನಾವು ಮಾಡಬೇಕಾದ ಪ್ರತ್ಯುಪಕಾರವನ್ನೂ ನಿಮ್ಮ ಬಲವನ್ನೂ ಸ್ನೇಹಿತರಲ್ಲಿ ಹಿತವನ್ನು ಬಯಸುವ ನಿಮ್ಮ ಅಂತರಂಗವನ್ನೂ ಬಲ್ಲೆನು; ಸುಗ್ರೀವನು ಕಾಮಾಸಕ್ತನಾಗಿ ನಿಮ್ಮ ಕಾರ್ಯದಲ್ಲಿ ಆಲಸ್ಯವುಳ್ಳವನಾಗಿರುವದನ್ನೂ ಶ್ರೀರಾಮನು ವಿರಹಶೋಕ ದಿಂದ ಕಂಗೆಟ್ಟು ವಿಷಯಾದಿ ಸಮಸ್ತ ಸುಖಗಳನ್ನು ಬಿಟ್ಟಿರುವದನ್ನೂ ಬಲ್ಲೆನು; ಕಾಮಾತುರನಾದ ಪುರುಷನು ಧರ್ಮಾರ್ಥಗಳನ್ನು ಸಂಪಾದಿಸುವ ಕಾಲವನ್ನರಿಯನು; ಸುಗ್ರೀವನು ನನ್ನಲ್ಲಿ ಲೋಲುಪ್ತಿಯುಳ್ಳವನಾಗಿ ಲಜ್ಜೆ ಯನ್ನು ತೊರೆದು ಕಾರ್ಯಗತಿಯನ್ನರಿಯದಿದ್ದನು! ಎಲೈ ಲಕ್ಷ್ಮಣ, ನಿನ್ನ ಒಡಹುಟ್ಟಿದವನಾದ ಸುಗ್ರೀವನ ಅಪರಾ ಧವನ್ನು ಸಹಿಸು; ಲೋಕದಲ್ಲಿ ತಪಸ್ವಿಗಳೂ ಋಷಿಗಳೂ ಧರ್ಮಮಾರ್ಗವನ್ನೇ ಬಯಸುವರು; ಸುಗ್ರೀವನು

ಜಾತಿಯಲ್ಲಿ ಕಪಿಯಾಗಿ ಚಪಲನಾದದ್ದರಿಂದ ವಿಷಯಸುಖಾನುಭವಗಳನ್ನು ಬಿಡದೆಯೂ ನೀತಿಮಾರ್ಗವನ್ನು ಕಾಣದೆಯೂ ಇದ್ದಾನೆ" ಎಂದು ಶಾಂತಮನ್ನಣೆವಚನಗಳನ್ನು ನುಡಿದು ಲಕ್ಷ್ಮಣನ ಮೃದುಹೃದಯವನ್ನು ಕಂಡು ತನ್ನ ಪತಿಗೆ ಹಿತವಾದ ಕಾರ್ಯವನ್ನು ಚಿಂತಿಸುತ ಮತ್ತು ಆತನನ್ನು ಕುರಿತು "ಎಲೈ ಲಕ್ಷ್ಮಣ, ಸುಗ್ರೀವನು ಕಾಮುಕನಾಗಿ ಸ್ತ್ರೀಲೋಲನಾಗಿದ್ದರೂ ನೀನು ಬರುವದಕ್ಕೆ ಮೊದಲೆ ಹನುಮಂತನು ಶರತ್ಕಾಲವು ಬಂತೆಂದೂ ಶ್ರೀರಾಮನ ಕಾರ್ಯವನ್ನು ಸಾಧ್ಯಮಾಡಿಕೊಡುವದಕ್ಕೆ ಸಮಯವಾದ್ದರಿಂದ ಸುಮ್ಮನಿರಕೂಡದೆಂದೂ ತಿಳುಹಿಸಲು ಆಗಲೆ ತನ್ನ ಗುರಿಕಾರರನ್ನು ಕರೇಕಳುಹಿಸಿ ಸಮಸ್ತ ಸೇನೆಯನ್ನೂ ಮೇಳೈಸಬೇಕೆಂದು ಕಟ್ಟುಮಾಡಿದನು; ಈಗ ನಾನಾದಿಕ್ಕುಗಳಲ್ಲಿಯೂ ಪರ್ವತಗಳಲ್ಲಿಯೂ ಇದ್ದ ಮೂರುಕೋಟಿ ವಾನರರು ಬಂದಿದ್ದಾರೆ; ನೀನು ಸುಗ್ರೀವನ ಅಭಿಮಾನವನ್ನು ಕಾದು ಪರಿಪಾಲಿಸು; ನಿನ್ನ ಮಿತ್ರನಾದ ಸುಗ್ರೀವನ ಮನೆಯನ್ನೂ ಸಂಪತ್ತನ್ನೂ ನೋಡು; ಅಂತಃಪುರದ ಒಳಗೆ ಬಾ" ಎಂದು ಕರೆದಳು.

ಲಕ್ಷ್ಮಣನು ಆ ಅಂತಃಪುರಕ್ಕೆ ಹೋಗಿ ರತ್ನಖಚಿತವಾದ ಸಿಂಹಾಸನದಲ್ಲಿ ಅನರ್ಘ್ಯವಾದ ಹಾಸಿಗೆಯಮೇಲೆ ಕುಳಿತುಕೊಂಡು ಬಾಲಸೂರ್ಯನಿಗೆ ಸಮಾನವಾದ ದಿವ್ಯಸ್ವರೂಪವುಳ್ಳವನಾಗಿ ದಿವ್ಯಾಭರಣಭೂಷಿತರಾಗಿ ದಿವ್ಯಮಾಲ್ಯಾಲಂಕೃತರಾಗಿ ದಿವ್ಯಗಂಧಾನುಲೇಪನವುಳ್ಳವರಾಗಿ ದೇವತಾಸ್ತ್ರೀಯರ ಮರ್ಯಾದೆಯಲ್ಲಿದ್ದ ಸ್ತ್ರೀಯರ ಮಧ್ಯದಲ್ಲಿ ರುಮಾದೇವಿಯನ್ನು ಎಡತೊಡೆಯಮೇಲೆ ಕುಳ್ಳಿರಿಸಿಕೊಂಡು ತಬ್ಬಿಕೊಂಡಿದ್ದ ಸುಗ್ರೀವನನ್ನು ಕಂಡು ಕೋಪಕೆರಳಿ ಕಣ್ಣುಗಳನ್ನು ಕೆಂಪುಮಾಡಿಕೊಂಡು ಪ್ರಳಯಕಾಲದ ಯಮನಂತೆ ಭಯಂಕರವಾಗಿ ತೋರುತಿದ್ದನು.

## ೩೪ನೇ ಅಧ್ಯಾಯ.

### ಲಕ್ಷ್ಮಣನು ಸುಗ್ರೀವನನ್ನು ನಿಂದಿಸಿದ್ದು.

ಆ ಬಳಿಕ ಅತ್ಯಂತ ಕೋಪಯುಕ್ತನಾಗಿ ನಿಟ್ಟುಸುರುಬಿಡುತ ತನ್ನ ಪರಾಕ್ರಮದಿಂದ ಅಗ್ನಿದೇವನು ತನ್ನ ಜ್ವಾಲೆಯಿಂದ ಪ್ರಜ್ವಲಿಸುತಿದ್ದಾನೆಯೊ ಎಂಬಂತೆ ಕಣ್ಣುಗಳನ್ನು ಕೆಂಪುಮಾಡಿಕೊಂಡಿದ್ದ ಲಕ್ಷ್ಮಣನನ್ನು ಕಂಡು ಸುಗ್ರೀವನು ಕಂಗೆಟ್ಟು ತಾನು ಕುಳಿತಿದ್ದ ಸಿಂಹಪೀಠದಿಂದಿಳಿದು ಅಲಂಕರಿಸಲ್ಪಟ್ಟ ದೇವೇಂದ್ರನ ಧ್ವಜವೋ ಎಂಬಂತೆಯೂ ಅಂತರಿಕ್ಷಮಾರ್ಗದಲ್ಲಿ ಸಮಸ್ತ ನಕ್ಷತ್ರಗಳೂ ಪೂರ್ಣಚಂದ್ರನನ್ನು ಸುತ್ತಿಕೊಂಡಿರುವಂತೆಯೂ ತನ್ನ ಸ್ತ್ರೀಯರು ಸುತ್ತುವರಿದು ಹಿಂಬಗೊಂಡು ಬರುತ್ತಿರಲು ತನ್ನ ಅರಮನೆಯಿಂದ ಹೊರಟುಬಂದು ಲಕ್ಷ್ಮಣನನ್ನು ಕಂಡು ಭಯಪಟ್ಟು ಕಲ್ಪಲತೆಗಳಿಂದ ಸುತ್ತುವರಿಯಲ್ಪಟ್ಟ ಕಲ್ಪವೃಕ್ಷವೋ ಎಂಬಂತೆ ಲಕ್ಷ್ಮಣನ ಮುಂದೆ ಬಂದು ನಿಂತನು; ಆಗ ಜಿತೇಂದ್ರಿಯನಾಗಿ ಧೈರ್ಯದಯೆಗಳುಳ್ಳವನಾಗಿ ಸತ್ಯಸಂಧನಾದ ಲಕ್ಷ್ಮಣನು ಕೋಪಯುಕ್ತನಾಗಿ ನಕ್ಷತ್ರಗಳೊಡನೆ ಕೂಡಿದ ಚಂದ್ರನ ಮರ್ಯಾದೆಯಲ್ಲಿದ್ದ ಸುಗ್ರೀವನನ್ನು ಕುರಿತು "ಎಲೈ ಸುಗ್ರೀವನೆ, ಲೋಕದಲ್ಲಿ ಸದ್ಗುಣಸಂಪನ್ನರಾದ ಮಹಾತ್ಮರಲ್ಲಿ ವಿಶ್ವಾಸವುಳ್ಳವನಾಗಿ ಮಾಡಿದ ಉಪಕಾರವನ್ನು ಸ್ಮರಿಸುವಂಥಾವನಾಗಿ ಸತ್ಯವಾದಿಯಾಗಿ ಜಿತೇಂದ್ರಿಯನಾದ ಅರಸನು ಜಗತ್ತಿನಲ್ಲಿ ಮಹಾ ಕೀರ್ತಿಯನ್ನು ಪಡೆಯುವನು; ತನಗೆ ಉಪಕಾರವನ್ನು ಮಾಡಿದ ಮಿತ್ರರಿಗೆ ಪ್ರತ್ಯುಪಕಾರವನ್ನು ಮಾಡುವದಾಗಿ ಮಾತುಕೊಟ್ಟು ತಪ್ಪುವ ಅರಸನಿಗಿಂತಲೂ ಲೋಕದಲ್ಲಿ ಅಧರ್ಮನಿಲ್ಲ; ಒಂದು ಕುದುರೆಯನ್ನು ಕೊಡುವದಾಗಿ ನುಡಿದು ಅದಕ್ಕೆ ತಪ್ಪಿದವನಿಗೆ ನೂರುಕುದುರೆಗಳು ಲಯವಾಗುವವು; ಒಂದು ಹಸವನ್ನು ಕೊಡುವದಾಗಿ ಹೇಳಿ ಕೊಡದಿದ್ದವನಿಗೆ ಸಾವಿರ ಗೋವುಗಳು ನಷ್ಟವಾಗುವವು; ತನ್ನನ್ನೇ ಕೊಡುವದಾಗಿ ನುಡಿದು ಅದಕ್ಕೆ ತಪ್ಪಿದವನ ಕುಲವೇ ಕ್ಷಯವಾಗುವದು! ಸಮಸ್ತ ದೇವತೆಗಳಿಗೂ ಪೂಜ್ಯನಾದ ಬ್ರಹ್ಮದೇವನು ಲೋಕದಲ್ಲಿ ಯಾವನಾನೊಬ್ಬನು ಮಿತ್ರರಿಂದ ಉಪಕಾರವನ್ನು ಪಡೆದು

ಅವರಿಗೆ ಪ್ರತ್ಯುಪಕಾರವನ್ನು ಮಾಡದಿರುವನೋ ಆತನು ಕೃತಘ್ನನೆನಿಸಿಕೊಂಡು ಸಮಸ್ತ ಪ್ರಾಣಿಗಳಿಂದಲೂ ಕೊಲೆಗೆ ಯೋಗ್ಯನಾಗುವನೆಂದು ಹೇಳಿದ್ದಾನೆ; ನೀನು ಕೃತಘ್ನನಾದದ್ದರಿಂದ ಕೊಲೆಗೆ ಯೋಗ್ಯನಾದೆ; ಕೃತಘ್ನನೆಂದರೆ ಮಾಡಿದ ಉಪಕಾರವನ್ನು ಮರೆತವನು; ಕೃತಘ್ನತೆಗೆ ಪ್ರಾಯಶ್ಚಿತ್ತವಿಲ್ಲ! ಧರ್ಮಶಾಸ್ತ್ರದಲ್ಲಿ ಗೋಹತ್ಯಮಾಡಿದವನಿಗೂ ಸುರಾಪಾನವನ್ನು ಮಾಡಿದವನಿಗೂ ಕಳ್ಳನಿಗೂ ವ್ರತವನ್ನು ಬಿಟ್ಟವನಿಗೂ ಪ್ರಾಯಶ್ಚಿತ್ತವುಂಟೆಂತಲೂ ಮಾಡಿದ ಉಪಕಾರವನ್ನು ಮರೆತವನಿಗೆ ಪ್ರಾಯಶ್ಚಿತ್ತವಿಲ್ಲವೆಂತಲೂ ಹೇಳಿರುವದು! ಎಲೈ ಸುಗ್ರೀವನೆ, ನೀನು ಕೃತಘ್ನನಾಗಿ ಸತ್ಯವನ್ನು ಬಿಟ್ಟೆ; ಮೊದಲು ಶ್ರೀರಾಮನಿಂದ ಉಪಕಾರವನ್ನು ಪಡೆದು ಆತನಿಗೆ ಪ್ರತ್ಯುಪಕಾರವನ್ನು ಮಾಡದಿದ್ದೀ; ಸೀತಾದೇವಿಯನ್ನು ಅರಸುವದಕ್ಕೆ ತಕ್ಕ ಯತ್ನವನ್ನು ಮಾಡಿ ಆತನಿಗೆ ಪ್ರತ್ಯುಪಕಾರವನ್ನು ಮಾಡದೆ ಸ್ತ್ರೀಲೋಲನಾಗಿ ಆಡಿದಮಾತಿಗೆ ತಪ್ಪಿದೆ; ಆದ್ದರಿಂದ ಶ್ರೀರಾಮನು ನಿನ್ನ ಮಾತುಗಳನ್ನು ಕಪಿಗಳನುಡಿಗಳಿಗೆ ಸರಿಯಾಗೆಣಿಸುವನು; ಮಹಾತ್ಮನಾಗಿ ಕೃಪಾಸಿಂಧುವಾದ ಶ್ರೀರಾಮನು ದುರಾತ್ಮನಾದ ನಿನಗೆ ಕಪಿರಾಜ್ಯಪಟ್ಟವನ್ನು ಕಟ್ಟಿದನು; ಆ ಮಹಾತ್ಮನು ಮಾಡಿದ ಉಪಕಾರವನ್ನು ಮರೆತೆಯಾದ್ದರಿಂದ ನೀನು ಈಕ್ಷಣದಲ್ಲೇ ಕೂರಲಗುಳ್ಳ ರಾಮಬಾಣಗಳಿಂದ ಹತನಾಗಿ ಸ್ವರ್ಗಸ್ಥನಾದ ವಾಲಿಯನ್ನು ಕಾಣುವೆ; ವಾಲಿಯು ಹೋದಮಾರ್ಗವು ಇನ್ನೂ ಮರೆಯಾಗಲಿಲ್ಲ! ಎಲೈ ಸುಗ್ರೀವನೆ, ನೀನು ವಾಲಿಯು ಹೋದ ಮಾರ್ಗಕ್ಕೆ ಹೋಗದಿರಬೇಕಾದರೆ ಶ್ರೀರಾಮನ ಸಮ್ಮುಖವನ್ನು ಸೇರುವದು ಉಚಿತವು; ನೋಡಿದರೆ ನೀನು ಶ್ರೀರಾಮನ ಕೂರಲಗುಳ್ಳವಾಗಿ ವಜ್ರಾಯುಧಕ್ಕೆ ಸಮಾನವಾದ ಬಾಣಗಳನ್ನು ಅರಿಯದಿರುವಹಾಗೆ ನನ್ನ ಮನಸ್ಸಿಗೆ ತೋರುತ್ತದೆ; ಆದಕಾರಣ ಶ್ರೀರಾಮನ ಕಾರ್ಯವನ್ನು ವಿಚಾರಿಸದೆ ಸ್ತ್ರೀಲೋಲನಾಗಿ ಸುಖಿಸಿಕೊಂಡಿದ್ದೀ'' ಎಂದು ನುಡಿದನು.

## ೩೫ನೇ ಅಧ್ಯಾಯ.

## ತಾರಾದೇವಿಯು ಲಕ್ಷ್ಮಣನನ್ನು ಸಂತವಿಟ್ಟದ್ದು.

ಈ ಮರ್ಯಾದೆಯಲ್ಲಿ ಸುಗ್ರೀವನನ್ನು ನಿಷ್ಠುರ ವಚನಗಳಿಂದ ಅಧ್ಧರಿಸಿ ನುಡಿಯುತ ತೇಜಸ್ಸಿನಿಂದ ಯಜ್ಞಪುರುಷನಂತೆ ಬೆಳಗುತಿದ್ದ ಲಕ್ಷ್ಮಣನನ್ನು ಕುರಿತು ಚಂದ್ರಮುಖಿಯಾದ ತಾರಾದೇವಿಯು "ಎಲೈ ಲಕ್ಷ್ಮಣ, ಈ ಮರ್ಯಾದೆಯಲ್ಲಿ ನಿಷ್ಠುರ ವಚನಗಳನ್ನು ನುಡಿಯುವದು ನಿನಗುಚಿತವಲ್ಲ; ವಾನರಾಧಿಪತಿಯಾದ ಸುಗ್ರೀವನು ಇಂಥಾ ನಿಷ್ಠುರೋಕ್ತಿಗಳನ್ನು ಕೇಳುವದಕ್ಕೆ ಮತ್ತೊಬ್ಬರಹಾಗೆ ಮಾಡಿದ ಉಪಕಾರವನ್ನು ಮರೆಯುವವನಲ್ಲ; ಮಿತ್ರರಲ್ಲಿ ಕಾಪಟ್ಯವನ್ನು ಮಾಡಿ ದ್ರೋಹವನ್ನೆಣಿಸುವವನಲ್ಲ; ನಿಷ್ಠುರಗಾರನಲ್ಲ; ಮಾಡುವಕಾರ್ಯವನ್ನು ಮಾಡದಿರುವವನಲ್ಲ; ಆಡಿದ ಮಾತನ್ನು ತಪ್ಪುವವನಲ್ಲ; ಪರರು ಮಾಡಿದ ಉಪಕಾರವನ್ನು ಜರೆಯುವವನಲ್ಲ; ಶ್ರೀರಾಮನು ಸುಗ್ರೀವನಿಗೆ ಯಾರಿಂದಲೂ ಸಾಧ್ಯವಾಗದ ಕಾರ್ಯವನ್ನು ಮಾಡಿಕೊಟ್ಟನು; ಆತನ ಕೃಪೆಯಿಂದ ಕೀರ್ತಿಯನ್ನೂ ಎಂದಿಗೂ ಕೇಡಿಲ್ಲದ ರಾಜ್ಯಾಧಿಪತ್ಯವನ್ನೂ ಭೋಗಯೋಗ್ಯವಾದ ರುಮಾದೇವಿಯನ್ನೂ ನನ್ನನ್ನೂ ಪಡೆದನು; ಮೊದಲು ಸುಗ್ರೀವನು ದುಃಖವನ್ನನುಭವಿಸಿಕೊಂಡಿದ್ದು ಈಗ ವಿಷಯಸುಖವನ್ನು ಪಡೆದು ಮೋಹಿಸಿ ಸ್ತ್ರೀಲೋಲನಾಗಿ ಶ್ರೀರಾಮನ ಕಾರ್ಯವನ್ನು ಸಾಧಿಸುವ ಮಾರ್ಗವನ್ನರಿಯದಿದ್ದಾನೆ!—ಪೂರ್ವದಲ್ಲಿ ವಿಶ್ವಾಮಿತ್ರಮುನಿಯು ಅತ್ಯುಗ್ರವಾದ ತಪಸ್ಸನ್ನು ಮಾಡುತ್ತಿರಲು ಆತನ ತಪೋಜ್ವಾಲೆಯಿಂದ ಜಗತ್ತೆಲ್ಲವು ಕಂಗೆಟ್ಟು ದೇವತೆಗಳಿಗೆ ಮೊರೆಯಿಟ್ಟವು; ದೇವತೆಗಳು ಘೃತಾಚಿಯೆಂಬ ದೇವಸ್ತ್ರೀಯನ್ನು ಕಳುಹಿಸಲು ಆ ದೇವಾಂಗನೆಯು ವಿಶ್ವಾಮಿತ್ರಮುನೀಶ್ವರನ ಆಶ್ರಮಕ್ಕೆ ಹೋಗಿ ಹಾವಭಾವ ವಿಲಾಸ ವಿಭ್ರಮಗಳಿಂದ ಆತನ ಮನಸ್ಸನ್ನು ಕರಗಿಸಿ ಮದನಬಾಣಗಳಿಗೊಳಗುಮಾಡಿದಳು; ಆ ಮುನಿಯು ಆ ಅಂಗನೆಯಲ್ಲಿ ಮನಸ್ಸಿಕ್ಕಿ ಆಕೆಯೊಡನೆ ಹತ್ತುವರು

ಷಗಳು ರಮಿಸಿಕೊಂಡು ಸಂಧ್ಯಾವಂದನೆ ಜಪ ಹೋಮಾದಿಗಳನ್ನು ಕಾಲಕಾಲಗಳಲ್ಲಿ ಮಾಡದೆ ಮೈಮರತಿದ್ದನು ; ಅಂಥಾ ಮಹಿಮೆಯುಳ್ಳವನಿಗೂ ಕಾಮಗ್ರಹವು ಸೊಕ್ಕಿ ಮರವೆಯನ್ನುಟ್ಟಿಸಿದಬಳಿಕ ಬಹು ದಿನಗಳು ಭೋಗವನ್ನು ಕಾಣಪಿದ್ದ ಹುಲು ಕಪಿಯ ವೃತ್ತಾಂತವೇನು ! ಸುಗ್ರೀವನು ಮೊದಲೆ ವನದಲ್ಲಿ ಸಂಚರಿಸುವ ಪಶುವು ; ಆದ್ದರಿಂದ ಕಾಮವಶನಾಗಿ ಕಾಲವನ್ನರಿಯದಿದ್ದರೂ ನೀವು ಕ್ಷಮಿಸಬೇಕು ! ಎಲೈ ಲಕ್ಷ್ಮಣ, ನೀನು ಸುಗ್ರೀವನು ನಿಶ್ಚಯಿಸಿಕೊಂಡಿದ್ದ ಕಾರ್ಯಸ್ಥಿತಿಯನ್ನು ವಿಚಾರಿಸದೆ ಪ್ರಾಕೃತಜನರಂತೆ ಕೋಪವನ್ನು ಮಾಡಸಲ್ಲದು ; ಸತ್ವಗುಣ ಸಂಪನ್ನರಾದ ಪುರುಷೋತ್ತಮರು ಒಂದು ಕಾರ್ಯವನ್ನು ವಿಚಾರಿಸಿ ನಿಶ್ಚಯಿಸದೆ ಕೋಪವನ್ನು ಮಾಡರು ; ನಾನು ಸುಗ್ರೀವನ ನಿಮಿತ್ತವಾಗಿ ಬೇಡಿಕೊಳ್ಳುತಲಿದ್ದೇನೆ ; ನೀನು ಅವಶ್ಯವಾಗಿ ಈ ಕೋಪಾಟೋಪವನ್ನು ಬಿಡು ; ನಿನ್ನ ನಿಮಿತ್ತವಾಗಿ ಸುಗ್ರೀವನು ಸಮಸ್ತ ರಾಜ್ಯವನ್ನೂ ಧನಧಾನ್ಯ ಭಂಡಾರ ಮೊದಲಾದ ವಸ್ತುಗಳನ್ನೂ ಅಂಗದನನ್ನೂ ರುಮಾದೇವಿಯನ್ನೂ ನನ್ನನ್ನೂ ಬಿಡಹೇಳಿದರೂ ಬಿಡುವನೆಂದು ನನ್ನ ಮನಸ್ಸಿಗೆ ತೋರುತ್ತಿದೆ ; ಸುಗ್ರೀವನೊಬ್ಬನೆ ರಣರಂಗದಲ್ಲಿ ರಾವಣನನ್ನು ಕೊಂದು ಸೀತಾದೇವಿಯನ್ನು ಕರೆದುಕೊಂಡು ಬಂದು ಶ್ರೀರಾಮನಿಗೆ ಒಪ್ಪಿಸುವನು ; ಆದರೂ ಲಂಕಾಪಟ್ಟಣದಲ್ಲಿ ಅನೇಕಕೋಟಿಮಂದಿ ಕಾಮರೂಪಿಗಳಾದ ರಾಕ್ಷಸರಿದ್ದಾರೆ ; ಅವರೆಲ್ಲರನ್ನು ಕೊಂದಲ್ಲದೆ ರಾವಣನನ್ನು ಜಯಿಸಲಾಗದು ; ಸಹಾಯವಿಲ್ಲದಂಥಾವರಿಗೆ ರಾವಣನು ಸಾಧ್ಯವಾಗುವವನಲ್ಲವೆಂದು ಪೂರ್ವದಲ್ಲಿ ಕಪಿನಾಯಕನಾದ ವಾಲಿಯು ಹೇಳುತಿದ್ದನು ; ನಾನು ಆ ಮಾತನ್ನು ಸುಗ್ರೀವನಕೂಡೆ ಹೇಳಿದೆನು ; ಆದಕಾರಣ ಸುಗ್ರೀವನು ತನಗೆ ಸಹಾಯಾರ್ಥವಾಗಿ ನಾನಾದಿಕ್ಕುಗಳಿಂದ ಅನೇಕಮಂದಿ ಕಪಿನಾಯಕರನ್ನು ಕರೇಕಳುಹಿಸಿ ಅವರು ಬರುವಪರ್ಯಂತರ ಹೊರಡದೆ ಸುಮ್ಮನಿದ್ದಾನೆ ; ನೀನು ಬರುವದಕ್ಕೆ ಮೊದಲೇ ಸುಗ್ರೀವನು ಅನೇಕ ಬಲವಂತರಾದ ಕಪಿನಾಯಕರನ್ನು ಸಹಾಯಮಾಡಿಕೊಂಡು ಶ್ರೀರಾಮನ ಕಾರ್ಯವನ್ನು ಸಾಧ್ಯಮಾಡಿಕೊಡಬೇಕೆಂದು ಯತ್ನಮಾಡಿಕೊಂಡಿದ್ದನು ; ಬುದರ್ಬುದ ಕರಡಿಗಳೂ ನೂರುಕೋಟಿ ಮುಸುವುಗಳೂ ಅನೇಕಕೋಟಿ ಕಪಿನಾಯಕರೂ ಇಂದು ಬಂದು ನಿನ್ನನ್ನು ಕಾಣಿಸಿಕೊಳ್ಳುವರು ; ನೀನು ಕೋಪವನ್ನು ಬಿಡು ; ಕೆಂಪಾದ ಕಣ್ಣುಗಳುಳ್ಳ ಕೋಪರಸಭರಿತವಾದ ನಿನ್ನ ಮುಖವನ್ನು ನೋಡಿ ಸುಗ್ರೀವನ ಅರಮನೆಯಲ್ಲಿರುವ ವಾನರಸ್ತ್ರೀಯರು ಮೊದಲಾದವರೂ ಭಯಪಡುತ್ತಿದ್ದಾರೆ ; ನಿನ್ನ ಕೋಪಾಟೋಪವನ್ನು ಕ್ಷಮಿಸಿಕೋ” ಎಂದು ಸಂತವನ್ನಣೆಪೂರ್ವಕವಾಗಿ ಹೇಳುತ್ತಿದ್ದಳು.

## ೩೬ನೇ ಅಧ್ಯಾಯ.

### ಲಕ್ಷ್ಮಣನು ಸುಗ್ರೀವನನ್ನು ಶ್ರೀರಾಮನ ಬಳಿಗೆ ಕರೆದದ್ದು.

ಎಲೈ ಕುಶಲವರುಗಳಿರಾ, ಈ ಮರ್ಯಾದೆಯಲ್ಲಿ ಲಕ್ಷ್ಮಣನು ತಾರಾದೇವಿಯಿಂದ ಧರ್ಮರಹಸ್ಯದೊಡಗೂಡಿದ ಸಂತವನ್ನಣೇ ವಾಕ್ಯಗಳಿಂದ ಸಂತವಿಡಲ್ಪಟ್ಟು ಆ ದೇವಿಯ ಮಾತುಗಳನ್ನಂಗೀಕರಿಸಿ ಸುಗ್ರೀವನಮೇಲೆ ಕೋಪವನ್ನು ಬಿಟ್ಟು ಶಾಂತವುಳ್ಳವನಾಗಲು ಸುಗ್ರೀವನು ಭಯವನ್ನು ಬಿಟ್ಟು ವಸ್ತ್ರವನ್ನು ಪರಿತ್ಯಾಗಮಾಡುವಂತೆ ತಾನು ಅಲಂಕರಿಸಿಕೊಂಡಿದ್ದ ಪುಷ್ಪಸರಗಳನ್ನು ತೆಗೆದುಹಾಕಿ ಗರ್ವವನ್ನು ಬಿಟ್ಟು ಲಕ್ಷ್ಮಣನ ಸಮೀಪಕ್ಕೆ ಹೋಗಿ ಅತ್ಯಂತ ವಿನಯಗುಣಸಂಪತ್ತಿಯುಳ್ಳವನಾಗಿ ಆತನಿಗೆ ಹರ್ಷವನ್ನುಂಟುಮಾಡುತ ಆತನನ್ನು ಕುರಿತು “ಎಲೈ ಲಕ್ಷ್ಮಣ, ಹೋದ ರಾಜ್ಯಾಧಿಪತ್ಯವೂ ಸಮಸ್ತವಾದ ಐಶ್ವರ್ಯವೂ ಎಂದಿಗೂ ಕೇಡಿಲ್ಲದ ಕೀರ್ತಿಯೂ ಶ್ರೀರಾಮನ ಕೃಪೆಯಿಂದ ತಿರಿಗಿ ಬಂದವು ; ಲೋಕದಲ್ಲಿ ಸಕಲ ಸಚ್ಚರಿತ್ರಗಳಿಂದ ಪ್ರಖ್ಯಾತಿಪಡೆದ ಆ ಸ್ವಾಮಿಯ ಪರಾಕ್ರಮಕ್ಕೆ ಸರಿಯಾದ ಪರಾಕ್ರಮವುಳ್ಳವರ್ಯಾರು ! ಮಹಾಮಹಿಮೆಯುಳ್ಳವನಾಗಿ ಧರ್ಮಾತ್ಮನಾದ ಶ್ರೀರಾಮನು ತನ್ನ ಭುಜಬಲ ಪರಾಕ್ರಮಗಳಿಂದ ನನ್ನ ಸಹಾಯವೆಂಬ ನೆವಮಾತ್ರದಿಂದ ಸಮರದಲ್ಲಿ ರಾವಣನನ್ನು ಕೊಂದು ಸೀತಾದೇವಿ

ಯನ್ನು ಕರೆದುಕೊಂಡು ಬರುವನು; ಮಹತ್ತಾದ ಏಳು ಮರಗಳನ್ನು ಒಂದೇ ಬಾಣದಿಂದ ಹರಿಯಲೆಚ್ಚಿದ ಆ ಮಹಾತ್ಮನಿಗೆ ಮತ್ತೊಬ್ಬರ ಸಹಾಯದಿಂದ ಆಗುವ ಕಾರ್ಯವೇನು! ಆತನ ಬಿಲ್ಲುನಾರಿಯ ಜಾವಡೇ ಧ್ವನಿಯಿಂದಲೇ ಸಮಸ್ತ ಪರ್ವತಸಹಿತವಾದ ಭೂಮಿಯು ನಡುಗುವದು; ಆತನಿಗೆ ನನ್ನ ಸಹಾಯದಿಂದ ಆಗುವ ಕಾರ್ಯವೇನು! ಸಮಸ್ತ ಬಲಸಹಿತನಾದ ರಾವಣನನ್ನು ಸಂಹಾರಮಾಡುವದಕ್ಕೆ ಹೋಗುವ ಶ್ರೀರಾಮನ ಹಿಂದೆ ಹೋಗಿ ನಾನು ಆತನ ಕಾರ್ಯಕ್ಕೆ ಸಹಾಯವಾದೆನೆಂಬ ಮಹಾ ಕೀರ್ತಿಯನ್ನು ಪಡೆಯುವೆನು! ಎಲೈ ಲಕ್ಷ್ಮಣ, ನಿನ್ನ ಊಳಿಗದವನಾದ ನನ್ನ ಅಪರಾಧವನ್ನು ಸಹಿಸು; ಲೋಕದಲ್ಲಿ ಅಪರಾಧಮಾಡದ ಸೇವಕರ್ಯಾರು!" ಎಂದು ನುಡಿದನು.

ಆ ಮಾತನ್ನು ಕೇಳಿ ಲಕ್ಷ್ಮಣನು ಅತಿ ಹರ್ಷಪಟ್ಟು ಪ್ರೀತಿಯಿಂದ ಸುಗ್ರೀವನನ್ನು ಕುರಿತು "ಎಲೈ ಸುಗ್ರೀವನೆ, ನನ್ನ ಅಣ್ಣನಾದ ಶ್ರೀರಾಮನು ಇದುಪರ್ಯಂತರ ಒಡೆಯನಿಲ್ಲದವನಾಗಿದ್ದು ಅತ್ಯಂತ ವಿನಯಗುಣಸಂಪನ್ನನಾದ ನಿನ್ನೊಡನೆ ಸ್ನೇಹವನ್ನು ಮಾಡಿಕೊಂಡು ಈಗ ಒಡೆಯನುಳ್ಳವನಾದನು! ಎಲೈ ಸುಗ್ರೀವನೆ, ನಿನ್ನ ಸತ್ಯಕ್ಕೂ ಮಹಿಮೆಗೂ ಸರಿಯುಂಟೆ! ನೀನು ಕಪಿರಾಜ್ಯಾಧಿಪತ್ಯಕ್ಕೆ ಯೋಗ್ಯನು; ನೀನು ಹೇಳಿದ ಮಾತುಗಳೆಲ್ಲವೂ ಸತ್ಯವಾದವು; ತನ್ನನ್ನು ತಾನೇ ಕೊಂಡಾಡಿಕೊಂಡರೆ ದೋಷವೆಂಬುದು ಪರಾಕ್ರಮವಿಲ್ಲದ ಹೇಡಿಗೆ ಸಲ್ಲುವದಲ್ಲದೆ ನಿನ್ನಂಥಾ ಪರಾಕ್ರಮಿಗೆ ಸಲ್ಲದು; ಈ ಲೋಕದಲ್ಲಿ ನೀನೊಬ್ಬನೇ ಶ್ರೀರಾಮನ ಪರಾಕ್ರಮಕ್ಕೂ ಬಲಕ್ಕೂ ಸಮಾನವಾದವನಲ್ಲದೆ ಮತ್ಯಾರುಂಟು! ದೈವಗತಿಯಿಂದ ನಮಗೆ ನಿನ್ನ ಮಿತ್ರತ್ವವು ದೊರೆಕಿ ಸಹಾಯವುಂಟಾಯಿತು; ಇನ್ನು ನೀನು ಪ್ರಯಾಣವಾಗಿ ಹೊರಟು ನನ್ನ ಕೂಡೆ ತೆರಳಿ ನಿನ್ನ ಸಖನಾದ ಶ್ರೀರಾಮನ ದುಃಖವನ್ನು ಪರಿಹರಿಸಿ ಆತನನ್ನು ಸಂತವಿಡು; ನಾನು ವಿರಹಶೋಕದಿಂದ ಕಂಗೆಟ್ಟ ಶ್ರೀರಾಮನನ್ನು ನೋಡಿ ನಿನ್ನನ್ನು ನಿಷ್ಠುರವಾಗಿ ನುಡಿದೆನು; ಅದನ್ನು ಸಹಿಸಿಕೋ" ಎಂದು ಒಡಂಬಡಿಕೆಯನ್ನು ಹೇಳಿದನು.

## ೩೨ ನೇ ಅಧ್ಯಾಯ.

## ಸುಗ್ರೀವನು ಕಪಿಸೇನೆಗಳನ್ನು ಕೂಡಿಸಿದ್ದು.

ಈ ಮರ್ಯಾದೆಯಲ್ಲಿ ಮಹಾತ್ಮನಾದ ಲಕ್ಷ್ಮಣನು ಸಂತವಿಡಲು ಸುಗ್ರೀವನು ಸಮೀಪದಲ್ಲಿದ್ದ ಹನುಮಂತನನ್ನು ಕರೆದು "ಎಲೈ ಹನುಮಂತನೆ, ಮಹೇಂದ್ರಪರ್ವತ ಹಿಮವತ್ಪರ್ವತ ವಿಂಧ್ಯಪರ್ವತ ಕೈಲಾಸಪರ್ವತ ಬಿಳುಪಾದ ಕೋಡುಗಲ್ಲುಗಳುಳ್ಳ ಮಂದರಗಿರಿ ಬಾಲಸೂರ್ಯನ ಕಾಂತಿಯಂತೆ ಒಪ್ಪುವ ಪಂಚಶೈಲಗಳು ಹಸ್ತಾಚಲ ಪದ್ಮಾಚಲ ಅಂಜನಗಿರಿ ಧೂಮ್ರಗಿರಿ ಮೊದಲಾದ ಪರ್ವತಗಳ ಗುಹೆಗಳಲ್ಲಿಯೂ ಇತರ ಸ್ಥಾನಗಳಲ್ಲಿಯೂ ವಾಸಮಾಡುತ ನಾನಾವರ್ಣವಾಗಿ ಮಹಾಬಲವುಳ್ಳವಾಗಿ ಆನೆಗಳಿಗೂ ಮೇಘಗಳಿಗೂ ಸಮಾನವಾದ ಶರೀರಾಕಾರವುಳ್ಳವಾಗಿ ಮಧುಪಾನಮಾಡಿಕೊಂಡಿರುವ ಕಪಿಗಳನ್ನು ಕರೇಕಳುಹಿಸು; ನಾನು ಮೊದಲು ಕಳುಹಿಸಿದ ಕಪಿನಾಯಕರು ತತ್ತಸ್ಥಾನದಲ್ಲಿರುವ ಕಪಿಗಳನ್ನು ಕರೆದುಕೊಂಡು ಶೀಘ್ರದಲ್ಲಿ ಬರುವಹಾಗೆ ಇನ್ನೂ ಕೆಲವು ಕಪಿನಾಯಕರನ್ನು ಕಳುಹಿಸು; ಕೆಲವರನ್ನು ಸಮಸ್ತ ದಿಕ್ಕುಗಳಲ್ಲಿರುವ ಕಪಿಗಳನ್ನೂ ಕರೆದುಕೊಂಡು ಶೀಘ್ರವಾಗಿ ಬರುವಹಾಗೆ ಕಟ್ಟುಮಾಡಿ ಕಳುಹಿಸು" ಎಂದು ಹೇಳಿದನು.

ಆ ಮಾತನ್ನು ಕೇಳಿ ಹನುಮಂತನು ಅತಿವೇಗವುಳ್ಳ ಕಪಿನಾಯಕರನ್ನು ಕಳುಹಿಸಲು ಅವರು ಆಕಾಶದಲ್ಲಿ ಪಕ್ಷಿಗಳು ಅತಿವೇಗದಿಂದ ಹೋಗುವಂತೆ ಅತಿ ಶೀಘ್ರವಾಗಿ ಹೋಗಿ ಸಮುದ್ರದ ತಡಿಗಳಲ್ಲಿಯೂ ವನಗಳಲ್ಲಿಯೂ ಪರ್ವತ ಗುಹೆಗಳಲ್ಲಿಯೂ ಇದ್ದ ಕಪಿನಾಯಕರಿಗೆ ಕಾಲಮೃತ್ಯುವಿಗೆ ಸಮಾನವಾದ ಸುಗ್ರೀವನ ಆಜ್ಞೆಯನ್ನು ತಿಳಿಸಿದರು; ಅದನ್ನು ಕೇಳಿ ನಾನಾದಿಕ್ಕುಗಳಲ್ಲಿದ್ದ ಕಪಿನಾಯಕರು ತಮ್ಮ ತಮ್ಮ ಸೇನೆಗಳನ್ನು ಕೂಡಿಕೊಂಡು ಅತಿ ಶೀಘ್ರವಾಗಿ ಬರುತ್ತಿದ್ದರು! ಅಂಜನಗಿರಿಯಿಂದ ಬಂದ ಮಹಾ ಬಲವಂತರಾದ ಕಪಿಗಳು ಮೂರುಕೋಟಿ;

ಅಸ್ತಮಯಪರ್ವತದಿಂದ ಬಂದ ಸುವರ್ಣಕಾಂತಿಯ ಮರ್ಯಾದೆಯಲ್ಲಿ ತನುಕಾಂತಿಯುಳ್ಳ ಕಪಿಗಳು ಪತ್ತುಕೋಟಿ; ಕೈಲಾಸ ಪರ್ವತದಿಂದ ಬಂದ ಸಿಂಹದಮರ್ಯಾದೆಯಲ್ಲಿ ಅತಿ ಬಲಪರಾಕ್ರಮವುಳ್ಳ ಕಪಿಗಳು ಸಾವಿರಕೋಟಿ; ಹಿಮವತ್ಪರ್ವತವನ್ನಾಶ್ರಯಿಸಿಕೊಂಡು ಕಂದಮೂಲ ಫಲಾಹಾರಮಾಡಿಕೊಂಡಿದ್ದ ಕಪಿಗಳು ಸಾವಿರಕೋಟಿ; ವಿಂಧ್ಯಪರ್ವತದಿಂದ ಬಂದ ಯಜ್ಞಪುರುಷನ ಸಮಾನವಾದ ಕಪಿಗಳು ಒಂದುಸಾವಿರ ಕೋಟಿ; ಕ್ಷೀರಸಮುದ್ರದ ತಡಿಯಲ್ಲಿರುವ ತಮಾಲವೆಂಬ ವನದಲ್ಲಿ ತೆಂಗಿನಕಾಯಿಗಳ ನೀರನ್ನೇ ಆಹಾರಮಾಡಿಕೊಂಡಿದ್ದ ಕಪಿಗಳು ಲೆಕ್ಕವಿಲ್ಲದವು; ವನಗಳಿಂದಲೂ ಗುಹೆಗಳಿಂದಲೂ ನದೀತೀರಗಳಿಂದಲೂ ಬಂದ ಕಪಿಗಳೂ ಲೆಕ್ಕವಿಲ್ಲದವಾಗಿದ್ದವು! ಈ ಮರ್ಯಾದೆಯಲ್ಲಿ ಸೂರ್ಯೋದಯದಲ್ಲಿ ಸೂರ್ಯಮಂಡಲವನ್ನೇ ಕೌಚಿದವೋ ಎಂಬಂತೆ ಕಪಿಸೇನೆಯು ಬರುತ್ತಿದ್ದವು! ಆ ಕಪಿಗಳನ್ನು ಕರೆತರುವದಕ್ಕೆ ಕಿಷ್ಕಿಂಧಾಪಟ್ಟಣದಿಂದ ಹೋದ ಕಪಿನಾಯಕರು ಮಹತ್ತಾದ ವನಗಳುಳ್ಳ ಹಿಮವತ್ಪರ್ವತವನ್ನು ಕಂಡರು; ಅಲ್ಲಿ ಯಜ್ಞನೆಂಬ ಒಬ್ಬ ಮುನೀಶ್ವರನಿರುತಿದ್ದನು; ಆತನು ಸಮಸ್ತ ದೇವತೆಗಳಿಗೂ ಸಮ್ಮತನಾಗಿ ದಿವ್ಯಭೋಗಿಯಾಗಿದ್ದನು; ಆ ಪರ್ವತವಲ್ಲಿದ್ದ ಅಮೃತವಂತೆ ಸ್ವಾದುವುಳ್ಳ ಕಂದಮೂಲ ಫಲಗಳನ್ನು ತನ್ನ ಮನಸ್ಸುಬಂದಂತೆ ಒಂದೊತ್ತು ಆಹಾರಮಾಡಿಕೊಳ್ಳುತ ಒಂದು ತಿಂಗಳು ಹಸಿವು ತೃಷೆಗಳಿಲ್ಲದೆ ತೃಪ್ತಿಯಾಗಿರುತಿದ್ದನು; ಆ ಕಪಿನಾಯಕರು ಅಂಥಾ ಆಶ್ರಮದಲ್ಲಿದ್ದ ಅಮೃತ ಕಂದಮೂಲಫಲಗಳನ್ನೂ ದಿವ್ಯವಾದ ಸಂಜೀವನೀ ಔಷಧಿಗಳನ್ನೂ ಪರಿಮಳಕುಂದಿ ಕಂದದಂಥಾ ಪುಷ್ಪಗಳನ್ನೂ ತೆಗೆದುಕೊಂಡು ನಾನಾದಿಕ್ಕುಗಳಲ್ಲಿದ್ದ ಕಪಿಗಳನ್ನು ಕರೆದುಕೊಂಡು ಬಂದು ಸುಗ್ರೀವನನ್ನು ಕಾಣಿಸಿಕೊಂಡು ತಾವುತಂದ ದಿವ್ಯಫಲಗಳನ್ನು ಕಾಣಿಕೆಯಾಗಿ ಕೊಟ್ಟು ಆತನು ಆ ಫಲಗಳನ್ನು ತೆಗೆದುಕೊಂಡು ಅತಿ ಹರ್ಷಪಡಲು ಆತನನ್ನು ಕುರಿತು "ಎಲೈ ಸ್ವಾಮಿ ಸುಗ್ರೀವನೆ, ಸಮುದ್ರಪರ್ಯಂತರವಾದ ಭೂಮಂಡಲದೊಳಗಿದ್ದ ಕಪಿಗಳೆಲ್ಲವನ್ನೂ ಕರೆದುಕೊಂಡು ಬಂದೆವು; ಎಲ್ಲರೂ ಬರುತ್ತಿದ್ದಾರೆ" ಎಂದು ಹೇಳಿದರು.

ಆ ಮಾತನ್ನು ಕೇಳಿ ಸುಗ್ರೀವನು ಅತಿ ಹರ್ಷಬಟ್ಟು ಅವರಿಗೆ ಉಚಿತವಾದ ಉಡುಗರೆಗಳನ್ನು ಕೊಟ್ಟು ಸನ್ಮಾನಿಸಿ ಅವರವರ ಮನೆಗಳಿಗೆ ಕಳುಹಿಸಿದನು.

---

## ೩೮ನೇ ಅಧ್ಯಾಯ.

### ಸುಗ್ರೀವನು ಶ್ರೀರಾಮನನ್ನು ಕಾಣಿಸಿಕೊಂಡದ್ದು.

ಎಲೈ ಕುಶಲವರುಗಳಿರಾ, ಆ ಬಳಿಕ ಲಕ್ಷ್ಮಣನು ಅತಿ ವಿನಯದಿಂದ ಸುಗ್ರೀವನಿಗೆ ಸಂತೋಷವಾಗುವ ಮರ್ಯಾದೆಯಲ್ಲಿ ಆತನನ್ನು ಕುರಿತು "ಎಲೈ ಸುಗ್ರೀವನೆ, ಇನ್ನು ನಾವು ನಿನ್ನ ಚಿತ್ತಕ್ಕೆ ಹರ್ಷವಾದಪಕ್ಷದಲ್ಲಿ ಶ್ರೀರಾಮನಿರುವ ಎಡೆಗೆ ಹೋಗುವದೇ ಕಾರ್ಯವು" ಎಂದು ಹೇಳಿದನು.

ಆ ಮಾತನ್ನು ಕೇಳಿ ಸುಗ್ರೀವನು ಅತಿ ಪ್ರೀತಿಯಿಂದ "ಎಲೈ ಲಕ್ಷ್ಮಣ, ನಾನು ನೀನು ಹೇಳಿದ ಮರ್ಯಾದೆಯಲ್ಲಿ ಕೇಳಿಕೊಂಡಿರುವೆನಲ್ಲದೆ ಮತ್ತೊಂದಲ್ಲ; ನನಗೆ ಮಹಾ ಸಂತೋಷವಾಯಿತು; ಶ್ರೀರಾಮನ ಸಮೀಪಕ್ಕೆ ಹೋಗೋಣ ಬಾ" ಎಂದು ಹೇಳಿ ತಾರಾದೇವಿ ಮೊದಲಾದ ಸ್ತ್ರೀಯರನ್ನು ಅಂತಃಪುರಕ್ಕೆ ಕಳುಹಿಸಿ ತನ್ನ ಪ್ರಧಾನರನ್ನು ಕರೆದು ಶೀಘ್ರವಾಗಿ ಪಾಲಕಿಯನ್ನು ಸಜ್ಜೋಗಮಾಡಿಸಲು ಕಟ್ಟುಮಾಡಿದನು.

ಆ ಪ್ರಧಾನರು ಮಹಾಪ್ರಸಾದವೆಂದು ಆತನ ವಾಕ್ಯವನ್ನು ಶಿರಸಾವಹಿಸಿ ಅತಿ ಶೀಘ್ರದಲ್ಲಿ ಪಾಲಕಿಯನ್ನು ಸಜ್ಜುಮಾಡಿ ತರಲು ಸುಗ್ರೀವನು ಆ ಪಾಲಕಿಯನ್ನು ನೋಡಿ ಸಂತೋಷದಿಂದ ಲಕ್ಷ್ಮಣನನ್ನು ಸಂತವಿಟ್ಟು ಆತನ ಸಮೇತನಾಗಿ ಪಾಲಕಿಯನ್ನೇರಿಕೊಂಡು ಶ್ವೇತಛತ್ರ ಶ್ವೇತಚಾಮರ ಶಂಖ ಭೇರಿ ಮೊದಲಾದ ರಾಜಚಿಹ್ನೆಗಳಿಂದ ದೇದೀಪ್ಯಮಾನವಾಗಿ ಒಪ್ಪುತ ಆಯುಧಪಾಣಿಗಳಾದ ಅನೇಕ ಕಪಿನಾಯಕರನ್ನು ಕೂಡಿಕೊಂಡು ಶ್ರೀರಾಮನ

ಸಮೀಪಕ್ಕೆ ಹೋಗಿ ಪಾಲಕಿಯಿಂದಿಳಿದು ಆತನನ್ನು ಕಾಣಿಸಿಕೊಂಡು ಸಮಸ್ತ ಕಪಿನಾಯಕರೂ ಕೈಮುಗಿದು ಕೊಂಡಿರಲು ಸಾಷ್ಟಾಂಗವಾಗಿ ಎರಗಿದನು; ಮಹತ್ತಾದ ತಟಾಕದಲ್ಲಿ ತಾವರೇ ಮೊಗ್ಗೆಗಳು ಇಟ್ಟಣಿಸಿರುವಂತೆ ಒಪ್ಪುತಿದ್ದ ಆ ಕಪಿಸೇನೆಯನ್ನು ಕಂಡು ಶ್ರೀರಾಮನು ಅತ್ಯಂತ ಪ್ರೀತಿಯುಳ್ಳವನಾಗಿ ಸುಗ್ರೀವನನ್ನು ತನ್ನ ಹಸ್ತಗಳಿಂದ ಹಿಡಿದೆತ್ತಿ ತೋಳುಗಳಿಂದ ತಬ್ಬಿಕೊಂಡು ಕುಳ್ಳಿರಿಸಿ ಆತನನ್ನು ಕುರಿತು "ಎಲೈ ಸುಗ್ರೀವನೆ, ಲೋಕದಲ್ಲಿ ಯಾವನೊಬ್ಬನು ಅರ್ಥವನ್ನು ಸಂಪಾದಿಸುವ ಕಾಲದಲ್ಲಿ ಧರ್ಮಕಾಮಗಳಿಗೆ ವಿರುದ್ಧವಿಲ್ಲದಹಾಗೂ ಧರ್ಮವನ್ನು ಸಂಪಾದಿಸುವ ಕಾಲದಲ್ಲಿ ಅರ್ಥಕಾಮಗಳಿಗೆ ವಿರುದ್ಧವಿಲ್ಲದಹಾಗೂ ಕಾಮವನ್ನು ಸಂಪಾದಿಸುವ ಕಾಲದಲ್ಲಿ ಧರ್ಮಾರ್ಥಗಳಿಗೆ ವಿರುದ್ಧವಿಲ್ಲದಹಾಗೂ ಆ ಪುರುಷಾರ್ಥಗಳನ್ನು ಸಂಪಾದಿಸುವನೋ ಆತನೇ ಲೋಕನಾಯಕನಾಗುವನು; ಹಾಗಲ್ಲದೆ ಧರ್ಮಾರ್ಥಗಳನ್ನು ಕಡಿಸಿ ಕಾಮವನ್ನು ಸಂಪಾದಿಸುವವನು ವೃಕ್ಷದ ಭಾಗದಲ್ಲಿ ಮರೆದು ಮಲಗಿದ್ದಮೇಲೆ ಎಚ್ಚೆತ್ತವನಂತೆ ವ್ಯರ್ಥವಾಗುವನು; ಮಿತ್ರಸಂಗ್ರಹಮಾಡಿಕೊಂಡು ಶತ್ರುಗಳನ್ನು ನಿಗ್ರಹಿಸಿ ಧರ್ಮಾರ್ಥಕಾಮಗಳೆಂಬ ಪುರುಷಾರ್ಥತ್ರಯವನ್ನು ಕಾಲವರಿತು ಸಂಪಾದಿಸುವ ಪುರುಷನು ಧರ್ಮದಿಂದ ಬಿಡುಗಡೆಯನ್ನೈದದೆ ಸುಖವಾಗಿರುವನು! ಎಲೈ ಸುಗ್ರೀವನೆ, ಈಗ ದಂಡಯಾತ್ರೆ ಹೊರಡುವ ಸಮಯವು; ನೀನು ನಿನ್ನ ಮಂತ್ರಿಗಳಕೂಡೆ ಯೋಚನೆಯನ್ನು ಮಾಡಿ ಸನ್ನದ್ಧನಾಗು" ಎಂದು ನುಡಿದನು.

ಸುಗ್ರೀವನು ಶ್ರೀರಾಮನನ್ನು ಕುರಿತು "ಎಲೈ ಶ್ರೀರಾಮನೆ, ನಾನು ನಷ್ಟವಾದ ರಾಜ್ಯ ಐಶ್ವರ್ಯ ಕೀರ್ತಿಗಳನ್ನು ನಿನ್ನ ಕೃಪೆಯಿಂದ ತಿರಿಗಿ ಪಡೆದೆನು; ಲೋಕದಲ್ಲಿ ಪರರು ಮಾಡಿದ ಉಪಕಾರವನ್ನು ಮರೆತವನೇ ಪುರುಷಾಧಮನು; ಭೂಮಂಡಲದಲ್ಲಿ ಬಲವಂತವಾಗಿರುವ ಸಕಲ ಕರಡಿಗಳು ಮುಸುವುಗಳು ಕಪಿಗಳು ಮೊದಲಾದವನ್ನು ಕರೆದುಕೊಂಡು ಬಂದಿರುವ ಈ ಕಪಿನಾಯಕರು ಬಡವರಲ್ಲ; ಇವರೆಲ್ಲರು ಮಹಾ ಬಲವಂತರು; ತಮ್ಮ ತಮ್ಮ ಸೇನೆಗಳನ್ನು ಕೂಡಿಕೊಂಡು ಬಂದಿದ್ದಾರೆ; ಈ ಕಪಿನಾಯಕರ ಸೇನೆಗಳು ಹತ್ತುಸಾವಿರ ಶಂಖಗಳು; ಮಿಕ್ಕ ಕಪಿಗಳ ಲೆಕ್ಕವನ್ನು ತಿಳಿಯಲಾಗದು; ಈ ಕಪಿಗಳನ್ನು ಸೇನಾರಚನೆಯಾಗಿ ನಿಲ್ಲಿಸಿದರೆ ಸಮುದ್ರಪರ್ಯಂತರವಾದ ಭೂಮಿಯು ಸಾಲದು; ಇವರು ಮೇಘಗಳಿಗೂ ಪರ್ವತಗಳಿಗೂ ಸಮಾನವಾದ ಆಕಾರವುಳ್ಳವರಾದರೂ ಕಾಮರೂಪಿಗಳಾದಕಾರಣ ಸೂಕ್ಷ್ಮರೂಪಿಗಳಾಗಿ ಅಡಕವಾಗಿದ್ದಾರೆ; ಇವರೆಲ್ಲರೂ ವಿಂಧ್ಯಪರ್ವತ ಮಹಾಮೇರು ಪರ್ವತ ಮೊದಲಾದ ಸ್ಥಾನಗಳಿಂದ ಬಂದಿದ್ದಾರೆ; ಇವರನ್ನು ಲೆಕ್ಕಮಾಡುವದಕ್ಕೆ ಕೂಡದು; ಇವರೆಲ್ಲರು ನಿನಗೆ ಸಹಾಯವಾಗಿ ಬಂದು ನಿನ್ನ ಶತ್ರುವಾದ ರಾವಣನನ್ನು ಆತನ ಪರಿವಾರ ಸಹಿತವಾಗಿ ಸಂಹರಿಸಿ ಸೀತಾದೇವಿಯನ್ನು ಕರೆದುಕೊಂಡು ಬರುವರು" ಎಂದು ನುಡಿದನು.

ಆ ಮಾತನ್ನು ಕೇಳಿ ಶ್ರೀರಾಮನು ಅತಿ ಹರ್ಷಯುಕ್ತನಾಗಿ ಸುಗ್ರೀವನನ್ನು ಸನ್ಮಾನಿಸಿ ಮುಂದಣ ಕಾರ್ಯಸ್ಥಿತಿಗೆ ತಕ್ಕ ಯೋಚನೆಯನ್ನು ಮಾಡುತ್ತಿದ್ದನು.

## ೩೯ ನೇ ಅಧ್ಯಾಯ.

## ಕಪಿಸೇನೆಗಳು ಬಂದದ್ದು.

ಆ ಬಳಿಕ ಶ್ರೀರಾಮನು ಕೈಮುಗಿದುಕೊಂಡು ನಿಂತಿದ್ದ ಸುಗ್ರೀವನನ್ನು ತೋಳುಗಳಿಂದ ತಬ್ಬಿಕೊಂಡು ಅತಿ ವಿನಯದಿಂದ "ಎಲೈ ಸುಗ್ರೀವನೆ, ದೇವೇಂದ್ರನು ಮಳೆಗರೆಯುವದೂ ಸೂರ್ಯನು ತನ್ನ ಪ್ರಭೆಯಿಂದ ಅಂತರಿಕ್ಷಮಾರ್ಗವನ್ನು ಬೆಳಗುಮಾಡುವದೂ ಚಂದ್ರನು ಬೆಳದಿಂಗಳಿಂದ ರಾತ್ರಿಯ ಅಂಧಕಾರವನ್ನು ತೊಲಗಿಸಿ ನಿರ್ಮಲವಾಗಿ ಮಾಡುವದೂ ಸ್ವಭಾವವಲ್ಲದೆ ಆಶ್ಚರ್ಯವಲ್ಲ; ಹಾಗೆ ನೀನು ಮಿತ್ರಕಾರ್ಯವನ್ನು ಸಾಧ್ಯಮಾಡಿಕೊಟ್ಟು ಪ್ರತ್ಯುಪಕಾರವನ್ನು ಮಾಡಿಸುವದು ಆಶ್ಚರ್ಯವಲ್ಲ! ಎಲೈ ಸುಗ್ರೀವನೆ, ನೀನು ಯಾವಾಗಲೂ ಪ್ರಿಯಭಾಷಿಯೆಂಬ

ದನ್ನು ಬಲ್ಲೆನು; ನಿನ್ನ ಸಹಾಯದಿಂದ ನಾನು ಸಮಸ್ತ ಶತ್ರುಗಳನ್ನೂ ಜಯಿಸುವೆನು; ನೀನು ನನ್ನ ಮಿತ್ರನಾದ್ದರಿಂದ ನನಗೆ ಸಹಾಯವಾಗಬೇಕು; ರಾವಣನು ತನ್ನ ವಿನಾಶಕಾಲವು ಒದಗಿದ್ದರಿಂದ ಸೀತಾದೇವಿಯನ್ನು ಅಪಹರಿಸಿಕೊಂಡು ಹೋದನು; ಪೂರ್ವದಲ್ಲಿ ಶಚೀದೇವಿಯ ತಂದೆಯಾದ ಪುಲೋಮನು ಗರ್ವಿಸಿ ದೇವೇಂದ್ರನು ಕರೇಕಳುಹಿಸಿದರೂ ಆ ದೇವಿಯನ್ನು ಕಳುಹಿಸದಿರಲು ದೇವೇಂದ್ರನು ಆತನನ್ನು ನಿಗ್ರಹಿಸಿ ಯಾವ ಮರ್ಯಾದೆಯಲ್ಲಿ ಶಚೀದೇವಿಯನ್ನು ಕರೆದುಕೊಂಡು ಹೋದನೋ ಆ ಮರ್ಯಾದೆಯಲ್ಲಿ ನಾನು ಸಮರದಲ್ಲಿ ರಾವಣನನ್ನು ಕೊಂದು ಸೀತಾದೇವಿಯನ್ನು ತರುತ್ತೇನೆ'' ಎಂದು ನುಡಿದನು.

ಆ ಸಮಯದಲ್ಲಿ ಮಹತ್ತಾದ ಕೆಂಧೂಳಿಯು ಕವಿದು ಸೂರ್ಯಪ್ರಭೆಯೂ ದಿಕ್ಕುಗಳೂ ಕಾಣದಿರುವಹಾಗೂ ಸಮಸ್ತ ಪರ್ವತ ವನ ಸಹಿತವಾದ ಭೂಮಿಯು ಕಂಪನವಾಗುವಹಾಗೂ ಪರ್ವತಗಳಿಗೆ ಸಮಾನವಾದ ಶರೀರವುಳ್ಳವರಾಗಿಯೂ ಅತಿ ತೀಕ್ಷ್ಣವಾದ ಕೋರದಾಡೆಗಳುಳ್ಳವರಾಗಿಯೂ ಮಹಾ ಬಲವಂತರಾಗಿಯೂ ಮೇಘದ ಗುಡುಗಿನಂತೆ ಬೊಬ್ಬಿಡುವವರಾಗಿಯೂ ಪ್ರಾತಃಕಾಲದ ಸೂರ್ಯಪ್ರಭೆಯಂತೆ ಶರೀರಕಾಂತಿಯುಳ್ಳವರಾಗಿಯೂ ಚಂದ್ರನ ಪ್ರಭೆಯಂತೆ ಬಿಳುಪಾದ ಶರೀರಕಾಂತಿಯುಳ್ಳವರಾಗಿಯೂ ತಾವರೇ ಕಮಲಗಳ ಮಧ್ಯ ಕೇಸರಗಳಂತೆ ಸುವರ್ಣಮಯವಾದ ಶರೀರಕಾಂತಿಯುಳ್ಳವರಾಗಿಯೂ ಇದ್ದ ನೂರುಕೋಟಿ ಕಪಿಗಳೊಡನೆ ಕೂಡಿ ಬಂದು ಹರಿಯೆಂಬ ಕಪಿನಾಯಕನು ಅವರನ್ನು ಕಾಣಿಸಿಕೊಂಡನು; ಆಮೇಲೆ ಮಹಾಮೇರು ಪರ್ವತದಂತೆ ಆಕಾರವುಳ್ಳವನಾಗಿ ತಾರಾದೇವಿಗೆ ತಂದೆಯಾದ ತಾರನೆಂಬ ಕಪಿನಾಯಕನು ಅನೇಕವಾದ ಕಪಿಸೇನೆಯೊಡನೆ ಕೂಡಿಕೊಂಡು ಬಂದು ಕಾಣಿಸಿಕೊಂಡನು; ಆಮೇಲೆ ರುಮಾದೇವಿಯ ತಂದೆಯಾಗಿ ಸುಗ್ರೀವನ ಮಾವನು ಅನೇಕಕೋಟಿ ಕಪಿಸೇನೆಯೊಡನೆ ಕೂಡಿಕೊಂಡು ಬಂದು ಕಾಣಿಸಿಕೊಂಡನು; ತಾವರೇ ಕಮಲಗಳ ಕೇಸರಗಳಂತೆ ತನುಕಾಂತಿಯುಳ್ಳವನಾಗಿ ಬಾಲಸೂರ್ಯನಂತೆ ತೇಜಸ್ಸುಳ್ಳವನಾಗಿ ಅತ್ಯಂತ ಬುದ್ಧಿವಂತನಾಗಿ ಸಮಸ್ತ ಕಪಿಗಳಿಗೂ ಒಡೆಯನಾಗಿ ಹನುಮಂತನ ತಂದೆಯಾದ ಕೇಸರಿಯು ಅನೇಕ ಸೇನೆಯನ್ನು ಕೂಡಿಕೊಂಡು ಬಂದು ಕಾಣಿಸಿಕೊಂಡನು; ಮುಸುವುಗಳಿಗೊಡೆಯನಾಗಿ ಮಹಾಬಲಪರಾಕ್ರಮಿಯಾದ ಗವಾಕ್ಷನೆಂಬ ಗೋಲಾಂಗೂಲನಾಯಕನು ಅನೇಕಸಾವಿರ ವೀರಭಟರೊಡನೆ ಕೂಡಿಕೊಂಡು ಬಂದು ಕಾಣಿಸಿಕೊಂಡನು; ಕರಡಿಗಳಿಗೆ ಒಡೆಯನಾಗಿ ಮಹಾ ಬಲವಂತನಾದ ಧೂಮ್ರನು ಇಪ್ಪತ್ತುಸಾವಿರಕೋಟಿ ಕಪಿಗಳೊಡನೆ ಬಂದು ಕಾಣಿಸಿಕೊಂಡನು; ದರೀಮುಖನೆಂಬ ಕಪಿನಾಯಕನು ಸಾವಿರ ಕೋಟಿ ಕಪಿಗಳೊಡನೆ ಕೂಡಿಕೊಂಡು ಬಂದು ಕಾಣಿಸಿಕೊಂಡನು; ಅಶ್ವಿನೀದೇವತೆಗಳ ಮಕ್ಕಳಾಗಿ ಮಹಾ ಬಲವಂತರಾದ ಮೈಂದ ದ್ವಿವಿದರು ಕೋಟಿಸಾವಿರ ಕಪಿಗಳೊಡನೆ ಕೂಡಿಕೊಂಡು ಬಂದು ಕಾಣಿಸಿಕೊಂಡರು; ಮಹಾ ಬಲವಂತನಾದ ಗಜನು ಮೂರುಕೋಟಿ ಕಪಿಗಳೊಡನೆ ಬಂದು ಕಾಣಿಸಿಕೊಂಡನು; ಕರಡಿಗಳಿಗೆ ನಾಯಕನಾದ ಜಾಂಬವನು ಹತ್ತುಕೋಟಿ ಕರಡಿಗಳೊಡಗೂಡಿ ಬಂದು ಕಾಣಿಸಿಕೊಂಡನು; ರುಮಣ್ವನೆಂಬ ಕಪಿನಾಯಕನು ನೂರುಕೋಟಿ ಕಪಿಗಳೊಡನೆ ಕೂಡಿ ಬಂದು ಕಾಣಿಸಿಕೊಂಡನು; ಗಂಧಮಾದನನು ಸಾವಿರಕೋಟಿ ಸಾವಿರದ ನೂರು ಕಪಿಗಳೊಡನೆ ಬಂದು ಕಾಣಿಸಿಕೊಂಡನು; ಆಮೇಲೆ ತನ್ನ ತಂದೆಯಾದ ವಾಲಿಗೆ ಸಮಾನನಾದ ಪರಾಕ್ರಮವುಳ್ಳ ಅಂಗದನು ನೂರುಶಂಖ ಒಂದುಪದ್ಮ ಒಂದುಸಾವಿರ ಕಪಿಗಳೊಡನೆ ಬಂದು ಕಾಣಿಸಿಕೊಂಡನು; ನಕ್ಷತ್ರದಂತೆ ಕಾಂತಿಯುಳ್ಳ ತಾರನು ಐದುಕೋಟಿ ಕಪಿನಾಯಕರನ್ನು ಕೂಡಿಕೊಂಡು ಬಂದು ಕಾಣಿಸಿಕೊಂಡನು; ಇಂದ್ರಜಾನುವು ಹನ್ನೊಂದುಸಾವಿರ ಕಪಿನಾಯಕರೊಡನೆ ಬಂದು ಕಾಣಿಸಿಕೊಂಡನು; ಆಮೇಲೆ ಬಾಲಸೂರ್ಯನ ಕಾಂತಿಯಂತೆ ತನುಕಾಂತಿಯುಳ್ಳ ರಂಭಸ್ತ್ವನು ಹನ್ನೊಂದುಸಾವಿರ ಒಂದುನೂರು ಕಪಿಗಳೊಡನೆ ಬಂದು ಕಾಣಿಸಿಕೊಂಡನು; ದುರ್ಮುಖನು ಎರಡುಕೋಟಿ ಕಪಿಗಳೊಡನೆ ಬಂದು ಕಾಣಿಸಿಕೊಂಡನು; ಕೈಲಾಸಪರ್ವತದ ಕೋಡುಗಲ್ಲಿಗೆ ಸಮಾನವಾದ ಶರೀರವುಳ್ಳವನಾಗಿ ಭೀಮಪರಾಕ್ರಮವುಳ್ಳ ಹನುಮಂತನು ಸಾವಿರಕೋಟಿ ಕಪಿಗಳೊಡನೆ ಕೂಡಿಕೊಂಡುಬಂದು ಕಾಣಿಸಿಕೊಂಡನು; ಮಹಾ ಪರಾಕ್ರಮಿಯಾದ ನಳನು ನೂರುಕೋಟಿ ಕಪಿಗಳೊ

ಡನೆ ಕೂಡಿಕೊಂಡು ಬಂದು ಕಾಣಿಸಿಕೊಂಡನು ; ಮಹಾ ಐಶ್ವರ್ಯವಂತನಾದ ದಧಿಮುಖನು ಹತ್ತು ಕೋಟಿ ಕಪಿಗಳೊಡನೆ ಬಂದು ಕಾಣಿಸಿಕೊಂಡನು ! ಮತ್ತು ಸುಗ್ರೀವನ ಸಮೀಪದಲ್ಲಿ ಕಾಮರೂಪಿಗಳಾಗಿ ಮಹಾತ್ಮರಾಗಿದ್ದ ಶರಭನು ಕುಮುದನು ವಹ್ನಿಯು ರಂಭನು ಮೊದಲಾದ ಅನೇಕಮಂದಿ ಕಪಿನಾಯಕರು ತಮ್ಮ ತಮ್ಮ ಸೇನೆಗಳನ್ನು ಕೂಡಿಕೊಂಡು ಸಮಸ್ತ ಭೂಮಂಡಲವನ್ನೂ ವ್ಯಾಪಿಸಿಕೊಂಡು ಬೊಬ್ಬಿಡುತ ಕುಪ್ಪಳಿಸುತ ಸೂರ್ಯನನ್ನು ಮೇಘಸಮೂಹಗಳು ಸುತ್ತಿ ಬರುವಂತೆ ಸುಗ್ರೀವನ ಸುತ್ತಲು ನಿಂತಿರಲು ಸಕಲ ಸೇನಾಪತಿಗಳೂ ಆತನ ಸಮೀಪದಲ್ಲಿ ಕೈಮುಗಿದುಕೊಂಡು ನಿಂತಿದ್ದರು ! ಅವರ ಲೆಕ್ಕವನ್ನು ಹೇಳುವದಕ್ಕೆ ಶಕ್ಯವಲ್ಲ! ಆ ಬಳಿಕ ಸುಗ್ರೀವನು ಆ ಕಪಿನಾಯಕರನ್ನು ಶ್ರೀರಾಮನಿಗೆ ತೋರಿಸುತ ಅವರ ದೇಶಗಳನ್ನೂ ಪರಾಕ್ರಮಗಳನ್ನೂ ಹೆಸರುಗಳನ್ನೂ ಹೇಳಿ ಆತನ ಅಪ್ಪಣೆಯಿಂದ ಅವರನ್ನು ಪರ್ವತ ತಪ್ಪಲುಗಳಲ್ಲಿ ಪಾಳಯವಿಳಿಸಿ ಶ್ರೀರಾಮನಕೂಡೆ ಆ ವೃತ್ತಾಂತವನ್ನು ಹೇಳಿದನು.

## ೪೦ ನೇ ಅಧ್ಯಾಯ.

### ಸುಗ್ರೀವನು ಸೀತಾದೇವಿಯನ್ನು ಡುಕುವದಕ್ಕಾಗಿ ಸೇನೆಗಳನ್ನು ಕಳುಹಿಸಿದ್ದು.

ಆಮೇಲೆ ಸುಗ್ರೀವನು ಅತ್ಯಂತ ಹರ್ಷಯುಕ್ತನಾಗಿ ಪರಬಲಾಂತಕನಾಗಿ ಪುರುಷೋತ್ತಮನಾದ ಶ್ರೀರಾಮನನ್ನು ಕುರಿತು " ಎಲೈ ಶ್ರೀರಾಮನೆ, ಮಹಾ ಬಲವಂತರಾಗಿ ಕಾಮರೂಪಿಗಳಾಗಿ ದೇವೇಂದ್ರನ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವುಳ್ಳವರಾಗಿ ದೇವದಾನವರಿಗೆ ಸಮಾನರಾದ ಕಪಿನಾಯಕರು ತಮ್ಮ ಸೇನೆಗಳನ್ನು ಕೂಡಿಕೊಂಡು ಬಂದಿದ್ದಾರೆ ; ಇವರು ಮಹಾಬಲವಂತರು ; ಪರಾಕ್ರಮದಲ್ಲಿ ಮಹಾ ಪ್ರಸಿದ್ಧರು ; ಸಮಸ್ತ ಕಾರ್ಯಗಳನ್ನೂ ಸಾಧಿಸುವದರಲ್ಲಿ ಮಹಾಪ್ರವೀಣರು ; ಇವರಲ್ಲಿ ಕೆಲವರು ಭೂಮಿಯಲ್ಲಿ ಸಂಚರಿಸುವವರು ; ಕೆಲವರು ಉದಕದಲ್ಲಿ ಸಂಚರಿಸುವವರು ; ಕೆಲವರು ಪರ್ವತಗಳಲ್ಲಿ ಸಂಚರಿಸುವವರು ! ನಾನಾದೇಶಗಳಲ್ಲಿದ್ದ ಈ ಕಪಿನಾಯಕರೆಲ್ಲರೂ ನಿನ್ನ ಸೇವೆಗಾಗಿ ಬಂದದ್ದರಿಂದ ನಿನ್ನ ಆಜ್ಞೆಯಲ್ಲಿದ್ದು ನಿನ್ನ ಕಾರ್ಯವನ್ನು ಸಾಧ್ಯಮಾಡುವರು ; ಇನ್ನು ನಿನ್ನ ಮನಸ್ಸಿನಲ್ಲೆಣಿಸಿರುವ ಕಾರ್ಯವನ್ನು ಈ ಕಪಿನಾಯಕರಿಗೆ ತಿಳುಹಿಸು ; ನಿನ್ನ ಕಾರ್ಯವನ್ನು ನಾನು ಬಲ್ಲವನಾದರು ಇವರಿಗೆ ನೀನೆ ಬುದ್ಧಿ ಕಲಿಸು " ಎಂದು ನುಡಿದನು.

ಆ ಮಾತನ್ನು ಕೇಳಿ ಶ್ರೀರಾಮನು ಸುಗ್ರೀವನನ್ನು ತಬ್ಬಿಕೊಂಡು " ಎಲೈ ಸುಗ್ರೀವನೆ, ಸೀತಾದೇವಿಯು ಜೀವಸಹಿತವಾಗಿ ಇದ್ಧಾಳೋ ಇಲ್ಲವೋ ಎಂಬ ವೃತ್ತಾಂತವನ್ನು ತಿಳಿಯಬೇಕು ; ರಾವಣನಿರುವ ದೇಶವನ್ನು ಕಂಡದ್ದಿಲ್ಲ ; ಆದ್ದರಿಂದ ಮೊದಲು ಆತನಿರುವ ದೇಶವನ್ನೂ ಅಲ್ಲಿ ಸೀತಾದೇವಿಯು ಇರುವದನ್ನೂ ತಿಳಿದು ಆಮೇಲೆ ನಿನ್ನ ಸಹಾಯದಿಂದ ಕಾಲೋಚಿತವಾದ ಕಾರ್ಯವನ್ನು ಮಾಡಬೇಕು ; ರಾವಣನಿರುವ ಸ್ಥಳವನ್ನು ಕಾಣುವದಕ್ಕೆ ನನ್ನಿಂದಲಾದರೂ ಲಕ್ಷ್ಮಣನಿಂದಲಾದರೂ ಆಗದು ; ಈ ಕಾರ್ಯವನ್ನು ನಿಶ್ಚಯಿಸುವದಕ್ಕೆ ನೀನೇ ಸಮರ್ಥನು ಎಲೈ ಸುಗ್ರೀವನೆ, ನಮಗೆ ನೀನೇ ಸಖನಲ್ಲದೆ ಮತ್ತೊಬ್ಬರಿಲ್ಲ ; ನೀನು ಮಹಾಪ್ರಾಜ್ಞನು ; ಕಾಲೋಚಿತವನ್ನು ಬಲ್ಲವನು ; ನನ್ನ ಕಾರ್ಯಸ್ಥಿತಿಯನ್ನು ನೀನು ಬಲ್ಲೆಯಾದ್ದರಿಂದ ನೀನು ಈ ಕಾರ್ಯವನ್ನು ನಿಶ್ಚಯಿಸುವದಕ್ಕೆ ಸಮರ್ಥರಾದ ಕಪಿನಾಯಕರನ್ನು ಆಜ್ಞಾಪಿಸು ; ನೀನು ಯಾವಾಗಲು ನನಗೆ ಹಿತವಾದ ಕಾರ್ಯದಲ್ಲಿ ಪ್ರೀತಿಯುಳ್ಳವನು ; ಮಹಾ ಕೃತಾರ್ಥನು " ಎಂದು ನುಡಿದನು.

ಸುಗ್ರೀವನು ಮಹಾಪ್ರಸಾದವೆಂದು ಅಂಗೀಕರಿಸಿ ರಾಮಲಕ್ಷ್ಮಣರ ಸಮುಖದಲ್ಲಿ ಮೇಘದ ಗುಡುಗಿನಂತೆ ಗಂಭೀರವಾದ ಧ್ವನಿಯುಳ್ಳ ಶೈಲಾಭನೆಂಬ ಕಪಿನಾಯಕನನ್ನು ಕರೆದು " ಎಲೈ ಕಪಿನಾಯಕನೆ, ನೀನು ಚಂದ್ರ

ಸೂರ್ಯರ ಮಕ್ಕಳಾದ ಕಪಿನಾಯಕರನ್ನು ಕೂಡಿಕೊಂಡು ದೇಶಕಾಲಗಳನ್ನು ವಿಚಾರಿಸಿಕೊಂಡು ನೀತಿಯನ್ನರಿತು ಕಾರ್ಯಾಕಾರ್ಯಗಳನ್ನು ತಿಳಿದುಕೊಂಡು ಮಹಾ ಬಲವಂತರಾಗಿ ಅತ್ಯಂತ ಶೀಘ್ರಗಮನವುಳ್ಳ ಒಂದು ಲಕ್ಷ ಕಪಿಗಳನ್ನು ಕೂಡಿಕೊಂಡು ಸಮಸ್ತ ವನ ಪರ್ವತ ಸಹಿತವಾದ ಮೂಡಣ ದಿಕ್ಕಿಗೆ ಹೋಗಿ ಅಲ್ಲಿ ರಾವಣನಿರುವ ಸ್ಥಳವನ್ನು ಅರಸಿ ಸೀತಾದೇವಿಯನ್ನು ಕಂಡು ಬಾ; ಆ ದಿಕ್ಕಿನಲ್ಲಿರುವ ಗಿರಿ ದುರ್ಗಗಳಲ್ಲಿಯೂ ವನಾಂತರಗಳಲ್ಲಿಯೂ ಹೊಕ್ಕು ಹೋಗಿ ಭಾಗೀರಥೀ ತೀರದಲ್ಲಿಯೂ ಕೌಶಿಕೀ ತೀರದಲ್ಲಿಯೂ ಸರಯೂನದೀ ತೀರದಲ್ಲಿಯೂ ನೋಡಿ ಆಮೇಲೆ ಯಮುನಾತೀರಕ್ಕೆ ಹೋಗಿ ಆ ತೀರದಲ್ಲಿರುವ ಪರ್ವತಗಳಲ್ಲಿ ಹುಡುಕಿ ಮುಂದೆ ಸರಸ್ವತೀ ನದೀ ತೀರಕ್ಕೆ ಹೋಗಿ ನೋಡಿ ಆಮೇಲೆ ಸಿಂಧುನದಿಗೆ ಹೋಗಿ ಅಲ್ಲಿಂದ ಮುಂದೆ ವಜ್ರಮಣಿಯಂತೆ ನಿರ್ಮಲೋದಕವುಳ್ಳ ಶೋಣಾನದಿಗೆ ಹೋಗಿ ನೋಡಿ ಮುಂದೆ ಕಾಲಮತಿ ಬ್ರಹ್ಮಮಲಾ ವಿದೇಹ ಮಾಳವ ಕಾಶಿ ಕೋಸಲ ಮಾಗಧ ಪುಂಡ್ರ ಅಂಗದೇಶಗಳಿಗೆ ಹೋಗಿ ಅಲ್ಲಿ ದಶರಥರಾಯನ ಸೊಸೆಯಾಗಿ ಶ್ರೀರಾಮನ ಪಟ್ಟದ ಅರಸಿಯಾದ ಸೀತಾದೇವಿಯನ್ನು ಹುಡುಕಿನೋಡಿರೀ! ಸಮುದ್ರತೀರದ ಪಟ್ಟಣಗಳಲ್ಲಿಯೂ ಮಂದರಗಿರಿಪರ್ವತದ ಕೋಡುಕಲ್ಲುಗಳಲ್ಲಿಯೂ ವಿಶಾಲವಾದ ಕಿವಿಗಳನ್ನೇ ಹೊದ್ದುಕೊಂಡಿರುವವರಾಗಿಯೂ ತುಟಿಯ ಸಮೀಪದಲ್ಲಿ ಕಿವಿಗಳುಳ್ಳವರಾಗಿಯೂ ಉಕ್ಕಿನ ಮುಖವುಳ್ಳವರಾಗಿ ಪುರುಷರನ್ನು ಭಕ್ಷಣೆಮಾಡುವವರಾಗಿಯೂ ಎಲೆಗಳಂತೆ ಮುಂಡೇಕೂದಲುಳ್ಳವರಾಗಿಯೂ ಶರ್ಪದಂತೆ ತನುಕಾಂತಿಯುಳ್ಳವರಾಗಿ ಕಣ್ಣುಗಳಿಂದ ನೋಡುವದಕ್ಕೆ ಪ್ರಿಯವಾದ ಆಕಾರವುಳ್ಳವರಾಗಿ ಹಸೀ ಮೀನುಗಳನ್ನೇ ಆಹಾರಮಾಡಿಕೊಂಡಿರುವವರಾಗಿಯೂ ಉದಕದೊಳಗೆ ಸಂಚರಿಸಿಕೊಂಡು ನರವ್ಯಾಘ್ರವೆಂಬ ಹೆಸರುಳ್ಳವರಾಗಿಯೂ ಹುಲಿಯಮುಖವುಳ್ಳವರಾಗಿಯೂ ಇರುವ ಕಿರಾತರಿರುವರು; ಆ ಸ್ಥಾನಗಳಲ್ಲಿ ಅರಸಿನೋಡಿರೀ! ಮಾರ್ಗದಲ್ಲಿ ಓಡೆಗಳಿಂದ ದಾಟಬೇಕಾದ ನದಿಗಳೂ ತೆಪ್ಪಗಳಿಂದ ದಾಟಬೇಕಾದ ನದಿಗಳೂ ನೆಗೆದು ದಾಟಲು ಕೂಡುವ ನದಿಗಳೂ ಇರುವವು; ಅಲ್ಲಿಂದ ಮುಂದೆ ಅಸ್ತಾಚಲವೆಂಬ ಪರ್ವತದಿಂದ ಮನೋಹರವಾಗಿ ರತ್ನಗಳಿಂದ ಪರಿಪೂರ್ಣವಾದ ಯವದ್ವೀಪವಿರುವದು; ಆ ದ್ವೀಪದಲ್ಲಿ ಸುವರ್ಣಕೋಟೆಗಳ ಸುವರ್ಣಕಾಂತಿಯುಳ್ಳ ಕಿರಣಗಳು ಪಸರಿಸುತ್ತಿರುವವು; ಅಲ್ಲಿಂದ ಮುಂದೆ ತನ್ನ ಕೋಡುಕಲ್ಲುಗಳಿಂದ ಗಗನವನ್ನು ತುಡುಕುತ ಸಮಸ್ತ ದೇವತೆಗಳಿಗೂ ನಿಲುಗಡೇಸ್ಥಾನವಾದ ಶಿಶಿರವೆಂಬ ಪರ್ವತವಿರುವದು; ಆ ಪರ್ವತದ ಕೋಡುಗಲ್ಲುಗಳಲ್ಲಿ ಸೀತಾದೇವಿಯನ್ನರಸಿ ನೋಡಿ ಅಲ್ಲಿಂದ ಮುಂದೆ ಹೋದರೆ ಸಮುದ್ರತೀರದಲ್ಲಿ ಅನೇಕ ವನಗಳೂ ಪರ್ವತಗಳೂ ಉಳ್ಳ ಪ್ರದೇಶದಲ್ಲಿ ಭಯಂಕರವಾದ ಧ್ವನಿಗಳಿಂದಲೂ ಬಿರುಘಾಳಿಯಿಂದ ಹುಟ್ಟಲ್ಪಟ್ಟ ತೆರೆಗಳಿಂದಲೂ ಮನೋಹರವಾಗಿ ಆಳವರಿಯಕೂಡದ್ದಾಗಿ ರಕ್ತೋದಕಪ್ರವಾಹವುಳ್ಳದ್ದಾಗಿ ಸಿದ್ಧ ಚಾರಣರಿಂದ ಸೇವಿಸಲ್ಪಟ್ಟ ಒಂದು ನದಿ ಇರುವದು; ಅದರ ತೀರದಲ್ಲಿಯೂ ಮತ್ತು ಇರುವ ಅನೇಕ ವಿಚಿತ್ರವಾಗಿ ರಮಣೀಯವಾದ ತೀರ್ಥಗಳಲ್ಲಿಯೂ ಅರಸಿನೋಡಿರೀ; ಪರ್ವತಗಳಲ್ಲಿ ಹುಟ್ಟಿ ಅತ್ಯಂತ ಆಳವಾದ ಜರಿಗಳುಳ್ಳ ನದೀತೀರಗಳಲ್ಲಿಯೂ ಸಮುದ್ರತೀರದಲ್ಲಿಯೂ ದೊಡ್ಡಶರೀರವುಳ್ಳ ರಾಕ್ಷಸರಿರುವರು; ಅವರು ಬ್ರಹ್ಮದೇವನ ಶಾಪದಿಂದ ಬಹುಕಾಲವು ಹಸಿವಿನಿಂದ ಕಂಗೆಟ್ಟವರಾಗಿ ತಮ್ಮ ನೆಳಲನ್ನು ತಾವೇಭಕ್ಷಿಸುತ್ತಿರುವರು; ಅಲ್ಲಿಂದ ಮುಂದೆ ಮಹತ್ತಾದ ಪರ್ವತಗಳಿರುವವು; ಆ ದಾರಿಗೊಂಡು ಹೋಗಿ ಪ್ರಳಯಕಾಲದಮೇಘದ ಮರ್ಯಾದೆಯುಳ್ಳಿರುವಂಥಾದ್ದಾಗಿ ರಕ್ತೋದಕವುಳ್ಳ ಲೋಹಿತಸಾಗರವೆಂಬ ತೀರ್ಥಕ್ಕೆ ಹೋಗಿ ಆ ತೀರ್ಥದ ಸಮೀಪದಲ್ಲಿದ್ದ ಕೂಟಶಾಲಿಯೆಂಬ ಹೆಸರುಳ್ಳದ್ದಾಗಿ ನಾನಾ ರತ್ನಗಳಿಂದ ಅಲಂಕರಿಸಲ್ಪಟ್ಟದ್ದಾಗಿ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟದ್ದಾಗಿ ಕೈಲಾಸಾದ್ರಿಗೆ ಸಮಾನವಾದ ಗರುತ್ಮಂತನ ಅರಮನೆ ಇರುವದು; ಅಲ್ಲಿಂದ ಮುಂದೆ ಸೂರ್ಯನಿಗೆ ಶತ್ರುಗಳಾದ ಮಂದೇಹರೆಂಬ ರಾಕ್ಷಸರು ಪರ್ವತದ ಕೋಡುಗಲ್ಲುಗಳನ್ನಾಶ್ರಯಿಸಿಕೊಂಡಿರುವರು; ಅವರು ಪರ್ವತದಂತೆ ಘನಗಾತ್ರವಾದ ಶರೀರವುಳ್ಳವರಾಗಿ ಸೂರ್ಯಪ್ರಭೆಯನ್ನು ತಾಳಲಾರದೆ ಸೂರ್ಯೋದಯವಾಗುತಲೂ ನೀರೊಳಗೆ ಮುಳುಗಿಕೊಂಡಿದ್ದು ಸಾಯಂಕಾಲವಾದಮೇಲೆ ಎದ್ದು ಮೊದಲಿನಂತೆ ಪರ್ವತದ ಕೋಡುಕಲ್ಲುಗಳನ್ನಾಶ್ರಯಿಸಿಕೊಂಡಿದ್ದು ಪ್ರಾತಃಕಾಲ ಮಧ್ಯಾಹ್ನಸಾಯಂಕಾಲಗಳಲ್ಲಿ ಬ್ರಾಹ್ಮಣರು ಕೊಡುವ ಅರ್ಘ್ಯಾಸ್ತ್ರಗಳಿಂದ ಹತರಾಗಿ ಹುಟ್ಟುತ್ತಿರುವರು; ಅವರಿರುವ ಸ್ಥಾನಗಳಲ್ಲಿ ನೋಡಿ ಅಲ್ಲಿಂದ ಮುಂದೆ ಬಿಳುಪಾದ ಮೇಘ

ಮಂಡಲಕ್ಕೆ ಸಮಾನವಾದ ಕ್ಷೀರಸಮುದ್ರಕ್ಕೆ ಹೋಗಿ ಆ ಸಮುದ್ರಕ್ಕೆ ಮುತ್ತಿನ ಕಂಠಮಾಲೆಯೋ ಎಂಬಂತೆ ಒಪ್ಪುತ್ತಿರುವ ತೆರೆಗಳನ್ನು ನೋಡಿದರೆ ಅದರ ಮಧ್ಯದಲ್ಲಿ ಅತಿಬಿಳುಪಾಗಿ ಅತ್ಯಂತ ಉನ್ನತವಾಗಿ ಅನೇಕ ದಿವ್ಯಗಂಧವುಳ್ಳ ಪುಷ್ಪಗಳುಳ್ಳ ಮರಗಳಿಂದ ಇಟ್ಟಣಿಸಿದ ಋಷಭಗಿರಿಯೆಂಬ ಪರ್ವತವಿರುವದು ; ಆ ಪರ್ವತದಲ್ಲಿ ಹುಡುಕಿನೋಡಿ ಅಲ್ಲಿಂದ ಮುಂದೆ ಸುವರ್ಣಕಾಂತಿಯುಳ್ಳ ಕೆಸರುಗಳಿಂದಲೂ ತಾವರೇ ಕಮಲಗಳಿಂದಲೂ ರಮಣೀಯವಾದ ಸುದರ್ಶನವೆಂಬ ಒಂದು ಕೊಳವಿರುವದು ; ಆ ಕೊಳದಲ್ಲಿ ಯಾವಾಗಲು ರಾಜಹಂಸ ಪಕ್ಷಿಗಳಿರುವವು ; ಆ ಕೊಳಕ್ಕೆ ನಿತ್ಯದಲ್ಲೂ ಜಲಕ್ರೀಡಾರ್ಥವಾಗಿ ದೇವತೆಗಳು ಯಕ್ಷರು ಕಿನ್ನರರು ಅಪ್ಸರಸ್ತ್ರೀಯರು ಮೊದಲಾದವರು ಹೋಗಿ ಅತಿ ಹರ್ಷದಿಂದ ಜಲಕ್ರೀಡೆಯನ್ನಾಡುವರು ! ಎಲೈ ಕಪಿಗಳಿರಾ, ಕ್ಷೀರಸಮುದ್ರವನ್ನು ದಾಟಿ ಮುಂದೆ ಸಮಸ್ತ ಪ್ರಾಣಿಗಳಿಗೂ ಭಯವನ್ನು ಕೆಡಿಸುವ ಸ್ವಾದೂದಕ ಸಮುದ್ರಕ್ಕೆ ಹೋಗಿ ಅಲ್ಲಿ ಬಡಬಾಗ್ನಿಯನ್ನು ನೋಡಿ ಅದ್ಭುತವಾದ ಆ ಸಮುದ್ರ ತೀರವನ್ನು ನೋಡಿ ಆ ಸಮುದ್ರದೊಳಗಿರುವ ಜಲಚರ ಪ್ರಾಣಿಗಳನ್ನು ಕೇಳೀ ; ಆ ಸಮುದ್ರದ ಬಡಗಣ ದಿಕ್ಕಿನಲ್ಲಿ ಮೂವತ್ತುಗಾವುದ ದಾರಿಯುಲ್ಲಿ ಸುವರ್ಣಮಯವಾದ ಸಿಲೆಗಳುಳ್ಳ ಕನಕಗಿರಿಯೆಂಬ ಒಂದು ಪರ್ವತವಿರುವದು ; ಆ ಪರ್ವತದಲ್ಲಿ ಚಂದ್ರಮಂಡಲದಂತೆ ಅತ್ಯಂತ ಬಿಳುಪಾದ ತನುಕಾಂತಿಯುಳ್ಳವನಾಗಿ ಕಮಲದ ಎಸಳಿನಂತೆ ವಿಶಾಲವಾದ ಕಣ್ಣುಗಳುಳ್ಳವನಾಗಿ ಸಮಸ್ತ ದೇವತೆಗಳಿಂದಲೂ ನಮಸ್ಕರಿಸಲ್ಪಡುವವನಾಗಿ ಎಳದಳಿರ ಕಾಂತಿಯಂತೆ ಕಾಂತಿಯುಳ್ಳ ವಸ್ತ್ರಗಳಿಂದ ಅಲಂಕರಿಸಲ್ಪಟ್ಟವನಾಗಿ ಭೂಮಿಯನ್ನು ಹೊತ್ತಿರುವ ಅನಂತಪದ್ಮನಾಭನನ್ನು ಕಾಣಿಸಿಕೊಂಡು ಆ ಗಿರಿಯ ಅಗ್ರಭಾಗದ ಜಗಲಿಯಮೇಲೆ ನೆಡಲ್ಪಟ್ಟಿರುವ ಸುವರ್ಣಮಯವಾದ ಧ್ವಜಸ್ತಂಭವನ್ನು ನೋಡಿ ಅಲ್ಲಿಂದ ಮುಂದೆ ಸಮಸ್ತ ದೇವತೆಗಳಿಂದಲೂ ಸೇವಿಸಲ್ಪಟ್ಟ ಸುವರ್ಣಮಯವಾದ ಉದಯಗಿರಿಗೆ ಹೋಗಿ ನೂರುಗಾವುದ ಪರಿಮಾಣವುಳ್ಳ ಆ ಪರ್ವತದಲ್ಲಿ ಸ್ವರ್ಗಲೋಕವನ್ನು ತುಡುಕುವಂಥಾವಾಗಿ ಸುವರ್ಣಮಯವಾಗಿರುವ ದಿವ್ಯ ಕೋಡುಗಲ್ಲನ್ನು ನೋಡೀ ; ಮತ್ತು ಅಲ್ಲಿ ತಾಳವೃಕ್ಷ ತಮಾಲವೃಕ್ಷ ಗೊರಟೇ ವೃಕ್ಷಗಳ ಸುವರ್ಣಕಾಂತಿಯುಳ್ಳ ಪುಷ್ಪಗಳಿಂದ ಮನೋಹರವಾದದ್ದಾಗಿ ಒಂದು ಗಾವುದ ದಾರಿ ಅಗಲವುಳ್ಳದ್ದಾಗಿ ಹತ್ತುಗಾವುದ ದಾರಿ ನೀಟವುಳ್ಳದ್ದಾಗಿ ಸುವರ್ಣಮಯವಾದ ಒಂದು ಕೋಡುಗಲ್ಲಿರುವದು ; ಪೂರ್ವದಲ್ಲಿ ತ್ರಿವಿಕ್ರಮಾವತಾರದಲ್ಲಿ ನಾರಾಯಣನು ಬಲಿಚಕ್ರವರ್ತಿಯಲ್ಲಿ ಮೂರಡಿ ಭೂಮಿಯನ್ನು ಬೇಡಿಕೊಂಡು ಭೂಮಿಯನ್ನಳೆಯುವದಕ್ಕೆ ಒಂದು ಪಾದವನ್ನು ಆ ಕೋಡುಗಲ್ಲಿನಮೇಲಿಟ್ಟು ಎರಡನೇ ಪಾದವನ್ನು ಮಹಾಮೇರು ಪರ್ವತದ ಕೋಡುಗಲ್ಲಿನಮೇಲಿಟ್ಟನು ; ಆ ಕೋಡುಗಲ್ಲಿಗೆ ಬಡಗಣ ಭಾಗದಲ್ಲಿ ಸೂರ್ಯನು ಜಂಬೂದ್ವೀಪವನ್ನು ಸುತ್ತಿಬರುವನು ; ಆ ಕೋಡುಗಲ್ಲು ನೋಡುವ ಪುಣ್ಯಾತ್ಮರ ದೃಷ್ಟಿಗೆ ಮನೋಹರವಾಗಿರುವದು ; ಅಲ್ಲಿ ವೈಖಾನಸ ವಾಲಖಿಲ್ಯರೆಂಬ ಮಹರ್ಷಿಗಳಿರುವರು ; ಅವರು ಸೂರ್ಯಪ್ರಭೆಯಂತೆ ಪ್ರಕಾಶಮಾನವಾಗಿ ಬೆಳಗುತ್ತಿರುವರು ; ಅಲ್ಲಿಂದ ಮುಂದೆ ಸುದರ್ಶನವೆಂಬ ದ್ವೀಪವಿರುವದು ; ಅದರಿಂದ ಸಮಸ್ತ ಪ್ರಾಣಿಗಳಿಗೂ ಕಣ್ಣುದೃಷ್ಟಿಯುಂಟಾಗುವಕಾರಣದಿಂದ ಅದಕ್ಕೆ ಸುದರ್ಶನವೆಂಬ ಹೆಸರಾಯಿತು ! ಈ ಮರ್ಯಾದೆಯಲ್ಲಿ ಮಹಾಮೇರು ಪರ್ವತದ ಗುಹೆಗಳಲ್ಲಿಯೂ ಜರಿಗಳಲ್ಲಿಯೂ ವನಗಳಲ್ಲಿಯೂ ರಾವಣನನ್ನೂ ಸೀತಾದೇವಿಯನ್ನೂ ಅರಸಿನೋಡೀ ; ಕಾಂಚನಶೈಲದ ಕಾಂತಿಯಿಂದಲೂ ಮಹಾತ್ಮನಾದ ಸೂರ್ಯನ ಕಾಂತಿಯಿಂದಲೂ ಪ್ರಾತಃಕಾಲವು ಕೆಂಪಾಗಿ ತೋರುವದು ; ಸುದರ್ಶನ ದ್ವೀಪವು ಭೂಮಂಡಲಕ್ಕೆ ಮೂಡಲಾಗಿರುವದು ; ಆ ದ್ವೀಪದ ಮೂಡಲಾಗಿ ಸೂರ್ಯೋದಯವಾಗುವ ಉದಯಗಿರಿಯ ಗುಹೆಗಳಲ್ಲಿಯೂ ಜರಿಗಳಲ್ಲಿಯೂ ಅರಸಿನೋಡೀ ; ಅದಕ್ಕೆ ಮೂಡಣ ದಿಕ್ಕಿನಲ್ಲಿ ಚಂದ್ರಸೂರ್ಯರ ಸಂಚಾರವಿಲ್ಲವಕಾರಣದಿಂದ ಯಾವ ಪ್ರಾಣಿಗಳಿಗೂ ಹೋಗುವದಕ್ಕೆ ಅಶಕ್ಯವಾಗಿರುವದು ! ಈಪ್ರಕಾರವಾಗಿ ನಾನು ಹೇಳಿದ ಪರ್ವತಗಳಲ್ಲಿಯೂ ಮಧ್ಯದಲ್ಲಿರುವ ದೇಶಗಳಲ್ಲಿಯೂ ಸೀತಾದೇವಿಯನ್ನು ಅರಸಿನೋಡೀ ! ಇವೇ ವಾನರರಿಗೆ ಸಂಚಾರಯೋಗ್ಯವಾದ ದೇಶಗಳು ; ಇನ್ನು ಸೂರ್ಯಪ್ರಭೆಯಿಲ್ಲದ ದೇಶಗಳನ್ನು ಅರಿಯಬಾರದು ; ಈಗ ಹೇಳಿದ ದೇಶಗಳೊಳಗಾಗಿ ರಾವಣನಿರುವ ಸ್ಥಳವನ್ನೂ ಸೀತಾದೇವಿಯಿರುವ ಸ್ಥಳವನ್ನೂ ವಿಚಾರಿಸಿ ನಿಶ್ಚಯಿಸಿಕೊಂಡು ಒಂದು ತಿಂಗಳೊಳಗಾಗಿ ಬನ್ನೀ ; ಒಂದು ತಿಂಗಳೊಳಗಾಗಿ ಯಾವ ಕಪಿನಾಯಕನು

ತಿರುಗಿ ಬರದಿರುವನೋ ಆತನು ಶರೀರಾಂತವಾದ ದಂಡನೆಗೊಳಗಾಗುವನು! ಆದಕಾರಣ, ಎಲೈ ಕಪಿನಾಯಕ ಮಕ್ಕಳಿರ, ನೀವು ಸಮಸ್ತ ವನಸಮೂಹಗಳಿಂದ ಅಲಂಕರಿಸಲ್ಪಟ್ಟ ಮೂಡಣದಿಕ್ಕಿನಲ್ಲಿ ಅರಸಿನೋಡಿ ಸೀತಾದೇವಿಯನ್ನು ಕಂಡು ತಿರುಗಿ ಬಂದರೆ ಅನೇಕ ಸತ್ಕಾರಗಳನ್ನು ಪಡೆದು ಸುಖವಾಗಿರುವಿರಿ" ಎಂದು ಆಜ್ಞಾಪಿಸಿದನು.

## ೪೧ನೇ ಅಧ್ಯಾಯ.

### ಸುಗ್ರೀವನು ಸೀತಾದೇವಿಯನ್ನು ಹುಡುಕುವದಕ್ಕಾಗಿ ಕಪಿಗಳನ್ನು ತೆಂಕಣದಿಕ್ಕಿಗೆ ಕಳುಹಿಸಿದ್ದು.

ಈ ಮರ್ಯಾದೆಯಲ್ಲಿ ಸುಗ್ರೀವನು ಸೀತಾದೇವಿಯನ್ನರಸಿ ಬರುವ ನಿಮಿತ್ಯವಾಗಿ ಕೆಲವು ವಾನರಬಲವನ್ನು ಮೂಡಣ ದಿಕ್ಕಿಗೆ ಹೋಗಹೇಳಿ ತೆಂಕಣದಿಕ್ಕಿನಲ್ಲಿ ಹುಡುಕುವದಕ್ಕೆ ಯಜ್ಞಪುರುಷನ ಮಗನಾದ ನೀಲನು ವಾಯುಪುತ್ರನಾದ ಹನುಮಂತನು ಬ್ರಹ್ಮದೇವನ ಮಗನಾದ ಜಾಂಬುವಂತನು ಶನೀಶ್ವರನ ಮಗನಾದ ಸುಹೋತ್ರನು ಶರಾರಿಯು ಶರಗುಲ್ಮನು ಗಜನು ಗವಾಕ್ಷನು ಸುಷೇಣನು ವೃಷಭನು ಮೈಂದನು ದ್ವಿವಿದನು ವಿಜಯನು ಗಂಧಮಾದನನು ಯಜ್ಞಪುರುಷನ ಮಕ್ಕಳಾದ ಉಲ್ಕಾಮುಖನು ಅಸಂಗನು ಮೊದಲಾದ ಮಹಾ ಪರಾಕ್ರಮಿಗಳಾಗಿ ಅತಿ ವೇಗವುಳ್ಳ ಕಪಿನಾಯಕರನ್ನು ಕೂಡಿಸಿ ಅವರೆಲ್ಲರಿಗೂ ಅಂಗದನನ್ನು ಅಧಿಪತಿಯಾಗಿ ಮಾಡಿ ತೆಂಕಣದಿಕ್ಕಿಗೆ ಕಳುಹಿಸುತ ಅವರನ್ನು ಕುರಿತು "ಎಲೈ ಕಪಿನಾಯಕರುಗಳಿರಾ, ಇಲ್ಲಿಂದ ಮುಂದೆ ನಾನಾವೃಕ್ಷಗಳಿಂದಲೂ ಲತೆಗಳಿಂದಲೂ ಇಟ್ಟಣಿಸಿ ಸಾವಿರ ಕೋಡುಗಲ್ಲುಗಳಿಂದ ಮನೋಹರವಾದ ವಿಂಧ್ಯಪರ್ವತದಲ್ಲಿ ಸೀತಾದೇವಿಯನ್ನೂ ರಾವಣನನ್ನೂ ಅರಸಿನೋಡಿರಿ; ಅಲ್ಲಿಂದ ಮುಂದೆ ದೊಡ್ಡ ಪರ್ವತಗಳಿಂದ ದಾಟುವದಕ್ಕೆ ದುರ್ಘಟವಾಗಿರುವ ನರ್ಮದಾತೀರಕ್ಕೆ ಹೋಗಿ ನೋಡಿರಿ; ಅಲ್ಲಿಂದ ಮುಂದೆ ಗೋದಾವರೀ ಕೃಷ್ಣವೇಣಿ ಮಹಾನದಿ ವರದ ಮೇಖಲ ಉತ್ಕಲಾದಿ ನದಿಗಳ ಬಳಿಯಲ್ಲಿಯೂ ದಶಾರ್ಣ ಪಟ್ಟಣದಲ್ಲಿಯೂ ಅಬ್ರವಂತಿ ಬಬ್ರವಂತಿ ಮೊದಲಾದ ಪಟ್ಟಣಗಳಲ್ಲಿಯೂ ನೋಡಿ ಆ ಮೇಲೆ ವಿದರ್ಭದೇಶ ಋಷಿಕದೇಶ ಮನೋಹರವಾದ ಮಾಹಿಷಕದೇಶ ಕಳಿಂಗದೇಶ ಕಾಶೀದೇಶಗಳಲ್ಲಿಯೂ ದಂಡಕಾರಣ್ಯದಲ್ಲಿರುವ ಪರ್ವತಗಳಲ್ಲಿಯೂ ಗುಹೆಗಳಲ್ಲಿಯೂ ನದೀತೀರಗಳಲ್ಲಿಯೂ ನೋಡಿ ಆಮೇಲೆ ಆಂಧ್ರದೇಶ ಪುಂಡ್ರಕದೇಶ ಚೋಳದೇಶ ಪಾಂಡ್ಯದೇಶ ಕೇರಳದೇಶಗಳಲ್ಲಿಯೂ ಎಲ್ಲಿ ನೋಡಿದರೂ ಸುವರ್ಣಮಯವಾಗಿ ನಾನಾವರ್ಣವಾದ ಕೋಡುಗಲ್ಲುಳ್ಳದ್ದಾಗಿ ಪುಷ್ಪಿತವಾದ ವನಗಳುಳ್ಳ ಆಯೋಮುಖ ಪರ್ವತದಲ್ಲಿಯೂ ದಿವ್ಯವಾದ ಶ್ರೀಗಂಧ ವೃಕ್ಷಗಳುಳ್ಳ ಮಲಯಪರ್ವತದಲ್ಲಿಯೂ ದೇವತಾಯೋಗ್ಯವಾದ ಉದಕಪ್ರವಾಹವುಳ್ಳ ಕಾವೇರೀತೀರದಲ್ಲಿಯೂ ತಾಮ್ರಪರ್ಣೀತೀರದಲ್ಲಿಯೂ ಹುಡುಕಿ ಮಲಯಪರ್ವತದ ಅಗ್ರಭಾಗದಲ್ಲಿರುವ ಅತಿ ತೇಜಸ್ವಿಯಾದ ಸೂರ್ಯಪ್ರಭೆಯಂತೆ ತನುಕಾಂತಿಯುಳ್ಳ ಅಗಸ್ತ್ಯಮುನೀಶ್ವರನನ್ನು ಕಾಣಿಸಿಕೊಂಡು ಪ್ರಸನ್ನಚಿತ್ತನಾದ ಆ ಮುನೀಶ್ವರನಿಂದ ಕಳುಹಿಸಿಕೊಂಡು ತಾಮ್ರಪರ್ಣೀತೀರದಲ್ಲಿರುವ ಗ್ರಾಮಗಳಲ್ಲಿ ನೋಡಿ ಎಲ್ಲಿ ನೋಡಿದರೂ ದಿವ್ಯವಾದ ಚಂದನ ವೃಕ್ಷಗಳಿಂದ ಇಟ್ಟಣಿಸಿದ್ದಾಗಿ ಪತಿವ್ರತಾ ಸ್ತ್ರೀಯು ತನ್ನ ಪತಿಗೆ ಸೇವೆ ಸತ್ಕಾರಗಳಿಂದ ಸಂತೋಷವುಂಟುಮಾಡುವಂತೆ ಸಮುದ್ರರಾಜನಿಗೆ ಅನೇಕಾನಂದಾತಿಶಯವನ್ನುಂಟುಮಾಡುವ ಆ ನದಿಯನ್ನು ದಾಟಿ ಅಲ್ಲಿಂದ ಮುಂದೆ ಮುತ್ತಿನ ಮಣಿಗಳಿಂದ ಅಲಂಕರಿಸಲ್ಪಟ್ಟ ಪಾಂಡ್ಯದೇಶದ ಪಟ್ಟಣಗಳಲ್ಲಿ ಹುಡುಕಿ ಅಲ್ಲಿಂದ ಸಮುದ್ರತೀರಕ್ಕೆ ಹೋಗಿ ಆ ಸಮುದ್ರಮಧ್ಯ ಪ್ರದೇಶದಲ್ಲಿ ಸುವರ್ಣಮಯವಾಗಿರುವ ಅನೇಕ ಸಂಪತ್ತುಳ್ಳ ಮಹೇಂದ್ರಪರ್ವತವನ್ನು ನೋಡಿ ಅಲ್ಲಿಂದ ಮುಂದೆ ನಾನಾವಿಧವಾದ ಪುಷ್ಪವನಗಳುಳ್ಳದ್ದಾಗಿ ಯಕ್ಷ ಗಂಧರ್ವ ಕಿನ್ನರ ಕಿಂಪುರುಷ ಅಪ್ಸರ ಸಿದ್ಧ ಚಾರಣಾದಿ ದೇವಸಮೂಹಗಳಿಂದ ಇಟ್ಟಣಿಸಿದ್ದಾಗಿ ಪರ್ವಕಾಲಗಳಲ್ಲಿ ದೇವೇಂದ್ರನು ಸಮಸ್ತ ದೇವತೆಗಳ ಸಮೇತನಾಗಿ ಬಂದು ಸ್ನಾನವನ್ನು ಮಾಡುವಂಥಾ ಸಮುದ್ರಕ್ಕೆ ಹೋಗಿ ನೋಡಿರಿ! ಆ ಸಮುದ್ರದ ಪಡುವಣ ತೀರದಲ್ಲಿ ಒಂದು ದ್ವೀಪವಿರುವದು; ಆ ದ್ವೀಪವು ನೂರುಗಾವುದದಾರಿಯಲ್ಲಿರುವದರಿಂದ ಭೂಚರಪ್ರಾಣಿಗಳಿಗೆ

ಹೋಗುವದಕ್ಕೆ ದುರ್ಘಟವಾಗಿರುವದು ; ಆ ದ್ವೀಪದಲ್ಲಿ ಸೀತಾದೇವಿಯಿರಬಹುದೆಂದು ತೋರುವದರಿಂದ ಅಲ್ಲಿ ವಿಶೇಷವಾಗಿ ಅರಸಿ ನೋಡಬೇಕು ; ದುರಾತ್ಮನಾಗಿ ದೇವೇಂದ್ರನ ಸಂಪತ್ತಿಗಿಂತಲು ಅಧಿಕವಾದ ಸಂಪತ್ತುಳ್ಳವನಾಗಿ ರಾಕ್ಷಸಾಧಿಪತಿಯಾದ ರಾವಣನಿಗೆ ಅದೇ ವಾಸಸ್ಥಾನವಾಗಿರಬಹುದು ! ಆ ದ್ವೀಪದಲ್ಲಿ ಅಂಗಾರಕೆ ಎಂಬ ಮಹಾ ಪ್ರಸಿದ್ಧಳಾದವಳು ಛಾಯೆಯನ್ನು ಗ್ರಹಿಸಿ ಮನುಷ್ಯರನ್ನು ಭಕ್ಷಣೆಮಾಡುತ್ತಿರುವಳು ! ನೀವು ಆ ಸ್ಥಳಗಳಿಗೆ ಹೋಗಿ ಶ್ರೀರಾಮನ ಪಟ್ಟದರಾಣಿಯಾದ ಸೀತಾದೇವಿಯನ್ನರಸಿನೋಡಿರಿ ! ಆ ಬಳಿಕ ಮುಂದೆ ಹೋದರೆ ಸಮುದ್ರಮಧ್ಯದಲ್ಲಿ ನೂರುಗಾವುದ ವಿಸ್ತೀರ್ಣವುಳ್ಳದ್ದಾಗಿ ಅನೇಕ ಸಂಪತ್ತುಳ್ಳದ್ದಾಗಿ ಸಿದ್ಧಚಾರಣಾದಿಗಳಿಂದ ಸೇವಿಸಲ್ಪಟ್ಟದ್ದಾಗಿ ಚಂದ್ರಸೂರ್ಯಪ್ರಭೆಯಂತೆ ಪ್ರಕಾಶಮಾನವಾದ್ದಾಗಿ ಸಮುದ್ರೋದಕದಿಂದ ಸುತ್ತುವರಿಯಲ್ಪಟ್ಟದ್ದಾಗಿ ನಾನಾವರ್ಣವಾಗಿ ಅತ್ಯುನ್ನತವಾದ ಕೋಡುಗಲ್ಲುಗಳಿಂದ ಆಕಾಶವನ್ನು ತುಡುಕುವಂತೆ ಒಪ್ಪುತ್ತಿರುವ ಪುಷ್ಪಿತವೆಂಬ ಪರ್ವತವಿರುವದು ; ಆ ಪರ್ವತದ ಒಂದು ಕೋಡುಗಲ್ಲು ಸುವರ್ಣಮಯವಾಗಿರುವದು ; ಅದನ್ನು ಸೂರ್ಯನು ಸೇವಿಸುತ್ತಿರುವನು ; ಮತ್ತೊಂದು ಕೋಡುಗಲ್ಲು ಬೆಳ್ಳಿಯಮಯವಾಗಿ ಬಿಳುಪಾಗಿರುವದು ; ಅದನ್ನು ಚಂದ್ರನು ಸೇವಿಸುತ್ತಿರುವನು ; ಆ ಪರ್ವತದ ಕೋಡುಗಲ್ಲುಗಳು ಮಾಡಿದ ಉಪಕಾರವನ್ನು ಮರೆಯುವ ಕೃತಘ್ನರಿಗೂ ದೈವವಿಲ್ಲ ಧರ್ಮವಿಲ್ಲವೆಂಬ ನಾಸ್ತಿಕಬುದ್ಧಿಯುಳ್ಳ ಪಾಪಾತ್ಮರಿಗೂ ಕಾಣಿಸವು ; ಆ ಪರ್ವತಕ್ಕೆ ನೀವು ಸಾಷ್ಟಾಂಗದಂಡಪ್ರಣಾಮಗಳನ್ನು ಮಾಡಿ ಅಲ್ಲಿಂದ ಮಹಾ ದುರ್ಘಟವಾದ ಹದಿನಾಲ್ಕುಗಾವುದ ದಾರಿ ಹೋಗಿ ಸೂರ್ಯವಾನ್ ಎಂಬ ಪರ್ವತವನ್ನು ದಾಟಿಹೋಗಿ ಮುಂದೆ ವೈದ್ಯುತ ಎಂಬ ಪರ್ವತಕ್ಕೆ ಹೋಗಿ ಆ ಪರ್ವತದಲ್ಲಿ ಬೇಡಿದ ಇಷ್ಟಾರ್ಥಗಳನ್ನು ಕೊಡುವ ಮರಗಳುಳ್ಳ ವನಗಳಲ್ಲಿ ಹುಡುಕಿ ಅಲ್ಲಿರುವ ದಿವ್ಯವಾದ ಕಂದಮೂಲಫಲಗಳನ್ನು ಆಹಾರಮಾಡಿ ಶ್ರೇಷ್ಠವಾದ ಜೇನುತುಪ್ಪವನ್ನು ತೆಗೆದುಕೊಂಡು ಮುಂದೆ ಹೋದರೆ ಕಣ್ಮನಗಳಿಗೆ ಮನೋಹರವಾದ ಕುಂಜರಪರ್ವತವು ತೋರುವದು ; ಆ ಪರ್ವತವು ಒಂದುಗಾವುದ ವಿಸ್ತಾರವುಳ್ಳದ್ದಾಗಿ ಹತ್ತುಗಾವುದ ಉನ್ನತವುಳ್ಳದ್ದಾಗಿರುವದು ; ಅಲ್ಲಿ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟ ಸುವರ್ಣಮಯವಾಗಿ ರತ್ನಖಚಿತವಾದ ಅಗಸ್ತ್ಯಮಹಾಮುನಿಯ ಆಶ್ರಮವಿರುವದು ; ಮುಂದೆ ಭೋಗವತಿಯೆಂಬ ಪಟ್ಟಣವಿರುವದು ; ಆ ಪಟ್ಟಣವು ಸಮಸ್ತಸರ್ಪಗಳಿಗೂ ಆವಾಸಸ್ಥಾನವಾಗಿ ತೆರಪಾದ ರಾಜಬೀದಿಯುಳ್ಳದ್ದಾಗಿ ತೀಕ್ಷ್ಣವಾದ ಕೋರೆದಾಡೆಗಳುಳ್ಳ ಸರ್ಪಗಳಿಂದ ರಕ್ಷಿಸಲ್ಪಟ್ಟಿರುವದು ; ಅಲ್ಲಿ ವಾಸುಕಿಯೆಂಬ ಮಹಾಭಯಂಕರವಾದ ಸರ್ಪರಾಜನಿರುವನು ; ನೀವು ಆ ಪಟ್ಟಣದಲ್ಲಿ ಅರಸಿನೋಡಿ ಅದರ ಸಮೀಪದಲ್ಲಿರುವ ಋಷಭವೆಂಬ ಪರ್ವತದಲ್ಲಿ ನೋಡಿ ಆ ಪರ್ವತದ ಸಮೀಪದಲ್ಲಿರುವ ಗೋಶೀರ್ಷಕವನ ಪದ್ಮವನ ಹರಿಶ್ಯಾಮಂಚವನವೆಂಬ ಮೂರು ವನಗಳಲ್ಲಿ ನೋಡಿ ಮುಂದೆ ಹೋದರೆ ಮೇಘಮಂಡಲದಂತೆ ಕಪ್ಪಾದ ಒಂದು ಚಂದನವನವು ಕಾಣುವದು ; ಆ ಚಂದನವನವು ಯಜ್ಞಪುರುಷನ ವರ್ಣಕ್ಕೆ ಸಮಾನವಾಗಿ ದಿವ್ಯಪರಿಮಳವುಳ್ಳದ್ದಾಗಿರುವದು ; ಆ ವನವನ್ನು ನೋಡಲೂಬಾರದು ಕೇಳಲೂಬಾರದು ; ಆ ವನವನ್ನು ಭಯಂಕರಾಕಾರರಾದ ರೋಹಿತರೆಂಬ ಐದುಮಂದಿ ಗಂಧರ್ವರು ಸೂರ್ಯಪ್ರಭೆಯಂತೆ ನಿರೀಕ್ಷಿಸಿಕೊಂಡಿರುವರು ; ಸೂರ್ಯಕಾಂತಿಯುಳ್ಳವರಾದ ಶೈಲೂಷ ಆಗ್ರಾಮಣಿ ಶ್ರೀಪಕ್ಷು ಶುಂಭೋಚ ಭೃಸ್ತರೆಂಬ ಆ ಐದುಮಂದಿ ಗಂಧರ್ವಾಧಿಪತಿಗಳು ಭೂಲೋಕದಲ್ಲಿ ತಪಸ್ಸುಮಾಡಿ ಸ್ವರ್ಗಲೋಕವನ್ನು ಪಡೆದು ಅಲ್ಲಿರುವದಕ್ಕೆ ಮನಸ್ಸಿಲ್ಲದೆ ಚಂದ್ರಸೂರ್ಯರ ಪ್ರಭೆಯಂತೆ ತನುಕಾಂತಿಯುಳ್ಳವರಾಗಿ ತಾವು ಮಾಡಿದ ಪುಣ್ಯಕರ್ಮಾತಿಶಯದಿಂದ ಆ ಚಂದನವನದಲ್ಲಿದ್ದಾರೆ ! ಅಲ್ಲಿಂದ ಮುಂದೆ ಮಹಾ ಭಯಂಕರವಾದ ಪಿತೃಲೋಕಗಳಿರುವವು ; ಅಲ್ಲಿ ಅಂಧಕಾರಕವಿದ ಯಮನ ಪಟ್ಟಣವಿರುವದು ; ಆ ದಿಕ್ಕು ನಿಮಗೆ ಹೊಕ್ಕು ನೋಡುವದಕ್ಕೆ ಅಶಕ್ಯವಾದದ್ದು ; ಅಲ್ಲಿಂದ ಮುಂದೆ ಯಾರಿಗೂ ಸಂಚರಿಸಲು ಶಕ್ಯವಲ್ಲ ! ಈಗ ನಾನು ಹೇಳಿದ ಸಮಸ್ತಲೋಕಗಳಲ್ಲಿಯೂ ಸೀತಾದೇವಿಯನ್ನು ಹುಡುಕಿಕೊಂಡು ಬನ್ನಿರಿ ; ಸೀತಾದೇವಿಯನ್ನು ಕಂಡು ಆ ಸಂತೋಷವಾರ್ತೆಯನ್ನು ಹೇಳುವಾತನಿಗೆ ನನಗಿರುವ ಐಶ್ವರ್ಯಕ್ಕೆ ಸಮಾನವಾದ ಭಾಗ್ಯವನ್ನು ಕೊಟ್ಟು ಸುಖವಾಗಿರುವಹಾಗೆ ಮಾಡುವೆನು ; ಆತನು ನನ್ನ ಪ್ರಾಣಗಳಿಗಿಂತಲು ವೆಗ್ಗಳವಾದ ಪ್ರಿಯಸಖನಾಗುವನು ; ಆತನು ಅನೇಕ ಅಪರಾಧಗಳನ್ನುಮಾಡಿದರೂ ನನ್ನ ಮಿತ್ರನಾಗಿಯೇ

ಇರುವನು! ಎಲೈ ಕಪಿನಾಯಕರುಗಳಿರ, ನೀವು ಅನೇಕ ಸದ್ಗುಣಗಳುಳ್ಳವರಾಗಿ ಸತ್ಕುಲಗಳಲ್ಲಿ ಅವತರಿಸಿದವರು; ಅಪರಿಮಿತವಾದ ಬಲಪರಾಕ್ರಮವುಳ್ಳವರು; ನೀವು ಶ್ರೀರಾಮನ ಪಟ್ಟದ ರಾಣಿಯಾದ ಸೀತಾದೇವಿಯನ್ನು ಅರಸಿಕೊಂಡು ಬಂದು ಹೆಗ್ಗಳವಾದ ಐಶ್ವರ್ಯವನ್ನೂ ಸದ್ಗುಣಾಧಿಕ್ಯವನ್ನೂ ಅಪರಿಮಿತವಾದ ಕೀರ್ತಿಯನ್ನೂ ಪಡೆದು ಸುಖವಾಗಿರೀ" ಎಂದು ಹೇಳಿದನು.

---

## ೪೨ನೇ ಅಧ್ಯಾಯ.

### ಸುಗ್ರೀವನು ಸೀತಾದೇವಿಯನ್ನು ಹುಡುಕುವದಕ್ಕಾಗಿ ಕಪಿಗಳನ್ನು ಪಡುವಣದಿಕ್ಕಿಗೆ ಕಳುಹಿಸಿದ್ದು.

ಈ ಮರ್ಯಾದೆಯಲ್ಲಿ ಸುಗ್ರೀವನು ಅಂಗದನು ಮೊದಲಾದ ಕಪಿನಾಯಕರನ್ನು ತೆಂಕಣದಿಕ್ಕಿಗೆ ನೇಮಿಸಿ ತನಗೆ ಮಾವನಾಗಿ ತಾರಾದೇವಿಗೆ ತಂದೆಯಾಗಿ ಕಾಮರ್ಗಿಲಂತೆ ತನುಕಾಂತಿಯುಳ್ಳವನಾಗಿ ಮಹಾಬಲಪರಾಕ್ರಮವುಳ್ಳ ಸುಷೇಣನೆಂಬ ಕಪಿನಾಯಕನನ್ನು ತನ್ನ ಮಾವನೆಂಬ ಗೌರವದಿಂದ ನಮಸ್ಕರಿಸಿ ಕೈಮುಗಿದುಕೊಂಡು ಆಮೇಲೆ ಮರೀಚಬ್ರಹ್ಮನ ಮಗನಾದ ಮಾರೀಚನ ಕುಮಾರನಾಗಿ ಅನೇಕ ಕಪಿನಾಯಕರಿಗೆ ಅಧಿಪತಿಯಾಗಿ ಅನೇಕ ಕಾಂತಿಯುಳ್ಳ ಪರಾಕ್ರಮಶಾಲಿಯಾಗಿ ಬುದ್ಧಿವಂತನಾಗಿ ಗರುತ್ಮಂತನಂತೆ ಅತಿ ವೇಗವುಳ್ಳವನಾದ ಅರ್ಚಿಮಾಲಿಯೆಂಬ ಕಪಿನಾಯಕನನ್ನೂ ಆತನ ತಮ್ಮಂದರಾಗಿ ಮಹಾಬಲವಂತರಾದ ಕಪಿನಾಯಕರನ್ನೂ ಕರೆದು ಅವರನ್ನು ಕುರಿತು "ಎಲೈ ಕಪಿನಾಯಕರುಗಳಿರಾ, ನೀವು ಎರಡುಲಕ್ಷ ಕಪಿಗಳನ್ನು ಕೂಡಿಕೊಂಡು ಸುಷೇಣನನ್ನು ಮುಂದಿಟ್ಟುಕೊಂಡು ಆತನು ಹೇಳಿದಂತೆ ಕೇಳಿಕೊಂಡು ಪಡುವಣದಿಕ್ಕಿಗೆ ಹೋಗಿ ರಾವಣನನ್ನು ಕಂಡು ಸೀತಾದೇವಿಯನ್ನರಸಿಕೊಂಡು ಬನ್ನೀ; ಆ ದಿಕ್ಕಿನಲ್ಲಿರುವ ಸೌರಾಷ್ಟ್ರದೇಶ ಬಾಹ್ಲಿಕದೇಶ ಚಂದ್ರಭರಿತ ದೇಶಗಳಿಗೆ ಹೋಗಿ ಅಲ್ಲಿರುವ ಮನೋಹರವಾದ ಪಟ್ಟಣಗಳಲ್ಲಿಯೂ ಪುನ್ನಾಗ ಕುಕ್ಷಿ ತಾಳೀವನಗಳಲ್ಲಿಯೂ ಪ್ರತ್ಯೇಕ ಸಮುದ್ರಗಾಮಿನಿಗಳಾದ ನದಿಗಳಲ್ಲಿಯೂ ಋಷಿಗಳ ಆಶ್ರಮಗಳಲ್ಲಿಯೂ ಅರಣ್ಯಗಳಲ್ಲಿಯೂ ಪರ್ವತಗಳಲ್ಲಿಯೂ ಕಲ್ಲುಭೂಮಿಗಳುಳ್ಳ ಸ್ಥಳಗಳಲ್ಲಿಯೂ ನೋಡೀ; ಅಲ್ಲಿಂದ ಸಮುದ್ರತೀರಕ್ಕೆ ಹೋಗಿ ಅಲ್ಲಿ ಅನೇಕವಾಗಿರುವ ತಾಳೀ ವನಗಳಲ್ಲಿಯೂ ಕದ್ದಾಳೀ ವನಗಳಲ್ಲಿಯೂ ತೆಂಗಿನ ತೋಪುಗಳಲ್ಲಿಯೂ ಪರ್ವತಗಳಲ್ಲಿಯೂ ವನಾಂತರಗಳಲ್ಲಿಯೂ ನೋಡೀ! ಆ ಸಮುದ್ರತೀರದಲ್ಲಿರುವ ಮುರಚೀ ಮನೋಹರವಾದ ಜಟೀಪುರಿ ಅವಂತೀಪಟ್ಟಣಗಳಲ್ಲಿಯೂ ಜಲಕ್ಷಿತ ವನಗಳಲ್ಲಿಯೂ ಮತ್ತು ಅಲ್ಲಿರುವ ದೇಶಗಳಲ್ಲಿಯೂ ಆ ದೇಶಗಳಲ್ಲಿರುವ ವಿಶಾಲವಾದ ಪಟ್ಟಣಗಳಲ್ಲಿಯೂ ವನಾಂತರಗಳಲ್ಲಿಯೂ ಸಿಂಧೂನದಿ ಸಮುದ್ರ ಸಂಗಮದಲ್ಲಿ ನೂರು ಕೋಡುಗಲ್ಲುಗಳುಳ್ಳ ಸೋಮಗಿರಿಯೆಂಬ ಪರ್ವತದಲ್ಲಿಯೂ ಆ ಪರ್ವತದ ತಪ್ಪಲುಗಳಲ್ಲಿಯೂ ಅನೇಕ ಸಿಂಹಗಳೂ ಗಂಡಭೇರುಂಡ ಪಕ್ಷಿಗಳು ಮೊದಲಾದ ಪಕ್ಷಿಗಳೂ ಇರುವ ಸ್ಥಾನಗಳಲ್ಲಿಯೂ ಸಮುದ್ರತೀರದಲ್ಲಿರುವ ಸುವರ್ಣಮಯವಾಗಿ ಸ್ವರ್ಗಲೋಕವನ್ನು ತುಡುಕುತ ನಾನಾವರ್ಣವಾದ ಪುಷ್ಪಗಳುಳ್ಳ ವನಗಳಿಂದ ಇಟ್ಟಣಿಸಿದ ಪರ್ವತದಲ್ಲಿಯೂ ಮತ್ತೂ ಸಮುದ್ರತೀರದಲ್ಲಿ ನೂರುಗಾವುದ ಉನ್ನತವಾಗಿ ಸುವರ್ಣಮಯವಾದ ಕೋಡುಗಲ್ಲುಗಳುಳ್ಳ ಪಾರಿಯಾತ್ರವೆಂಬ ಪರ್ವತದಲ್ಲಿಯೂ ನೋಡೀ; ಆ ಪರ್ವತದಲ್ಲಿ ಇಪ್ಪತ್ತುನಾಲ್ಕುಸಾವಿರಮಂದಿ ಗಂಧರ್ವರಿರುವರು; ಅವರು ಕಾಮರೂಪಿಗಳಾಗಿ ಮಹಾಭಯಂಕರಾಕಾರರಾಗಿ ಯಜ್ಞಪುರುಷನಿಗೆಸಮಾನವಾದ ತನುಕಾಂತಿಯುಳ್ಳವರಾಗಿರುವರು; ಅವರ ಸಮೀಪಕ್ಕೆ ಹೋಗಬೇಡಿ; ಅವರು ಮಹಾ ಸತ್ವಗುಣವುಳ್ಳವರು; ಮಹಾ ಬಲವಂತರು; ಯಾರಿಗೂ ಸಾಧ್ಯವಾಗದವರಾಗಿ ಆ ಸ್ಥಳಗಳಲ್ಲಿ ಕಂದಮೂಲ ಫಲಗಳನ್ನು ಆಹಾರಮಾಡಿಕೊಂಡಿರುವರು; ಅವರ ಎಲ್ಲೆಯೊಳಗಾಗಿರುವ ಕಂದಮೂಲ ಫಲಗಳನ್ನು ಮುಟ್ಟದೆ ಉಪಾಯದಿಂದ ಸೀತಾದೇವಿಯನ್ನರಸಿ ಕಾಣಬೇಕು; ಅವರಿಗೆ ಕಪಿಗಳನ್ನು ಕಂಡರೆ ಭಯವಿಲ್ಲ; ಅಲ್ಲಿ ವಜ್ರಮಯವಾದ ಭೂಮಿಯಲ್ಲಿ ವೈಡೂರ್ಯರತ್ನದಂತೆ ನಿರ್ಮಲವಾದ ಉದಕವಿದೆ; ಅಲ್ಲಿ ನಾನಾಪ್ರಕಾರ

ವಾದ ವೃಕ್ಷಗಳಿಂದ ಇಟ್ಟಣಿಸಿದ ವಜ್ರಗಿರಿಯೆಂಬ ಪರ್ವತವಿದೆ ; ಆ ಪರ್ವತವು ನೂರುಗಾವುದ ಉನ್ನತವೂ ನೂರುಗಾವುದ ಹರಹೂ ಉಳ್ಳದ್ದಾಗಿರುವದು ; ಅದರಲ್ಲಿ ಅನೇಕ ಗುಹೆಗಳಿರುವವು ; ಆ ಗುಹೆಗಳಲ್ಲಿ ಸೀತಾದೇವಿಯನ್ನು ಅರಸಿ ನೋಡಿರಿ ! ಆ ಸಮುದ್ರದ ಅಗ್ರಭಾಗದಲ್ಲಿ ಚಕ್ರವಾಕಗಿರಿಯೆಂಬ ಪರ್ವತವಿರುವದು ; ಆ ಪರ್ವತದಲ್ಲಿ ವಿಶ್ವಕರ್ಮನು ಸಾವಿರ ಅಲಗುಗಳುಳ್ಳ ಸುದರ್ಶನವೆಂಬ ಚಕ್ರವನ್ನು ನಿರ್ಮಿಸಿದನು ; ಪುರುಷೋತ್ತಮನಾದ ನಾರಾಯಣನು ಪೂರ್ವದಲ್ಲಿ ಆ ಗಿರಿಯಲ್ಲಿ ಪಂಚಜನ್ಯನೆಂಬ ದಾನವನನ್ನೂ ಹಯಗ್ರೀವನೆಂಬ ದಾನವನನ್ನೂ ಕೊಂದು ಪಂಚಜನ್ಯವೆಂಬ ಶಂಖವನ್ನೂ ಸುದರ್ಶನವೆಂಬ ಚಕ್ರವನ್ನೂ ತಂದನು ; ಚಕ್ರವಾಕಗಿರಿಯ ತಪ್ಪಲುಗಳಲ್ಲಿ ವಿಶಾಲವಾದ ಗುಹೆಗಳಿವೆ ; ಅವುಗಳಲ್ಲಿ ರಾವಣನನ್ನೂ ಸೀತಾದೇವಿಯನ್ನೂ ಹುಡುಕಿರಿ ! ಅಲ್ಲಿಂದ ಮುಂದೆ ಸುವರ್ಣಮಯವಾದ ದುರ್ದರಗಿರಿಯೆಂಬ ಪರ್ವತವಿದೆ ; ಆ ಪರ್ವತದಲ್ಲಿ ಅನೇಕ ವಜ್ರಗಳೂ ಹರಿಗಳೂ ಸಿಂಹಗಳೂ ಆನೆಗಳೂ ವ್ಯಾಘ್ರಗಳೂ ಕಾಡುಹಂದಿಗಳೂ ಘರ್ಜಿಸುತ್ತಿರುವವು ; ಅಲ್ಲಿ ದೇವೇಂದ್ರನು ಸಂಚರಿಸಿಕೊಂಡಿರುವನು ; ಆ ಪರ್ವತದ ಸಮೀಪದಲ್ಲಿ ಮೇಘಪರ್ವತವೆಂಬ ಗಿರಿಯುಂಟು ; ಮಹೇಂದ್ರಪರ್ವತದ ಸಮೀಪದಲ್ಲಿರುವ ಮೇಘಪರ್ವತವನ್ನು ದಾಟಿ ಮತ್ತೂ ಪಡುವಲಾಗಿ ನಡೆದರೆ ಅರವತ್ತುಸಾವಿರ ಸುವರ್ಣಮಯವಾದ ಪರ್ವತಗಳು ಬಾಲಸೂರ್ಯನಂತೆ ಅತಿ ಪ್ರಕಾಶಮಾನವಾಗಿ ಒಪ್ಪುತ್ತಿರುವವು ; ಅಲ್ಲಿ ಸುವರ್ಣಮಯವಾದ ವೃಕ್ಷಗಳು ಸದಾಕಾಲದಲ್ಲೂ ಪುಷ್ಪಫಲಗಳಿಂದ ಮನೋಹರವಾಗಿರುವವು ; ಆ ಅರವತ್ತುಸಾವಿರ ಪರ್ವತಗಳ ಮಧ್ಯದಲ್ಲಿ ಪರ್ವತರಾಜನಾದ ಮಹಾಮೇರು ಪರ್ವತವಿರುವದು ; ಆ ಪರ್ವತಕ್ಕೆ ಪೂರ್ವದಲ್ಲಿ ದೇವೇಂದ್ರನು 'ಎಲೈ ಪರ್ವತರಾಜನೆ, ನಿನ್ನಲ್ಲಿ ಆಶ್ರಯಮಾಡಿಕೊಂಡಿರುವವರು ಸುವರ್ಣದಂತೆ ತನುಕಾಂತಿಯುಳ್ಳವರಾಗಲಿ ! ನಿನ್ನ ಸಮೀಪಕ್ಕೆ ಬಂದು ದರ್ಶನವನ್ನು ಮಾಡುವವರು ಸುವರ್ಣದಂತೆ ದಿವ್ಯಕಾಂತಿಯುಳ್ಳವರಾಗಲೀ !' ಎಂದು ವರವನ್ನು ಕೊಟ್ಟನು ; ಮಹಾಮೇರುಪರ್ವತಕ್ಕೆ ವಿಶ್ವೇದೇವತೆಗಳು ಅಷ್ಟವಸುಗಳು ಮರುತ್ತುಗಳು ಮೊದಲಾದವರು ಬಂದು ಸಾಯಂಕಾಲ ಸಂಧ್ಯಾವಂದನೆಗಳನ್ನು ಮಾಡಿ ಸೂರ್ಯೋಪಾಸನವನ್ನು ಮಾಡುವರು ; ಆಮೇಲೆ ಸೂರ್ಯನು ಆ ದೇವತೆಗಳು ಮಾಡಿದ ಪೂಜೆಯನ್ನು ಕೈಕೊಂಡು ಆ ಪರ್ವತದ ಪಡುವಣದಿಕ್ಕಿನಲ್ಲಿ ಮರೆಯಾಗಿ ಅಸ್ತಂಗತನಾಗುವನು ! ಸೂರ್ಯನು ಎರಡುಲಕ್ಷಗಾವುದ ದಾರಿಯನ್ನು ಮೂವತ್ತುಘಳಿಗೆಗಳಲ್ಲಿ ದಾಟುವನು ; ಮಹಾಮೇರುಪರ್ವತದ ಪಡುವಣದಿಕ್ಕಿನ ಕೋಡುಗಲ್ಲಿನಮೇಲೆ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟದ್ದಾಗಿ ರತ್ನಖಚಿತವಾಗಿ ಸುವರ್ಣಮಯವಾದ ದಿವ್ಯಗೃಹ ಒಂದುಂಟು ; ಅದು ಮಹಾತ್ಮನಾದ ವರುಣನ ಅರಮನೆಯು ; ಆ ಅರಮನೆಯು ನಾನಾಪ್ರಕಾರವಾದ ಉಪ್ಪರಿಗೆಗಳಿಂದಲೂ ಚಿತ್ರಗಳಿಂದಲೂ ರಮಣೀಯವಾಗಿರುವದು ! ಅಸ್ತಮಯಪರ್ವತದ ಸಮೀಪದಲ್ಲಿ ಹತ್ತು ಕವಲುಗಳುಳ್ಳದ್ದಾಗಿ ಸುವರ್ಣಮಯವಾಗಿ ಮಹಾಸಂಪತ್ತುಳ್ಳದ್ದಾಗಿ ರತ್ನಖಚಿತವಾದ ಜಗತಿಯುಳ್ಳ ಒಂದು ತಾಳೇಮರವಿರುವದು ; ಆ ಮರದ ಬಳಿಯಲ್ಲಿಯೂ ಮತ್ತು ಅಲ್ಲಲ್ಲಿರುವ ದುರ್ಘಟವಾದ ಸ್ಥಳಗಳಲ್ಲಿಯೂ ಸೀತಾದೇವಿಯನ್ನರಸಿ ಕಾಣಿರಿ ; ಮಹಾಮೇರು ಪರ್ವತದಲ್ಲಿ ಬ್ರಹ್ಮದೇವನಿಗೆ ಸಮಾನನಾಗಿ ಧರ್ಮರಹಸ್ಯವನ್ನು ಬಲ್ಲ ತಪಸ್ವಿಯಾದ ಮೇರುಸಾವರ್ಣಿಯೆಂಬ ಋಷೀಶ್ವರನಿರುವನು ; ಆ ಋಷೀಶ್ವರನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಸೀತಾದೇವಿಯ ವೃತ್ತಾಂತವನ್ನು ಕೇಳಿರಿ ; ಇದೀಗ ಪ್ರಾಣಿಲೋಕಕ್ಕೆ ಪ್ರಾತಃಕಾಲ ಸಾಯಂಕಾಲಗಳನ್ನುಂಟುಮಾಡುವ ಸೂರ್ಯನು ಸಂಚರಿಸುವ ಲೋಕವು ! ಎಲೈ ಕಪಿನಾಯಕರುಗಳಿರಾ, ಈ ಸ್ಥಳಗಳೇ ಕಪಿಗಳಿಗೆ ಸಂಚರಿಸುವದಕ್ಕೆ ಯೋಗ್ಯವಾದಂಥಾವು ; ಆಮೇಲೆ ಸೂರ್ಯಸಂಚಾರವಿಲ್ಲದ ಭೂಮಿಯನ್ನು ನಾನು ಅರಿತವನಲ್ಲ ; ಸೂರ್ಯಸಂಚಾರವುಳ್ಳ ಭೂಮಿಯೊಳಗೆ ಸೀತಾದೇವಿಯನ್ನರಿಸಿ ಕಂಡು ಒಂದು ತಿಂಗಳೊಳಗೆ ಬನ್ನಿರಿ ; ಆ ತಿಂಗಳಮೇಲೆ ವಿಳಂಬಮಾಡಿಕೊಂಡಿರಬೇಡಿರಿ ; ಈ ಕಪಿನಾಯಕರಲ್ಲಿ ಯಾರು ಒಂದು ತಿಂಗಳೊಳಗಾಗಿ ಬರದಿರುವರೋ ಅವರಿಗೆ ಪ್ರಾಣಾಂತ್ಯವಾದ ಆಜ್ಞೆಯನ್ನು ಮಾಡಿಸುವೆನು ; ಆದಕಾರಣ ನೀವು ನಾನು ಹೇಳಿದ ಸ್ಥಾನಗಳಿಗೆ ಹೋಗಿ ಸೀತಾದೇವಿಯನ್ನರಸಿಕೊಂಡು ಬನ್ನಿ ! ಎಲೈ ಕಪಿನಾಯಕರುಗಳಿರ, ಸುಷೇಣನು ನನಗೆ ಮಾವನಾಗಿ ಗುರುವಿಗೆ ಸಮಾನನಾದವನು ; ನೀವು ಆತನ ಮಾತಿಗೊಳಗಾಗಿರಿ ; ನೀವು ಪಡುವಣದಿಕ್ಕಿಗೆ ಹೋಗಿ ಸೀತಾದೇವಿಯನ್ನರಸಿ ಕಂಡು ಬಂದಿರಾದರೆ

ನಮಗೆ ಉಪಕಾರವನ್ನು ಮಾಡಿದ ಶ್ರೀರಾಮನಿಗೆ ಪ್ರತ್ಯುಪಕಾರವನ್ನು ಮಾಡಿ ಕೃತಾರ್ಥರಾಗುವೆವು; ಮತ್ತೂ ಸೀತಾದೇವಿಯನ್ನು ಕಂಡುಬರುವ ಕಾರ್ಯಕ್ಕೆ ಸಾಧನಗಳಾದ ಕಾರ್ಯಗಳೇನುಂಟೋ ಆ ಕಾರ್ಯಗಳನ್ನು ದೇಶಕಾಲಗಳನ್ನರಿತು ಯತ್ನಮಾಡಿಕೊಳ್ಳಿ" ಎಂದು ಆಜ್ಞಾಪಿಸಿದನು.

ಆ ಮಾತನ್ನು ಕೇಳಿ ಆ ಕಪಿನಾಯಕರು ಸುಷೇಣನನ್ನು ಮುಂದಿಟ್ಟುಕೊಂಡು ವರುಣನಿಂದ ಪರಿಪಾಲಿಸಲ್ಪಟ್ಟ ಪಶ್ಚಿಮದಿಕ್ಕಿನಲ್ಲಿ ಸೀತಾದೇವಿಯನ್ನರಸಿ ಕಾಣುವದಕ್ಕೋಸ್ಕರ ತೆರಳಿದರು.

## ೪೩ನೇ ಅಧ್ಯಾಯ.

### ಸುಗ್ರೀವನು ಸೀತಾದೇವಿಯನ್ನರಸುವದಕ್ಕಾಗಿ ಕಪಿಗಳನ್ನು ಬಡಗಣದಿಕ್ಕಿಗೆ ಕಳುಹಿಸಿದ್ದು.

ಈ ಮರ್ಯಾದೆಯಲ್ಲಿ ಸುಗ್ರೀವನು ತನ್ನ ಮಾವನಾದ ಸುಷೇಣನನ್ನು ಪಡುವಣದಿಕ್ಕಿಗೆ ಕಳುಹಿಸಿ ಮಹಾಸಮರ್ಥನಾದ ಶತವಲಿಯನ್ನು ಕರೆದು ಆತನನ್ನು ಕುರಿತು ತನಗೂ ಶ್ರೀರಾಮನಿಗೂ ಹಿತವಾದ ಮಾತುಗಳಿಂದ "ಎಲೈ ಶತವಲಿಯೆ, ನೀನು ನಿನಗೆ ಸಮಾನರಾಗಿ ಯಮನ ಮಕ್ಕಳಾಗಿ ನಿನ್ನ ಮಂತ್ರಿಗಳಾದ ಕಪಿನಾಯಕರನ್ನು ಕೂಡಿಕೊಂಡು ಬಡಗಣದಿಕ್ಕಿಗೆ ಹೋಗಿ ಹಿಮವತ್ಪರ್ವತಪರ್ಯಂತರ ಸಂಚಾರಮಾಡಿ ಶ್ರೀರಾಮನ ಪಟ್ಟದರಾಣಿಯಾದ ಸೀತಾದೇವಿಯನ್ನರಸಿ ಬಾ; ಈ ಸಮಯದಲ್ಲಿ ಶ್ರೀರಾಮನ ಕಾರ್ಯವನ್ನು ಸಾಧ್ಯಮಾಡಿದೆವಾದರೆ ನಾವೆಲ್ಲರೂ ಆತನ ಕರುಣೆಯಿಂದ ಕೃತಾರ್ಥರಾಗುವೆವು ; ನಾವು ಆತನಿಂದ ಮೊದಲೇ ಉಪಕಾರವನ್ನು ಪಡೆದವರಾದ್ದರಿಂದ ಆತನಿಗೆ ಪ್ರತ್ಯುಪಕಾರವನ್ನು ಮಾಡಿದರೆ ನಮ್ಮ ಜನ್ಮವು ಸಫಲವಾಗುವದು ; ಒಬ್ಬರಿಂದ ಒಂದು ಉಪಕಾರವನ್ನು ಪಡೆದು ಅವರಿಗೆ ಪ್ರತ್ಯುಪಕಾರವನ್ನು ಮಾಡಿದರೆ ಜನ್ಮವು ಸಫಲವಾಗುವದು ; ಹಾಗಿರುವಲ್ಲಿ ಉಪಕಾರವನ್ನು ಪಡೆಯದೆ ಉಪಕಾರವನ್ನು ಮಾಡಿದರೆ ಹೇಳುವದೇನು ! ಆದಕಾರಣ ನಾವು ಶ್ರೀರಾಮನಿಂದ ಉಪಕಾರವನ್ನು ಪಡೆದು ಪ್ರತ್ಯುಪಕಾರವನ್ನು ಮಾಡದಿರಬಾರದು ; ಇದನ್ನು ನಿನ್ನ ಮನಸ್ಸಿಗೆ ಸರಿತಂದುಕೊಂಡು ನನಗುಪಕಾರವಾಗಿ ಸೀತಾದೇವಿಯನ್ನರಸಿಕೊಂಡು ಬರಬೇಕು ! ಶ್ರೀರಾಮನು ಮನುಷ್ಯಮಾತ್ರದವನಲ್ಲ; ಆತನು ಪರಮಪುರುಷನಾದ ಪುರುಷೋತ್ತಮನು ; ಅದಲ್ಲದೆ ನಮ್ಮಲ್ಲಿ ಬಹು ಪ್ರೀತಿಯುಳ್ಳವನು ; ಆದಕಾರಣ ನೀವು ಬಡಗಣದಿಕ್ಕಿಗೆ ಹೋಗಿ ಆ ದಿಕ್ಕಿನಲ್ಲಿರುವ ವನದುರ್ಗ ಜಲದುರ್ಗ ಗಿರಿದುರ್ಗ ಮೊದಲಾದ ಪ್ರದೇಶಗಳಲ್ಲಿಯೂ ಪಟ್ಟಣಗಳಲ್ಲಿಯೂ ನಿಮ್ಮ ಪರಾಕ್ರಮಕ್ಕೆ ತಕ್ಕಹಾಗೆ ವಿಚಾರಿಸೀ; ಮತ್ತೂ ಆ ಬಡಗಣದಿಕ್ಕಿನಲ್ಲಿರುವ ಮ್ಲೇಚ್ಛದೇಶ ಪುಳಿಂದದೇಶ ಶೂರಸೇನದೇಶ ಪ್ರಸ್ಥಲದೇಶ ಭರತದೇಶ ಕುರುದೇಶ ಮಾದ್ರದೇಶ ಕಾಂಭೋಜದೇಶ ಯವನದೇಶ ಶಕ್ತಿದೇಶ ಆರಟ್ಟದೇಶ ಬಾಹ್ಲಿಕದೇಶ ನೃಷಿಕದೇಶ ಪೌರವದೇಶ ಟಂಕಣದೇಶ ಚೀನದೇಶ ಮೊದಲಾದ ದೇಶಗಳಲ್ಲಿ ಹುಡುಕಿ ನೋಡೀ; ಮತ್ತು ಉನ್ನತವಾದ ವೃಕ್ಷಗಳುಳ್ಳ ವನಗಳಲ್ಲಿಯೂ ಕಮಲಸಮೂಹಗಳಲ್ಲಿಯೂ ದೇವದಾರು ವನಗಳಲ್ಲಿಯೂ ಅರಸಿ ನೋಡಿ ; ಆಮೇಲೆ ದೇವಗಂಧರ್ವರಿಂದ ಸೇವಿಸಲ್ಪಟ್ಟ ಸೋಮಾಶ್ರಮಕ್ಕೆ ಹೋಗಿ ಅಲ್ಲಿಂದ ಮುಂದೆ ದೊಡ್ಡ ತಪ್ಪಲುಗಳುಳ್ಳ ಕಾಳಗಿರಿಯೆಂಬ ಪರ್ವತಕ್ಕೆ ಹೋಗಿ ಆ ಪರ್ವತದ ಗುಹೆಗಳಲ್ಲಿಯೂ ಜರಿಗಳಲ್ಲಿಯೂ ಅರಸಿನೋಡಿ ಅಲ್ಲಿಂದ ಮುಂದೆ ಹೇಮಗರ್ಭವೆಂಬ ಪರ್ವತಕ್ಕೆ ಹೋಗಿ ಅಲ್ಲಿಂದ ಮುಂದೆ ಸಮಸ್ತ ಪಕ್ಷಿಗಳಿಗೂ ಸಿಲುಗಡೆಸ್ಥಾನವಾದ ದೇವಸಖವೆಂಬ ಹೆಸರುಳ್ಳ ಪರ್ವತಕ್ಕೆ ಹೋಗಿ ಆ ಪರ್ವತದಲ್ಲಿರುವ ವನಸಮೂಹಗಳಲ್ಲಿಯೂ ಜಗತಿಗಳಲ್ಲಿಯೂ ಗುಹೆಗಳಲ್ಲಿಯೂ ಅರಸಿನೋಡೀ ; ಅಲ್ಲಿಂದ ಮುಂದೆ ನೂರುಗಾವುದದಾರಿ ಪರ್ಯಂತರ ಪರ್ವತಗಳೂ ನದಿಗಳೂ ವನಗಳೂ ಪಟ್ಟಣಗಳೂ ಪ್ರಾಣಿಗಳೂ ಇಲ್ಲದ ಕಾನನವನ್ನು ದಾಟಿ ಮುಂದೆಹೋದರೆ ಮಹಾ ಮನೋಹರವಾಗಿ ಅತಿ ಬಿಳುಪಾದ ಕೈಲಾಸಪರ್ವತವನ್ನು ಕಂಡು ಅತ್ಯಂತ ಸಂತೋಷಪಡುವಿರೀ ; ಆ ಪ

ರ್ವತದ ಬಡಗಣ ಕೋಡುಗಲ್ಲಿನಲ್ಲಿ ವಿಶ್ವಕರ್ಮನಿಂದ ನಿರ್ಮಿತವಾಗಿ ರತ್ನಖಚಿತವಾಗಿ ಸುವರ್ಣಮಯವಾಗಿ ರಮಣೀಯವಾದ ಕುಬೇರನ ಮನೆಯು ಇರುವದು ; ಅಲ್ಲಿ ಹೊಂದಾವರೇ ಕಮಲಗಳಿಂದ ಪರಿಪೂರ್ಣವಾಗಿ ವಿಶಾಲವಾದ ಹಂಸಪಕ್ಷಿ ಕೊಳರ್ವಕ್ಕಿಗಳಿಂದ ಪರಿಪೂರ್ಣವಾದ ಒಂದು ಕೊಳವಿರುವದು ; ಅದರಲ್ಲಿ ಸಮಸ್ತ ಯಕ್ಷರಿಗೂ ಅಧಿಪತಿಯಾದ ಕುಬೇರನು ಅಪ್ಸರಸ್ತ್ರೀಯರೊಡನೆಯೂ ಗುಹ್ಯಕರೆಂಬ ದೇವತೆಗಳೊಡನೆಯೂ ಕೂಡಿಕೊಂಡು ಜಲಕ್ರೀಡೆಯಾಡುತ್ತಿರುವನು ; ಅಲ್ಲಿ ಯಾರಿಗೂ ಪ್ರವೇಶಮಾಡುವದಕ್ಕೆ ಅಸಾಧ್ಯವಾದ ಕ್ರೌಂಚವೆಂಬ ಬಿಲದ್ವಾರವಿರುವದು; ಆ ಬಿಲದ್ವಾರವನ್ನು ಹೊಕ್ಕು ಹೋಗುವಲ್ಲಿ ಸಾವಧಾನದಿಂದಿರಿ ; ಆ ಬಿಲದಲ್ಲಿ ಸಮಸ್ತ ದೇವತೆಗಳಿಂದಲೂ ಪೂಜಿಸಲು ಯೋಗ್ಯರಾಗಿ ಮಹಾತ್ಮರಾಗಿ ಸೂರ್ಯಪ್ರಭೆಯಂತೆ ತನುಕಾಂತಿಯುಳ್ಳ ಋಷಿಗಳಿರುವರು ; ಅವರನ್ನು ನೋಡಿ ವಿಚಾರಿಸಿರಿ; ಮತ್ತೂ ಆ ಕ್ರೌಂಚಪರ್ವತದ ತಪ್ಪಲುಗಳಲ್ಲಿ ಅನೇಕ ಕೋಡುಗಲ್ಲುಗಳೂ ದೊಡ್ಡ ಕಲ್ಲರೆಗಳೂ ಗುಂಡುಕಲ್ಲುಗಳೂ ಇರುವವು ; ಅಲ್ಲಿ ನೋಡಿ ಅಲ್ಲಿಂದ ಮುಂದೆ ಮರಗಳಿಲ್ಲದ ಕಾಮಶೈಲವೆಂಬ ಬೆಟ್ಟವಿರುವದು ; ಅಲ್ಲಿ ಸಮಸ್ತಪಕ್ಷಿಗಳಿಗೂ ಆಶ್ರಯವಾದ ಮಾನಸಸರೋವರವಿರುವದು ; ಆ ಬೆಟ್ಟವು ದೇವದಾನವರು ಮೊದಲಾದವರಿಗೂ ಸಂಚರಿಸುವದಕ್ಕೆ ಅಸಾಧ್ಯವಾದದ್ದು ; ಅಲ್ಲಿ ಹುಡುಕಿ ನೋಡಿ ಮುಂದೆ ಹೋದರೆ ಅಲ್ಲಿ ಕುದುರೇ ಮುಖದಂತೆ ಮುಖವುಳ್ಳ ಸ್ತ್ರೀಯರಿರುವರು ; ಆ ದೇಶವನ್ನು ದಾಟಿ ಸಮಸ್ತ ಸಿದ್ಧರಿಂದಲೂ ಋಷಿಗಳಿಂದಲೂ ಇಟ್ಟಣಿಸಲ್ಪಟ್ಟ ವಾಲಖಿಲ್ಯಾಶ್ರಮಕ್ಕೆ ಹೋಗಿ ತಪಸ್ಸಾಮರ್ಥ್ಯದಿಂದ ಶುದ್ಧಾತ್ಮರಾದ ವಾಲಖಿಲ್ಯರಿಗೆ ನಮಸ್ಕಾರವನ್ನು ಮಾಡಿ ಸೀತಾದೇವಿಯ ವೃತ್ತಾಂತವನ್ನು ಕೇಳಿರಿ ; ಅಲ್ಲಿಂದ ಮುಂದೆ ಹೊಂದಾವರೇ ಕಮಲಗಳಿಂದ ಇಟ್ಟಣಿಸಿ ಬಾಲಸೂರ್ಯನಂತೆ ಪ್ರಕಾಶಮಾನವಾಗಿ ಹೊಳೆಯುತ ಹಂಸಪಕ್ಷಿಗಳಿಂದ ರಮಣೀಯವಾದ ವೈಖಾನಸಸರಸ್ಸೆಂಬ ಕೊಳವಿರುವದು ; ಆ ಕೊಳಕ್ಕೆ ನಿತ್ಯದಲ್ಲೂ ಜಲಪಾನಾರ್ಥವಾಗಿ ಅನೇಕ ಹೆಣ್ಣಾನೆಗಳನ್ನು ಕೂಡಿಕೊಂಡು ಬರುವ ಐರಾವತವನ್ನು ನೋಡಿ ಅಲ್ಲಿಂದ ಮುಂದೆ ಹೋದರೆ ಚಂದ್ರಸೂರ್ಯ ನಕ್ಷತ್ರಗಳಿಲ್ಲದ್ದಾದರೂ ಯಾವಾಗಲೂ ಪ್ರಕಾಶಮಾನವಾಗಿ ಒಪ್ಪುವ ಒಂದು ದೇಶವಿರುವದು ; ಅಲ್ಲಿ ಮಹಾತ್ಮರಾಗಿ ತಮ್ಮ ತನುಕಾಂತಿಯಿಂದ ಬೆಳಗುತ್ತಿರುವ ತಪಸ್ವಿಗಳಿರುವರು ; ಅಲ್ಲಿಂದ ಮುಂದೆ ಶೈಲೋದಕವೆಂಬ ಒಂದು ನದಿ ಇರುವದು ; ಆ ನದಿಯ ಎರಡು ತೀರಗಳಲ್ಲಿಯೂ ಬಿದಿರುಗಳು ಒಂದು ತೀರದಿಂದ ಮತ್ತೊಂದು ತೀರಕ್ಕೆ ಬೊಗ್ಗಿರುವವು; ಅಲ್ಲಿರುವ ಋಷಿಗಳು ಆ ಬಿದಿರುಗಳನ್ನಿಡಿದುಕೊಂಡು ಒಂದು ತಡಿಯಿಂದ ಮತ್ತೊಂದು ತಡಿಗೆ ಸಂಚರಿಸುತ್ತಿರುವರು ; ಆ ನದಿಯು ಪುಣ್ಯವನ್ನು ಮಾಡಿದವರಿಗೆ ಸಮಸ್ತ ಭೋಗಗಳನ್ನೂ ಕೊಡುತ್ತಿರುವದು ; ಮತ್ತೂ ಅಲ್ಲಿ ಹೊಂದಾವರೇ ಕಮಲಗಳುಳ್ಳ ಕೊಳಗಳೂ ನೀಲಮಣಿಯಂತೆಯೂ ವೈಡೂರ್ಯದಂತೆಯೂ ನಿರ್ಮಲವಾದ ಉದಕವುಳ್ಳ ಅನೇಕ ನದಿಗಳೂ ಇರುವವು; ಆ ನದಿಗಳಲ್ಲಿ ಬಾಲಸೂರ್ಯಪ್ರಭೆಯಂತೆ ಕಾಂತಿಯುಳ್ಳ ಸುವರ್ಣಮಯವಾದ ಕೆಂದಾವರೇ ಕಮಲಗಳಿಂದ ಒಪ್ಪುತ್ತಿರುವ ಮಡುಗಳುಂಟು ; ಅನರ್ಘ್ಯವಾದ ಪದ್ಮರಾಗದಂತೆಯೂ ಸುವರ್ಣಪ್ರಭೆಯಂತೆಯೂ ಎಸಳುಗಳುಳ್ಳವಾಗಿ ವಿಚಿತ್ರವರ್ಣವಾದ ಕನ್ನೈದಿಲೆ ಪುಷ್ಪಗಳಿಂದ ಮನೋಹರವಾಗಿ ಅನರ್ಘ್ಯವಾದ ಮುತ್ತಿನ ಮಣಿಗಳುಳ್ಳದ್ದಾಗಿ ಸುವರ್ಣಮಯವಾದ ಮಳಲೊಟ್ಟುಗಳುಳ್ಳ ಆ ನದಿಗಳಲ್ಲಿ ಸರ್ವಾಭರಣಭೂಷಿತರಾಗಿ ನಾನಾವರ್ಣವುಳ್ಳವರಾಗಿ ಉತ್ತಮರಾದ ಪುರುಷರು ಸಂಚರಿಸುತ್ತಿರುವರು ; ಮತ್ತು ಅಲ್ಲಿ ಸುವರ್ಣಮಯವಾದ ಯಜ್ಞಪುರುಷನ ಕಾಂತಿಗೆ ಸಮಾನವಾದ ಕಾಂತಿಯುಳ್ಳ ಪುಷ್ಪಫಲಗಳಿಂದ ಇಟ್ಟಣಿಸಿದ ವನಗಳಿರುವವು ; ಆ ವನಗಳಲ್ಲಿ ಎಲ್ಲಿನೋಡಿದರೂ ದಿವ್ಯವಾದ ಪಕ್ಷಿಗಳು ಸ್ವರಗೈಯುತ್ತಿರುವವು ; ವೃಕ್ಷಗಳು ದಿವ್ಯಗಂಧವುಳ್ಳವಾಗಿ ರಸವತ್ತಾಗಿ ನುಣುಪಾಗಿ ಮನಸ್ಸಿಗೆ ಬೇಕಾದ ಫಲಗಳನ್ನು ಕೊಡುತ್ತಿರುವವು ; ಕೆಲವು ವೃಕ್ಷಗಳು ಬಯಸುವ ವಸ್ತುಗಳನ್ನೂ ಫಲಗಳನ್ನೂ ಸುಪ್ಪತ್ತಿಗೆಸಹಿತವಾದ ಮಂಚಗಳನ್ನೂ ಭೋಗಯೋಗ್ಯವಾದ ಪುಷ್ಪಮಾಲಿಕೆಗಳನ್ನೂ ಕೊಡುವವು; ಕೆಲವು ವೃಕ್ಷಗಳು ಪಾನಯೋಗ್ಯವಾದ ಪಾನೀಯಗಳನ್ನೂ ಸ್ವಾದುವಾದ ಭಕ್ಷಗಳನ್ನೂ ಕೊಡುವವು ; ಆ ವನಗಳಲ್ಲಿ ನವಯೌವನವುಳ್ಳವರಾಗಿ ಕೋಮಲಾಂಗಿಯರಾದ ಗಂಧರ್ವ ಕಿನ್ನರ ಸಿದ್ಧ ವಿದ್ಯಾಧರಾದಿ ಸ್ತ್ರೀಯರೊಡನೆ ದೇವತೆಗಳು ರಮಿಸಿಕೊಂಡಿರುವರು ; ಅಲ್ಲಿರುವ ಪ್ರಾಣಿಗಳು ಪುಣ್ಯಾತ್ಮರು; ರತಿಕ್ರೀಡೆಗಳಲ್ಲಿ ಅತಿ ಪ್ರವೀಣರು ; ಎಲ್ಲರೂ ಅರ್ಥಕಾಮಗಳೆಂಬ

ಎರಡು ಪುರುಷಾರ್ಥಗಳುಳ್ಳವರಾಗಿ ತಮ್ಮ ಸ್ತ್ರೀಯರ ಸಮೇತರಾಗಿ ತಾಳಮದ್ದಳ ಗೀತಾರವಗಳಿಂದ ಸುಖವಾಗಿಯೂ ಯಾವಾಗಲೂ ಸಂತೋಷಾತಿಶಯದಿಂದಲೂ ಮುಗುಳುನಗೆಯೊಡನೆ ಕೂಡಿಕೊಂಡು ಸಮಸ್ತ ಪ್ರಾಣಿಗಳಿಗೂ ರಮಣೀಯವಾಗಿರುವರು; ಆ ಸ್ಥಳದಲ್ಲಿ ಸತ್ಕರ್ಮಗಳನ್ನು ಮಾಡದವರಿಲ್ಲ; ಸಂತೋಷವಿಲ್ಲದಿರುವವರಿಲ್ಲ; ಆ ಸ್ಥಳದಲ್ಲಿ ದಿನದಿನದಲ್ಲಿಯೂ ಸದ್ಗುಣವು ಹೆಚ್ಚುತ್ತಿರುವದು; ಅಂಥಾ ಸ್ಥಳಗಳಲ್ಲಿ ನೋಡುತ ಅಲ್ಲಿಂದ ಮುಂದೆ ಬಡಗಣಸಮುದ್ರದ ಸಮೀಪದಲ್ಲಿ ನಾನಾರತ್ನಮಯವಾದ ಸೋಮಗಿರಿಯೆಂಬ ಪರ್ವತವಿದೆ; ಸ್ವರ್ಗಲೋಕವನ್ನು ತುಡುಕುವ ಆ ಪರ್ವತವನ್ನು ಇಂದ್ರಲೋಕದಲ್ಲಿರುವವರೂ ಬ್ರಹ್ಮಲೋಕದಲ್ಲಿರುವವರೂ ಅತಿ ಪ್ರೀತಿಯಿಂದ ನೋಡುತ್ತಿರುವರು; ಆ ಪ್ರದೇಶದಲ್ಲಿ ಸೂರ್ಯಸಂಚಾರವಿಲ್ಲದಿದ್ದರೂ ಆ ಗಿರಿಯು ಸೂರ್ಯಪ್ರಭೆಯಮರ್ಯಾದೆಯಲ್ಲಿ ಒಪ್ಪುವ ತನ್ನ ತೇಜಸ್ಸಿನಿಂದ ಬೆಳಗುತ್ತಿರುವದು; ಅಲ್ಲಿ ವಿಶ್ವಾತ್ಮಕನಾಗಿ ಷಡ್ಗುಣೈಶ್ವರ್ಯಸಂಪನ್ನನಾಗಿ ಏಕಾದಶರುದ್ರಾತ್ಮಕನಾದ ಪರಮೇಶ್ವರನಿರುವನು; ಸಮಸ್ತ ದೇವತೆಗಳಿಗೂ ಒಡೆಯನಾಗಿ ಬ್ರಹ್ಮರ್ಷಿಗಳಿಂದ ಸುತ್ತುವರಿಯಲ್ಪಟ್ಟ ಬ್ರಹ್ಮದೇವನಿರುವನು; ಉತ್ತರಕುರುದೇಶಗಳಿಗೆ ಬಡಗಲಾಗಿರುವ ಆ ಸೋಮಗಿರಿಗೆ ಅವಶ್ಯವಾಗಿ ಹೋಗಿ ಸೀತಾದೇವಿಯನ್ನರಸಬೇಕು; ಉಳಿದ ಪ್ರಾಣಿಗಳಿಗೆ ಅಲ್ಲಿ ಸಂಚರಿಸುವದಕ್ಕೆ ಅಸಾಧ್ಯವು; ಸೋಮಗಿರಿಯು ದೇವತೆಗಳಿಗೂ ದುರ್ಘಟವಾದದ್ದು; ಆ ಗಿರಿಯಲ್ಲಿ ನೋಡಿ ಬೇಗ ತಿರಿಗಿ ಬನ್ನೀ; ಇವೇ ವಾನರರಿಗೆ ಸಂಚರಿಸುವದಕ್ಕೆ ಯೋಗ್ಯವಾದ ಸ್ಥಳಗಳು; ಅಲ್ಲಿಂದ ಮುಂದೆ ಸೂರ್ಯಸಂಚಾರವಿಲ್ಲದ್ದರಿಂದ ದಿಕ್ಕುಗಳು ಕಾಣುವದಿಲ್ಲ; ಆದ ಕ್ಕಾಚೇಕಡೆಯಲ್ಲಿ ದೇಶಗಳಿಲ್ಲ! ಎಲೈ ಕಪಿನಾಯಕರುಗಳಿರ, ನೀವು ಬಡಗಣದಿಕ್ಕಿಗೆ ಹೋಗಿ ನಾನು ಹೇಳಿದ ಸ್ಥಾನಗಳಲ್ಲಿಯೂ ಇನ್ನೂ ಇರುವ ದೇಶಗಳಲ್ಲಿಯೂ ಹುಡುಕಿ ಯಾವಪ್ರಕಾರದಲ್ಲಾದರೂ ಸೀತಾದೇವಿಯನ್ನು ಕಂಡುಬಂದು ಶ್ರೀರಾಮನಿಗೆ ಸಂತೋಷವಾಗುವ ಮರ್ಯಾದೆಯಲ್ಲಿ ಹೇಳಿದರೆ ನನಗೆ ಅತ್ಯಂತ ವೆಗ್ಗಳವಾದ ಮನೋಹರ್ಷವಾಗುವದು; ನೀವು ಸೀತಾದೇವಿಯನ್ನರಸಿಕೊಂಡು ಬಂದು ಕೃತಾರ್ಥರಾಗಿ ನನ್ನಿಂದ ಬಹು ಸತ್ಕಾರಗಳನ್ನು ಪಡೆದು ಸಮಸ್ತ ಶತ್ರುಗಳನ್ನೂ ಜಯಿಸಿ ನಿಮ್ಮ ಸ್ತ್ರೀಯರಸಮೇತರಾಗಿ ಸುಖವಾಗಿರುವಿರೀ!" ಎಂದು ನುಡಿದನು.

---

## ೪೫ನೇ ಅಧ್ಯಾಯ.

### ಶ್ರೀರಾಮನು ಹನುಮಂತನಿಗೆ ತನ್ನ ಮುದ್ರೆಯುಂಗುರವನ್ನು ಕೊಟ್ಟದ್ದು.

ಈ ಮರ್ಯಾದೆಯಲ್ಲಿ ಸುಗ್ರೀವನು ಸೀತಾದೇವಿಯನ್ನರಸುವದಕ್ಕೆ ಕಪಿನಾಯಕರನ್ನು ಕಳುಹಿಸಿ ಹನುಮಂತನು ಆ ಕಾರ್ಯವನ್ನು ಸಾಧ್ಯಮಾಡುವದಕ್ಕೆ ಸಮರ್ಥನೆಂದೆಣಿಸಿ ಆತನನ್ನು ಕುರಿತು ವಿಶೇಷ ಉಪಚಾರಪೂರ್ವಕವಾಗಿ "ಎಲೈ ಹನುಮಂತನೇ, ನೀನು ಭೂಲೋಕದಲ್ಲಿಯೂ ಅಂತರಿಕ್ಷ ಲೋಕದಲ್ಲಿಯೂ ಉದಕದಲ್ಲಿಯೂ ಹೋಗುವೆ ಎಂಬುದಕ್ಕೆ ಸಂಶಯವಿಲ್ಲ; ರಾಕ್ಷಸಲೋಕದಲ್ಲಿಯೂ ಗಂಧರ್ವಲೋಕದಲ್ಲಿಯೂ ನಾಗಲೋಕದಲ್ಲಿಯೂ ದೇವಲೋಕದಲ್ಲಿಯೂ ಸಮಸ್ತ ಪರ್ವತಗಳಲ್ಲಿಯೂ ನೀನರಿಯದ ಪ್ರದೇಶಗಳಿಲ್ಲ; ನೀನು ಸಂಚರಿಸದ ಭೂಮಿಯೇ ಇಲ್ಲ; ವಾಯುವೇಗ ಮನೋವೇಗಗಳೂ ನಿನ್ನ ವೇಗದಲ್ಲಿ ಅಡಕವಾಗಿರುವವು; ಸಮಸ್ತ ತೇಜಸ್ಸುಗಳೂ ನಿನ್ನ ತೇಜಸ್ಸಿನಲ್ಲಿ ಅಡಕವಾಗಿರುವವು! ಎಲೈ ಹನುಮಂತನೆ, ಬಲವೂ ಬುದ್ಧಿಪರಾಕ್ರಮಗಳೂ ದೇಶಕಾಲಪರಿಜ್ಞಾನ ನೀತಿಗಳೂ ನಿನ್ನಲ್ಲೇ ಇರುವವು; ಆದಕಾರಣ ಶ್ರೀರಾಮನ ಕಾರ್ಯಸಾಧನೆಗೆ ತಕ್ಕ ವಿವೇಕವು ನಿನ್ನಲ್ಲಿಯೇ ಇದೆಯೆಂದು ನಿಶ್ಚಯಿಸಿದೆನು; ನಿನ್ನಿಂದಲೇ ಸಮಸ್ತ ಕಾರ್ಯಗಳೂ ಸಾಧ್ಯವಾಗಬೇಕೆಂದು ನಿಶ್ಚಯಿಸಿದ್ದೇನೆ; ನಿನ್ನ ಸಾಹಸ ಕೃತ್ಯಗಳಿಂದ ನೀನೇ ಸಮರ್ಥನೆಂದು ಕಪಿನಾಯಕನಾದ ನಾನು ಅಂಗೀಕರಿಸಿದ್ದರಿಂದ ಶ್ರೀರಾಮನೂ ನಿನ್ನಿಂದ ತನ್ನ ಕಾರ್ಯವು ಸಾಧ್ಯವಾಗುವದೆಂದು ಮನಸ್ಸಿನಲ್ಲಿ ನಿಶ್ಚಯಮಾಡಿಕೊಳ್ಳುವನು" ಎಂದು ಹೇಳಿದನು.

ಆ ಸಮಯದಲ್ಲಿ ಶ್ರೀರಾಮನು ಹನುಮಂತನನ್ನು ನೋಡಿ ಆತನು ಸಮರ್ಥನಲ್ಲದಿದ್ದರೆ ಸುಗ್ರೀವನು ಅಷ್ಟು ಉಪಚಾರವೇಳನೆಂದು ಮನಸ್ಸಿನಲ್ಲೆಣಿಸಿ ಪ್ರೀತಿಯಿಂದ 'ಶ್ರೀರಾಮ' ಎಂಬ ನಾಮಾಂಕಿತವುಳ್ಳ ತನ್ನ ಮುದ್ರೇ ಉಂಗುರವನ್ನು ಹನುಮಂತನಿಗೆ ಕೊಟ್ಟು ಆತನನ್ನು ಕುರಿತು "ಎಲೈ ಹನುಮಂತನೆ, ನೀನು ನನ್ನ ಕುರುಹಿನ ಉಂಗುರವನ್ನು ಸೀತಾದೇವಿಯ ಕೈಯಲ್ಲಿ ಕೊಟ್ಟೆಯಾದರೆ ಸೀತಾದೇವಿಯು ನಿನ್ನನ್ನು ನನ್ನ ಸಮೀಪದಿಂದ ಬಂದವನೆಂದು ವಿಶ್ವಾಸದಿಂದ ಕಂಡು ಭಯವಿಲ್ಲದೇ ನಿನ್ನ ಕೂಡೆ ಸಂಭಾಷಣೆಮಾಡುವಳು! ಎಲೈ ಹನುಮಂತನೇ, ನೀನು ಮಹಾ ಬಲವಂತನು; ಮಹಾ ಪರಾಕ್ರಮಿಯು; ಅದಲ್ಲದೆ ಸುಗ್ರೀವನು ನಿನ್ನ ಕೂಡೆಯೇ ಈ ಕಾರ್ಯಸ್ಥಿತಿಯನ್ನು ಹೇಳಿದನು; ಆದಕಾರಣ ನನ್ನ ಮನಸ್ಸಿಗೆ ನಿನ್ನಿಂದಲೇ ನನ್ನ ಕಾರ್ಯವಾಗುವದೆಂದು ತೋರುತ್ತದೆ" ಅಂದನು.

ಹನುಮಂತನು ಮಹಾಪ್ರಸಾದವೆಂದು ಆ ಮುದ್ರೇಉಂಗುರವನ್ನು ಕೈಯಲ್ಲಿ ತೆಗೆದು ಶಿರಸಾವಹಿಸಿಕೊಂಡು ಶ್ರೀರಾಮನ ಪಾದಗಳಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಆತನಿಂದ ಕಳುಹಿಸಿಕೊಂಡು ಮಹಾಬಲವುಳ್ಳ ತನ್ನ ಸೇನೆಯನ್ನು ಕೂಡಿಕೊಂಡು ಆದರ ಮಧ್ಯದಲ್ಲಿ ಮೇಘಮರೆಯಿಲ್ಲದ ಅಂತರಿಕ್ಷಮಾರ್ಗದಲ್ಲಿ ನಕ್ಷತ್ರಸಮೂಹದಿಂದ ಒಪ್ಪುತ್ತಿರುವ ನಿರ್ಮಲವಾದ ಮಂಡಲವುಳ್ಳ ಚಂದ್ರನಂತೆ ಒಪ್ಪುತ್ತಿದ್ದನು.

## ೪೫ನೇ ಅಧ್ಯಾಯ.

### ಕಪಿಗಳು ಸೀತಾದೇವಿಯನ್ನು ಹುಡುಕುವದಕ್ಕೆ ಹೊರಟದ್ದು.

ಎಲೈ ಕುಶಲವರುಗಳಿರಾ, ಈಪ್ರಕಾರವಾಗಿ ಸುಗ್ರೀವನು ಸಮಸ್ತ ಕಪಿನಾಯಕರನ್ನೂ ಕರೆದು ಶ್ರೀರಾಮನಕಾರ್ಯ ಸಾಧ್ಯವಾಗುವದಕ್ಕೆ ನಾಲ್ಕುದಿಕ್ಕುಗಳಲ್ಲಿಯೂ ಸೀತಾದೇವಿಯನ್ನು ಹುಡುಕುವದಕ್ಕೆ ತಕ್ಕ ಕಪಿನಾಯಕರನ್ನು ಆಯಾ ದಿಕ್ಕಿಗೆ ನೇಮಿಸಿ ಅವರನ್ನು ಕುರಿತು "ಎಲೈ ಕಪಿಗಳಿರಾ, ನೀವು ನಾನು ಹೇಳಿದಪ್ರಕಾರದಲ್ಲಿ ಸಂಚರಿಸಿ ಸೀತಾದೇವಿಯನ್ನರಸಿ ಕರೆದುಕೊಂಡು ಬನ್ನಿ" ಎಂದು ಆಜ್ಞಾಪಿಸಿದನು.

ಆ ಕಪಿನಾಯಕರು ಸುಗ್ರೀವನ ಆಜ್ಞೆಯನ್ನು ಶಿರಸಾವಹಿಸಿ ತಮ್ಮ ತಮ್ಮ ಮಾರ್ಗವನ್ನಿಡಿದು ತೆರಳುತ ಕೂಗುತ ಘರ್ಜಿಸುತ ನೆಗೆದಾಡುತ ಬೊಬ್ಬಿಡುತ ತಮಗೆ ನೇಮಿಸಿದ ದಿಕ್ಕುಗಳನ್ನು ನೋಡುತ ಒಬ್ಬರಿಗೊಬ್ಬರು "ನಾನೇ ರಾವಣನನ್ನು ಕೊಂದು ಸೀತಾದೇವಿಯನ್ನು ತರುವೆನು"—"ನಾನೊಬ್ಬನೇ ಸಮರದಲ್ಲಿ ರಾವಣನನ್ನು ಕೊಂದು ಸೀತಾದೇವಿಯನ್ನು ಕರೆದುಕೊಂಡು ಬರುವೆನು"—"ನಾನೇ ಆ ದೇವಿಯು ಪಾತಾಳಲೋಕದಲ್ಲಿದ್ದರೂ ಕರೆತರುವೆನು"—"ನಾನು ಸಮಸ್ತ ವೃಕ್ಷಗಳನ್ನೂ ಮುರಿಯುವೆನು"—"ನಾನು ಸಮಸ್ತ ಪರ್ವತಗಳನ್ನೂ ಚೂರ್ಣಮಾಡುವೆನು"—"ನಾನು ಭೂಮಂಡಲವನ್ನು ಇಬ್ಭಾಗೆಯಾಗಿ ಸೀಳುವೆನು"—"ನಾನು ಸಮುದ್ರವನ್ನು ಕದಡಿಬಿಡುವೆನು"—"ನಾನು ಒಂದು ಗಾವುದದಾರಿ ನೆಗೆಯುವೆನು"—"ನಾನು ನೂರುಗಾವುದ ದಾರಿಗಿಂತಲೂ ಅಧಿಕವಾಗಿ ನೆಗೆದೇನು"—"ನಾನು ಸೀತಾದೇವಿಯು ಭೂಮಂಡಲದಲ್ಲಿದ್ದರೂ ಸಮುದ್ರದಲ್ಲಿದ್ದರೂ ಪರ್ವತಗಳಲ್ಲಿದ್ದರೂ ವನಗಳಲ್ಲಿದ್ದರೂ ಪಾತಾಳಲೋಕದಲ್ಲಿದ್ದರೂ ಹೋಗಿ ನೋಡಿಬರುವೆನು"—"ನಾನು ಭಯವಿಲ್ಲದೆ ಎಲ್ಲಿಗಾದರೂ ಹೋಗುವೆನು" ಎಂದು ಸುಗ್ರೀವನ ಸಮುಖದಲ್ಲಿ ನುಡಿದು ಮುಂದೆ ಹೊರಟರು.

## ೪೬ನೇ ಅಧ್ಯಾಯ.

### ಸುಗ್ರೀವನು ಭೂಪ್ರದಕ್ಷಿಣಮಾಡಿದ ವೃತ್ತಾಂತವು.

ಈ ಮರ್ಯಾದೆಯಲ್ಲಿ ಸಮಸ್ತ ಕಪಿನಾಯಕರೂ ಸುಗ್ರೀವನಿಂದ ಕಳುಹಿಸಿಕೊಂಡು ಹೋದಮೇಲೆ ಶ್ರೀರಾಮನು ಸುಗ್ರೀವನನ್ನು ಕುರಿತು "ಎಲೈ ಸುಗ್ರೀವನೇ, ನೀನು ಭೂಮಂಡಲದಲ್ಲಿರುವ ದಿಕ್ಕುಗಳನ್ನೂ ಸಮಸ್ತ ಸ್ಥಳಗಳನ್ನೂ ಹೇಳಿದೆಯಲ್ಲ; ಇವನ್ನೆಲ್ಲಾ ನೀನು ಬಲ್ಲಪರಿಯಾವದು?" ಎಂದು ಕೇಳಿದನು.

ಸುಗ್ರೀವನು "ಎಲೈ ಶ್ರೀರಾಮನೆ, ನಾನು ಸಮಸ್ತ ದೇಶಗಳನ್ನೂ ಕಂಡುಬಂದ ವೃತ್ತಾಂತವನ್ನು ಸವಿಸ್ತಾರವಾಗಿ ಹೇಳುವೆನು ಕೇಳು: ಪೂರ್ವದಲ್ಲಿ ವಾಲಿಯು ಮಹಿಷಾಕಾರನಾದ ದುಂದುಭಿಯನ್ನು ಕೊಂದ ವೃತ್ತಾಂತವನ್ನು ಮೊದಲೆ ನಿನಗೆ ಹೇಳಿದೆನು; ಹಾಗೆ ವಾಲಿಯು ದುಂದುಭಿಯನ್ನು ಅಟ್ಟಿಕೊಂಡು ಹೋಗಿ ಮಲಯಪರ್ವತದ ಗುಹೆಯಲ್ಲಿ ಆತನನ್ನು ಕೊಂದು ಆ ಗುಹೆಯ ಬಾಗಲಿಗೆ ಚಾಚಿದ ದೊಡ್ಡ ಗುಂಡುಕಲ್ಲನ್ನು ಕೆಡಹಿ ಕಿಷ್ಕಿಂಧಾಪಟ್ಟಣಕ್ಕೆ ಬಂದು ಪಟ್ಟವನ್ನು ಕಟ್ಟಿಕೊಂಡು ಸಮಸ್ತ ಪ್ರಧಾನರನ್ನೂ ಪರಿಜನ ಪುರಜನರನ್ನೂ ಪರಿಪಾಲಿಸಿಕೊಂಡು ರಾಜ್ಯವನ್ನಾಳಿಕೊಂಡಿದ್ದ ನನ್ನನ್ನು ಕೊಲ್ಲಬೇಕೆಂದು ಅಟ್ಟಿಕೊಂಡುಬಂದು ನಾನು ನನ್ನ ಪ್ರಧಾನರಾದ ನಾಲ್ವರು ಕಪಿನಾಯಕರಸಹಿತವಾಗಿ ಓಡಿದರೂ ನನ್ನನ್ನು ಬಂದು ತಾವಿನಲ್ಲಿರಲಿಸದೆ ಬರುತ್ತಿದ್ದನು; ನಾನು ನಾನಾನದಿಗಳನ್ನೂ ಮರಗಳನ್ನೂ ಪರ್ವತಗಳನ್ನೂ ಅರಣ್ಯಗಳನ್ನೂ ಹೊಕ್ಕು ಸಮಸ್ತ ಭೂಮಂಡಲವನ್ನೂ ಗೋವಿನ ಹೆಜ್ಜೆಯನ್ನು ದಾಟುವಂತೆ ದಾಟಿ ಮೂಡಣದಿಕ್ಕಿಗೆ ಹೋಗಿ ಅಲ್ಲಿರುವ ಪರ್ವತಗಳನ್ನೂ ಅವುಗಳಲ್ಲಿರುವ ಗುಹೆಗಳನ್ನೂ ಜರಿಗಳನ್ನೂ ರಮ್ಯವಾದ ಕೋಡುಗಲ್ಲುಗಳನ್ನೂ ಮತ್ತೂ ಅನೇಕಪ್ರದೇಶಗಳನ್ನೂ ನೋಡಿ ಮುಂದೆ ನಾನಾಗೈರಿಕಾದಿ ಧಾತುಗಳಿಂದ ಅಲಂಕರಿಸಲ್ಪಟ್ಟ ಉದಯಪರ್ವತಕ್ಕೆ ಹೋಗಿ ವಾಲಿಯು ಅಲ್ಲಿಗೂ ಅಟ್ಟಿಕೊಂಡು ಬರಲು ಅಲ್ಲಿಂದ ತಿರಿಗಿ ತೆಂಕಣದಿಕ್ಕಿಗೆಬಂದು ನಾನಾಪ್ರಕಾರವಾದ ಚಂದನವೃಕ್ಷಗಳಿಂದ ಪರಿಪೂರ್ಣವಾಗಿದ್ದ ವಿಂಧ್ಯಪರ್ವತವನ್ನು ನೋಡಿ ಆ ಪರ್ವತದ ಗುಹೆಗಳು ವನಗಳು ಜರಿಗಳು ಮೊದಲಾಗಿದ್ದ ಸ್ಥಳಗಳಿಗೆ ಹೋಗಿ ವಾಲಿಯು ಅಲ್ಲಿಗೂ ಅಟ್ಟಿಕೊಂಡು ಬರಲು ಪಡುವಣದಿಕ್ಕಿಗೆ ಹೋಗಿ ಅಲ್ಲಿರುವ ಗಿರಿ ಗುಹೆ ನದಿ ವನ ಕೊಳ ಮೊದಲಾದವುಗಳಲ್ಲಿ ಸಂಚರಿಸಿ ಅಸ್ತಮಯಪರ್ವತಕ್ಕೆ ಹೋಗಿ ಅಲ್ಲಿಗೂ ವಾಲಿ ಬರಲು ಬಡಗಣದಿಕ್ಕಿಗೆ ಹೋಗಿ ಹಿಮವತ್ಪರ್ವತವನ್ನು ನೋಡಿ ಬಡಗಣಸಮುದ್ರತೀರಕ್ಕೆ ಹೋಗಿ ಎಲ್ಲಿಯೂ ನಿಲ್ಲುವದಕ್ಕೆ ಅವಕಾಶವಿಲ್ಲದೆ ಕಂಗೆಟ್ಟಿದ್ದೆನು; ಆ ಸಮಯದಲ್ಲಿ ನನ್ನನ್ನೆಡಬಿಡದೆ ಸಂಗಡ ಬರುತಿದ್ದ ಬುದ್ಧಿವಂತನಾದ ಹನುಮಂತನು ಬಂದು ಉಪಾಯವನ್ನು ತಿಳಿದು ನನ್ನನ್ನು ಕುರಿತು 'ಎಲೈ ಸುಗ್ರೀವನೆ, ನಾನು ಇಷ್ಟುದಿನಗಳು ಮರೆತಿದ್ದೆನು; ಪೂರ್ವದಲ್ಲಿ ಮತಂಗಮುನೀಶ್ವರನು ವಾಲಿಯು ಆತನ ಆಶ್ರಮದ ಎಲ್ಲೆಯನ್ನು ಮೆಟ್ಟಿದರೆ ಆತನ ತಲೆಯು ಸಹಸ್ರ ಹೋಳಾಗಲೆಂದು ಶಾಪವನ್ನು ಕೊಟ್ಟನು; ಆದಕಾರಣ ಆ ಮುನೀಶ್ವರನ ಆಶ್ರಮಕ್ಕೆ ವಾಲಿಯು ಬರಲಾರನು; ನಾವು ಮತಂಗಮುನೀಶ್ವರನ ಆಶ್ರಮದಲ್ಲಿ ವಾಲಿಯ ಭಯವಿಲ್ಲದೆ ಸುಖವಾಗಿರಬಹುದು' ಎಂದು ಹೇಳಿದನು.

"ಆ ಬಳಿಕ ನಾನು ಮತಂಗಮುನೀಶ್ವರನ ಆಶ್ರಮದ ಬಳಿಯಲ್ಲಿರುವ ಋಷ್ಯಮೂಕಪರ್ವತದಲ್ಲಿದ್ದೆನು; ಆ ಮುನೀಶ್ವರನ ಶಾಪಭಯದಿಂದ ವಾಲಿಯು ಇಲ್ಲಿಗೆ ಬಂದು ಉಪದ್ರವಮಾಡದಿದ್ದನು; ಈ ಮರ್ಯಾದೆಯಲ್ಲಿ ನಾನು ಸಮಸ್ತ ಭೂಮಂಡಲವನ್ನೂ ಪ್ರತ್ಯಕ್ಷವಾಗಿ ಕಂಡೆನು" ಎಂದು ನುಡಿದನು.

## ೪೭ನೇ ಅಧ್ಯಾಯ.

### ಮೂಡಣ ಪಡವಣ ಬಡಗಣ ದಿಕ್ಕುಗಳಿಗೆ ಹೋದ ಕಪಿಗಳು ಸೀತಾದೇವಿಯನ್ನು ಕಾಣದೆ ತಿರಿಗಿ ಬಂದದ್ದು.

ಆಮೇಲೆ ಸೀತಾದೇವಿಯನ್ನರಸುವದಕ್ಕೆ ನಾನಾದಿಕ್ಕಿಗೆ ಹೋದ ಕಪಿನಾಯಕರು ನದೀತೀರಗಳು ಸಮುದ್ರತೀರಗಳು ಕೊಳಗಳು ಪರ್ವತಗಳು ದೇಶಗಳು ಮೊದಲಾದ ನಾನಾಸ್ಥಳಗಳಲ್ಲಿಯೂ ಹುಡುಕುತ ಸಾಯಂಕಾ

ಲವಾದಮೇಲೆ ಪುಷ್ಪಗಳುಳ್ಳ ವನಗಳನ್ನು ಸೇರಿಕೊಂಡು ರಾತ್ರಿಯನ್ನು ಕಳೆಯುತ ಮಾರನೇ ಪ್ರಾತಃಕಾಲದಲ್ಲಿ ತಿರಿಗೂ ಹುಡುಕುತ ಈ ಮರ್ಯಾದೆಯಲ್ಲಿ ಎಲ್ಲೆಲ್ಲಿಯೂ ಸಂಚರಿಸುತ್ತಿದ್ದರು; ಒಂದು ತಿಂಗಳು ಕಳೆದಮೇಲೆ ಮೂಡಣದಿಕ್ಕಿಗೆ ಹೋದ ವಿನುತನು ಆ ದಿಕ್ಕಿನಲ್ಲಿದ್ದ ಸಮಸ್ತ ಸ್ಥಳಗಳಲ್ಲಿಯೂ ಹುಡುಕಿ ಸೀತಾದೇವಿಯನ್ನು ಕಾಣದೆ ತಿರಿಗಿ ಬಂದನು; ಬಡಗಣದಿಕ್ಕಿಗೆ ಹೋದ ಶತವಲಿಯು ಆ ದಿಕ್ಕಿನಲ್ಲಿದ್ದ ಹಿಮವತ್ಪರ್ವತ ಮೊದಲಾದ ಪರ್ವತಗಳು ನದೀತೀರಗಳು ಮೊದಲಾದ ಸ್ಥಳಗಳಲ್ಲಿ ಅರಸಿ ಕಾಣದೆ ತಿರಿಗಿ ಬಂದನು; ಪಡವಣದಿಕ್ಕಿಗೆ ಹೋದ ಸುಷೇಣನು ಆ ದಿಕ್ಕಿನಲ್ಲಿದ್ದ ಪರ್ವತಗಳು ಜರಿಗಳು ಗುಹೆಗಳು ನದೀತೀರಗಳು ವನಾಂತರಗಳು ಮೊದಲಾದ ಸ್ಥಳಗಳಲ್ಲಿ ಸೀತಾದೇವಿಯನ್ನರಸಿ ಕಾಣದೆ ತಿರಿಗಿ ಬಂದು ಶ್ರೀರಾಮನ ಸಮುಖದಲ್ಲಿದ್ದ ಸುಗ್ರೀವನಿಗೆ ಅಭಿನಂದಿಸಿ ಆತನನ್ನು ಕುರಿತು "ಎಲೈ ಸುಗ್ರೀವನೆ, ನಾನು ಪಡವಣದಿಕ್ಕಿಗೆ ಹೋಗಿ ಅಲ್ಲಿರುವ ಪರ್ವತಗಳು ಗುಹೆಗಳು ಕೊಳಗಳು ದೇಶಗಳು ವಿಷಮವಾದ ಸ್ಥಳಗಳು ಮೊದಲಾದವುಗಳಲ್ಲಿ ಅರಸಿನೋಡಿ ಸೀತಾದೇವಿಯನ್ನು ಕಾಣದೆ ತಿರಿಗಿ ಬಂದೆನು; ಆದರೂ ತೆಂಕಣದಿಕ್ಕಿಗೆ ಹೋದ ಮಹಾ ಬಲವಂತನಾದ ಹನುಮಂತನು ಸೀತಾದೇವಿಯನ್ನರಸಿ ಕಂಡು ಬರುವನೆಂದು ನಂಬುತ್ತೇನೆ" ಎಂದು ಹೇಳಿದನು.

---

## ೪೮ ನೇ ಅಧ್ಯಾಯ.

### ಹನುಮಂತಾದಿಗಳು ತೆಂಕಣದಿಕ್ಕಿನಲ್ಲಿ ಸೀತಾದೇವಿಯನ್ನು ಹುಡುಕಿದ್ದು.

ಆಮೇಲೆ ತೆಂಕಣದಿಕ್ಕಿಗೆ ಹೋದ ತಾರನು ಅಂಗದಕುಮಾರನು ಹನುಮಂತನು ಮೊದಲಾದವರು ಬಹುದೂರ ಹೋಗಿ ವಿಂಧ್ಯಪರ್ವತದ ಗುಹೆಗಳಲ್ಲಿಯೂ ಜರಿಗಳಲ್ಲಿಯೂ ವನಗಳಲ್ಲಿಯೂ ಪರ್ವತಾಗ್ರಗಳಲ್ಲಿಯೂ ಕೊಳಗಳಲ್ಲಿಯೂ ಸೀತಾದೇವಿಯನ್ನರಸಿ ಎಲ್ಲಿಯೂ ಕಾಣದೆ ಅಲ್ಲಲ್ಲಿ ಕಂದಮೂಲ ಫಲಾಹಾರಗಳನ್ನು ಮಾಡಿಕೊಂಡು ಮುಂದೆ ಹೋಗಿ ಉದಕವಿಲ್ಲದೆಯೂ ವನಗಳಿಲ್ಲದೆಯೂ ಜನಸಂಚಾರವಿಲ್ಲದೆಯೂ ಇದ್ದ ಭಯಂಕರವಾದ ಒಂದು ಅರಣ್ಯದಲ್ಲಿ ಅರಸಿನೋಡಿ ಅಲ್ಲಿಯೂ ಕಾಣದೆ ಕಂಗೆಟ್ಟು ಆ ಪ್ರದೇಶವನ್ನು ದಾಟಿ ಮುಂದೆಹೋಗಿ ಮನೋಹರವಾದ ನೆಳಲುಳ್ಳ ವೃಕ್ಷಗಳಿಂದಲೂ ಪುಷ್ಪಿತವಾದ ತಾವರೇ ಕಮಲಗಳುಳ್ಳ ಕೊಳಗಳಿಂದಲೂ ಅತ್ಯಂತ ಪರಿಮಳವಾದ ಪುಷ್ಪಗಳುಳ್ಳ ಲತೆಗಳಿಂದಲೂ ರಮಣೀಯವಾದ ಒಂದು ವನವನ್ನು ಕಂಡರು; ಮಹಾತ್ಮನಾಗಿ ಸತ್ಯವಾದಿಯಾಗಿ ತಪಸ್ವಿಯಾದ ಕಂಡಮುನೀಶ್ವರನು ಆ ವನದಲ್ಲಿರುವಾಗ ಹತ್ತುವರುಷಗಳ ಬಾಲಕನಾದ ಆತನ ಕುಮಾರನು ಆ ವನದಲ್ಲಿ ತಪ್ಪಿಹೋಗಲು ಆ ಮುನೀಶ್ವರನು ಅತ್ಯಂತ ಕೋಪಯುಕ್ತನಾಗಿ ಆ ವನವು ಅನೇಕ ಪುಷ್ಪಫಲಗಳುಳ್ಳದ್ದಾದರೂ ಒಬ್ಬರಿಗೂ ಆಶ್ರಯವಾಗದೆಯೂ ಮೃಗಪಕ್ಷಿಗಳಿಗೂ ಯೋಗ್ಯವಲ್ಲದೆಯೂ ಹೋಗಲೆಂದು ಶಾಪವನ್ನು ಕೊಟ್ಟದ್ದರಿಂದ ಅಲ್ಲಿ ಮೃಗಪಕ್ಷಿಗಳು ಮೊದಲಾದ ಯಾವ ಜೀವಜಂತುವೂ ಇರಲಿಲ್ಲ; ಆ ವನವನ್ನು ದಾಟಿ ಮುಂದೆ ಅನೇಕ ಪರ್ವತಗಳಲ್ಲಿಯೂ ಜರಿಗಳಲ್ಲಿಯೂ ನೋಡಿ ಕಾಣದೆ ಅಲ್ಲಿಂದ ಮುಂದೆ ಹೋಗಿ ಅನೇಕ ಮರ ಕಿರುಗಿಡ ಲತಾವಲ್ಲಿಗಳುಳ್ಳ ಒಂದು ಅರಣ್ಯದಲ್ಲಿ ಅತ್ಯಂತ ಭಯಂಕರವಾದ ಒಬ್ಬ ರಾಕ್ಷಸನನ್ನು ಕಂಡು ಎಲ್ಲರೂ ಸೇರಿ ಬಗ್ಗಟ್ಟಾಗಿ ನಿಂತಿರಲು ಆ ರಾಕ್ಷಸನು ಅವರನ್ನು ಕುರಿತು "ಎಲೈ ಕಪಿಗಳಿರ, ನೀವು ನನ್ನ ಆಹಾರಕ್ಕೆ ಕಲವಾಗಿ ಬಂದ ಹಾಗಾಯಿತು; ನಿಮ್ಮ ವಿಧಿಯು ನಿಮ್ಮನ್ನು ಇಲ್ಲಿಗೆ ಕಳುಹಿಸಿತು" ಎಂದು ನುಡಿಯುತ ಕೈಗಳನ್ನೆತ್ತಿಕೊಂಡು ಅಟ್ಟಿಕೊಂಡು ಬಂದನು; ಆಗ ವಾಲಿಯ ಪುತ್ರನಾದ ಅಂಗದಕುಮಾರನು ಅವನು ರಾವಣನಾಗಿರಬೇಕೆಂದೆಣಿಸಿ ಅಂಗೈಯಿಂದ ಅಪ್ಪಳಿಸಿ ಹೊಡೆದನು; ಆ ಪೆಟ್ಟಿನಿಂದ ಘಾಯಪಡೆದ ಆ ರಾಕ್ಷಸನು ರಕ್ತಮಸಗಿ ದೇವೇಂದ್ರನ ವಜ್ರಾಯುಧದ ಪೆಟ್ಟಿನಿಂದ ಪರ್ವತವು ಬೀಳುವಂತೆ ಭೂಮಿಯಲ್ಲಿ ಬಿದ್ದು ಶರೀರವನ್ನು ಬಿಟ್ಟನು.

ಆಮೇಲೆ ಆ ಕಪಿನಾಯಕರು ಅಲ್ಲಿಂದ ಮುಂದೆ ಹೋಗುತ ಅನೇಕ ಘೋರಾರಣ್ಯಗಳಲ್ಲಿಯೂ ಗುಹೆಗಳಲ್ಲಿಯೂ ಅರಸಿ ಕಾಣದೆ ಕಂಗೆಟ್ಟು ಮಹಾ ಚಿಂತಾಕ್ರಾಂತರಾಗಿ ಒಂದು ಮರದಡಿಯನ್ನು ಸೇರಿದರು.

## ೪೮ ನೇ ಅಧ್ಯಾಯ.

### ಅಂಗದನು ಕಪಿಗಳಿಗೆ ಧೈರ್ಯ ಹೇಳಿದ್ದು.

ಆಮೇಲೆ ಅಂಗದನು ಸಮಸ್ತ ಕಪಿನಾಯಕರನ್ನೂ ಕರೆದು “ ಎಲೈ ಕಪಿನಾಯಕರುಗಳಿರ, ನಾವು ಅನೇಕ ವನಗಳು ಪರ್ವತಗಳು ನದಿಗಳು ದುರ್ಗಗಳು ಅತಿ ಗಂಭೀರವಾದ ಜರಿಗಳು ಗುಹೆಗಳು ಮೊದಲಾದ ಸ್ಥಳಗಳಲ್ಲಿ ಸೀತಾದೇವಿಯನ್ನರಸಿದರೂ ಆ ದೇವಿಯ ಸುದ್ದಿಯನ್ನೇ ಕೇಳದೆ ಹೋದೆವು ; ಸೀತಾದೇವಿಯನ್ನು ರಾವಣನು ತೆಂಕಣದಿಕ್ಕಿಗೆ ತಕ್ಕೊಂಡು ಹೋದನೆಂಬ ಜನಜನಿತ ವಾರ್ತೆಯನ್ನು ಕೇಳಿದೆವಾದ್ದರಿಂದ ಇನ್ನೂ ಸುಗ್ರೀವನ ಆಜ್ಞೆಯಿಂದ ಈ ದಿಕ್ಕಿನಲ್ಲಿಯೆ ಅರಸಿಕೊಂಡು ಮುಂದೆ ಹೋಗೋಣ ; ಆದಕಾರಣ ಎಲ್ಲರೂ ಒಂದೇ ಮನಸ್ಸುಳ್ಳವರಾಗಿ ಒಬ್ಬರಿಗೊಬ್ಬರು ಧೈರ್ಯಹೇಳಿಕೊಂಡು ನಿದ್ರಾಲಸ್ಯಗಳನ್ನು ಬಿಟ್ಟು ಶರೀರದ ಬಳಲಿಕೆಯನ್ನು ಗಣನೆಮಾಡದಿರಬೇಕು ; ನಾವು ಯಾವಬಗೆಯಲ್ಲಾದರು ಸೀತಾದೇವಿಯನ್ನರಸಿ ಕಾಣಬೇಕು ; ಲೋಕದಲ್ಲಿ ಒಂದು ಕಾರ್ಯವು ಬಂದ ಸಮಯದಲ್ಲಿ ಮನಸ್ಸಿನಲ್ಲಿ ಉತ್ಸಾಹವೂ ದಕ್ಷತ್ವವೂ ಧೈರ್ಯವೂ ಇದ್ದರೆ ಆ ಕಾರ್ಯವು ಸಿದ್ಧಿಯಾಗುವದೆಂದು ಹೇಳುವರು ; ಆದಕಾರಣ ನೀವು ನಿಮ್ಮ ಬಳಲಿಕೆಯನ್ನು ನೋಡಬೇಡಿ ; ನಾವು ಮತ್ತು ಇರುವ ವನಗಳು ಮೊದಲಾದ ಪ್ರದೇಶಗಳಲ್ಲಿ ಅವಶ್ಯವಾಗಿ ಅರಸಿನೋಡಿ ಶ್ರೀರಾಮನ ಕರ್ಮಫಲವನ್ನು ಕಾಣೋಣ ; ನೀವು ಮನಸ್ಸಿನಲ್ಲಿ ದುಃಖವನ್ನು ಹುಟ್ಟುಮಾಡಿಕೊಂಡು ಸುಮ್ಮನಿರುವದು ಕಾರ್ಯವಲ್ಲ ; ಸುಗ್ರೀವನು ಮಹಾ ಕೋಪಶೀಲನು ; ನಿಷ್ಠುರವಾದ ಆಜ್ಞೆಯನ್ನು ಮಾಡುವವನು ; ಅಂಥಾವನಿಗೆ ಅಂಜಬೇಕು ; ಶ್ರೀರಾಮನಿಗೆ ಪ್ರಿಯವಾದ ಕಾರ್ಯವನ್ನು ಸಾಧ್ಯಮಾಡಬೇಕು ; ನಾನು ನಿಮಗೆ ಹಿತವಾದ ಮಾತನ್ನು ಹೇಳಿದೆನು ; ಇನ್ನು ನಿಮ್ಮ ಮನಸ್ಸುಬಂದಂತೆ ಮಾಡಿಕೊಳ್ಳಿ ; ಸಮಸ್ತ ಪ್ರಾಣಿಗಳಿಗೂ ಕ್ಷೇಮವೇ ಒಳ್ಳೇದು ” ಎಂದು ನುಡಿದನು.

ಆ ಮಾತನ್ನು ಕೇಳಿ ಗಂಧಮಾದನನು ತೃಷೆಯಿಂದ ಕಂಗೆಟ್ಟವನಾಗಿ ಮೆಲ್ಲಗೆ “ ಎಲೈ ಕಪಿನಾಯಕರುಗಳಿರ, ಅಂಗದಕುಮಾರನು ಹೇಳಿದ ಮಾತು ನಾವು ಬಂದಕಾರ್ಯಕ್ಕೆ ಅನುಕೂಲವಾಗಿ ನಮಗೆಲ್ಲರಿಗೂ ಹಿತವಾದಂಥಾದ್ದು ; ಇನ್ನು ನಾವು ನಾನಾಪರ್ವತಗಳಲ್ಲಿಯೂ ಗುಹೆಗಳಲ್ಲಿಯೂ ಜರಿಗಳಲ್ಲಿಯೂ ಕಾನನಗಳಲ್ಲಿಯೂ ಬಯಲುರಾಜ್ಯಗಳಲ್ಲಿಯೂ ಪರ್ವತಗಳ ಪಜ್ಜರಗಳಲ್ಲಿಯೂ ಮತ್ತು ಸುಗ್ರೀವನು ಹೇಳಿದ ಸಮಸ್ತ ಸ್ಥಳಗಳಲ್ಲಿಯೂ ಅರಸಿನೋಡುವದೇ ಕಾರ್ಯವು ” ಎಂದು ಅಂಗದನ ವಾಕ್ಯಕ್ಕೆ ಅನುಸಾರವಾಗಿ ಹೇಳಿದನು.

ಆಮೇಲೆ ಬಲವಂತರಾದ ಆ ಕಪಿನಾಯಕರೆಲ್ಲರು ಎದ್ದು ವಿಂಧ್ಯಪರ್ವತದಿಂದ ತೆಂಕಣದಿಕ್ಕೆಲ್ಲವನ್ನು ಹುಡುಕಿನೋಡಿ ಆ ದಿಕ್ಕಿನಲ್ಲಿ ಶರತ್ಕಾಲದ ಮೇಘದಂತೆ ಅತಿ ಬಿಳುಪಾದ ಬೆಳ್ಳೀಬೆಟ್ಟವನ್ನು ಕಂಡು ಆ ಬೆಟ್ಟದಲ್ಲಿದ್ದ ಜರಿಗಳಲ್ಲಿಯೂ ಗುಹೆಗಳಲ್ಲಿಯೂ ಮಹತ್ತಾದ ಕೋಡುಗಲ್ಲುಗಳಲ್ಲಿಯೂ ನೋಡಿ ಅಲ್ಲಿಂದ ಮುಂದೆ ಇದ್ದ ಅನೇಕ ಪರ್ವತಗಳಲ್ಲಿಯೂ ಲೋಧ್ರವೃಕ್ಷಗಳಲ್ಲಿಯೂ ನೋಡಿ ಆ ಬೆಟ್ಟದ ಕೋಡುಗಲ್ಲಿನ ತುದಿಯನ್ನೇರಿ ಸುತ್ತಲು ನೋಡಿ ಸೀತಾದೇವಿಯನ್ನು ಕಾಣದೆ ಶಕ್ತಿಗುಂದಿ ಮತ್ತೊಂದು ದೊಡ್ಡ ಬೆಟ್ಟವನ್ನು ಕಂಡು ಅದಕ್ಕೆ ಹೋಗಿ ಅಲ್ಲಿದ್ದ ಗುಹೆಗಳಲ್ಲಿಯೂ ಜರಿಗಳಲ್ಲಿಯೂ ಕಲ್ಲರೆಗಳಲ್ಲಿಯೂ ನೋಡಿ ಆ ದೇವಿಯನ್ನು ಕಾಣದೆ ಆ ಬೆಟ್ಟದಿಂದ ಭೂಮಿಗಿಳಿದು ಕಂಗೆಟ್ಟು ಒಂದು ಮರದಡಿಯಲ್ಲಿ ಕ್ಷಣಮಾತ್ರವು ಕುಳಿತುಕೊಂಡಿದ್ದು ಶ್ರಮೆಯನ್ನು ಪರಿಹರಿಸಿಕೊಂಡು ಆ ಮರದಡಿಯನ್ನು ಬಿಟ್ಟು ಮತ್ತೂ ತೆಂಕಣದಿಕ್ಕಾಗಿ ಸೀತಾದೇವಿಯನ್ನರಸಿಕೊಂಡು ಸಂಚರಿಸುತ್ತಿದ್ದರು.

## ೫೦ನೇ ಅಧ್ಯಾಯ.

### ಹನುಮಂತನು ಮೊದಲಾದವರು ಒಂದು ಬಿಲವನ್ನು ಸೇರಿದ್ದು.

ಈ ಮರ್ಯಾದೆಯಲ್ಲಿ ಅಂಗದಕುಮಾರನು ತಾರನು ಹನುಮಂತನು ಮೊದಲಾದ ಕಪಿನಾಯಕರು ವಿಂಧ್ಯಪರ್ವತದಲ್ಲಿರುವ ಗುಹೆಗಳಲ್ಲಿಯೂ ಸಿಂಹಶಾರ್ದೂಲಾದಿ ಮೃಗಗಳು ಸಂಚರಿಸುವ ಘೋರಾರಣ್ಯಗಳಲ್ಲಿಯೂ ದೊಡ್ಡ ಕಲ್ಲರೆಗಳಲ್ಲಿಯೂ ಭಯಂಕರವಾಗಿ ಮಹಾ ವಿಷಮವಾದ ಜರಿಗಳಲ್ಲಿಯೂ ಆ ಪರ್ವತದ ಪಡುವಣದಿಕ್ಕಿನಲ್ಲಿಯೂ ತೆಂಕಣದಿಕ್ಕಿನಲ್ಲಿಯೂ ಇರುವ ಕೋಡುಗಲ್ಲುಗಳಲ್ಲಿಯೂ ಸೀತಾದೇವಿಯನ್ನು ಹುಡುಕುತ್ತಿರಲು ಕೆಲವು ಕಾಲವು ಕಳೆಯಿತು; ಉಳಿದ ಪ್ರಾಣಿಗಳಿಗೆ ಸಂಚರಿಸುವದಕ್ಕೆ ಅಸಾಧ್ಯವಾದಂಥಾ ಸ್ಥಳಗಳಲ್ಲಿ ಹನುಮಂತನು ಸೀತಾದೇವಿಯನ್ನರಸುತಿದ್ದನು; ಆಮೇಲೆ ಗಜನು ಗವಯನು ಶರಭನು ಗಂಧಮಾದನನು ಮೈಂದನು ದ್ವಿವಿದನು ಹನುಮಂತನು ಜಾಂಬವನು ಅಂಗದನು ಮೊದಲಾದವರು ತಮ್ಮ ತಮ್ಮ ಬೀಗಳನ್ನು ವಿಂಗಡಿಸಿಕೊಂಡು ಪ್ರತ್ಯೇಕವಾಗಿ ವಿಂಧ್ಯಪರ್ವತವೆಲ್ಲವನ್ನು ಅರಸಿನೋಡಿ ಮತ್ತೂ ತೆಂಕಣದಿಕ್ಕಾಗಿ ಹೋಗಿ ಎಲ್ಲರು ಕೂಡಿ ಹಸಿವು ತೃಷೆಗಳಿಂದ ಕಂಗೆಟ್ಟು ಉದಕಪಾನಮಾಡುವದಕ್ಕಾಗಿ ಒಬ್ಬ ದಾನವನಿಂದ ರಕ್ಷಿಸಲ್ಪಟ್ಟದ್ದಾಗಿ ಅನೇಕ ಕಿರುಗಿಡ ಬಳ್ಳಿಗಳಿಂದ ಕಾಚಲ್ಪಟ್ಟದ್ದ ಋಕ್ಷಬಿಲವೆಂಬ ಒಂದು ದೊಡ್ಡ ಬಿಲವನ್ನು ಕಂಡು ಆ ಬಿಲದಿಂದ ಗರಿನನೆದು ಹೊರಟುಬರುತ್ತಿದ್ದ ಹಂಸಪಕ್ಷಿ ಸಾರಸಪಕ್ಷಿ ಚಕ್ರವಾಕಪಕ್ಷಿ ಕೊಳರ್ವಕ್ಕಿ ಮೊದಲಾದ ಪಕ್ಷಿಗಳು ತಾವರೇಕಮಲಗಳ ಧೂಳುಗಳಿಂದ ಹೊಂಬಣ್ಣವಾಗಿದ್ದದ್ದನ್ನು ಕಂಡು ಆ ಬಿಲದ ಸಮೀಪಕ್ಕೆ ಹೋಗಿ ಅತ್ಯಾಶ್ಚರ್ಯಪಟ್ಟು ಅದನ್ನು ಹೊಕ್ಕುಹೋಗುವದಕ್ಕೆ ಸಂಶಯಪಟ್ಟು ಆಮೇಲೆ ತಮ್ಮ ಬಲಗರ್ವ ತೇಜೋಗರ್ವಗಳಿಂದ ಭಯವನ್ನು ಬಿಟ್ಟು ಅವಶ್ಯವಾಗಿ ಅದರೊಳಗೆ ಹೋಗಿ ನೋಡಬೇಕೆಂದು ಮಹಾ ಗಂಭೀರವಾದ ಆ ಬಿಲವನ್ನು ಹೊಕ್ಕು ದೇವೇಂದ್ರನ ಅರಮನೆಗಿಂತಲೂ ಅತಿ ರಮ್ಯವಾಗಿ ಮನೋಹರವಾಗಿ ಅನೇಕ ಸರ್ಪಗಳಿಂದ ಇಟ್ಟಣಿಸಿದ್ದ ಆ ಬಿಲದ್ವಾರವನ್ನು ಕಂಡರು; ಆಗ ಪರ್ವತದ ಕೋಡುಗಲ್ಲಿಗೆ ಸಮಾನವಾದ ಶರೀರವುಳ್ಳ ಹನುಮಂತನು ಸುವರ್ಣದಂತೆ ತನುಕಾಂತಿಯುಳ್ಳ ಮಿಕ್ಕ ಕಪಿನಾಯಕರನ್ನು ಕರೆದು "ಎಲೈ ಕಪಿನಾಯಕರುಗಳಿರಾ, ನಾವೆಲ್ಲರೂ ತೆಂಕಣದಿಕ್ಕಿಗೆ ಬಂದು ಅನೇಕ ಪರ್ವತಗಳಲ್ಲಿ ತಿರಿಗಿ ಬಹುಪ್ರಯಾಸಪಟ್ಟು ಸೀತಾದೇವಿಯನ್ನು ಕಾಣದೆ ಹೋದೆವು; ಈ ಬಿಲದಿಂದ ಗರಿನನೆದು ಹಂಸಪಕ್ಷಿ ಮೊದಲಾದವುಗಳು ಬರುತ್ತಿವೆ; ಈ ಬಿಲದಲ್ಲಿ ಅವಶ್ಯವಾಗಿ ಒಂದು ಪುಷ್ಕರಣಿಭಾವಿಯಾದರೂ ದೊಡ್ಡ ಮಡುವಾದರೂ ಇರಬೇಕು; ನಾವು ಈ ಬಿಲವನ್ನು ಹೊಕ್ಕುಹೋಗಿ ನಮ್ಮ ತೃಷೆಯನ್ನು ಪರಿಹರಿಸಿಕೊಂಡು ಸೀತಾದೇವಿಯನ್ನು ಅರಸಿಕೊಂಡು ಬರೋಣ" ಎಂದು ನುಡಿದನು.

ಆ ಬಳಿಕ ಕಪಿನಾಯಕರು ಆತನನ್ನು ಕೂಡಿಕೊಂಡು ಚಂದ್ರಸೂರ್ಯರ ಪ್ರಕಾಶವಿಲ್ಲದೆ ಭಯಂಕರವಾಗಿದ್ದ ಆ ಬಿಲವನ್ನು ಹೊಕ್ಕು ಅಲ್ಲಿದ್ದ ಸಿಂಹಶಾರ್ದೂಲಾದಿ ಮೃಗಗಳನ್ನೂ ಮಹತ್ತಾದ ಪಕ್ಷಿಗಳನ್ನೂ ಹೊರಡಿಸುತ ಅಂಧಕಾರದಿಂದ ಒಬ್ಬರನ್ನೊಬ್ಬರು ಕಾಣದೆ ಭಯಪಟ್ಟು ವಾಯುದೇವನು ಸಂಚರಿಸುವಂತೆ ಕೆಲವುದೂರ ಹೋಗಿ ಅತ್ಯಂತ ಪ್ರಕಾಶಮಾನವಾಗಿ ಬೆಳಗುತ ರಮಣೀಯವಾಗಿದ್ದ ಒಂದು ದೇಶವನ್ನು ಕಂಡು ನಾನಾಪ್ರಕಾರವಾದ ಫಲಗಳುಳ್ಳ ವೃಕ್ಷಗಳನ್ನು ನೋಡಿ ತೃಷೆಯಿಂದ ಕಂಗೆಟ್ಟು ಧಾತುಗುಂದಿ ಒಬ್ಬರನ್ನೊಬ್ಬರು ತಕ್ಕೈಸಿಕೊಂಡು ಉದಕವನ್ನರಸಿಕೊಂಡು ಕೆಲವುಹೊತ್ತು ಸಂಚರಿಸಿ ಮತ್ತೂ ಕಂಗೆಟ್ಟು ತಮ್ಮ ಜೀವಗಳಲ್ಲಿ ಆಶೆಯನ್ನು ತೊರೆದು ಒಂದು ಕಡೆಯಲ್ಲಿ ಪುಂಜಭೂತವಾದ ತೇಜಸ್ಸಿನ ರಾಶಿಯಂತೆಯೂ ಯಜ್ಞಪುರುಷನಿಂದ ಅಂಧಕಾರವು ತೊಲಗಿ ಹೋಗುವ ಮರ್ಯಾದೆಯಲ್ಲಿ ಪ್ರಕಾಶಮಾನವಾಗಿದ್ದ ಒಂದು ಪ್ರದೇಶವನ್ನು ಕಂಡು ಸಮವಾಗಿ ಸುವರ್ಣಮಯವಾಗಿ ಪುಷ್ಪಿತವಾದ ಸುರಹೊನ್ನೆ ಕದ್ದಾಳೆ ಬಕುಳ ಕಡಬ ಸಂಪಿಗೆ ಮೊದಲಾದ ವೃಕ್ಷಗಳುಳ್ಳದ್ದಾಗಿ ಕೆಂಪಾಗಿ ನಾನಾವರ್ಣವಾದ ಪುಷ್ಪಗಳಿಂದ ಇಟ್ಟಣಿಸಿ ಸುವರ್ಣಮಯವಾದ ಕಾಂತಿಯುಳ್ಳ ವೈಡೂರ್ಯರತ್ನದ ಜಗಲಿಗಳಿಂದ

ಬಾಲಸೂರ್ಯನಂತೆ ಒಪ್ಪುತ್ತಿದ್ದ ವೃಕ್ಷಗಳೂ ಲತೆಗಳೂ ಉಳ್ಳದ್ದಾಗಿ ವೈಡೂರ್ಯಗಳ ಕಾಂತಿಯುಳ್ಳ ಕಮಲಗಳಿಂದಲೂ ಇಂದ್ರನೀಲ ರತ್ನದಂತೆ ಕಾಂತಿಯುಳ್ಳ ಕನ್ನೈದಿಲೆ ಪುಷ್ಪಗಳಿಂದಲೂ ಪಕ್ಷಿಗಳಿಂದಲೂ ಮನೋಹರವಾದ ಕೊಳಗಳುಳ್ಳದ್ದಾಗಿ ಸುವರ್ಣಮಯವಾದ ಉದ್ಯಾನವನಗಳುಳ್ಳದ್ದಾಗಿ ಮುತ್ತಿನ ಜಾಲಾಂದರಗಳುಳ್ಳದ್ದಾಗಿ ಸುವರ್ಣಮಯವಾದ ಗವಾಕ್ಷಗಳುಳ್ಳ ಒಂದು ಅರಮನೆಯನ್ನು ಕಂಡರು ; ಆ ಅರಮನೆಯ ಬಾಗಲುಗಳಲ್ಲಿ ಹವಳದ ಮಣಿಗೆ ಸಮಾನವಾದ ಕಾಂತಿಯುಳ್ಳ ಫಲಪುಷ್ಪಗಳಿಂದ ಇಟ್ಟಣಿಸಿದ ವೃಕ್ಷಗಳಲ್ಲಿ ಸುವರ್ಣಮಯವಾದ ತುಂಬಿಗಳು ಸಂತತವು ಝೇಂಕಾರಮಾಡುತ್ತಿದ್ದವು ; ಅಲ್ಲಲ್ಲಿ ಸುವರ್ಣಮಯವಾಗಿ ರಜತಮಯವಾಗಿ ರತ್ನಮಯವಾದ ಮಂಚಗಳಿದ್ದವು ; ಮತ್ತು ಅಲ್ಲಿದ್ದ ಸುವರ್ಣಮಯವಾದ ಒಂದು ಕೊಳದ ನಿರ್ಮಲೋದಕದಲ್ಲಿ ಒಂದು ಪಟ್ಟಣವಿತ್ತು ; ಅಲ್ಲಿ ಸ್ವರ್ಣಮಯವಾಗಿ ರಜತಮಯವಾಗಿ ಕಾಂಶ್ಯಮಯವಾದ ಹರಿವಾಣದ ರಾಶಿಗಳೂ ದಿವ್ಯಗಂಧಗಳುಳ್ಳ ಕರೀ ಅಗಿಲು ಬಿಳಿ ಅಗಿಲು ಶ್ರೀಗಂಧಗಳ ಕೊರಡುಗಳೂ ಅಲ್ಲಲ್ಲಿ ಶುಚಿಯಾಗಿ ಸ್ವಾದುವಾದ ಕಂದಮೂಲ ಫಲಗಳೂ ಪಾನಯೋಗ್ಯವಾದ ಜೇನುತುಪ್ಪ ಮೊದಲಾದ ಪಾನದ್ರವ್ಯಗಳೂ ಪರಿಪೂರ್ಣವಾದ ಸುವರ್ಣದ ಕೋಡುಗಲ್ಲುಗಳೂ ರತ್ನಕಂಬಳಿಗಳೂ ಮೃದುವಾದ ಕೃಷ್ಣಾಜಿನಗಳೂ ಚರ್ಮದ ರಾಶಿಗಳೂ ಇದ್ದವು ; ಅಂಥಾ ಸ್ಥಳದಲ್ಲಿ ನಾರುಶೀರೆಯನ್ನುಟ್ಟು ಕೃಷ್ಣಾಜಿನವನ್ನು ಹೊದ್ದುಕೊಂಡು ಆಹಾರನಿಯಮವನ್ನು ಮಾಡಿಕೊಂಡು ತನ್ನ ತಪೋಜ್ವಾಲೆಯಿಂದ ಪ್ರಜ್ವಲಿಸುತ್ತಿದ್ದ ಒಬ್ಬ ತಪಸ್ವಿನಿಯಾದ ಸ್ತ್ರೀಯನ್ನು ದೂರದಲ್ಲಿ ಕಂಡು ಆಶ್ಚರ್ಯಪಟ್ಟು ಹನುಮಂತನು ಮೊದಲಾದ ಕಪಿನಾಯಕರು ದೂರದಲ್ಲೇ ನಿಂತುಕೊಂಡು ಆಕೆಯ ತಪಸ್ಸಾಮರ್ಥ್ಯವನ್ನು ನೋಡಿ ಅತಿ ಹರ್ಷಪಟ್ಟರು.

## ೫೧ ನೇ ಅಧ್ಯಾಯ.

### ಸ್ವಯಂಪ್ರಭೆಯು ಹನುಮಂತಾದಿಗಳಿಗೆ ಆತಿಥ್ಯವನ್ನು ಕೊಟ್ಟದ್ದು.

ಆ ಬಳಿಕ ಹನುಮಂತನು ನಾರುಶೀರೆಯನ್ನುಟ್ಟು ಕೃಷ್ಣಾಜಿನವನ್ನು ಹೊದ್ದು ಆಹಾರನಿಯಮವನ್ನು ಮಾಡಿಕೊಂಡು ತಪಸ್ಸನ್ನು ಮಾಡಿಕೊಂಡಿದ್ದ ಸ್ವಯಂಪ್ರಭೆಯೆಂಬ ಆ ಸ್ತ್ರೀಯನ್ನು ಕುರಿತು " ಎಲೌ ಸ್ವಯಂಪ್ರಭೆಯೇ ಕೇಳು : ನಾನೂ ಈ ಕಪಿನಾಯಕಮಕ್ಕಳೂ ಹಸಿವು ತೃಷೆಗಳಿಂದ ಕಂಗೆಟ್ಟು ಈ ಬಿಲವನ್ನು ಹೊಕ್ಕು ಬಂದೆವು ; ಈಗ ನಿನ್ನ ಸನ್ನಿಧಾನದಲ್ಲಿರುವ ಅತ್ಯದ್ಭುತವಾದ ಭೋಗವಸ್ತುಗಳನ್ನು ಕಂಡು ಅವುಗಳಲ್ಲಿ ಇಚ್ಛೆಯುಳ್ಳವರಾಗಿದ್ದೇವೆ ; ಈ ಸ್ವಯಂಪ್ರಕಾಶದೇಶದಲ್ಲಿ ಬಾಲಸೂರ್ಯನ ಕಾಂತಿಯಂತೆ ಕಾಂತಿಯುಳ್ಳವಾಗಿ ಸುವರ್ಣಮಯವಾದ ವೃಕ್ಷಗಳಿವೆ ; ಈ ವನದಲ್ಲಿ ಮಹಾ ಶುಚಿಯಾಗಿ ರಮಣೀಯವಾದ ಕಂದಮೂಲ ಫಲಗಳಿವೆ ; ಎಲ್ಲಿನೋಡಿದರೂ ಬೆಳ್ಳೀಮಯವಾದ ಮನೆಗಳೂ ಸುವರ್ಣಮಯವಾದ ವಿಮಾನಗಳೂ ರತ್ನಮಯವಾದ ಜಾಳಾಂದ್ರಗಳೂ ಅಪರಂಜಿಮಯವಾದ ಗವಾಕ್ಷಗಳೂ ಉಳ್ಳ ಈ ಅರಮನೆಯ ಬಾಗಲುಗಳಲ್ಲಿ ಕುಸುಮಿತವಾದ ಪುಷ್ಪಗಳಿಂದಲೂ ಪಕ್ವವಾಗಿ ಪರಿಮಳವುಳ್ಳ ಫಲಗಳಿಂದಲೂ ಇಟ್ಟಣಿಸಿದಂಥಾ ಸುವರ್ಣಮಯವಾದ ವೃಕ್ಷಗಳಿವೆ ; ನಿರ್ಮಲೋದಕವುಳ್ಳ ಈ ಕೊಳಗಳಲ್ಲಿ ಸುವರ್ಣಮಯವಾದ ಹೊಂದಾವರೇ ಕಮಲಗಳಿರುವದಲ್ಲದೆ ಸುವರ್ಣಮಯವಾದ ಆಮೆಗಳೂ ಮೀನುಗಳೂ ಸಂಚರಿಸುತ್ತಿವೆ ; ಈ ಅರಮನೆಯು ಯಾರದು ? ಇದು ನಿನ್ನ ತಪಸ್ಸಾಮರ್ಥ್ಯದಿಂದ ಉಂಟಾದದ್ದೊ—ಅಲ್ಲದಿದ್ದರೆ ಮತ್ತೊಬ್ಬರ ತಪಸ್ಸಿನ ಫಲವೋ ? ಈ ವರ್ತಮಾನವನ್ನು ಅರಿಯದವರಾದ ನಮಗೆ ಯಥಾರ್ಥವಾಗಿ ತಿಳುಹಿಸು " ಎಂದು ಕೇಳಿದನು.

ಸ್ವಯಂಪ್ರಭೆಯು ಹನುಮಂತನನ್ನು ಕುರಿತು ದಯೆಯಿಂದ " ಎಲೈ ಹನುಮಂತನೇ ಕೇಳು : ಪೂರ್ವದಲ್ಲಿ ಮಾಯಾವಿಯಾದ ಮಯನೆಂಬ ದಾನವಸಿಲ್ಪಿಯು ತನ್ನ ಮಾಯಾಚಾತುರ್ಯದಿಂದ ಸುವರ್ಣಮಯವಾದ ಈ ವನವನ್ನು ನಿರ್ಮಿಸಿದನು ; ಮಯನು ಸಮಸ್ತ ದಾನವರಿಗೂ ಗೃಹವನ್ನು ನಿರ್ಮಾಣಮಾಡುವದರಿಂದ ದಾನವಸಿಲ್ಪಿಯೆ

ನಿಸಿಕೊಂಡನು; ಆತನು ತನ್ನ ಸಾಮರ್ಥ್ಯದಿಂದ ಈ ವನವನ್ನು ನಿರ್ಮಿಸಿದನಲ್ಲದೆ ಉಳಿದ ದಾನವರಹಾಗೆ ಬ್ರಹ್ಮದೇವರನ್ನು ಕುರಿತು ತಪಸ್ಸುಮಾಡಿ ಇಂಥಾ ಸದ್ಗತಿಯನ್ನು ಕೊಡುವಂಥ ಅರಮನೆಯನ್ನು ನಿರ್ಮಿಸಲಿಲ್ಲ; ಆತನು ಅತ್ಯಂತ ಮನೋಹರವಾದ ಈ ವನವನ್ನೂ ಅರಮನೆಯನ್ನೂ ನಿರ್ಮಿಸಿ ಇಲ್ಲಿ ಹೇಮಾಯೆ ಎಂಬ ಅಪ್ಸರಸ್ತ್ರೀಯೊಡನೆ ರಮಿಸಿಕೊಂಡು ಕೆಲವುಕಾಲವಿದ್ದನು; ಆಮೇಲೆ ಆತನ ಸಂಪತ್ತನ್ನು ಸಹಿಸಲಾರದೆ ದೇವೇಂದ್ರನು ತನ್ನ ಸಿಡಿಲಾಯುಧವನ್ನು ತೆಗೆದುಕೊಂಡು ಆತನನ್ನು ಕೊಂದನು; ಆಗ ಬ್ರಹ್ಮದೇವನು ಹೇಮಾಯೆ ಎಂಬ ಅಪ್ಸರಸ್ತ್ರೀಗೆ ಸುವರ್ಣಮಯವಾದ ಈ ಗೃಹವನ್ನೂ ದಿವ್ಯವಾದ ಭೋಗವನ್ನೂ ಕೊಟ್ಟನು; ನಾನು ಮಹಾಮೇರು ಪರ್ವತದಲ್ಲಿರುವ ಮೇರುಸಾವರ್ಣಿ ಎಂಬ ಋಷೀಶ್ವರನ ಮಗಳು; ನನ್ನ ಹೆಸರು ಸ್ವಯಂಪ್ರಭೆಯು; ನಾನು ಹೇಮಾಯೆಯ ಮನೆಯನ್ನು ಕಾದುಕೊಂಡಿದ್ದೇನೆ; ಆ ದೇವಸ್ತ್ರೀಯು ನನ್ನ ಪ್ರಿಯಸಖಿಯೂ ನೃತ್ಯಗೀತಗಳಲ್ಲಿ ಮಹಾ ಪ್ರೌಢೆಯೂ ಆಗಿರುವವಳಲ್ಲದೆ ಆಕೆಯು ನನಗೆ ವರವನ್ನೂ ಕೊಟ್ಟಳಾದಕಾರಣ ನಾನು ಈ ಮನೆಯನ್ನು ಕಾದುಕೊಂಡಿದ್ದೇನೆ! ಎಲೈ ಕಪೀಶ್ವರನೆ, ನೀನು ಇಲ್ಲಿಗೆ ಬಂದ ಕಾರಣವೇನು! ನಿನ್ನ ಕಾರ್ಯವೇನು? ಈ ವನವನ್ನು ನೀವು ಹ್ಯಾಗೆ ಕಂಡಿರಿ! ಈ ವನವನ್ನು ಹೊಕ್ಕುಬರುವದು ಪ್ರಾಣಿಗಳಿಗೆ ದುರ್ಘಟವಾಗಿರುವದು; ಯಾವ ಪ್ರಕಾರದಿಂದಾದರೂ ನೀವು ಬಂದದ್ದು ಒಳ್ಳೇದಾಯಿತು; ನೀವು ಶುಚಿಯಾಗಿ ದಿವ್ಯಗಂಧವುಳ್ಳ ಕಂದಮೂಲ ಫಲಗಳನ್ನು ಆಹಾರಮಾಡಿ ಅಮೃತೋಪಮಾನವಾದ ಉದಕವನ್ನು ಪಾನಮಾಡಿ ದಾರೀ ಬಳಲಿಕೆಯನ್ನು ಪರಿಹಾರಮಾಡಿಕೊಂಡು ನೀವು ಬಂದ ವೃತ್ತಾಂತವನ್ನು ಸವಿಸ್ತಾರವಾಗಿ ಹೇಳಿ" ಅಂದಳು.

## ೫೦ನೇ ಅಧ್ಯಾಯ.

### ಸ್ವಯಂಪ್ರಭೆಯು ಹನುಮಂತಾದಿಗಳನ್ನು ಬಿಲದಿಂದ ಹೊರಗೆ ತಂದು ಬಿಟ್ಟದ್ದು.

ಈ ಮರ್ಯಾದೆಯಲ್ಲಿ ನುಡಿದು ಧರ್ಮರಹಸ್ಯವನ್ನು ಬಲ್ಲ ಸ್ವಯಂಪ್ರಭೆಯು ಆ ಕಪಿನಾಯಕರು ಫಲಹಾರವನ್ನು ಮಾಡಿದ ಬಳಿಕ ಅವರನ್ನು ಕುರಿತು "ಎಲೈ ಕಪಿನಾಯಕರುಗಳಿರಾ, ನಿಮ್ಮ ಬಳಲಿಕೆಯು ಪರಿಹಾರವಾದ ಪಕ್ಷದಲ್ಲಿ ನೀವು ಬಂದ ವೃತ್ತಾಂತವನ್ನು ಸವಿಸ್ತಾರವಾಗಿ ಕೇಳಬೇಕೆಂದು ನನ್ನ ಮನಸ್ಸಿನಲ್ಲಿ ಮಹಾಲವಲವಿಕೆಯಾಗಿದೆ; ನಿಮ್ಮ ಕಾರ್ಯಸ್ಥಿತಿಯನ್ನು ಸವಿಸ್ತಾರವಾಗಿ ಹೇಳಿ" ಅಂದಳು.

ಆ ಮಾತನ್ನು ಕೇಳಿ ಹನುಮಂತನು ಆಕೆಯನ್ನು ಕುರಿತು ತಮ್ಮ ವೃತ್ತಾಂತವನ್ನು ಹೇಳುತ "ಎಲೌ ಸ್ವಯಂಪ್ರಭೆಯೇ ಕೇಳು: ಸಮಸ್ತ ಲೋಕಕ್ಕೂ ಒಡೆಯನಾಗಿ ದೇವೇಂದ್ರ ವರುಣರಿಗೆ ಸಮಾನನಾಗಿ ಅತ್ಯಂತ ಐಶ್ವರ್ಯವಂತನಾದ ಶ್ರೀರಾಮನು ತನ್ನ ತಮ್ಮನಾದ ಲಕ್ಷ್ಮಣನನ್ನೂ ತನ್ನ ಪಟ್ಟದ ರಾಣಿಯಾದ ಸೀತಾದೇವಿಯನ್ನೂ ಕರೆದುಕೊಂಡು ದಂಡಕಾರಣ್ಯಕ್ಕೆ ಬಂದನು; ಆ ಅರಣ್ಯದಲ್ಲಿರುವ ಜನಸ್ಥಾನದಲ್ಲಿ ಆತನ ಸ್ತ್ರೀಯಾದ ಸೀತಾದೇವಿಯನ್ನು ಮೋಸದಿಂದ ರಾವಣನು ಅಪಹರಿಸಿಕೊಂಡು ಹೋದನು; ನಾವೆಲ್ಲರೂ ಆ ದೇವಿಯನ್ನರಸಿಕೊಂಡು ಬಂದು ಈ ತೆಂಕಣದಿಕ್ಕಿನ ಸಮಸ್ತ ಸ್ಥಾನಗಳಲ್ಲಿಯೂ ಕಾಣದೆ ಹಸಿವು ತೃಷೆಗಳಿಂದ ಕಂಗೆಟ್ಟು ಬಂದು ಮರದಡಿಯನ್ನು ಸೇರಿ ಸೀತಾದೇವಿಯನ್ನು ಕಾಣದ್ದರಿಂದ ಚಿಂತಾಸಮುದ್ರದಲ್ಲಿ ಮುಳುಗಿ ಮುಖಕಾಂತಿ ಗುಂದಿ ಧ್ಯಾನಮಾಡುತ ನಾನಾದಿಕ್ಕುಗಳನ್ನೂ ನೋಡುತ ಈ ಬಿಲದ್ವಾರವನ್ನು ಕಂಡೆವು; ಈ ಬಿಲದ್ವಾರವು ಅನೇಕ ವೃಕ್ಷಗಳಿಂದಲೂ ಬಳ್ಳಿಗಳಿಂದಲೂ ಕಾಚಿಕೊಂಡು ಅಂಧಕಾರವು ಕವಿಯಲ್ಪಟ್ಟಿತ್ತು; ಈ ಗುಹೆಯ ಬಾಗಲಿಂದ ಹಂಸ ಚಕ್ರವಾಕ ಸಾರಸ ಕೊಳರ್ವಕ್ಕಿ ಮೊದಲಾದ ಪಕ್ಷಿಗಳು ಗರಿನೆನೆದು ಬರುತ್ತಿರಲು ಅವುಗಳನ್ನು ಕಂಡು ಈ ಬಿಲದಲ್ಲಿ ಉದಕವಿರಬಹುದೆಂದೆಣಿಸಿ ನಾವು ಈ ಬಿಲವನ್ನು ಹೊಕ್ಕು ಅಂಧಕಾರದಲ್ಲಿ ಬಿದ್ದು ಒಬ್ಬರನ್ನೊಬ್ಬರು ಕೈಗಳನ್ನಿಡಿದುಕೊಂಡು ಅತಿ ಪ್ರಯಾಸದಿಂದ ಈ ಸ್ವಯಂಪ್ರಕಾಶದೇಶಕ್ಕೆ ಬಂದು ಧರ್ಮಸ್ವರೂಪಳಾದ ನಿನ್ನನ್ನು

ಕಂಡು ನೀನು ಕೊಟ್ಟ ಕಂದಮೂಲ ಫಲಾಹಾರಗಳಿಂದ ಹಸಿವು ತೃಷೆಗಳನ್ನು ತೀರಿಸಿಕೊಂಡೆವು ; ನೀನು ಹಸಿವು ತೃಷೆಗಳಿಂದ ಕಂಗೆಟ್ಟ ಶರೀರವನ್ನು ಬಿಡುತ್ತಿದ್ದ ನಮ್ಮನ್ನು ಕೃಪೆಯಿಂದ ರಕ್ಷಿಸಿದೆ ! ಎಲೌ ಸ್ವಯಂಪ್ರಭೆಯೆ, ನಿನಗೆ ನಾವು ಮಾಡುವ ಪ್ರತ್ಯುಪಕಾರವೇನು ಹೇಳು ” ಎಂದು ಕೇಳಿದನು.

ಆ ಮಾತನ್ನು ಕೇಳಿ ಸ್ವಯಂಪ್ರಭೆಯು “ ಎಲೈ ಹನುಮಂತನೆ, ಬಲವಂತರಾದ ನಿಮಗೆ ಆತಿಥ್ಯವನ್ನುಮಾಡಿ ನಾನು ಸುಪ್ರೀತಳಾದೆನು ; ಧರ್ಮಾಚರಣೆಯನ್ನು ಮಾಡಿಕೊಂಡಿರುವ ನನಗೆ ಮತ್ತೊಬ್ಬರಿಂದ ಪಡೆಯತಕ್ಕ ಕಾರ್ಯವಿಲ್ಲ ” ಎಂದು ನುಡಿದಳು.

ಹನುಮಂತನು “ ಎಲೌ ಸ್ವಯಂಪ್ರಭೆಯೆ, ನಾವೆಲ್ಲರೂ ಧರ್ಮಚಾರಿಯಾದ ನಿನ್ನ ಮರೆಹೊಕ್ಕೆವು ; ಸುಗ್ರೀವನು ಒಂದು ತಿಂಗಳೊಳಗೆ ಬರಹೇಳಿ ನಮಗೆ ಕಟ್ಟುಮಾಡಿ ಕಳುಹಿಸಿದನು ; ನಮಗೆ ಆ ಗಡುವು ಮೀರಿಬಂತು ; ಈ ಬಿಲವನ್ನು ದಾಟಿಸಿ ಸುಗ್ರೀವನ ಭಯದಿಂದ ಕಂಗೆಟ್ಟಿರುವ ನಮ್ಮನ್ನು ರಕ್ಷಿಸು ; ನಾವು ಇಲ್ಲಿ ಬಂದದ್ದರಿಂದ ಕಾರ್ಯವಿಳಂಬವಾಗಿ ಪ್ರಾಣಾತೀತವಾದ ದಂಡನೆಯು ಬಂತು ” ಎಂದು ನುಡಿದನು.

ಆ ಮಾತನ್ನು ಕೇಳಿ ಸ್ವಯಂಪ್ರಭೆಯು ಹನುಮಂತನನ್ನು ಕುರಿತು “ ಎಲೈ ಹನುಮಂತನೆ, ಈ ಬಿಲಕ್ಕೆ ಬಂದು ಪ್ರಾಣಿಯಾದರೂ ಬರುವದಿಲ್ಲ ; ಬಂದ ಪಕ್ಷದಲ್ಲಿ ಜೀವಸಹಿತವಾಗಿ ತಿರುಗಿ ಹೋಗುವದಿಲ್ಲ ; ಹಾಗಾದರೂ ನಿಮ್ಮಮೇಲಣ ಕೃಪೆಯಿಂದ ನನ್ನ ತಪೋವನದಿಂದ ನಿಮ್ಮೆಲ್ಲರನ್ನು ಈ ಬಿಲದಿಂದ ದಾಟಿಸುತ್ತೇನೆ ; ನೀವೆಲ್ಲರೂ ಕಣ್ಣುಗಳನ್ನು ಮುಚ್ಚಿಕೊಳ್ಳಿ ; ಯಾರಿಗೂ ಕಣ್ಣುಮುಚ್ಚದೆ ಈ ಬಿಲದಿಂದ ಹೊರಡುವದಕ್ಕೆ ಶಕ್ಯವಲ್ಲ ” ಎಂದು ನುಡಿದಳು.

ಆ ಮಾತನ್ನು ಕೇಳಿ ಹನುಮಂತನು ಮೊದಲಾದ ಕಪಿನಾಯಕರು ತಮ್ಮ ಕೋಮಲವಾದ ಬೆರಳುಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡರು ; ಆಮೇಲೆ ಕಣ್ಣುಮುಚ್ಚಿಕೊಂಡಿದ್ದ ಆ ಕಪಿನಾಯಕರನ್ನು ಧರ್ಮಚಾರಿಯಾಗಿ ತಪಸ್ವಿನಿಯಾದ ಸ್ವಯಂಪ್ರಭೆಯು ಕಣ್ಣುಮುಚ್ಚಿ ತೆರೆಯುವಹೊತ್ತಿನೊಳಗಾಗಿ ಬಿಲದಿಂದ ಹೊರಗೆ ಕರೆತಂದು ಅವರನ್ನುಸಂತವಿಟ್ಟು ಅವರನ್ನು ಕುರಿತು “ ಎಲೈ ಕಪಿನಾಯಕರುಗಳಿರಾ, ನೀವಿನ್ನು ಕಣ್ಣುತೆರೆದು ನೋಡಿ ; ಇದು ವಿಂಧ್ಯಪರ್ವತವು ; ಈ ಪರ್ವತವು ನಾನಾವೃಕ್ಷಗಳಿಂದಲೂ ಬಳ್ಳಿಗಳಿಂದಲೂ ಅತಿ ರಮಣೀಯವಾಗಿದೆ ! ಇದು ಮಾಲ್ಯವಂತವು ; ಇದು ತೆಂಕಣ ಸಮುದ್ರವು ; ಇನ್ನು ನೀವು ನಿಮ್ಮ ಮನಸ್ಸುಬಂದಬಳಿಗೆ ಹೋಗಿ ಸುಖವಾಗಿರಿ ! ನಾನು ಸ್ವಯಂಪ್ರಕಾಶದೇಶಕ್ಕೆ ಹೋಗುತ್ತೇನೆ ” ಎಂದು ಸ್ವಯಂಪ್ರಕಾಶದೇಶಕ್ಕೆ ಹೋದಳು.

## ೫೨ನೇ ಅಧ್ಯಾಯ.

### ಅಂಗದಾದಿಗಳು ಸೀತಾದೇವಿಯನ್ನು ಕಾಣದೆ ಚಿಂತಿಸಿದ್ದು.

ಆಮೇಲೆ ಹನುಮಂತನು ಮೊದಲಾದ ಕಪಿನಾಯಕರು ನಾನಾವನ ಭೂಮಿಗಳಿಂದ ಸುತ್ತುವರಿಯಲ್ಪಟ್ಟದ್ದಾಗಿ ಆಳವರಿಯದ್ದಾಗಿ ಭಯಂಕರವಾಗಿ ಅಲ್ಲೋಲಕಲ್ಲೋಲವಾದ ತೆರೆಗಳಿಂದ ಮೆರೆಯುತಿದ್ದ ವರುಣನ ಆವಾಸಸ್ಥಾನವಾದ ಸಮುದ್ರವನ್ನು ಕಂಡು ಮೊದಲು ಮಯನೆಂಬ ದೇವಶಿಲ್ಪಿಯಿಂದ ನಿರ್ಮಿಸಲ್ಪಟ್ಟ ಸ್ವಯಂಪ್ರಕಾಶದೇಶವನ್ನು ಹೊಕ್ಕುಹೋದ್ದರಿಂದ ಸುಗ್ರೀವನು ಒಂದು ತಿಂಗಳೊಳಗಾಗಿ ಬರಬೇಕೆಂದು ಕಟ್ಟಳೆಮಾಡಿದ್ದನ್ನು ಸ್ಮರಿಸಿ ಆ ಕಾಲದ ಮಿತಿಯು ತಪ್ಪಿದ್ದರಿಂದ ಆತನಿಂದ ಏನು ಉಪದ್ರವ ಬರುವದೋ ಎಂದು ಚಿಂತಿಸುತ ಆ ವಿಂಧ್ಯಪರ್ವತದ ತಪ್ಪಲಲ್ಲಿ ಪುಷ್ಪಿತವಾದ ವನದಲ್ಲಿ ಕುಸುಮಿತವಾದ ಅದುರಗಂಬೀ ಗಿಡಗಳನ್ನು ನೋಡಿ ಆ ಗಿಡಗಳು ವಸಂತಕಾಲ ಬರದೇ ಕುಸುಮಿತವಾಗವಾದ್ದರಿಂದ ವಸಂತಕಾಲವು ಬಂತೆಂದೂ ಮುಂದೆ ಸುಗ್ರೀವನ ದಂಡದಿಂದ ಬದುಕಿರು

ವದಕ್ಕಿಲ್ಲವೆಂದೂ ಒಬ್ಬರೊಬ್ಬರಿಗೊಬ್ಬರು ಹೇಳಿಕೊಳ್ಳುತ ಕಂಗೆಟ್ಟು ಮೂರ್ಛಾಗತರಾಗಿ ಬಿದ್ದರು! ಆ ಸಮಯದಲ್ಲಿ ಸಿಂಹದ ಹೆಕ್ಕತ್ತಿನಂತೆಯೂ ವೃಷಭದ ಹೆಕ್ಕತ್ತಿನಂತೆಯೂ ಹೆಕ್ಕತ್ತುಳ್ಳವನಾಗಿ ಘನಗಾತ್ರವಾಗಿ ನಿಡಿದಾಗಿ ಕ್ರಮವರ್ತುಳವಾದ ಭುಜಗಳುಳ್ಳವನಾಗಿ ಮಹಾ ಪ್ರಾಜ್ಞನಾಗಿ ಚಿಕ್ಕರಾಯನಾದ ಅಂಗದಕುಮಾರನು ವೃದ್ಧರಾಗಿ ಭಯದಿಂದ ಮೂರ್ಛಾಗತರಾದ ಆ ಕಪಿನಾಯಕರನ್ನು ಕುರಿತು ಅತ್ಯಂತ ಮೃದುನುಡಿಯಿಂದ "ಎಲೈ ಕಪಿನಾಯಕರುಗಳಿರ, ನಾವೆಲ್ಲರು ಕಪೀಶ್ವರನಾದ ಸುಗ್ರೀವನ ಆಜ್ಞೆಯಿಂದ ಸೀತಾದೇವಿಯನ್ನರಸುವದಕ್ಕೆ ತೆಂಕಣದಿಕ್ಕಿಗೆ ಬಂದು ಅನೇಕ ಸ್ಥಳಗಳಲ್ಲಿ ಅರಸಿ ಕಾಣದೆ ಆ ಬಿಲವನ್ನು ಹೊಕ್ಕು ನೋಡುವದರೊಳಗಾಗಿ ಸುಗ್ರೀವನು ಮಿತಿಮಾಡಿದ ಒಂದು ತಿಂಗಳು ತುಂಬಿತು ; ನೀವು ಅದನ್ನು ವಿಚಾರಿಸಿ ನೋಡೀ ; ನಾವು ಆಶ್ವೀಜಮಾಸದ ಪ್ರಥಮದಿವಸದಲ್ಲಿ ಹೊರಟುಬಂದೆವು ; ಆ ತಿಂಗಳು ತುಂಬಿತು ; ನೀವೆಲ್ಲರು ನೀತಿಮಾರ್ಗವನ್ನು ಬಲ್ಲವರು ; ಮುಂದಣ ಕಾರ್ಯಸ್ಥಿತಿಗೆ ತಕ್ಕ ಆಲೋಚನೆಯನ್ನು ಕಾಣೆ ; ನೀವು ಯಾವಾಗಲು ಒಡೆಯನಿಗೆ ಹಿತವಾದ ಕಾರ್ಯದಲ್ಲಿ ಪ್ರೀತಿಯುಳ್ಳವರು ; ಅದಲ್ಲದೆ ಎಂಥಾ ಕಾರ್ಯದಲ್ಲಿಯು ನಿಪುಣರೆಂದು ಲೋಕದಲ್ಲಿ ಪ್ರಸಿದ್ಧಿಯನ್ನು ಪಡೆದವರು; ಅಂಥಾ ನೀವು ನನ್ನನ್ನು ಮುಂದಿಟ್ಟುಕೊಂಡು ಸುಗ್ರೀವನಿಂದ ಕಳುಹಿಸಿಕೊಂಡು ಬಂದಮೇಲೆ ಬಂದ ಕಾರ್ಯವನ್ನು ಸಾಧ್ಯಮಾಡದ ಮೇಲೆ ನಮ್ಮ ಶರೀರಗಳನ್ನು ತೊರೆದುಕೊಳ್ಳುವದೇ ಕಾರ್ಯವು ; ಈ ಅರ್ಥದಲ್ಲಿ ಸಂಶಯವಿಲ್ಲ ; ಸುಗ್ರೀವನು ಬಂದು ಕಾರ್ಯವನ್ನು ಇಷ್ಟುದಿನಗಳೊಳಗಾಗಿ ಮಾಡಿಕೊಂಡು ಬರಬೇಕೆಂದು ಕಟ್ಟಳೆಮಾಡಿ ಕಳುಹಿಸಿದರೆ ಆ ಕಾಲವನ್ನು ಮೀರಿ ಲೋಕದಲ್ಲಿ ಬದುಕುವವರ್ಯಾರು ! ಸುಗ್ರೀವನು ಸ್ವಭಾವದಿಂದ ಮಹಾ ಕ್ರೂರನು ; ಅದರಮೇಲೆ ನಮಗೆಲ್ಲರಿಗೂ ಒಡೆಯನು ; ಆತನ ಕಾರ್ಯವನ್ನು ಮಾಡದಿದ್ದರೆ ನಮಗೆ ಶರೀರವನ್ನು ಬಿಡುವದೇ ಕಾರ್ಯವು ; ನನಗೆ ಶ್ರೀರಾಮನು ಚಿಕ್ಕರಾಯಪಟ್ಟವನ್ನು ಕೊಟ್ಟನಲ್ಲದೆ ಸುಗ್ರೀವನು ಕೊಡಲಿಲ್ಲ ; ಸುಗ್ರೀವನು ಮೊದಲೇ ನನ್ನಲ್ಲಿ ವೈರವುಳ್ಳವನು ; ಈಗ ಆತನ ಕಾರ್ಯವನ್ನು ಮಾಡದೆ ತಿರಿಗಿ ಹೋದೆನಾದರೆ ನನ್ನನ್ನು ಆಜ್ಞೆಮಾಡಿಸುವನು; ಈ ಅರ್ಥದಲ್ಲಿ ಸಂಶಯವಿಲ್ಲ ; ಸುಗ್ರೀವನು ನನಗೆ ಪ್ರಾಣಾಂತ್ಯವಾದ ಆಜ್ಞೆಯನ್ನು ಮಾಡಿದರೆ ನನ್ನ ದುಃಖವನ್ನು ನೋಡುವಂಥಾ ನನ್ನ ಮಿತ್ರರಿಗೆ ದುಃಖವುಂಟಾಗುವದಾದ್ದರಿಂದ ನಾನು ಈ ಪುಣ್ಯಸ್ಥಳವಾದ ಸಮುದ್ರತೀರದಲ್ಲಿ ಶರೀರವನ್ನು ಬಿಡುವದೇ ಕಾರ್ಯವು" ಎಂದು ನುಡಿದನು.

ಆ ಮಾತನ್ನು ಕೇಳಿ ಹನುಮಂತನು ಮೊದಲಾದ ಕಪಿನಾಯಕರು ಅತಿ ದೈನ್ಯದಿಂದ ಅಂಗದಕುಮಾರನನ್ನು ಕುರಿತು "ಎಲೈ ಅಂಗದಕುಮಾರನೆ, ಸುಗ್ರೀವನು ಸ್ವಭಾವದಿಂದ ಮಹಾ ಕ್ರೂರಬುದ್ಧಿಯುಳ್ಳವನು ; ಮತ್ತೂ ಶ್ರೀರಾಮನಿಗೆ ಮಹಾ ಪ್ರಿಯಭಕ್ತನು ; ಆತನು ಹೇಳಿದ ಸಮಯವು ಮೀರಿತು ; ಸೀತಾದೇವಿಯನ್ನು ಕಾಣದೆ ನಾವು ಆತನ ಬಳಿಗೆ ಹೋದರೆ ಆತನು ಶ್ರೀರಾಮನಿಗೆ ತನ್ನ ವಿಶ್ವಾಸವನ್ನು ತೋರಿಸಬೇಕೆಂದು ನಮ್ಮನ್ನು ಕೊಲ್ಲಿಸುವನು ; ಈ ಅರ್ಥದಲ್ಲಿ ಸಂಶಯವಿಲ್ಲ ; ಲೋಕದಲ್ಲಿ ಅಪರಾಧವನ್ನು ಮಾಡಿದವರು ಒಡೆಯನ ಸಮೀಪಕ್ಕೆ ಹೋಗುವದು ಕಾರ್ಯವಲ್ಲ ; ನಾವು ಸಾಮಾನ್ಯಪುರುಷರಲ್ಲ ; ಆತನ ಪ್ರಧಾನರಾದ ಗುರಿಕಾರರು ; ನಾವು ಇಲ್ಲೇ ಇದ್ದು ಸೀತಾದೇವಿಯನ್ನರಸುವದಕ್ಕೆ ತಕ್ಕ ಕಾರ್ಯವನ್ನು ಕಾಣಬೇಕಲ್ಲದೆ ಸೀತಾದೇವಿಯನ್ನು ಕಾಣದೆ ಸುಮ್ಮನೆ ಹೋದರೆ ಯಮಲೋಕವನ್ನೈದುವೆವು ; ಈ ಅರ್ಥದಲ್ಲಿ ಸಂಶಯವಿಲ್ಲ" ಎಂದು ನುಡಿದರು.

ಆ ಮಾತನ್ನು ಕೇಳಿ ತಾರನು "ಎಲೈ ಕಪಿನಾಯಕರುಗಳಿರ, ನನ್ನದೊಂದು ಯೋಚನೆಯನ್ನು ಕೇಳಿ ನೀವು ದುಃಖವನ್ನು ಬಿಡೀ ; ದಾನವಶಿಲ್ಪಿಯಾದ ಮಯನಿಂದ ನಿರ್ಮಿಸಲ್ಪಟ್ಟು ಪ್ರಾಣಿಗಳಿಗೆ ಪ್ರವೇಶಮಾಡುವದಕ್ಕೆ ಅಸಾಧ್ಯವಾದ್ದಾಗಿ ಮನೋಹರವಾದ ವೃಕ್ಷಗಳೂ ಕಂದಮೂಲಫಲ ಸ್ವಾದೂದಕಗಳೂ ಉಳ್ಳ ಆ ಬಿಲವನ್ನು ಹೊಕ್ಕುಹೋಗಿ ಸುಖದಲ್ಲಿರೋಣ; ಈ ಬಿಲದಲ್ಲಿದ್ದರೆ ದೇವೇಂದ್ರನಿಂದಲಾದರೂ ಶ್ರೀರಾಮನಿಂದಲಾದರೂ ಸುಗ್ರೀವನಿಂದಲಾದರೂ ನಮಗೆ ಭಯವಿಲ್ಲ" ಎಂದು ನುಡಿದನು.

## ೫೪ನೇ ಅಧ್ಯಾಯ.

### ಹನುಮಂತನು ಅಂಗದನಿಗೆ ಬುದ್ಧಿ ಹೇಳಿದ್ದು.

ಆ ಬಳಿಕ ಹನುಮಂತನು ಅಂಗದಕುಮಾರನ ಬುದ್ಧಿಚಾತುರ್ಯಗಳನ್ನು ನೋಡಿ ಆತನಿಗೆ ಸರ್ವಥಾ ರಾಜ್ಯಲಕ್ಷ್ಮಿಯು ಕೈಸಾರಿದಳೆಂದು ನಿಶ್ಚಯಿಸಿಕೊಂಡು ಸನ್ಮಾರ್ಗ ವಿವೇಕವನ್ನು ಕೇಳಬೇಕೆಂಬ ಇಚ್ಛೆಯು ಬುದ್ಧಿಯನ್ನು ಕೇಳುವದು ಕೇಳಿದ ಅರ್ಥವನ್ನು ಗ್ರಹಿಸುವದು ಗ್ರಹಿಸಿದ ಅರ್ಥವನ್ನು ಮರೆಯದೆ ಮನಸ್ಸಿನಲ್ಲಿರಿಸುವದು ಕಾರ್ಯಾಕಾರ್ಯಗಳನ್ನು ಊಹಿಸಿ ತಿಳಿಯುವದು ಹಾಗೆ ತಿಳಿದ ಅರ್ಥದಲ್ಲಿರುವ ವಿರುದ್ಧವನ್ನು ಕಂಡು ಅದನ್ನು ಪರಿತ್ಯಾಗಮಾಡುವದು ಕಾರ್ಯಗಳನ್ನು ನಿಶ್ಚಯಿಸುವದು ಎಂಬ ಎಂಟುಪ್ರಕಾರವಾದ ಬುದ್ಧಿಯುಳ್ಳವನಾಗಿ ಭುಜಬಲ ಬಂಧುಬಲ ಮನಸ್ಸಿನ ಬಲ ಉಪಾಯಬಲವೆಂಬ ನಾಲ್ಕುಪ್ರಕಾರವಾದ ಬಲವುಳ್ಳವನಾಗಿ ಸಾಮ ದಾನ ಭೇದ ದಂಡಗಳೆಂಬ ಚತುರೋಪಾಯಗಳಲ್ಲಿ ಚತುರನಾಗಿ ದೇಶಕಾಲಗಳನ್ನರಿಯುವದು ದಿಟತ್ವವು ಪ್ರಯಾಸವನ್ನು ಸಹಿಸುವದು ಸರ್ವಜ್ಞತ್ವವು ದಯ ದಾಕ್ಷಿಣ್ಯಗಳು ಮುಖಕಾಂತಿ ಗುಂದದಿರುವದು ಮಂತ್ರಾಲೋಚನೆಯನ್ನು ಹೊರಪಡಿಸದಿರುವದು ಕೋಪವಿಲ್ಲದಿರುವದು ಅರ್ಥಜ್ಞಾನ ಕಾರ್ಯಶಕ್ತಿಯನ್ನರಿಯುವದು ಮಾಡಿದ ಉಪಕಾರವನ್ನು ಮರೆಯದಿರುವದು ಶರಣುಹೊಕ್ಕವರನ್ನು ರಕ್ಷಿಸುವದು ಚಂಚಲಬುದ್ಧಿಯಿಲ್ಲದಿರುವದು ಕ್ಷಮೆಯು ಎಂಬ ಹದಿನಾಲ್ಕು ಗುಣಗಳುಳ್ಳಂಥಾವನಾಗಿ ತೇಜಸ್ಸು ಬಲಪರಾಕ್ರಮಗಳಿಂದ ದಿನದಿನಕ್ಕೂ ಹೆಚ್ಚುತ ಶುಕ್ಲಪಕ್ಷದ ಚಂದ್ರನಂತೆ ಕ್ರಮೇಣವಾಗಿ ಅಭಿವೃದ್ಧಿಯಾಗುತಿದ್ದವನಾಗಿ ಬುದ್ಧಿಯಲ್ಲಿ ಬೃಹಸ್ಪತಿಗೆ ಸಮಾನನಾಗಿ ಪರಾಕ್ರಮದಲ್ಲಿ ತನ್ನ ತಂದೆಯಾದ ವಾಲಿಗೆ ಸಮಾನನಾಗಿ ತನ್ನ ತಂದೆಯು ತಂದೆಯಾದ ದೇವೇಂದ್ರನ ಮಾತನ್ನು ಲಾಲಿಸಿ ಕೇಳುವಂತೆ ತಾರನ ಮಾತನ್ನು ಲಾಲಿಸಿ ಕೇಳುತ್ತಿದ್ದ ಅಂಗದನನ್ನು ಕಂಡು ಹನುಮಂತನು ಆತನು ರಾಜ್ಯಾಧಿಪತಿಯಾಗುವನೆಂದೂ ಸ್ವಾಮಿಕಾರ್ಯದಲ್ಲಿ ವಿಶ್ವಾಸವುಳ್ಳವನೆಂದೂ ಸಮಸ್ತ ಶಾಸ್ತ್ರಾರ್ಥಗಳ ರಹಸ್ಯವನ್ನು ಬಲ್ಲವನೆಂದೂ ವಿಚಾರಿಸಿ ಅತ್ಯಂತ ಸಂತೋಷಪಟ್ಟು ಆತನಿಗೆ ಚತುರೋಪಾಯಗಳಲ್ಲಿ ಮೂರನೇ ಉಪಾಯವಾದ ಭೇದತಂತ್ರವನ್ನು ಉಪದೇಶಮಾಡಿ ಆತನು ಮಂತ್ರಾಲೋಚನೆ ಮಾಡುವ ಕಪಿನಾಯಕರಲ್ಲಿ ಭೇದವನ್ನು ಹುಟ್ಟಿಸಿ ಆ ದುರ್ಮಂತ್ರಿಗಳನ್ನು ಹೊರಗುಮಾಡಬೇಕೆಂದೆಣಿಸಿ ಆತನನ್ನು ಕುರಿತು ಬಹಳ ನಿಷ್ಠುರ ನುಡಿಗಳಿಂದ " ಎಲೈ ಅಂಗದನೆ, ನೀನು ಯುದ್ಧರಂಗವನ್ನು ಕಂಡರೆ ಅತಿ ಹರ್ಷದಿಂದ ಯುದ್ಧಮಾಡುವದಕ್ಕೆ ಸಮರ್ಥನು ; ನಿನ್ನ ತಂದೆಯಾದ ವಾಲಿಯು ಮರ್ಯಾದೆಯಲ್ಲಿ ಕಪಿರಾಜ್ಯದ ಭಾರವನ್ನು ವಹಿಸುವದಕ್ಕೆ ಸಮರ್ಥನು ; ಈ ಕಪಿಗಳು ಯಾವಾಗಲೂ ಸ್ಥಿರಬುದ್ಧಿಯುಳ್ಳವರಲ್ಲ ; ಸ್ತ್ರೀಯರೂ ಮಕ್ಕಳೂ ಇಲ್ಲದ ಜಾಂಬವಾದಿ ಕಪಿನಾಯಕರು ನಿನ್ನ ಮಾತನ್ನು ಕೇಳುವವರಲ್ಲ ; ನಾನೂ ನಿನ್ನ ಮಾತನ್ನು ಕೇಳದವನೆ ಸರಿ ; ಜಾಂಬವನು ನೀಲನು ಸುಹೋತ್ರನು ಮೊದಲಾದವರು ಸಾಮ ದಾನಾದಿ ಉಪಾಯಗಳಿಂದ ಸಾಧ್ಯವಾಗುವವರಲ್ಲ ; ಇವರನ್ನು ದಂಡದಿಂದ ಸಾಧ್ಯಮಾಡುವದಕ್ಕೂ ಕೂಡದು ; ಇವರನ್ನು ಪರಾಜಿತರಾಗಿ ಮಾಡುವದಕ್ಕೆ ಸುಗ್ರೀವನಿಗೂ ಶಕ್ಯರಲ್ಲ ; ನೀನು ತಾರನ ಮಾತನ್ನು ಕೇಳಿ ಸುಗ್ರೀವನ ಬಳಿಗೆ ಹೋಗದೆ ಈ ಬಿಲದಲ್ಲೇ ಮರೆಯಾಗಿರುವದಕ್ಕೆ ಶಕ್ಯವಲ್ಲ ; ಸುಗ್ರೀವನು ಬಲವಂತನು ; ಆತನಿಗಿಂತಲು ನೀನು ಬಲಹೀನನು ; ಬಲಹೀನನಾದವನು ಬಲವಂತನೊಡನೆ ವಿರೋಧವನ್ನು ಮಾಡಿಕೊಂಡು ಮಲತಿರುವದು ಕಾರ್ಯವಲ್ಲ ; ತನ್ನ ಶರೀರಮಾತ್ರವನ್ನು ರಕ್ಷಣ್ಯವಮಾಡಿಕೊಂಡಿರಬೇಕು ; ಬಲವಂತನಾದವನು ಬಲಹೀನನೊಡನೆ ಕೆಣಸಿಯೂ ಉಪೇಕ್ಷೆಮಾಡಿಕೊಂಡಿದ್ದರೆ ಆ ಬಲಹೀನನು ತಾನೇ ಕರಗಿಹೋಗುವನು ; ಬಲಹೀನನಾದವನು ಬಲವಂತನೊಡನೆ ಕೆಣಸಿ ಮಲತಿದ್ದನಾದರೆ ಆ ಬಲವಂತನಿಂದ ಕೆಡುವನು ; ಈ ಬಿಲವು ದೇವೇಂದ್ರನಿಗಾದರೂ ಶ್ರೀರಾಮನಿಗಾದರೂ ಸುಗ್ರೀವನಿಗಾದರೂ ಸಾಧ್ಯವಲ್ಲವೆಂದು ತಾರನು ನುಡಿದನು ; ಈ ಬಿಲವನ್ನು ಒಡೆದುಹಾಕುವದಕ್ಕೆ ಲಕ್ಷ್ಮಣನ ಬಾಣಗಳು ಸಮರ್ಥವಾದಾವು ; ಪೂರ್ವದಲ್ಲಿ ಮಯನೆಂಬ ದಾನವಶಿಲ್ಪಿಯು ಈ ಬಿಲದಲ್ಲಿರಲು ದೇವೇಂದ್ರನು ತನ್ನ ಸಿಡಿಲೆಂಬ ಆಯುಧದಿಂದ ಆತನನ್ನು ಕೊಂದನೆಂದು ಈ ಬಿಲದಲ್ಲಿರುವ ಸ್ವಯಂಪ್ರಭೆ

ಯು ಹೇಳಿದಳಲ್ಲವೆ ! ದೇವೇಂದ್ರನು ಮಯನನ್ನು ಕೊಂದನಲ್ಲದೆ ಈ ಬಿಲವನ್ನು ಕೆಡಿಸುವದಕ್ಕೆ ಸಮರ್ಥನಾಗಲಿಲ್ಲ ; ಲಕ್ಷ್ಮಣನು ತನ್ನ ನಿಶಿತಬಾಣಗಳಿಂದ ಒಂದು ದೊನ್ನೆಯನ್ನು ತನ್ನ ಬೆರಳಿನಿಂದ ಸೀಳುವ ಮರ್‍ಯಾದೆಯಲ್ಲಿ ಈ ಬಿಲವನ್ನು ಒಡೆದುಹಾಕುವನು ; ಲಕ್ಷ್ಮಣನಿಗೆ ವಜ್ರಾಯುಧಕ್ಕೂ ಸಿಡಿಲಿಗೂ ಸಮಾನವಾಗಿ ಪರ್ವತಗಳನ್ನು ಚೂರ್ಣಮಾಡುವಂಥಾ ಅನೇಕ ಬಾಣಗಳುಂಟು ; ನೀನು ಈ ಗುಹೆಯಲ್ಲಿರಬೇಕೆಂದು ಯೋಚನೆಮಾಡುವಪಕ್ಷದಲ್ಲಿ ಕಪಿನಾಯಕರೆಲ್ಲರು ಹಸಿವು ತೃಷೆಗಳಿಂದ ಕಂಗೆಟ್ಟು ನಾನಾಪ್ರದೇಶಗಳನ್ನೂ ತಿರಿಗಿ ದುಃಖಪಟ್ಟಿರುವದರಿಂದ ತಮ್ಮ ಸ್ತ್ರೀಯರನ್ನೂ ಮಕ್ಕಳನ್ನೂ ನೆನೆದು ನಿನ್ನನ್ನು ಬಿಟ್ಟು ಹೋಗುವರಲ್ಲದೆ ನಿನ್ನ ಕೂಡೆ ಇರಲಾರರು ; ನೀನು ನಿನ್ನ ಆತ್ಮಬಂಧುಗಳನ್ನೂ ಸ್ನೇಹಿತರನ್ನೂ ಬಿಟ್ಟು ಇಲ್ಲಿದ್ದರೆ ಒಂದು ತೃಣಕ್ಕಿಂತಲು ಕಡೆಯಾಗೆಣಿಸಲ್ಪಡುವೆ ; ಲಕ್ಷ್ಮಣನ ಬಾಣಗಳು ಮಹಾ ಉಗ್ರವಾಗಿ ಅತಿ ವೇಗವುಳ್ಳವಾಗಿ ಯಾರಿಗೂ ಸಹಿಸುವದಕ್ಕೆ ಅಸಾಧ್ಯವಾದಂಥಾವು ; ಅಪರಾಧಿಯನ್ನು ಕಂಡರೆ ಸಂಹರಿಸುವವಲ್ಲದೆ ತಳಹರಿಸುವಂಥಾವಲ್ಲ ; ನೀನು ನಮ್ಮ ಕೂಡೆ ಬಂದಮೇಲೆ ನಾವು ಹೇಳಿದಂತೆ ಇದ್ದೆಯಾದರೆ ಸುಗ್ರೀವನು ಕ್ರಮವಾಗಿ ನಿನಗೆ ರಾಜ್ಯಾಧಿಪತ್ಯವನ್ನು ಕೊಡುವನು ; ನಿನ್ನ ಚಿಕ್ಕಪ್ಪನಾದ ಸುಗ್ರೀವನು ಹಿತವನ್ನು ಬಲ್ಲವನು ; ಧರ್ಮಿಷ್ಠನು ; ದೃಢವ್ರತವುಳ್ಳವನು ; ಶುಚಿತ್ವವುಳ್ಳವನು ; ಪ್ರತಿಜ್ಞಾಪರಿಪಾಲಕನು ; ಅಂಥಾವನು ನಿನ್ನನ್ನು ಸನ್ಮಾನಿಸುವನಲ್ಲದೆ ದಂಡಿಸನು ; ನಿನ್ನ ತಾಯಾದ ತಾರಾದೇವಿಗೆ ಸಂತೋಷವನ್ನುಂಟುಮಾಡಬೇಕೆಂಬ ಬುದ್ಧಿಯಿಂದ ತನ್ನ ಪ್ರಾಣವನ್ನಾದರೂ ಕೊಡುವನು ; ಆತನಿಗೆ ನೀನಲ್ಲದೆ ಬೇರೆ ಮಕ್ಕಳಿಲ್ಲ ; ಆದಕಾರಣ ನೀನು ಸುಗ್ರೀವನ ಮನಸ್ಸಿಗೂ ಶ್ರೀರಾಮನ ಮನಸ್ಸಿಗೂ ಸಂತೋಷವಾಗುವ ಮರ್‍ಯಾದೆಯಲ್ಲಿ ಇನ್ನೂ ಉಳಿದಿರುವ ಸ್ಥಾನಗಳಲ್ಲಿ ಸೀತಾದೇವಿಯನ್ನರಸಿ ಕಾಣುವದಕ್ಕೆ ತಕ್ಕ ಉಪಾಯವನ್ನು ಕಾಣು ” ಎಂದು ಸಂತವಿಟ್ಟನು.

## ೫೫ ನೇ ಅಧ್ಯಾಯ.

### ಅಂಗದಾದಿಗಳು ಪ್ರಾಯೋಪವೇಶಕ್ಕೆ ಕುಳಿತದ್ದು.

ಈ ಮರ್‍ಯಾದೆಯಲ್ಲಿ ಹನುಮಂತನು ಅಂಗದಕುಮಾರನಕೂಡೆ ಅನೇಕ ಸತ್ಕಾರಪೂರ್ವಕವಾಗಿ ಧರ್ಮರಹಸ್ಯವಾದ ಮಾತುಗಳನ್ನು ನುಡಿಯಲು ಆತನು ಹನುಮಂತನಿಗೆ ಪ್ರತ್ಯುತ್ತರವನ್ನು ನುಡಿಯುತ ಆತನನ್ನು ಕುರಿತು “ ಎಲೈ ಹನುಮಂತನೆ, ಸುಗ್ರೀವನಲ್ಲಿ ಸ್ಥಿರಬುದ್ಧಿಯು ಮನಸ್ಸಿನಲ್ಲಿ ದೃಢತ್ವವು ಇಂದ್ರಿಯನಿಗ್ರಹವು ಅನಸೂಯೆಯು ರುಜುಮಾರ್ಗವು ಪರಾಕ್ರಮವು ಧೈರ್ಯವು ಮೊದಲಾದ ಸದ್ಗುಣಗಳಿದ್ದರೆ ಹಿರೀ ಅಣ್ಣನು ತಂದೆಗೆ ಸಮಾನನೆಂದೂ ಆತನ ಸ್ತ್ರೀಯು ಹೆತ್ತತಾಯಿಗೆ ಸಮಾನವೆಂದೂ ಹೇಳುವ ಲೋಕವಾರ್ತೆಯನ್ನು ಬಿಟ್ಟು ತನ್ನ ಹಿರೀ ಅಣ್ಣನಾದ ವಾಲಿಯ ಸ್ತ್ರೀಯನ್ನು ಅಂಗೀಕರಿಸುವನೆ ! ಲೋಕದಲ್ಲಿ ಇಂಥಾ ಹೀನಕೃತ್ಯವನ್ನು ಮಾಡಿದವರ್‍ಯಾರು ! ತನ್ನ ಅಣ್ಣನಾದ ವಾಲಿಯು ಒಬ್ಬ ದಾನವನಕೂಡೆ ಯುದ್ಧಕ್ಕೆ ಹೋಗಿ ಆ ದಾನವನು ಒಂದು ಗುಹೆಯನ್ನು ಹೊಕ್ಕಲು ಆ ಗುಹೆಯ ಬಾಗಲಲ್ಲಿ ತನ್ನನ್ನು ಕಾವಲಿರಿಸಿ ಅಣ್ಣನು ಆ ಗುಹೆಯನ್ನು ಹೊಕ್ಕು ಹೋದಮೇಲೆ ಆ ಗುಹೆಯ ಬಾಗಲಿಗೆ ದೊಡ್ಡ ಕಲ್ಲನ್ನು ಚಾಚಿ ಆತನು ತಿರಿಗಿ ಬರದಂತೆ ಮಾಡಿ ರಾಜ್ಯಾಧಿಪತ್ಯವನ್ನು ಕಟ್ಟಿಕೊಂಡ ಸುಗ್ರೀವನಿಗೆ ಸತ್ಯಧರ್ಮಗಳೆತ್ತಣವು ! ಅದಲ್ಲದೆ ಶ್ರೀರಾಮನ ಕಾರ್ಯವನ್ನು ಸಾಧ್ಯಮಾಡಿಕೊಡುವದಾಗಿ ನಂಬಿಕೆಕೊಟ್ಟು ಆತನಿಂದ ತನ್ನ ಕಾರ್ಯವನ್ನು ಆಗಮಾಡಿಕೊಂಡು ಪ್ರತ್ಯುಪಕಾರ ಮಾಡುವದನ್ನು ಮರೆತು ಕಡೆಗೆ ಲಕ್ಷ್ಮಣನು ಬಂದು ಬೆದರಿಸಲು ಅಂಜಿಕೊಂಡು ನಮ್ಮನ್ನು ಕಳುಹಿಸಿದನಲ್ಲದೆ ತನ್ನ ಬುದ್ಧಿಪೂರ್ವಕವಾಗಿ ಶ್ರೀರಾಮನು ಮಾಡಿದ ಉಪಕಾರವನ್ನು ನೆನೆದು ಸೀತಾದೇವಿಯನ್ನರಸಿಕೊಂಡು ಬರಹೇಳಿ ನಮ್ಮನ್ನು ಕಳುಹಿಸಿದನೆ ! ಅಂಥಾ ಮದೋನ್ಮತ್ತನಾಗಿ ಚಂಚಲಚಿತ್ತನಾಗಿ ಮಾಡಿದ ಉಪಕಾರವನ್ನು ಮರೆತವನಾಗಿ ಪಾಪಿಷ್ಠನಾದ ಸುಗ್ರೀವನಲ್ಲಿ

ಧರ್ಮವೆತ್ತಣದು! ಅವನ ವಂಶದಲ್ಲಿ ಹುಟ್ಟಿದರೂ ಸತ್ಪುತ್ರನಾದವನು ಅವನಿಂದ ಬದುಕಬೇಕೆಂದು ಅವನ ಸಮೀಪಕ್ಕೆ ಹೋಗುವನೇ! ಲೋಕದಲ್ಲಿ ಧರ್ಮಿಷ್ಠನಾದ ಧೊರೆಯು ತನ್ನ ಮಗನು ಸದ್ಗುಣಸಂಪನ್ನನಾಗಲೀ ದುರ್ಗುಣವುಳ್ಳವನಾಗಲೀ ಅವನಿಗೆ ಪಟ್ಟವನ್ನು ಕಟ್ಟುವನು; ಸುಗ್ರೀವನು ತನ್ನ ಶತ್ರುವಿನ ಮಗನಾದ ನನ್ನನ್ನು ಹ್ಯಾಗೆ ಜೀವಸಹಿತವಾಗಿ ಬಿಡುವನು! ಆತನಿಗೆ ಮಿತ್ರನಲ್ಲದೆ ವಿರೋಧಿಯಾಗಿ ಆತನಿಗಿಂತಲು ಶಕ್ತಿ ಕಡಿಮೆಯುಳ್ಳವನಾಗಿ ಬಂಧುಬಳಗವಿಲ್ಲದವನಾಗಿ ಅನಾಥನಾದ ನಾನು ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ಹ್ಯಾಗೆ ಬದುಕುವೆನು! ಸುಗ್ರೀವನು ಯಾವ ಉಪಾಯದಿಂದಲಾದರು ನನ್ನನ್ನು ಬಂಧನಮಾಡುವನಲ್ಲದೆ ಸುಮ್ಮನಿರನು; ರಾಜ್ಯನಿಮಿತ್ತವಾಗಿ ನನ್ನಲ್ಲಿ ಅಸೂಯೆಯನ್ನೂ ಶತ್ರುತ್ವವನ್ನೂ ಬೆಳಸುವನಲ್ಲದೆ ನನ್ನಮೇಲೆ ದಯೆಮಾಡುವದಕ್ಕಿಲ್ಲ; ನಾನು ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ಆತನ ಬಂಧನಕ್ಕೊಳಗಾಗಿ ದುಃಖಪಡುವದಕ್ಕಿಂತಲು ಈ ಸಮುದ್ರತೀರದಲ್ಲಿ ಶರೀರವನ್ನು ಬಿಡುವದೆ ಲೇಸು!——ಎಲೈ ಕಪಿಗಳಿರ, ನೀವೆಲ್ಲರು ನನ್ನ ಶರೀರತ್ಯಾಗಕ್ಕೆ ಅಪ್ಪಣೆಕೊಟ್ಟು ನನ್ನಿಂದ ಕಳುಹಿಸಿಕೊಂಡು ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ಸುಖವಾಗಿರೀ; ನಾನು ಈ ಸಮುದ್ರತೀರದಲ್ಲಿ ಪ್ರಾಯೋಪವೇಶಮಾಡಿ ಶರೀರವನ್ನು ಬಿಡುತ್ತೇನೆ; ದರ್ಭೆಗಳನ್ನು ತೆಂಕಣಾಗ್ರವಾಗಿ ಹಾಸಿಕೊಂಡು ಆ ಹಾಸಿಗೆಯಮೇಲೆ ಕುಳಿತು ಪ್ರಾಣಗಳು ಶರೀರವನ್ನು ಬಿಟ್ಟು ತೊಲಗುವ ಪರ್ಯಂತರ ಉದಕಾಹಾರಗಳನ್ನು ಬಿಟ್ಟಿರುವೆನು! ಎಲೈ ಕಪಿನಾಯಕರುಗಳಿರ, ನೀವು ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ಸುಗ್ರೀವನಿಗೆ 'ಅಂಗದಕುಮಾರನು ನಮಸ್ಕಾರ ಹೇಳಿಕಳುಹಿಸಿದನು; ಚೆನ್ನಾಗಿದ್ದಾನೆ' ಎಂದು ಹೇಳಿ ಬಲವಂತರಾದ ರಾಮಲಕ್ಷ್ಮಣರಿಗೂ ನಾನು ನಮಸ್ಕಾರ ಹೇಳಿಕಳುಹಿಸಿದೆನೆಂದು ಹೇಳಿ ನನ್ನ ತಾಯಾದ ತಾರಾದೇವಿಯು ದುಃಖಪಡದಹಾಗೆ ಸಂತವಿಟ್ಟು ನನಗೆ ಇಷ್ಟು ಉಪಕಾರವನ್ನು ಮಾಡೀ! ತಾರಾದೇವಿಯು ನನ್ನಮೇಲೆ ಮಹಾಪ್ರೀತಿಯುಳ್ಳವಳು; ನಾನು ಇಲ್ಲಿ ಶರೀರವನ್ನು ಬಿಟ್ಟೆನೆಂಬ ಸುದ್ದಿಯನ್ನು ಕೇಳಿದರೆ ಜೀವವಿಡಿದಿರಲಾರಳು" ಎಂದು ನುಡಿದು ತನಗಿಂತಲು ಹಿರಿಯರಾದ ಕಪಿನಾಯಕರಿಗೆ ಅಭಿವಂದಿಸಿ ಹರ್ಷಗುಂದಿ ರೋದನಮಾಡುತ ಭೂಮಿಯಮೇಲೆ ತೆಂಕಲಾಗ್ರವಾಗಿ ದರ್ಭೆಯ ಹಾಸಿಗೆಯಮೇಲೆ ಮರಣವನ್ನು ನಿಶ್ಚಯಿಸಿಕೊಂಡು ಕುಳಿತನು.

ಆ ಕುಮಾರನನ್ನು ಕಂಡು ಮಿಕ್ಕ ಕಪಿನಾಯಕರು ರೋದನಮಾಡುತ ಉಷ್ಣವಾದ ಕಣ್ಣೀರನ್ನು ಬಿಡುತ ಮಹಾದುಃಖಾಕ್ರಾಂತರಾಗಿ ಸುಗ್ರೀವನನ್ನು ನಿಂದಿಸುತ ವಾಲಿಯನ್ನು ಕೊಂಡಾಡುತ ಅಂಗದನ ಸುತ್ತಲು ತಾವೂ ಪ್ರಾಯೋಪವೇಶವನ್ನು ಮಾಡಿ ಶರೀರವನ್ನು ಬಿಡಬೇಕೆಂದು ಸಮುದ್ರತೀರದಲ್ಲಿ ಸ್ನಾನಮಾಡಿ ನಿತ್ಯಕರ್ಮಗಳನ್ನು ತೀರಿಸಿಕೊಂಡು ತೆಂಕಣಸಮುದ್ರದ ಬಡಗಣತೀರದಲ್ಲಿ ತಮಗೆ ಆ ಪುಣ್ಯಸ್ಥಳದಲ್ಲಿ ಬರುವ ಮರಣವೇ ಉತ್ತಮವೆಂದು ನಿಶ್ಚಯಿಸಿಕೊಂಡು ತೆಂಕಲಾಗ್ರವಾಗಿ ಹಾಕಿದ ದರ್ಭೆಯಮೇಲೆ ಮೂಡಲು ಮುಂತಾಗಿ ಕುಳಿತುಕೊಂಡು ದಶರಥರಾಯನ ಸ್ವರ್ಗಾರೋಹಣ ವೃತ್ತಾಂತವನ್ನೂ ಶ್ರೀರಾಮನ ವನವಾಸವೃತ್ತಾಂತವನ್ನೂ ಜನಸ್ಥಾನದಲ್ಲಿದ್ದ ಬಲವಂತರಾದ ರಾಕ್ಷಸರನ್ನು ಶ್ರೀರಾಮನು ಕೊಂದ ವೃತ್ತಾಂತವನ್ನೂ ರಾವಣನು ಸೀತಾದೇವಿಯನ್ನಪಹರಿಸಿಕೊಂಡು ಹೋದ ವೃತ್ತಾಂತವನ್ನೂ ರಾವಣನು ಜಟಾಯುವನ್ನು ಯುದ್ಧದಲ್ಲಿ ಕೊಂದ ವೃತ್ತಾಂತವನ್ನೂ ಶ್ರೀರಾಮನ ಕೋಪದ ಮಹಿಮೆಗಳನ್ನೂ ಆತನು ವಾಲಿಯನ್ನು ಕೊಂದ ವೃತ್ತಾಂತವನ್ನೂ ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿರಲು ಅಷ್ಟುಮಂದಿ ಕಪಿನಾಯಕರೂ ಮರಣಕ್ಕೆ ನಿಶ್ಚಯಿಸಿಕೊಂಡು ರೋದನಮಾಡುತ ಪ್ರಾಯೋಪವೇಶಕ್ಕೆ ಕುಳಿತಿರುವದನ್ನು ನೋಡಿ ವಿಂಧ್ಯಪರ್ವತವು ಮಳೆಗಾಲದಲ್ಲಿ ಗುಡುಗುತ್ತಿರುವ ಮೇಘಗಳುಳ್ಳ ಆಕಾಶಮಂಡಲದಂತೆ ಆ ಕಪಿಗಳ ರೋದನಧ್ವನಿಯಿಂದ ಪ್ರತಿಧ್ವನಿಗೊಡುತ್ತಿದ್ದ ಗುಹೆಗಳಿಂದ ತಾನೂ ರೋದನಮಾಡುತ್ತಿತ್ತೋ ಎಂಬಂತೆ ಒಪ್ಪುತಿತ್ತು!

## ೫೭ನೇ ಅಧ್ಯಾಯ.

## ಸಂಪಾತಿಯು ಜಟಾಯುವಿನ ವೃತ್ತಾಂತವನ್ನು ಕೇಳಿದ್ದು.

ಎಲೈ ಕುಶಲವರುಗಳಿರಾ, ಈ ಮರ್ಯಾದೆಯಲ್ಲಿ ಅಂಗದನು ಮೊದಲಾದ ಕಪಿನಾಯಕರು ಸಮುದ್ರತೀರದಲ್ಲಿದ್ದ ವಿಂಧ್ಯಪರ್ವತದ ತಪ್ಪಲಲ್ಲಿ ಪ್ರಾಯೋಪವೇಶದಿಂದ ಶರೀರತ್ಯಾಗವನ್ನು ಮಾಡಬೇಕೆಂದು ಕುಳಿತಿದ್ದ ಸಮಯದಲ್ಲಿ ಜಟಾಯುವಿನ ಅಣ್ಣನಾಗಿ ಮಹಾ ಪರಾಕ್ರಮಿಯಾಗಿ ಸ್ಥಿರಜೀವಿಯಾದ ಸಂಪಾತಿ ಎಂಬ ಗೃಧ್ರರಾಜನು ಆ ಪರ್ವತದ ಕೋಡುಗಲ್ಲಿನಿಂದಿಳಿದು ಆ ಕಪಿನಾಯಕರು ಪ್ರಾಯೋಪವೇಶಕ್ಕೆ ಕುಳಿತಿದ್ದ ಸ್ಥಳಕ್ಕೆ ಬಂದು ಅವರನ್ನು ನೋಡಿ ಅತಿ ಹರ್ಷಪಟ್ಟು ವಿಂಧ್ಯಪರ್ವತವನ್ನು ಕುರಿತು “ಎಲೈ ವಿಂಧ್ಯಪರ್ವತರಾಜನೇ, ಲೋಕದಲ್ಲಿ ಬ್ರಹ್ಮದೇವನು ತಾನು ಸೃಷ್ಟಿಸಿದ ಪ್ರಾಣಿಗಳಿಗೆ ಕಲ್ಪಿಸಿದ ಆಹಾರವನ್ನು ತಾನೇ ಕೂಡಿಸಿ ಕೊಡುವನು ; ಆದ್ದರಿಂದ ಈ ಕಪಿನಾಯಕರು ನನ್ನ ಭಕ್ಷಣಕ್ಕೆ ಒದಗಿಬಂದರು ; ನನಗೆ ಬಹುಕಾಲದಿಂದ ಆಹಾರವಿಲ್ಲದಿತ್ತು ; ಈಗ ಪ್ರಾಯೋಪವೇಶಕ್ಕೆ ಕುಳಿತು ದೇಹತ್ಯಾಗವನ್ನು ಮಾಡುವದಕ್ಕಿರುವ ಇವರನ್ನು ಭಕ್ಷಿಸುತ್ತೇನೆ” ಎಂದು ಹೇಳಿದನು.

ಪಕ್ಷಿರಾಜನಾದ ಸಂಪಾತಿಯು ಆ ಮಾತನ್ನು ಕೇಳಿ ಅಂಗದಕುಮಾರನು ಮನಸ್ಸಿನಲ್ಲಿ ಭಯಪಟ್ಟು ಹನುಮಂತನನ್ನು ಕುರಿತು “ಎಲೈ ಹನುಮಂತನೆ, ಸಾಕ್ಷಾತ್ ಯಮನೇ ಈ ಹದ್ದಿನ ಸ್ವರೂಪದಿಂದ ನಮ್ಮೆಲ್ಲರನ್ನೂ ನಾಶಮಾಡಬೇಕೆಂದು ಈ ಸ್ಥಳಕ್ಕೆ ಬಂದಿದ್ದಾನೆ! ಕಟಕಟಾ—ಮರಣವಂತೂ ತಪ್ಪದು ; ನಾವು ಸುಗ್ರೀವನ ಕಾರ್ಯವನ್ನು ಸಲ್ಲಿಸಲಿಲ್ಲ ; ಶ್ರೀರಾಮನ ಕಾರ್ಯವನ್ನೂ ಮಾಡಲಿಲ್ಲ ; ಇಷ್ಟುಮಂದಿ ಕಪಿನಾಯಕರಿಗೂ ಒಂದೇಬಾರಿ ಮೃತ್ಯುವು ಬಂತು ; ಜಟಾಯುವು ಸೀತಾದೇವಿಗೆ ಹಿತವನ್ನು ಬಯಸಿ ಆ ದೇವಿಯ ನಿಮಿತ್ತವಾಗಿ ಶರೀರವನ್ನು ಬಿಟ್ಟು ಕೃತಾರ್ಥನಾದನು ; ಆ ಮರ್ಯಾದೆಯಲ್ಲೇ ಮತ್ತು ಕೆಲವು ಪಶುಪ್ರಾಣಿಗಳೂ ಶ್ರೀರಾಮನ ಕಾರ್ಯವನ್ನು ಮಾಡಿಕೊಟ್ಟು ಪವಿತ್ರವಾದವು ; ದಯಾಶೀಲವುಳ್ಳ ಮತ್ತು ಅನೇಕ ಪ್ರಾಣಿಗಳು ತಮ್ಮ ಸದ್ಬುದ್ಧಿಯಿಂದ ಶ್ರೀರಾಮನ ಕಾರ್ಯನಿಮಿತ್ತವಾಗಿ ಶರೀರವನ್ನು ಬಿಟ್ಟು ಪಾವನವಾದವು ; ಜಟಾಯುವೆಂಬ ಪಕ್ಷಿರಾಜನು ಶ್ರೀರಾಮನಿಗೆ ಪ್ರಿಯವನ್ನು ಮಾಡಬೇಕೆಂಬ ಬುದ್ಧಿಯಿಂದ ರಾವಣನಕೂಡೆ ಯುದ್ಧವನ್ನು ಮಾಡಿ ತನ್ನ ಶರೀರವನ್ನು ಬಿಟ್ಟು ಕೃತಾರ್ಥನಾದನು ; ನಾವೂ ಶ್ರೀರಾಮನ ಕಾರ್ಯನಿಮಿತ್ತವಾಗಿ ಹೊರಟುಬಂದು ನಮ್ಮ ಕೈಲಾದಷ್ಟೂ ವನಾಂತರಗಳಲ್ಲಿ ಸಂಚರಿಸಿ ಸೀತಾದೇವಿಯನ್ನು ಕಾಣದೇ ಹೋದೆವು ; ಜಟಾಯುವು ರಣರಂಗದಲ್ಲಿ ರಾವಣನಿಂದ ಘಾಯಪಡೆದು ಶರೀರವನ್ನು ಬಿಟ್ಟು ಸುಗ್ರೀವನ ಭಯವಿಲ್ಲದೆ ಸದ್ಗತಿಯನ್ನೈದಿದನು ; ನಮಗೆ ನಾವು ಬಂದ ಕಾರ್ಯವು ಕೈಗೂಡಲಿಲ್ಲ ; ಸುಗ್ರೀವನ ಭಯವು ಬಿಡಲಿಲ್ಲ ; ಶ್ರೀರಾಮನ ವನವಾಸದಿಂದ ದಶರಥರಾಯನು ಸ್ವರ್ಗಸ್ಥನಾದನು ; ರಾವಣನು ಸೀತಾದೇವಿಯನ್ನಪಹರಿಸಿಕೊಂಡು ಹೋದನು ; ಸೀತಾದೇವಿಯ ನಿಮಿತ್ತವಾಗಿ ಜಟಾಯುವು ಸ್ವರ್ಗಸ್ಥನಾದನು ; ಹೀಗಿರುವಲ್ಲಿ ಶ್ರೀರಾಮನ ಕಾರ್ಯನಿಮಿತ್ತವಾಗಿ ಬಂದ ನಮ್ಮಂಥಾ ಕಪಿನಾಯಕರಿಗೆ ಜೀವದಮೇಲಣ ಆಶೆಯೇನು ! ದಶರಥರಾಯನು ಕೈಕೆಯಿದೇವಿಗೆ ವರವನ್ನು ಕೊಟ್ಟದ್ದರಿಂದ ಶ್ರೀರಾಮಲಕ್ಷ್ಮಣ ಸೀತಾದೇವಿಯರಿಗೆ ವನವಾಸವಾಯಿತು ; ಶ್ರೀರಾಮನ ಕೋಪದಿಂದ ಅನೇಕ ರಾಕ್ಷಸರೂ ನಾಶವಾದರು” ಎಂದು ಹಂಬಲಿಸುತ ನುಡಿದನು.

ಆ ಮಾತನ್ನು ಕೇಳಿ ಸಂಪಾತಿಯು ಮನಕರಗಿ ದಯೆಹುಟ್ಟಿ ಅಂಗದಾದಿಗಳನ್ನು ಕುರಿತು “ಎಲೈ ಕಪಿನಾಯಕರುಗಳಿರ, ನೀವ್ಯಾರು ? ನನ್ನ ಪ್ರಾಣಗಳಿಗೆ ಸಮಾನನಾಗಿ ನನ್ನ ಪ್ರಿಯಸಹೋದರನಾದ ಜಟಾಯುವಿನ ಮರಣವಾರ್ತೆಯನ್ನು ಹೇಳುವದ್ಯಾರು ? ಆ ಮಾತನ್ನು ಕೇಳಿ ನನ್ನ ಎದೆಯು ನಡುಗುತ್ತಿದೆ ! ಎಲೈ ಕಪಿನಾಯಕರುಗಳಿರಾ, ನನ್ನ ತಮ್ಮನಾದ ಜಟಾಯುವಿನ ಪ್ರಸಂಗವನ್ನು ಬಹುಕಾಲಕ್ಕೆ ಕೇಳಿ ನನ್ನ ಮನಸ್ಸಿಗೆ ಸಂತೋಷವಾಗುತ್ತಿದೆ ; ಆದಕಾರಣ ನಿಮ್ಮನ್ನು ಈ ವಿಂಧ್ಯಪರ್ವತವನ್ನು ದಾಟಿಸಿ ಬಿಡುತ್ತೇನೆ ; ನೀವು ಅಂಜಬೇಡೀ ! ಜನಸ್ಥಾನದಲ್ಲಿದ್ದ ಜಟಾಯುವಿಗೆ ಕೋಸಲದೇಶದಲ್ಲಿದ್ದ ದಶರಥರಾಯನು ಹ್ಯಾಗೆ ಸಖನಾದನು ! ದಶರಥರಾಯನ ಜ್ಯೇಷ್ಠಪುತ್ರನಾಗಿ

ಗುರುಭಕ್ತನಾದ ಶ್ರೀರಾಮನು ಎಲ್ಲಿಧಾನೆ; ನಾನು ಆತನಿರುವಲ್ಲಿಗೆ ಹೋಗುವದಕ್ಕಾಗದು; ಅತ್ಯಂತ ಉನ್ನತವಾದ ಈ ವಿಂಧ್ಯಪರ್ವತದ ಕೋಡುಗಲ್ಲಿನಮೇಲಿರುವ ಸೂರ್ಯನ ಪ್ರಭೆಯಿಂದ ನನ್ನ ಗರಿಗಳು ಸೀದುಹೋದದ್ದರಿಂದ ಈ ಪರ್ವತದಿಂದಿಳಿದು ಹೋಗುವದಕ್ಕೂ ನನಗೆ ಸಾಮರ್ಥ್ಯವಿಲ್ಲ" ಎಂದು ನುಡಿದನು.

## ೫೭ ನೇ ಅಧ್ಯಾಯ.

### ಅಂಗದನು ಸಂಪಾತಿಗೆ ತಮ್ಮ ವೃತ್ತಾಂತವನ್ನು ಹೇಳಿದ್ದು.

ಈ ಮರ್ಯಾದೆಯಲ್ಲಿ ಸಂಪಾತಿಯು ತನ್ನ ತಮ್ಮನಾದ ಜಟಾಯುವಿನ ಮರಣವಾರ್ತೆಯನ್ನು ಕೇಳಿ ದುಃಖಾತಿಶಯದಿಂದ ಸ್ವರಗುಂದಿ ಮೆಲ್ಲಗೆ ಮಾತಾಡುತ್ತಿರಲು ಕಪಿನಾಯಕರು ಭಯಪಟ್ಟು ಸಂಪಾತಿಯ ವಾಕ್ಯವನ್ನು ನಂಬದೆ ತಮ್ಮೊಳಗೆ ತಾವೇ ಆಲೋಚನೆಯನ್ನು ಮಾಡುತ ಒಬ್ಬರಿಗೊಬ್ಬರು "ಭಯಂಕರವಾದ ಈ ಗೃಧ್ರರಾಜನು ನಮ್ಮೆಲ್ಲರನ್ನೂ ಭಕ್ಷಣಮಾಡುವನು; ನಾವು ಪ್ರಾಯೋಪವೇಶಕ್ಕೆ ಕುಳಿತು ಹಸಿವು ತೃಷೆಗಳಿಂದ ಕಂಗೆಟ್ಟು ದುಃಖದಿಂದ ಶರೀರವನ್ನು ಬಿಡುವದಕ್ಕಿಂತಲೂ ಈ ಗೃಧ್ರರಾಜನಿಂದ ಒಂದೇಬಾರಿ ಹತವಾದೆವಾದರೆ ಕೃತಾರ್ಥರಾಗುವೆವು; ಈಗಲೇ ನಮ್ಮ ಕಾರ್ಯವು ಸಾಧ್ಯವಾದೀತು" ಎಂದು ನಿಶ್ಚಯಿಸಿದರು.

ಆ ಸಮಯದಲ್ಲಿ ಅಂಗದನು ಸಂಪಾತಿಯನ್ನು ಕುರಿತು "ಎಲೈ ಪಕ್ಷಿರಾಜನೇ, ನನ್ನ ಮುತ್ತೈಯ್ಯನು ಋಕ್ಷರಜಸ್ಸೆಂಬ ಕಪಿನಾಯಕನು; ಆತನು ಮಹಾ ಸಮರ್ಥನು; ಮಹಾ ಬಲವಂತನು; ಮಹಾ ಪೂಜ್ಯನು; ಆತನಿಗೆ ವಾಲಿ ಸುಗ್ರೀವರೆಂಬ ಇಬ್ಬರು ಕುಮಾರರು ಜನಿಸಿದರು; ಅವರಿಬ್ಬರೂ ಲೋಕದಲ್ಲಿ ಮಹಾ ಪ್ರಸಿದ್ಧರು; ಅವರಿಬ್ಬರಲ್ಲಿ ವಾಲಿಯು ಜ್ಯೇಷ್ಠಪುತ್ರನು; ಸಮಸ್ತ ಕಪಿರಾಜ್ಯವನ್ನು ಕಟ್ಟಿಯಾಳಿದ ಮಹಾ ಪರಾಕ್ರಮಿಯು; ನಾನು ಆತನ ಮಗನು! ಇಕ್ಷ್ವಾಕುವಂಶದಲ್ಲಿ ಜನಿಸಿ ಲೋಕನಾಯಕನಾದ ಶ್ರೀರಾಮನು ತನ್ನ ತಮ್ಮನಾದ ಲಕ್ಷ್ಮಣನನ್ನೂ ತನ್ನ ಪಟ್ಟದರಾಣಿಯಾದ ಸೀತಾದೇವಿಯನ್ನೂ ಕೂಡಿಕೊಂಡು ತಪೋವೇಷವನ್ನು ಧರಿಸಿಕೊಂಡು ದಂಡಕಾರಣ್ಯದಲ್ಲಿರುವ ಸಮಯದಲ್ಲಿ ರಾವಣನು ಮೋಸದಿಂದ ಸೀತಾದೇವಿಯನ್ನು ಅಪಹರಿಸಿಕೊಂಡು ಹೋಗುವಾಗ ಆ ದೇವಿಯು 'ಎಲೈ ವನದೇವತೆಗಳಿರಾ—ವೃಕ್ಷಗಳಿರಾ—ಪಕ್ಷಿಗಳಿರಾ, ದಶರಥರಾಯನ ಸೊಸೆಯಾಗಿ ಶ್ರೀರಾಮನ ಪಟ್ಟದರಾಣಿಯಾದ ಸೀತಾದೇವಿಯೆಂಬ ನನ್ನನ್ನು ರಾವಣನು ಎತ್ತಿಕೊಂಡು ಹೋದನೆಂದು ಶ್ರೀರಾಮನಕೂಡೆ ಹೇಳಿ' ಎಂದು ಮೊರೆಯಿಡುತ ಹೋಗುತ್ತಿದ್ದಳಂತೆ; ಆ ಮಾತನ್ನು ಕೇಳಿ ಜಟಾಯುವು ರಾವಣನು ಹಿಡಿದುಕೊಂಡು ಹೋಗುತ್ತಿದ್ದ ಸೀತಾದೇವಿಯನ್ನು ಕಂಡು ಆತನಕೂಡೆ ಯುದ್ಧವನ್ನು ಮಾಡಿ ಆತನ ರಥವನ್ನು ಮುರಿದು ಆ ದೇವಿಯನ್ನು ಕೆಳಗಿಳಿಸಿ ವೃದ್ಧನಾದಕಾರಣ ಸ್ವಲ್ಪ ಬಳಲಿ ಆ ಸಮಯದಲ್ಲಿ ರಾವಣನು ತನ್ನ ಅಳ್ಳೆಯಮೇಲೆ ತಿವಿಯಲು ಆತನ ಖಡ್ಗದಿಂದ ಘಾಯಪಡೆದು ಬಿದ್ದು ಪ್ರಾಣವನ್ನಿಡಿದುಕೊಂಡಿದ್ದು ಶ್ರೀರಾಮನು ಅಲ್ಲಿಗೆ ಬಂದಾಗ ಸೀತಾದೇವಿಯ ವೃತ್ತಾಂತವನ್ನೂ ತಾನು ರಾವಣನಕೂಡೆ ಯುದ್ಧಮಾಡಿದ ವೃತ್ತಾಂತವನ್ನೂ ಹೇಳಿ ತನ್ನ ಶರೀರವನ್ನು ಬಿಟ್ಟು ಉತ್ತಮವಾದ ಲೋಕವನ್ನು ಪಡೆದನು; ಆಮೇಲೆ ಶ್ರೀರಾಮನು ತನ್ನ ತಂದೆಯಾದ ದಶರಥರಾಯನ ಸಖನೆಂದೆಣಿಸಿ ಜಟಾಯುವಿಗೆ ಅಗ್ನಿಸಂಸ್ಕಾರವನ್ನು ಮಾಡಿ ಅಲ್ಲಿಂದ ಹೊರಟು ಸೀತಾದೇವಿಯನ್ನರಸುತ ಮಹಾತ್ಮನಾಗಿ ನನಗೆ ಚಿಕ್ಕಪ್ಪನಾದ ಸುಗ್ರೀವನಕೂಡೆ ಸ್ನೇಹವನ್ನು ಮಾಡಿಕೊಂಡು ತನ್ನ ಸಖನಾದ ಸುಗ್ರೀವನಿಗೆ ಪ್ರಿಯವನ್ನು ಮಾಡಬೇಕೆಂಬ ಬುದ್ಧಿಯಿಂದ ಆತನನ್ನು ಕೂಡಿಕೊಂಡು ನನ್ನ ತಂದೆಯಾದ ವಾಲಿಯನ್ನು ಕೊಂದು ಸುಗ್ರೀವನಿಗೆ ಕಪಿರಾಜ್ಯಾಧಿಪತ್ಯವನ್ನು ಕಟ್ಟಿದನು; ಸುಗ್ರೀವನು ತನಗೆ ಉಪಕಾರವನ್ನು ಮಾಡಿದ ಶ್ರೀರಾಮನಿಗೆ ಪ್ರತ್ಯುಪಕಾರವನ್ನು ಮಾಡಬೇಕೆಂಬ ಬುದ್ಧಿಯಿಂದ ಶ್ರೀರಾಮನ ಪಟ್ಟದರಾಣಿಯಾದ ಸೀತಾದೇವಿಯನ್ನರಸಿ ತರಹೇಳಿ ಕಳುಹಿಸಲು ನಾವಿಲ್ಲಿಗೆ ಬಂದು ಎಲ್ಲಾಪ್ರದೇಶಗಳಲ್ಲಿಯೂ ಸೀತಾದೇವಿಯನ್ನರಸಿ ನೋಡಿ ರಾತ್ರಿಯಲ್ಲಿ

ಸೂರ್ಯಪ್ರಭೆಯನ್ನು ಕಾಣಕೂಡದಂತೆ ಆ ದೇವಿಯನ್ನು ಕಾಣದೆಹೋದೆವು ; ಈ ಮರ್ಯಾದೆಯಲ್ಲಿ ದಂಡಕಾರಣ್ಯ ಮೊದಲಾದ ವನಗಳಲ್ಲಿಯೂ ಮಿಕ್ಕ ಪ್ರದೇಶಗಳಲ್ಲಿಯೂ ಆ ದೇವಿಯನ್ನು ಕಾಣದೆ ಮಯನೆಂಬ ದೇವಸಿಲ್ಪಿಯಿಂದ ನಿರ್ಮಿಸಲ್ಪಟ್ಟ ಒಂದು ಮಾಯಾಬಿಲವನ್ನು ಅಜ್ಞಾನದಿಂದ ಹೊಕ್ಕುನೋಡಿ ಅಲ್ಲಿಯೂ ಕಾಣದೆ ಕಂಗೆಟ್ಟೆವು; ಅಷ್ಟರೊಳಗೆ ಸುಗ್ರೀವನು ನೇಮಿಸಿದ ಒಂದು ತಿಂಗಳ ಮಿತಿಯು ಕಳೆಯಿತು ; ಸುಗ್ರೀವನು ನಾವು ಹೊರಡುವಾಗ ಒಂದು ತಿಂಗಳೊಳಗಾಗಿ ಸೀತಾದೇವಿಯನ್ನರಸಿಕೊಂಡು ಬರದವರಿಗೆ ಶರೀರಾಂತವಾದ ಆಜ್ಞೆಯನ್ನು ಮಾಡಿಸುವದಾಗಿ ಹೇಳಕಳುಹಿಸಿದನು ; ನಾವು ಬಂದ ಕಾರ್ಯವನ್ನು ಸಾಧ್ಯಮಾಡದೆಯೂ ಸುಗ್ರೀವನು ಕಟ್ಟಳೆಮಾಡಿದ ಮಿತಿಯು ತುಂಬಿದಮೇಲೆಯೂ ಅಪರಾಧಿಗಳಾಗಿ ಕಿಷ್ಕಿಂಧಾಪಟ್ಟಣಕ್ಕೆ ಹೋದರೆ ಆತನೂ ರಾಮಲಕ್ಷ್ಮಣರೂ ಕೋಪಿಸಿಕೊಂಡು ನಮಗೆಲ್ಲರಿಗೂ ಮರಣಾಂತವಾದ ಆಜ್ಞೆಯನ್ನು ಮಾಡುವರು ; ಆದಕಾರಣ ನಾವು ಅವರ ಆಜ್ಞೆಗೊಳಗಾಗಿ ಶರೀರವನ್ನು ಬಿಡುವದಕ್ಕಿಂತಲು ಈ ಪುಣ್ಯಕ್ಷೇತ್ರವಾದ ಸಮುದ್ರತೀರದಲ್ಲಿ ಶರೀರವನ್ನು ಬಿಡುವದೇ ಕಾರ್ಯವೆಂದು ನಿಶ್ಚಯಿಸಿಕೊಂಡು ಇಲ್ಲಿ ಪ್ರಾಯೋಪವೇಶಕ್ಕೆ ಕುಳಿತೆವು ” ಎಂದು ಹೇಳಿದನು.

---

## ೫೮ ನೇ ಅಧ್ಯಾಯ.

### ಸಂಪಾತಿಯು ಸೀತಾದೇವಿಯಿರುವ ಸ್ಥಳವನ್ನು ಅಂಗದನಿಗೆ ಹೇಳಿದ್ದು.

ಆ ಬಳಿಕ ಗಂಭೀರಧ್ವನಿಯುಳ್ಳ ಸಂಪಾತಿಯು ಆ ಕಪಿನಾಯಕರ ದೈನ್ಯವನ್ನು ಕಂಡು ಮನಗರಗಿ ಕಣ್ಣೀರು ತುಂಬಲು ಅವರನ್ನು ಕುರಿತು ಪ್ರೀತಿವಚನಗಳನ್ನು ನುಡಿಯುತ “ ಎಲೈ ಕಪಿನಾಯಕರುಗಳಿರ, ನನ್ನ ತಮ್ಮನಾದ ಜಟಾಯುವು ರಾವಣನಕೂಡೆ ಯುದ್ಧವನ್ನು ಮಾಡಿ ಶರೀರವನ್ನು ಬಿಟ್ಟನೆಂಬ ಸುದ್ದಿಯನ್ನು ಕೇಳಿಯು ಆತನನ್ನು ಕೊಂದ ವೈರಿಯಾದ ರಾವಣನನ್ನು ಕೊಲ್ಲುವದಕ್ಕೆ ನನ್ನ ಗರಿ ಸೀದಿರುವದರಿಂದಲೂ ನನ್ನ ವೃದ್ಧಾಪ್ಯದಿಂದಲೂ ಶಕ್ತಿಯಿಲ್ಲದೆ ಸುಮ್ಮನೆ ಇರಬೇಕಾಗಿದೆ ! ಜಟಾಯುವೂ ನಾನೂ ಅಣ್ಣತಮ್ಮಂದರು ; ನಾವು ಒಬ್ಬರನ್ನೊಬ್ಬರು ಅತಿಶಯಿಸಬೇಕೆಂಬ ಪಂಥದಿಂದ ಮೇಲಕ್ಕೆ ಹೋಗುತ ನಮ್ಮ ರೆಕ್ಕೆಗಳಿಂದ ಆಕಾಶಮಂಡಲವನ್ನು ವ್ಯಾಪಿಸಿಕೊಂಡು ಸೂರ್ಯಮಂಡಲಕ್ಕೆ ಹಾರಿಹೋದೆವು ; ಮಧ್ಯಾಹ್ನಸಮಯವಾಗಲು ಸೂರ್ಯಕಿರಣಗಳಿಂದ ನನ್ನ ತಮ್ಮನಾದ ಜಟಾಯುವು ಸೀದುಹೋಗುವನೆಂಬ ದಯೆಯಿಂದ ನಮ್ಮ ಸ್ನೇಹಭಾವವನ್ನು ನೆನೆದು ನಾನು ಜಟಾಯುವಿಗೆ ಮೇಲುಭಾಗದಲ್ಲಿ ಸೂರ್ಯಕಿರಣಗಳು ಆತನಮೇಲೆ ಸೋಕದಹಾಗೆ ಮರೆಯಾಗಿ ನಿಲ್ಲಲು ಆ ಕಿರಣಗಳ ಜ್ವಾಲೆಯಿಂದ ದಹಿಸಲ್ಪಟ್ಟು ಗರಿಸೀದು ಈ ವಿಂಧ್ಯಪರ್ವತದಲ್ಲಿ ಬಿದ್ದೆನು ; ಅದುಮೊದಲಾಗಿ ನಾನು ಈ ವಿಂಧ್ಯಪರ್ವತದಲ್ಲೇ ಇದ್ದು ಯಾವ ದಿಕ್ಕಿಗೂ ಹೋಗಲಾರದೆ ಜಟಾಯುವಿನ ವೃತ್ತಾಂತವನ್ನರಿಯದಿದ್ದೆನು ” ಎಂದು ನುಡಿದನು.

ಆ ಮಾತನ್ನು ಕೇಳಿ ಅಂಗದನು ಸಂಪಾತಿಯನ್ನು ಕುರಿತು “ ಎಲೈ ಸಂಪಾತಿಯೆ, ನೀನು ಬಹುಕಾಲದಿಂದ ಅರಿಯದಿದ್ದ ಜಟಾಯುವಿನ ವೃತ್ತಾಂತವನ್ನು ನಾನು ಹೇಳಿದೆನಾದ್ದರಿಂದ ನೀನು ರಾವಣನಿರುವ ಸ್ಥಳವನ್ನು ತಿಳಿದಿದ್ದರೆ ಹೇಳು ; ರಾಕ್ಷಸಾಧಮನಾದ ರಾವಣನು ಮುಂದರಿಯದೆ ಸೀತಾದೇವಿಯನ್ನಪಹರಿಸಿಕೊಂಡು ಹೋದನು ; ಆತನಿರುವ ಸ್ಥಾನವು ಇಲ್ಲಿಗೆ ಸಮೀಪವೋ ದೂರವೋ ಹೇಳು ” ಎಂದು ಕೇಳಿದನು.

ಮಹಾತ್ಮನಾದ ಸಂಪಾತಿಯು ಆ ಕಪಿನಾಯಕರಿಗೆ ಸಂತೋಷಹುಟ್ಟುವಹಾಗೆ ತಾನರಿತವರಿಗೂ ರಾವಣನಿರುವ ಸ್ಥಳವನ್ನು ಹೇಳಬೇಕೆಂದೆಣಿಸಿ ಅಂಗದಾದಿಗಳನ್ನು ಕುರಿತು “ ಎಲೈ ಕಪಿನಾಯಕರುಗಳಿರಾ, ನಾನು ಮಾತುಮಾತ್ರದಿಂದಲಾದರೂ ಶ್ರೀರಾಮನಿಗೆ ಪ್ರಿಯೋಪಕಾರವನ್ನು ಮಾಡುತ್ತೇನೆ; ನಾನು ಈ ಉದಕದಲ್ಲಿರುವ ವರುಣಲೋಕವನ್ನು ಬಲ್ಲೆನು ; ವಾಮನಾವತಾರನಾಗಿ ಪರಮಪುರುಷನು ಬಲಿಚಕ್ರವರ್ತಿಯಿಂದ ಭೂದಾನವನ್ನು ಪಡೆ

ದು ಭೂಮಿಯನ್ನಳೆಯುವದಕ್ಕಾಗಿ ತ್ರಿವಿಕ್ರಮನಾಗಿ ಅಡಿಯಿಟ್ಟ ಮೂರುಪಾದಗಳನ್ನೂ ನೋಡಿದೆನು ; ಅಸುರರ ಬಾಧೆಯನ್ನು ತಾಳಿಕೊಂಡು ಸಮುದ್ರಮಥನವನ್ನು ಮಾಡಿ ಅಮೃತವನ್ನು ಪಡೆದಂತೆ ಯಾವಪ್ರಕಾರದಲ್ಲಾದರೂ ಶ್ರೀರಾಮನ ಕಾರ್ಯವನ್ನು ಸಾಧ್ಯಮಾಡಬೇಕು ; ನನಗೆ ವೃದ್ಧಾಪ್ಯದಿಂದ ತನುಕಾಂತಿ ಗುಂದಿ ಪ್ರಾಣಗಳು ಶಿಥಿಲವಾದವು ; ನಾನು ರಾವಣನು ಎತ್ತಿಕೊಂಡು ಹೋಗುತ್ತಿದ್ದ ರೂಪಲಾವಣ್ಯಸೌಂದರ್ಯವತಿಯಾಗಿ ಸರ್ವಾಭರಣಭೂಷಿತೆಯಾಗಿ ನವಯೌವನ ಕೋಮಲಾಂಗಿಯಾದ ಒಬ್ಬ ಸ್ತ್ರೀಯು 'ಹಾ ರಾಮಾ—ಹಾ ಲಕ್ಷ್ಮಣಾ' ಎಂದು ಮೊರೆಯಿಡುತ ಹೋಗುತ್ತಿದ್ದದ್ದನ್ನು ಕಂಡೆನು ; ಆ ದೇವಿಯು ಮೈಮುರಿದು ಕಾಲುಗಳನ್ನು ನೀಡಿ ತನ್ನ ಆಭರಣಗಳನ್ನು ಈಡಾಡುತ್ತಿರಲು ಆಕೆಯು ಉಟ್ಟಿದ್ದ ಪೀತಾಂಬರದ ಶೆರಗು ಪರ್ವತಾಗ್ರದಲ್ಲಿರುವ ಸೂರ್ಯಪ್ರಭೆಯಂತೆ ಕಾಣುತಿತ್ತು ; ಆ ದೇವಿಯು ಕಾರ್ಮುಗಿಲುಗಳೊಡ್ಡುಗಳಲ್ಲಿ ಅಂತರಿಕ್ಷಮಾರ್ಗದಲ್ಲೊಪ್ಪುತ್ತಿರುವ ಮಿಂಚಿನಂತೆ ಕಪ್ಪಾದ ರಾವಣನ ಸಮೀಪದಲ್ಲಿ ಒಪ್ಪುತ್ತಿದ್ದಳು ! 'ರಾಮರಾಮಾ' ಎಂದು ಮೊರೆಯಿಡುತ್ತಿದ್ದಾಗಲೇ ಆಕೆಯು ಸೀತಾದೇವಿಯಾಗಿರಬೇಕು ! ಎಲೈ ಕಪಿನಾಯಕರುಗಳಿರ, ರಾವಣನಿರುವ ಸ್ಥಾನವನ್ನು ಹೇಳುತ್ತೇನೆ ಕೇಳಿರಿ : ರಾವಣನು ವಿಶ್ರವಸುವಿನ ಮಗನು ; ಕುಬೇರನ ತಮ್ಮನು ; ಲಂಕಾಪಟ್ಟಣವಲ್ಲಿರುವನು ; ಲಂಕಾದ್ವೀಪವು ಸಮುದ್ರಮಧ್ಯದಲ್ಲಿ ಇಲ್ಲಿಗೆ ನೂರುಗಾವುದದಾರಿಯಲ್ಲಿರುವದೆ ; ಆ ದ್ವೀಪದಲ್ಲಿ ದೇವಶಿಲ್ಪಿಯಾದ ವಿಶ್ವಕರ್ಮನು ಮತ್ತು ಸುವರ್ಣಮಯವಾದ ಊರುಬಾಗಲುಗಳಿಂದಲೂ ಸುವರ್ಣಮಯವಾದ ಚಾವಡಿಗಳಿಂದಲೂ ಸುವರ್ಣಮಯವಾದ ಉಪ್ಪರಿಗೆಗಳಿಂದಲೂ ಅತಿ ರಮಣೀಯವಾದ ಲಂಕಾಪಟ್ಟಣವನ್ನು ನಿರ್ಮಿಸಿದನು ; ಆ ಪಟ್ಟಣದಲ್ಲಿ ರಾವಣನ ವಶದಲ್ಲಿ ಸೀತಾದೇವಿಯು ಹೊಂಬಟ್ಟೆ ಶೀರೆಯನ್ನುಟ್ಟುಕೊಂಡು ಮುಖಕಾಂತಿ ಗುಂದಿ ದೈನ್ಯಭಾವದಿಂದ ರಾಕ್ಷಸಸ್ತ್ರೀಯರ ಕಾವಲಲ್ಲಿ ಶೆರೆಯಾಗಿದ್ದಾಳೆ ; ಸಮುದ್ರದಿಂದ ಸುತ್ತುವರಿಯಲ್ಪಟ್ಟ ಲಂಕಾದ್ವೀಪದಲ್ಲಿ ಜನಕರಾಯನ ಮಗಳಾದ ಸೀತಾದೇವಿಯು ಇದ್ದಾಳೆ ; ನೀವು ನೂರುಗಾವುದದಾರಿ ಸಮುದ್ರವನ್ನು ದಾಟಿ ಈ ಸಮುದ್ರದ ತೆಂಕಣತೀರಕ್ಕೆ ಹೋಗಿ ಲಂಕಾಪಟ್ಟಣವನ್ನು ಹೊಕ್ಕುಹೋದರೆ ರಾವಣನನ್ನು ಕಾಣುವಿರಿ ; ಸೀತಾದೇವಿಯನ್ನೂ ಕಾಣುವಿರಿ ! ಎಲೈ ಕಪಿನಾಯಕರುಗಳಿರ, ನೀವು ತಾಮಸಮಾಡದೆ ಅತಿ ವೇಗದಿಂದ ಸಮುದ್ರವನ್ನು ದಾಟಿ ಲಂಕಾಪಟ್ಟಣಕ್ಕೆ ಹೋದರೆ ಸೀತಾದೇವಿಯನ್ನು ಕಂಡು ತಿರಿಗಿ ಬರುವಿರಿ ; ಈ ಅರ್ಥದಲ್ಲಿ ಸಂಶಯವಿಲ್ಲ ! ನಾನು ಅಂತರಿಕ್ಷಲೋಕಪರ್ಯಂತರ ಹೋಗಿ ನಾನಾದಿಕ್ಕುಗಳನ್ನೂ ಕಾಣುವೆನು ; ಅಂತರಿಕ್ಷಲೋಕಕ್ಕೆ ಪಕ್ಷಿಗಳೆಲ್ಲವೂ ಹೋಗುವವಾದರೂ ಅದಕ್ಕೂ ತಾರತಮ್ಯವುಂಟು ; ಅಂತರಿಕ್ಷಮಾರ್ಗದಲ್ಲಿರುವ ಸಪ್ತಸ್ಕಂಧಗಳಲ್ಲಿ ಭೂಲೋಕಾರಭ್ಯವಾಗಿ ಮೊದಲಸ್ಕಂಧಪರ್ಯಂತರ ಧಾನ್ಯೋಪಜೀವಿಗಳಾದ ಪಕ್ಷಿಗಳು ಸಂಚರಿಸುವವು ; ಎರಡನೇ ಸ್ಕಂದಪರ್ಯಂತರ ವಾಯಸಗಳಿಗೆ ಸಂಚಾರವುಂಟು ; ಮೂರನೇ ಸ್ಕಂದ ಪರ್ಯಂತರ ಹಂಗನಪಕ್ಷಿ ಕ್ರೌಂಚಪಕ್ಷಿ ಟಿಟ್ಟಿಬಹಕ್ಕಿ ಮೊದಲಾದವುಗಳಿಗೆ ಸಂಚಾರವುಂಟು ; ರಣಹದ್ದುಗಳಿಗೆ ನಾಲ್ಕನೇ ಸ್ಕಂದ ಪರ್ಯಂತರ ಸಂಚಾರವುಂಟು ; ಹದ್ದುಗಳಿಗೆ ಐದನೇ ಸ್ಕಂದದವರಿಗೂ ಸಂಚಾರವುಂಟು ; ರೂಪು ಯೌವನ ಪರಾಕ್ರಮವುಳ್ಳ ಹಂಸಪಕ್ಷಿಗಳಿಗೆ ಆರನೇ ಸ್ಕಂದಪರ್ಯಂತರ ಸಂಚಾರವುಂಟು ; ಗರುತ್ಮಂತನಿಗೆ ಸಪ್ತಸ್ಕಂದಪರ್ಯಂತರವೂ ಸಂಚಾರವುಂಟು ; ನಾವು ಗರುತ್ಮಂತನ ವಂಶದಲ್ಲಿ ಹುಟ್ಟಿದವರಾದಕಾರಣ ನಮಗೆ ಅಂತರಿಕ್ಷಲೋಕಪರ್ಯಂತರವೂ ಸಂಚಾರವುಂಟು ; ಆದಕಾರಣ ನಾನು ಎಲ್ಲಾದೇಶಗಳನ್ನೂ ಬಲ್ಲೆನು ; ಮಾಂಸಾಹಾರಿಯಾದ ರಾವಣನು ಲೋಕದಲ್ಲಿ ಮಹಾ ನಿಂದಿತವಾದ ದುಷ್ಕರ್ಮವನ್ನು ಮಾಡಿದನು ; ನೀವು ನನ್ನ ತಮ್ಮನಾದ ಜಟಾಯುವನ್ನು ರಾವಣನು ಕೊಂದನೆಂದು ಹೇಳಿದ್ದರಿಂದ ರಾವಣನು ನನಗೆ ಶತ್ರುವಾದನು ; ನೀವು ಲಂಕಾಪಟ್ಟಣಕ್ಕೆ ಹೋಗಿ ಸೀತಾದೇವಿಯನ್ನು ಕಂಡುಬಂದರೆ ನಿಮ್ಮಿಂದ ರಾವಣನು ನಾಶವಾಗುವನು ; ಆಗ ನಾನು ನನ್ನ ವೈರಿಯಾದ ರಾವಣನ ಹಗೆಯನ್ನು ತೀರಿಸಿಕೊಂಡವನಾಗುವೆನು ! ನಾನು ಇಲ್ಲಿಂದಲೇ ಲಂಕಾಪಟ್ಟಣದಲ್ಲಿರುವ ರಾವಣನನ್ನೂ ಸೀತಾದೇವಿಯನ್ನೂ ಕಾಣುತ್ತಿದ್ದೇನೆ ; ನನಗೆ ಗರುತ್ಮಂತನಂತೆ ದಿವ್ಯದೃಷ್ಟಿಯುಂಟು ; ಅದರಿಂದಲೂ ಆಹಾರಬಲದಿಂದಲೂ ನನಗೆ ನೂರುಯೋಜನಪರ್ಯಂತರ ಸಂಚಾರವೂ ಆ ನೂರುಗಾವುದ ದಾರಿಯೊಳಗಣ ವೃತ್ತಾಂತಗಳೂ ಕಾಣಿಸುವವು ! ಇದೀಗ ನನ್ನ ವೃತ್ತಾಂತವು ; ಇನ್ನು ಮುಂದೆ ನೀವು ಸಮುದ್ರವ

ನ್ನು ದಾಟಿಹೋಗುವ ಉಪಾಯವನ್ನು ಕಾಣಿರಿ; ನೀವು ಅವಶ್ಯವಾಗಿ ಸೀತಾದೇವಿಯನ್ನು ಕಂಡು ನಿಮ್ಮ ಇಷ್ಟಾರ್ಥವನ್ನು ಪಡೆಯುವಿರಿ; ಈ ಅರ್ಥದಲ್ಲಿ ಸಂಶಯವಿಲ್ಲ; ನನ್ನನ್ನು ನೀವು ಸಮುದ್ರತೀರಕ್ಕೆ ಕರೆದುಕೊಂಡು ಹೋದರೆ ನಾನು ಸ್ವರ್ಗಸ್ಥನಾದ ಜಟಾಯುವಿಗೆ ತಿಲತರ್ಪಣಗಳನ್ನು ಕೊಡುತ್ತೇನೆ” ಎಂದು ನುಡಿದನು.

ಆ ಮಾತನ್ನು ಕೇಳಿದಂಥಾ ಕಪಿನಾಯಕರು ಸೂರ್ಯಕಿರಣಗಳಿಂದ ಗರಿಸೀದ ಸಂಪಾತಿಯನ್ನು ಸಮುದ್ರತೀರಕ್ಕೆ ಹೊತ್ತುಕೊಂಡು ಹೋಗಿ ಆತನು ತನ್ನ ತಮ್ಮನಾದ ಜಟಾಯುವಿಗೆ ಉದಕಕ್ರಿಯೆಯನ್ನು ಮಾಡಿದಬಳಿಕ ತಿರಿಗಿ ಹೊತ್ತುಕೊಂಡು ಬಂದು ಮೊದಲಿದ್ದ ಸ್ಥಳದಲ್ಲಿ ಬಿಟ್ಟು ಆತನ ಮುಖವಾರ್ತೆಯಿಂದ ಸೀತಾದೇವಿಯ ವೃತ್ತಾಂತವನ್ನು ಕೇಳಿ ಅತ್ಯಂತ ಸಂತುಷ್ಟಚಿತ್ತರಾಗಿದ್ದರು.

## ೫೯ ನೇ ಅಧ್ಯಾಯ.

### ಸಂಪಾತಿಯು ಅಂಗದಾದಿಗಳಿಗೆ ಶ್ರೀರಾಮನ ಕಾರ್ಯವನ್ನು ಮಾಡಬೇಕೆಂದು ಹೇಳಿದ್ದು.

ಈ ಮರ್ಯಾದೆಯಲ್ಲಿ ಸಂಪಾತಿಯಿಂದ ನುಡಿಯಲ್ಪಟ್ಟ ಅಮೃತೋಪಮಾನವಾದ ವಾಕ್ಯವನ್ನು ಕೇಳಿ ಅಂಗದಕುಮಾರನು ಮೊದಲಾದ ಕಪಿನಾಯಕರು ಅತ್ಯಂತ ಸಂತುಷ್ಟಚಿತ್ತರಾಗಿದ್ದರು; ಆಗ ಜಾಂಬವನು ಸಮಸ್ತ ಕಪಿನಾಯಕರೊಡನೆದ್ದು ನಿಂತುಕೊಂಡು ಸಂಪಾತಿಯನ್ನು ಕುರಿತು “ಎಲೈ ಸಂಪಾತಿಯೆ ಇನ್ನೊಂದು ಬಾರಿ ಸೀತಾದೇವಿಯ ವೃತ್ತಾಂತವನ್ನು ಸವಿಸ್ತರವಾಗಿ ಹೇಳು; ಆ ದೇವಿಯು ಎಲ್ಲಿದ್ದಾಳೆ? ಆಕೆಯನ್ನು ಎತ್ತಿಕೊಂಡು ಹೋದವನ್ಯಾರು? ಅವರು ಹೋಗುವ ಸಮಯದಲ್ಲಿ ಕಂಡವರ್ಯಾರು? ಈ ವೃತ್ತಾಂತಗಳನ್ನು ಸವಿಸ್ತರವಾಗಿ ಹೇಳಿದರೆ ನಮ್ಮಿಷ್ಟುಮಂದಿ ಕಪಿನಾಯಕರಿಗೂ ನೀನೇ ರಕ್ಷಕನಾಗಿ ಜೀವಗಳನ್ನುಳುಹಿಸಿದವನಾಗುವೆ; ಸೀತಾದೇವಿಯನ್ನು ಹಿಡಿದುಕೊಂಡು ಹೋದವನ್ಯಾರು? ಅವನು ವಜ್ರಾಯುಧಕ್ಕೆ ಸಮಾನವಾದ ರಾಮಲಕ್ಷ್ಮಣರ ಬಾಣಸಾಮರ್ಥ್ಯವನ್ನರಿತವನಲ್ಲವೆ” ಎಂದು ಕೇಳಿದನು.

ಆ ಮಾತನ್ನು ಕೇಳಿ ಸಂಪಾತಿಯು ಸಮಸ್ತ ಕಪಿನಾಯಕರೂ ಅಂಜದಿರುವಹಾಗೆ ಅಭಯವನ್ನು ಕೊಟ್ಟು ಸಂತೈಸಿ ಆ ಕಪಿನಾಯಕರನ್ನು ಕುರಿತು “ಎಲೈ ಕಪಿನಾಯಕರುಗಳಿರಾ, ನಾನು ಸೀತಾದೇವಿಯನ್ನು ರಾವಣನು ಎತ್ತಿಕೊಂಡುಹೋದ ವೃತ್ತಾಂತವನ್ನು ಹೇಳುತ್ತೇನೆ ಕೇಳಿ; ಆ ದೇವಿಯಿರುವ ಸ್ಥಾನವನ್ನು ನಾನು ತಿಳಿದ ವೃತ್ತಾಂತವನ್ನೂ ಹೇಳುತ್ತೇನೆ ಕೇಳೀ; ನಾನು ನೂರುಗಾವುದದಾರಿ ವಿಶಾಲವುಳ್ಳ ಈ ಪರ್ವತದಲ್ಲಿ ಬಿದ್ದು ವೃದ್ಧನಾಗಿ ಶರೀರಸತ್ವಗುಂದಿ ಪರಾಕ್ರಮಗುಂದಿರಲು ನನ್ನಮಗನಾದ ಸುಪಾರ್ಶ್ವನು ನನಗೆ ವೇಳೆವೇಳೆಗೆ ಆಹಾರವನ್ನು ತಂದು ಕೊಟ್ಟು ರಕ್ಷಿಸಿಕೊಂಡಿದ್ದನು; ಪಕ್ಷಿಜಾತಿಗಳಿಗೆ ಯಾವಾಗಲೂ ಆಹಾರವು ಹೇರಳವಾಗಿರಬೇಕು; ಅದು ಹ್ಯಾಗೆಂದರೆ: ಗಂಧರ್ವರು ಯಾವಾಗಲೂ ಅತಿ ಕಾಮಿಗಳಾಗಿರುವರು; ಸರ್ಪಗಳು ಯಾವಾಗಲೂ ಅತಿ ಕೋಪವುಳ್ಳವಾಗಿರುವವು; ಮೃಗಗಳು ಯಾವಾಗಲೂ ಅತಿ ಭಯವುಳ್ಳವಾಗಿರುವವು; ಪಕ್ಷಿಗಳು ಯಾವಾಗಲೂ ಕ್ಷುಧೆಯುಳ್ಳವಾಗಿರುವವು; ನಾವು ಪಕ್ಷಿಗಳಾದಕಾರಣ ಅತ್ಯಂತ ಕ್ಷುಧೆಯುಳ್ಳವರು; ನನ್ನ ಮಗನಾದ ಸುಪಾರ್ಶ್ವನು ಪ್ರತಿ ದಿನದಲ್ಲಿಯೂ ಪ್ರಾತಃಕಾಲದಲ್ಲೆದ್ದು ಹೋಗಿ ಸಾಯಂಕಾಲದ ಹೊತ್ತಿಗೆ ಆಹಾರವನ್ನುಹೇರಳವಾಗಿ ತಂದುಕೊಡುವನು; ಈ ಮರ್ಯಾದೆಯಲ್ಲಿರಲು ಒಂದುದಿನ ಆತನು ಮಾಂಸಾದಿ ಆಹಾರಗಳನ್ನೂತರದೆ ಸುಮ್ಮನೇಬಂದನು; ನಾನು ನನ್ನ ವೃದ್ಧಾಪ್ಯ ಕೋಪದಿಂದಲೂ ಹಸಿದಿದ್ದದ್ದರಿಂದಲೂ ಆತನನ್ನು ನಿಷ್ಠುರ ವಚನಗಳಿಂದ ಬೆದರಿಸಿದೆನು; ಆ ಕುಮಾರನು ನನಗೆ ಆಹಾರವನ್ನು ತಂದುಕೊಡದೆ ಹೋದದ್ದಕ್ಕಾಗಿ ಪಶ್ಚಾತ್ತಾಪಪಟ್ಟು ನನ್ನಮೇಲಣ ಪ್ರೀತಿಯಿಂದ ಸಂಕೋಚಪಡುತ ನನ್ನನ್ನು ಕುರಿತು ‘ಎಲೈ ತಂದೆಯೇ, ನಾನು ನಿನಗೆ ಆಹಾರವನ್ನು ತರಬೇಕೆಂದು ಅಂತರಿಕ್ಷಮಾರ್ಗಕ್ಕೆ ಹೋಗಿ ಮಹೇಂದ್ರಪರ್ವತದ ಬಾಗಲನ್ನಡ್ಡಗಟ್ಟಿಕೊಂಡಿದ್ದೆನು; ಮಹೇಂದ್ರ ಪರ್ವತದ ಗುಹೆಗೆ

ಸಮುದ್ರತೀರದಲ್ಲಿ ಸಂಚರಿಸುವ ಪ್ರಾಣಿಗಳೆಲ್ಲವೂ ಬರುವವು; ಅವೆಲ್ಲವನ್ನೂ ಅಡ್ಡಗಟ್ಟಿಕೊಂಡು ಹಿಡಿತರಬೇಕೆಂದು ಕೆಳಗೆ ಮುಖಮಾಗಿದ್ದ ಸಮಯದಲ್ಲಿ ಅಲ್ಲಿಗೆ ಅಂಜನಗಿರಿಪರ್ವತಕ್ಕೆ ಸಮಾನವಾದ ತನುಕಾಂತಿಯುಳ್ಳ ಒಬ್ಬ ಪುರುಷನು ಬಾಲಸೂರ್ಯಪ್ರಭೆಯಂತೆ ತನುಕಾಂತಿಯುಳ್ಳ ಒಬ್ಬ ಸ್ತ್ರೀಯನ್ನು ಎತ್ತಿಕೊಂಡು ಒರುತ್ತಿದ್ದನು; ಅದನ್ನು ಕಂಡು ಅವರಿಬ್ಬರೂ ನಮ್ಮ ಆಹಾರಕ್ಕೆ ಒದಗಿದರೆಂದು ನಿಶ್ಚಯಿಸಿಕೊಂಡಿದ್ದೆನು; ಆ ಪುರುಷನು ಅನೇಕ ವಿನಯೋಕ್ತಿಗಳನ್ನು ನುಡಿದು ನನ್ನನ್ನು ಸಂತವಿಟ್ಟು ತನಗೆ ಸ್ವಲ್ಪ ದಾರಿಯನ್ನು ಬಿಡಹೇಳ ಬೇಡಲು ನಾನು ಶರಣಾಗತರಾಗಿ ವಿನಯವಚನಗಳಿಂದ ಸಂತವಿಟ್ಟವರನ್ನು ಕೊಲ್ಲಬಾರದೆಂಬ ನೀತಿಯನ್ನು ವಿಚಾರಿಸಿಯೂ ನೀಚರಾದವರೂ ಮೊರೆಯಿಟ್ಟವರನ್ನು ಕೊಲ್ಲದಿರುವಾಗ ನನ್ನಂಥಾವನು ಕೊಲ್ಲಬಹುದೇ ಎಂದೂ ಯೋಚಿಸಿ ಆತನಿಗೆ ದಾರಿಯನ್ನು ಬಿಟ್ಟೆನು; ಆತನು ಅತಿವೇಗದಿಂದ ಆ ಸ್ತ್ರೀಯನ್ನು ಎತ್ತಿಕೊಂಡು ಹೋದನು; ನಾನು ಅಂತರಿಕ್ಷಮಾರ್ಗದಲ್ಲಿ ಪಕ್ಷಿಗಳನ್ನು ಹ್ಯಾಗೆ ಮೋಸಮಾಡುವೆನೋ ಹಾಗೇ ಆತನು ನನ್ನನ್ನು ಮೋಸಮಾಡಿ ಹೋದನು; ಆಮೇಲೆ ನನ್ನನ್ನು ಕಂಡ ಸಮಸ್ತ ಋಷಿಗಳೂ ರಾವಣನಿಗೆ ದಾರಿಯನ್ನು ಬಿಟ್ಟು ಜೀವವನ್ನುಳಿಸಿಕೊಂಡೆನೆಂದೂ ಆತನು ಸಕಲ ಪ್ರಾಣಿಗಳನ್ನೂ ಸಂಹರಿಸುವಂಥಾವನೆಂದೂ ಇನ್ನು ನನಗೆ ಎಲ್ಲಿಹೋದರೂ ಜಯವಲ್ಲದೆ ಅಪಜಯವಿಲ್ಲವೆಂದು ನುಡಿದರು! ಎಲೈ ತಂದೆಯೆ, ಆ ಋಷಿಗಳು ನನ್ನ ಕೂಡೆ ಆಡಿದ ಮಾತುಗಳಿಂದ ಆತನೇ ರಾವಣನೆಂದೂ ಹೊಂಬಟ್ಟೇ ಶೀರೆಯನ್ನುಟ್ಟು ಶೋಕಾತಿಶಯದಿಂದ ಆಭರಣಗಳನ್ನು ಈಡಾಡಿ ಚೆಲ್ಲುತ '—ರಾಮಾ—ಲಕ್ಷ್ಮಣಾ—' ಎಂದು ಮೊರೆಯಿಡುತಿದ್ದ ಆ ದೇವಿಯು ಜನಕರಾಯನ ಮಗಳಾಗಿ ಶ್ರೀರಾಮನ ಪಟ್ಟದರಾಣಿಯಾದ ಸೀತಾದೇವಿಯೆಂದೂ ತೋರುತ್ತದೆ! ನನಗೆ ಕಾಲಾತಿಕ್ರಮವಾಗಿ ಮಾಂಸಾಹಾರವು ದೊರಕದೆ ಹೋದ ಕಾರಣವಿದೇ' ಎಂದು ನನ್ನ ಕೂಡೆ ಹೇಳಿದನು.

"ಆ ಮಾತನ್ನು ಕೇಳಿಯೂ ನನಗೆ ರಾವಣನನ್ನು ಅಡ್ಡಗಟ್ಟಿ ಆತನ ಕೂಡೆ ಯುದ್ಧವನ್ನು ಮಾಡಿ ಆತನನ್ನು ಕೊಲ್ಲಬೇಕೆಂಬ ಬುದ್ಧಿ ಹುಟ್ಟಲಿಲ್ಲ; ಪಕ್ಷಿಗಳಿಗೆ ಗರಿಗಳು ಹೋದಬಳಿಕ ಪರಾಕ್ರಮವಿದ್ದೂ ಫಲವೇನು! ನಾನು ನನ್ನ ಬುದ್ಧಿಗೆ ತೋರಿದಷ್ಟು ವಾಕ್ಸಹಾಯವನ್ನು ಮಾಡಿದೆನು; ನಿಮಗೆ ಪೌರುಷಹುಟ್ಟುವಂಥಾ ಮಾತುಗಳಿಂದ ಹಿತವನ್ನು ಹೇಳಿದೆನು; ಇನ್ನು ಶ್ರೀರಾಮನ ಕಾರ್ಯವೇ ನನ್ನ ಕಾರ್ಯವು; ಈ ಅರ್ಥದಲ್ಲಿ ಸಂಶಯವಿಲ್ಲ; ನೀವೆಲ್ಲರೂ ಬಲವಂತರು; ಬುದ್ಧಿವಂತರು; ಜ್ಞಾನಿಗಳು; ದೇವತೆಗಳಿಗೂ ಅಸಾಧ್ಯವಾದಂಥಾವರು; ಮಹಾ ಪರಾಕ್ರಮಿಯಾದ ಸುಗ್ರೀವನ ಅಪ್ಪಣೆಯಿಂದ ಬಂದವರು; ಅದಲ್ಲದೆ ರಾಮಲಕ್ಷ್ಮಣರ ಬಾಣಗಳು ಅತ್ಯಂತ ಕ್ರೂರಲಗುಳ್ಳವಾಗಿ ಸ್ವರ್ಗ ಮರ್ತ್ಯ ಪಾತಾಳಗಳೆಂಬ ಮೂರುಲೋಕಗಳನ್ನೂ ಸಂಹರಿಸುವಂಥಾವು; ರಾವಣನು ಅತ್ಯಂತ ತೇಜೋಬಲವುಳ್ಳವನಾದರೂ ಅತಿ ಸಮರ್ಥರಾದ ನಿಮಗೆ ಸಾಧ್ಯವಾಗುವನು; ಇನ್ನು ಬಹಳ ಮಾತುಗಳಿಂದ ಕಾರ್ಯವೇನು! ನೀವು ಸೀತಾದೇವಿಯನ್ನು ಕಂಡುಬರುವದಕ್ಕೆ ತಕ್ಕ ಕಾರ್ಯವನ್ನು ನಿಶ್ಚಯಿಸಿಕೊಂಡು ಹೊರಡಿರೀ; ನಿಮ್ಮಂಥಾ ಬುದ್ಧಿವಂತರು ಕಾರ್ಯಬಂದಲ್ಲಿ ಕಾಲವಿಳಂಬವನ್ನು ಮಾಡುವದು ಕಾರ್ಯವಲ್ಲ" ಅಂದನು.

## ೬೦ನೇ ಅಧ್ಯಾಯ.

## ಸಂಪಾತಿಯ ಗರಿ ತೀದ ವೃತ್ತಾಂತ.

ಆಮೇಲೆ ಆ ಕಪಿನಾಯಕರು ವಿಂಧ್ಯಪರ್ವತಕ್ಕೆ ಹೋಗಿ ಸಂಪಾತಿಯು ಸುತ್ತಲೂ ಕುಳಿತುಕೊಂಡಿರಲು ಆತನು ಆ ಕಪಿನಾಯಕರನ್ನು ಕುರಿತು "ಎಲೈ ಅಂಗದಕುಮಾರನೆ, ಎಲೈ ಕಪಿನಾಯಕರುಗಳಿರಾ, ನೀವೆಲ್ಲರೂ ಸದ್ದುಮಾಡದೆ ಏಕಾಗ್ರಚಿತ್ತದಲ್ಲಿ ಕೇಳಿ; ನಾನು ಸೀತಾದೇವಿಯನ್ನರಿತ ವೃತ್ತಾಂತವನ್ನು ಸವಿಸ್ತಾರವಾಗಿ ಹೇಳುತ್ತೇನೆ; ನಾನು ನನ್ನ ತಮ್ಮನಾದ ಜಟಾಯುವಿನ ಮೇಲಣ ಛಲದಿಂದ ಸೂರ್ಯಮಂಡಲವನ್ನು ಕಾಣಬೇಕೆಂದು

ಹೋಗಿ ಸೂರ್ಯಕಿರಣಜ್ವಾಲೆಯಿಂದ ಗರಿಶೀದು ಈ ಪರ್ವತದ ವನದಲ್ಲಿ ಬಿದ್ದು ಮೂರ್ಛಾಗತನಾಗಿ ಆರು ದಿವಸಗಳು ಚೈತನ್ಯಗುಂದಿದ್ದು ಆಮೇಲೆ ಎಚ್ಚತ್ತು ನಾನಾದಿಕ್ಕುಗಳನ್ನು ನೋಡುತ ಆ ದಿಕ್ಕುಗಳನ್ನರಿಯದೆ ಆಮೇಲೆ ಸಮುದ್ರವನ್ನೂ ನದಿಗಳನ್ನೂ ಕೊಳಗಳನ್ನೂ ಸಮಸ್ತ ವನಗಳನ್ನೂ ಅರಣ್ಯಗಳನ್ನೂ ನೋಡಿ ನೆನವುಂಟಾಗಿ ಬುದ್ಧಿತೋರಿ ನಾನಾ ಪಕ್ಷಿಗಳಿಂದಿಟ್ಟಣಿಸಿದ ಗುಹೆಗಳುಳ್ಳ ಈ ಪರ್ವತವನ್ನು ನೋಡಿ ಇದು ತೆಂಕಣ ಸಮುದ್ರತೀರದಲ್ಲಿರುವ ವಿಂಧ್ಯಪರ್ವತವೆಂದು ನಿಶ್ಚಯಿಸಿದೆನು ; ದೈವಾನುಕೂಲದಿಂದ ನಾನು ಅಂತರಿಕ್ಷಮಾರ್ಗದಿಂದ ಬಿದ್ದ ಸ್ಥಳವು ನಿಶಾಕರನೆಂಬ ಮುನೀಶ್ವರನ ಪುಣ್ಯಾಶ್ರಮವಾಗಿತ್ತು ; ಆ ಆಶ್ರಮವು ಸಮಸ್ತ ದೇವತೆಗಳಿಗೂ ಪೂಜ್ಯವಾದುದಾದ್ದು ; ನಿಶಾಕರಮುನಿಯು ಆ ಆಶ್ರಮದಲ್ಲಿ ಅತ್ಯಂತ ಉಗ್ರವಾದ ತಪಸ್ಸನ್ನು ಮಾಡಿದನು ; ಆ ಸ್ಥಳದಲ್ಲಿ ಆ ಮುನಿಯು ಎಂಡುಲಕ್ಷದ ಒಂದುಸಾವಿರ ವರುಷಗಳ ಪರ್ಯಂತರ ಇದ್ದನು ; ಆತನು ಯಾವಾಗಲೂ ಸ್ವರ್ಗಲೋಕಕ್ಕೆ ಹೋಗಿ ತಿರಿಗಿ ಬರುವನಾದ್ದರಿಂದ ಆಗ ಸ್ವರ್ಗಲೋಕಕ್ಕೆ ಹೋಗಿದ್ದನು ; ನಾನು ಪರ್ವತಾಗ್ರದಿಂದ ಮೆಲ್ಲಗೆ ಅತಿ ಪ್ರಯಾಸದಿಂದ ಸಂಚರಿಸುವದಕ್ಕೆ ದುರ್ಘಟವಾದ ದರ್ಭೆಯ ಮನೆಗಳ ಮಾರ್ಗವಾಗಿ ಭೂಮಿಗೆ ಬಂದೆನು ; ಆಮೇಲೆ ನಿಶಾಕರಮುನಿಯನ್ನು ನೋಡಬೇಕೆಂದು ಮನಸ್ಸಿನಲ್ಲಿ ಅಭಿಲಾಷೆ ಹುಟ್ಟಿತು ; ಮೊದಲು ನಾನೂ ಜಟಾಯುವೂ ಆತನ ಸಮೀಪಕ್ಕೆ ಹೋಗಿಬರುತ್ತಿದ್ದೆವು ; ಆತನ ಆಶ್ರಮದ ಸಮೀಪದಲ್ಲಿ ಯಾವಾಗಲೂ ಪರಿಮಳವುಳ್ಳ ತಂಘಾಳಿಯು ತೀಡುತ್ತಿರುವದು ; ಅಲ್ಲಿ ಪುಷ್ಪಗಳಿಲ್ಲದ ಮರಗಳಿಲ್ಲ ; ಯಾವಾಗಲೂ ಫಲವಿಲ್ಲದ ವೃಕ್ಷಗಳಿಲ್ಲ ; ಅಂಥಾ ಆಶ್ರಮಕ್ಕೆ ಹೋಗಿ ಆ ಮುನೀಶ್ವರನನ್ನು ಕಾಣಬೇಕೆಂಬ ಬುದ್ಧಿಯಿಂದ ಒಂದು ಮರದಡಿಯನ್ನು ಶೇರಿಕೊಂಡು ಆತನ ಬರವನ್ನು ನೋಡಿಕೊಂಡಿದ್ದು ಆ ಮುನೀಶ್ವರನನ್ನು ಕಂಡೆನು ; ಆತನು ಯಜ್ಞಪುರುಷನ ಮರ್ಯಾದೆಯುಳ್ಳ ಪ್ರಜ್ವಲಿಸುತ್ತಿದ್ದ ತೇಜಸ್ಸುಳ್ಳವನಾಗಿ ಸ್ನಾನಮಾಡಿ ಬಡಗಣ ದಿಕ್ಕಾಗಿ ಕುಳಿತುಕೊಂಡಿದ್ದನು ; ಆ ಮುನಿಯನ್ನು ಕರಡಿಗಳು ಜಿಲ್ಲೀಮೃಗಗಳು ಹುಲಿಗಳು ಸಿಂಹಗಳು ಸರ್ಪಗಳು ಮೊದಲಾದ ಸಮಸ್ತ ಅರಣ್ಯಮೃಗಗಳೂ ಬ್ರಹ್ಮದೇವನನ್ನು ಸಮಸ್ತ ಪ್ರಜೆಗಳೂ ಸುತ್ತುವರಿದಿರುವಂತೆ ಸುತ್ತುವರಿದುಕೊಂಡಿದ್ದು ಆ ಮುನಿಯು ತನ್ನ ಆಶ್ರಮದ ಒಳಗೆ ಹೋದಮೇಲೆ ಅರಸನಕೂಡೆ ಬಂದ ಪ್ರಧಾನರು ಅರಸನು ಅರಮನೆಯ ಒಳಗೆ ಹೋದಮೇಲೆ ಆತನಿಂದ ಕಳುಹಿಸಿಕೊಂಡು ತಮ್ಮ ತಮ್ಮ ಮನೆಗಳಿಗೆ ಹೋಗುವ ತೆರದಲ್ಲಿ ತಮ್ಮ ಸ್ಥಳಗಳಿಗೆ ಹೋಗುವವು ; ಅಂಥಾ ಸಮಯವನ್ನು ನೋಡಿಕೊಂಡಿದ್ದು ಒಂದುದಿನ ನಾನು ಆತನ ಆಶ್ರಮಕ್ಕೆ ಹೋಗಿ ಕಾಣಿಸಿಕೊಂಡೆನು ; ಆತನು ನನ್ನನ್ನು ಕಂಡು ಅತಿ ಹರ್ಷಪಟ್ಟು ಒಂದು ಕ್ಷಣಮಾತ್ರದಲ್ಲಿ ಹೊರಟುಬಂದು ನನ್ನನ್ನು ಕುರಿತು ' ಎಲೈ ಪ್ರಾಣೀ, ನಿನ್ನ ಗರಿಗಳು ಶೀದು ನೀನು ವಿವರ್ಣವಾಗಿ ಬಂದದ್ದರಿಂದ ನಿನ್ನ ಸ್ವರೂಪವನ್ನು ಅರಿಯದೇ ಹೋದೆನು ; ನಿನ್ನ ಗರಿಗಳು ಯಾವಕಾರಣ ಶೀದುಹೋದವು ? ನಿನ್ನ ಶರೀರದಲ್ಲಿ ಎಲ್ಲಿ ನೋಡಿದರೂ ಘಾಯಗಳಾಗಿವೆ ; ಮೊದಲು ವಾಯುವೇಗವುಳ್ಳವರಾಗಿ ಅಣ್ಣತಮ್ಮಂದಿರಾದ ನೀವಿಬ್ಬರೂ ಬರುವಿರೀ ; ನೀವೀರ್ವರೂ ಸಮಸ್ತ ಹದ್ದುಗಳಿಗೂ ಅರಸರು ; ಕಾಮರೂಪಿಗಳಾಗಿ ಯಾವ ರೂಪಾಗಬೇಕೆಂದರೂ ಆಗುವಿರೀ ! ಎಲೈ ಸಂಪಾತಿಯೇ, ನಿಮ್ಮಿಬ್ಬರೊಳಗೆ ನೀನು ಹಿರಿಯನು ; ಜಟಾಯುವು ನಿನ್ನ ತಮ್ಮನು ; ನೀವಿಬ್ಬರೂ ಮನುಷ್ಯಸ್ವರೂಪದಿಂದ ನನ್ನ ಪಾದಸೇವೆಯನ್ನುಮಾಡಿ ಹೋಗುತ್ತಿದ್ದಿರಿ ! ಎಲೈ ಸಂಪಾತಿಯೆ, ನಿನ್ನಗರಿಗಳು ಯಾಕೆ ಹೋದವು ? ನಿನಗೇನು ವ್ಯಾಧಿ ಸಂಭವಿಸಿತು ; ನಿನ್ನ ಶತ್ರುಗಳ್ಯಾರಾದರು ನಿನ್ನ ಗರಿಗಳನ್ನು ಕತ್ತರಿಸಿಹಾಕಿದರೇ ? ನೀನು ವಿವರ್ಣವಾದ ವರ್ತಮಾನವನ್ನು ಸವಿಸ್ತಾರವಾಗಿ ಹೇಳು ' ಎಂದು ಕೇಳಿದನು.

" ನಾನು ಆ ಮುನಿಯನ್ನು ಕುರಿತು ನಾನು ಮಾಡಿದ ಮಹಾ ಘೋರವಾದ ದುಷ್ಕರ್ಮವನ್ನು ಹೇಳುತ ' ಎಲೈ ನಿಶಾಕರಮುನಿಯೆ, ನಾನು ಘಾಯಪಡೆದು ಗರಿಶೀದಿರುವದರಿಂದ ನಿನ್ನಕೂಡೆ ಹೇಳುವದಕ್ಕೆ ಅಂಜುತ್ತೇನೆ ; ನಾನೂ ಜಟಾಯುವೂ ಬಲವಹೊತ್ತು ಅಜ್ಞಾನದಿಂದ ನಮ್ಮ ಸಾಮರ್ಥ್ಯಗಳನ್ನರಿಯಬೇಕೆಂದು ಕೈಲಾಸಪರ್ವತಕ್ಕೆ ಹೋಗಿ ಸಮಸ್ತ ಮುನಿಗಳ ಸನ್ನಿಧಾನದಲ್ಲಿ ನಾವಿಬ್ಬರೂ ಒಂದೇಬಾರಿ ಅಂತರಿಕ್ಷಲೋಕಕ್ಕೆ ಹೋಗಿ ಸೂರ್ಯನ

ನ್ನು ಕಂಡು ಆ ಸೂರ್ಯನ ರಥದ ಗಾಲಿಯು ಪ್ರಮಾಣವೆಷ್ಟೆಂಬುದನ್ನೂ ಆ ಸೂರ್ಯಲೋಕದಲ್ಲಿ ಪ್ರತ್ಯೇಕ ಅರಮನೆಗಳೆಷ್ಟೆಂಬುದನ್ನೂ ನೋಡಬೇಕೆಂದು ಪ್ರತಿಜ್ಞೆಯನ್ನು ಮಾಡಿಕೊಂಡು ಸೂರ್ಯಲೋಕಕ್ಕಾಗಿ ಹೊರಟು ಬಂದು ಸ್ಥಳದಲ್ಲಿ ತಾಳ ಮೃದಂಗ ಧ್ವನಿಗಳನ್ನೂ ಒಂದು ಸ್ಥಳದಲ್ಲಿ ವೇದಘೋಷಗಳನ್ನೂ ಮತ್ತೊಂದು ಸ್ಥಳದಲ್ಲಿ ಗಾನಮಾಡುತ್ತಿದ್ದ ದೇವಸ್ತ್ರೀಯರನ್ನೂ ಕಾಣುತ ಸೂರ್ಯಮಂಡಲದ ಸಮೀಪಕ್ಕೆ ಹೋಗಿ ಅಲ್ಲಿಂದ ಕೆಳಗಡೆಯಾಗಿ ನೋಡಲು ಈ ಭೂಮಂಡಲವು ಎಳೇ ಗರಿಕೆಗಳೂ ಕನ್ನೈದಿಲೆ ಪುಷ್ಪಗಳೂ ಉಳ್ಳ ಒಂದು ವನದಂತೆ ಕಾಣಿಸುತ ನದಿಗಳಿಂದ ನೂಲುಸೂತ್ರ ಹಾಕಿದಂತೆ ಕಾಣಿಸಿತು ; ಹಿಮವತ್ಪರ್ವತ ಮಹಮ್ಮೇರು ಪರ್ವತ ಮೊದಲಾದ ದೊಡ್ಡಪರ್ವತಗಳು ಉದಕಮಧ್ಯದಲ್ಲಿರುವ ಸರ್ಪಗಳಂತೆ ಕಾಣಿಸಿದವು ; ಅದನ್ನು ನೋಡಿ ನನಗೆ ಬಹಳವಾಗಿ ಭಯಹುಟ್ಟಿ ಮೈಯಲ್ಲಿ ಬಳಲಿಕೆ ತೋರಿ ಬೆವರು ಹುಟ್ಟಿ ಮಹತ್ತಾದ ಮರೆವುಹುಟ್ಟಿ ಪ್ರಳಯಕಾಲದಲ್ಲಿ ದಿಕ್ಕುದಿಕ್ಕುಗಳು ತೋರದಂತೆ ಕಾಣಿಸದೇ ಹೋದವು ; ಮನಸ್ಸು ತನ್ನ ಮನೋಮಯಕೋಶವೆಂಬ ಕೊಳವೆಯಲ್ಲಿ ಹೊಕ್ಕೊಂಡು ಶರೀರದೊಳಗೆ ಅಡಕವಾಗಿ ಹೊರಗಣ ವಿಷಯಗಳನ್ನರಿಯದಿತ್ತು ; ಆಮೇಲೆ ನಾನು ಮನಸ್ಸನ್ನು ತನ್ನ ಸ್ಥಾನದಿಂದ ಎಬ್ಬಿಸಿ ಚಕ್ಷುರೀಂದ್ರಿಯಕ್ಕೆ ಸಹಕಾರಮಾಡಿಕೊಂಡು ಕಣ್ಣುತೆರೆದು ಸೂರ್ಯನನ್ನು ನೋಡಿದೆನು ; ಆ ಸೂರ್ಯಮಂಡಲವು ಐವತ್ತುಕೋಟಿ ಗಜದ ವಿಸ್ತಾರವುಳ್ಳದ್ದಾಗಿ ಕಾಣಿಸಿತು ; ಜಟಾಯುವು ಸೂರ್ಯಮಂಡಲದ ಸಮೀಪಕ್ಕೆ ಬಾರದು ನನ್ನನ್ನು ಕಾಣಿಸಿಕೊಳ್ಳದೆ ಕಂಗೆಟ್ಟು ತಿರಿಗಿ ಭೂಮಂಡಲಕ್ಕಿರಗುತಿದ್ದನು ; ನಾನು ಅಂತರಿಕ್ಷಮಾರ್ಗದಲ್ಲಿ ಆ ಜಟಾಯುವಿಗೆ ಗರಿಶೀಯದಹಾಗೆ ಮೇಲುಗಡೆಯಲ್ಲಿದ್ದೆನು ; ಆಮೇಲೆ ಜಟಾಯುವು ಭೂಲೋಕಕ್ಕಿಳಿದು ಬಂದನು ; ನಾನು ಸೂರ್ಯಕಿರಣ ಜ್ವಾಲೆಯಿಂದ ಗರಿಶೀದು ಭೂಲೋಕಕ್ಕೆ ಬಿದ್ದೆನು ; ಆತನು ಜನಸ್ಥಾನದಲ್ಲಿ ಬಿದ್ದಿರಬೇಕು ; ನಾನು ಗರಿಶೀದು ಮರೆವಟ್ಟು ವಿಂಧ್ಯಪರ್ವತದಲ್ಲಿ ಬಿದ್ದೆನು ; ಅದರಿಂದ ನನಗೆ ರಾಜ್ಯತ್ಯಾಗವಾಯಿತು ; ನನ್ನ ಗರಿಶೀದು ಪರಾಕ್ರಮಗುಂದಿದಮೇಲೆ ನಾನಿನ್ನು ಜೀವಪಿಡಿದು ಸಿಲ್ಲಲಾರೆನು ; ಪರ್ವತದ ಕೋಡುಗಲ್ಲಿನಿಂದ ಬಿದ್ದು ಶರೀರವನ್ನು ಬಿಡುವೆನು ' ಎಂದು ಹೇಳಿದೆನು.

## ೬೧ನೇ ಅಧ್ಯಾಯ.

### ಸಂಪಾತಿಗೆ ಗರಿಗಳು ತಿರಿಗಿ ಹುಟ್ಟಿದ್ದು.

" ಎಲೈ ಕಪಿನಾಯಕರುಗಳಿರಾ, ಈಪ್ರಕಾರವಾಗಿ ನಾನು ನಿಶಾಕರಮುನಿಯಕೂಡೆ ಹೇಳಿ ದುಃಖಾತಿಶಯದಿಂದ ರೋದನಮಾಡುತ್ತಿರಲು ಆ ಮುನೀಶ್ವರನು ಒಂದು ಕ್ಷಣಮಾತ್ರವು ಧ್ಯಾನಮಾಡಿ ಜ್ಞಾನದೃಷ್ಟಿಯಿಂದ ಭವಿಷ್ಯದ್ವರ್ತಮಾನವನ್ನು ತಿಳಿದು ನನ್ನನ್ನು ಕುರಿತು ' ಎಲೈ ಸಂಪಾತಿಯೆ, ನಿನಗೆ ಮೊದಲಿನ ಮರ್ಯಾದೆಯಲ್ಲಿ ರೆಕ್ಕೆಗಳೂ ಗರಿಗಳೂ ಹುಟ್ಟುವವು ; ಎಂದಿನಮರ್ಯಾದೆಯಲ್ಲಿ ನಿನಗೆ ದೂರದೃಷ್ಟಿಯುಂಟಾಗುವದು ; ನಿನ್ನ ಪ್ರಾಣಗಳು ದೃಢವಾಗುವವು ; ನಿನ್ನ ಬಲಪರಾಕ್ರಮಗಳು ಮೊದಲಂತೆ ಉಂಟಾಗುವವು ; ಈ ವರ್ತಮಾನವನ್ನು ನಾನು ಭವಿಷ್ಯತ್ಪುರಾಣವನ್ನು ಕೇಳಿದವನಾದ್ದರಿಂದ ತಿಳಿದೆನು ; ನನ್ನ ಜ್ಞಾನದೃಷ್ಟಿಯಿಂದಲೂ ನಿಶ್ಚಯಿಸಿದೆನು ! ಮುಂದೆ ದಶರಥನೆಂಬ ರಾಯನು ಇಕ್ಷ್ವಾಕುವಂಶದಲ್ಲಿ ಜನಿಸುವನು ; ಆ ರಾಯನಿಗೆ ಮಹಾ ತೇಜಸ್ವಿಯಾದ ಶ್ರೀರಾಮನೆಂಬ ಕುಮಾರನು ಅವತರಿಸುವನು ; ಆತನು ಒಂದು ಕಾರ್ಯನಿಮಿತ್ತವಾಗಿ ತನ್ನ ತಂದೆಯಾದ ದಶರಥರಾಯನಿಂದ ಕಳುಹಿಸಿಕೊಂಡು ವನವಾಸಕ್ಕೆ ಬಂದು ಜನಸ್ಥಾನದಲ್ಲಿರುವನು ; ಆಗ ಮಹಾ ಪರಾಕ್ರಮಿಯಾದ ರಾವಣನು ಆತನ ಪಟ್ಟದ ರಾಣಿಯಾದ ಸೀತಾದೇವಿಯನ್ನು ಎತ್ತಿಕೊಂಡು ಹೋಗಿ ಆ ದೇವಿಯ ಮನಸ್ಸನ್ನು ಕರಿಗಿಸಿ ತನಗೆ ಒಳಗುಮಾಡಿಕೊಳ್ಳಬೇಕೆಂದು ತನ್ನ ಮನೆಯಲ್ಲಿರಿಸಿಕೊಂಡು ಒಳ್ಳೇ ಭಕ್ಷ್ಯಭೋಜ್ಯಗಳನ್ನು ಕೊಡುವನು ; ಆ ದೇವಿಯು ತನ್ನ ಪ್ರಾಣಕಾಂತನಾದ ಶ್ರೀರಾಮನ ವಿರಹದುಃಖದಿಂದ ಆ ಭೋಜ್ಯವಸ್ತುಗಳನ್ನು ಮುಟ್ಟದಿರುವಳು ; ಆ

ವರ್ತಮಾನವನ್ನು ಕೇಳಿ ದೇವೇಂದ್ರನು ದಿವ್ಯವಾದ ಪರಮಾನ್ನವನ್ನು ದೇವತೆಗಳ ಕೈಯಲ್ಲಿ ಕಳುಹಿಸುವನು ; ಸೀತಾದೇವಿಯು ಆ ದಿವ್ಯಪರಮಾನ್ನವನ್ನು ಪಡೆದು ಅದು ದೇವೇಂದ್ರನು ಕಳುಹಿಸಿದ್ದೆಂದು ತಿಳಿದು ಆ ದಿವ್ಯಪರಮಾನ್ನವನ್ನು ಮೂರುಭಾಗವಮಾಡಿ ಒಂದು ಭಾಗವನ್ನು '—ಈ ಪರಮಾನ್ನವು ಜೀವವಂತನಾಗಿದ್ದ ಪಕ್ಷದಲ್ಲಿ ಶ್ರೀರಾಮನಿಗೆ ಸಮರ್ಪಿತವು—' ಎಂದು ಭೂಮಿಯಲ್ಲಿರಿಸಿ ಮತ್ತೊಂದು ಭಾಗವನ್ನು '—ಲಕ್ಷ್ಮಣನು ಜೀವವಂತನಾಗಿದ್ದ ಪಕ್ಷದಲ್ಲಿ ಆತನಿಗೆ ಸಮರ್ಪಿತವು—' ಎಂದು ಭೂಮಿಯಮೇಲಿರಿಸಿ '—ನಾನು ಕೊಟ್ಟ ದಿವ್ಯಾನ್ನವು ರಾಮಲಕ್ಷ್ಮಣರು ಜೀವದಿಂದಿದ್ದರೆ ಅವರಿಗೆ ಸೇರಲಿ ; ಹಾಗಲ್ಲದೆ ದೇವತ್ವವನ್ನು ಪಡೆದಿದ್ದರೂ ಇದು ಅವರಿಗೆ ಸಮರ್ಪಿತವಾಗಲೀ !—' ಎಂದು ಪ್ರೇರೇಪಿಸಿ ಮಿಕ್ಕ ಭಾಗವನ್ನು ಶ್ರೀರಾಮನ ಪ್ರಸಾದವೆಂದು ತಾನು ತೆಗೆದುಕೊಂಡು ದೇವೇಂದ್ರನು ಕಳುಹಿಸಿದ ಆ ದಿವ್ಯಾನ್ನದ ಮಹಿಮೆಯಿಂದ ಹಸಿವು ತೃಷೆಗಳಿಲ್ಲದೆ ದಿವ್ಯದೇಹಿಯಾಗಿರುವಳು ; ಆಮೇಲೆ ಶ್ರೀರಾಮನ ದೂತರಾದ ಕೆಲವು ಕಪಿನಾಯಕರು ಸೀತಾದೇವಿಯನ್ನರಸಿಕೊಂಡು ಬರುವರು ; ಅವರಕೂಡೆ ಸೀತಾದೇವಿಯನ್ನು ರಾವಣನು ಹಿಡಿದುಕೊಂಡು ಹೋದ ವೃತ್ತಾಂತವನ್ನು ನೀನು ಹೇಳುವೆ ; ಅದರಿಂದ ನೀನು ಮೊದಲಿನ ಮರ್ಯಾದೆಯಲ್ಲಿ ದೃಷ್ಟಿಸಾಮರ್ಥ್ಯವನ್ನೂ ಬಲವನ್ನೂ ಪಡೆಯುವೆ ; ನೀನು ಶ್ರೀರಾಮನು ಅವತರಿಸುವ ಕಾಲವನ್ನು ನೋಡಿಕೊಂಡಿದ್ದರೆ ನಿನ್ನ ಗರಿಗಳು ಮೊದಲಮರ್ಯಾದೆಯಲ್ಲಿ ಹುಟ್ಟುವವು ; ಈಕ್ಷಣದಲ್ಲಿಯೇ ನಿನಗೆ ಗರಿಗಳು ಹುಟ್ಟಿ ಬರುವದಕ್ಕೆ ತಕ್ಕ ಪ್ರಯತ್ನವನ್ನು ಮಾಡುವದಕ್ಕೆ ನನಗೆ ಸಾಮರ್ಥ್ಯವಿಲ್ಲ ; ನೀನಿಲ್ಲೇ ಇದ್ದರೆ ಜಗದ್ಧಿತಾರ್ಥವಾದ ಕಾರ್ಯವನ್ನು ಮಾಡಲುಳ್ಳವನು ; ನೀನು ಈ ಸ್ಥಳದಲ್ಲಿಯೇ ಇದ್ದರೆ ಶ್ರೀರಾಮಲಕ್ಷ್ಮಣರ ಕಾರ್ಯವನ್ನೂ ಸಮಸ್ತ ಬ್ರಾಹ್ಮಣರ ಕಾರ್ಯವನ್ನೂ ಇಂದ್ರಾದಿ ಸಮಸ್ತ ದೇವತೆಗಳ ಕಾರ್ಯವನ್ನೂ ಆಗಮಾಡಲುಳ್ಳವನು ; ನಾನು ರಾಮಲಕ್ಷ್ಮಣರನ್ನು ನೋಡಬೇಕೆಂದು ಮನಸ್ಸಿನಲ್ಲಿ ಬಯಸಿಕೊಂಡಿದ್ದೇನೆ ; ಹಾಗಾದರೆ ನಾನು ಬಹುಕಾಲವು ಪ್ರಾಣಗಳನ್ನು ಧರಿಸಿಕೊಂಡು ನಿಲ್ಲಲಾರೆನು ; ನಾನು ಸ್ವಲ್ಪಕಾಲದಲ್ಲೇ ಶರೀರವನ್ನು ಬಿಡುವೆನು' ಎಂದು ಅನೇಕ ಪ್ರಿಯವಚನಗಳಿಂದ ನನ್ನನ್ನು ಸಂತವಿಟ್ಟು ತನ್ನ ಆಶ್ರಮಕ್ಕೆ ಹೋದನು.

"ಆ ಬಳಿಕ ನಾನು ಆ ಕೋಡುಗಲ್ಲಿನಿಂದ ಮೆಲ್ಲಮೆಲ್ಲಗೆ ವಿಂಧ್ಯಪರ್ವತವನ್ನು ಹತ್ತಿಕೊಂಡು ನಿಶಾಕರಮುನಿಯ ಮಾತನ್ನು ನೆನೆದು ನಿಮ್ಮ ಬರವನ್ನು ನೋಡಿಕೊಂಡಿದ್ದೆನು ; ಅದು ಮೊದಲು ಇಂದಿಗೆ ನೂರು ವರುಷಗಳು ಸಂಪೂರ್ಣವಾದವು ; ಈ ಮರ್ಯಾದೆಯಲ್ಲಿ ನಿಶಾಕರಮುನಿಯು ಹಿಮವತ್ಪರ್ವತದ ಮಹಾಪ್ರಸ್ಥಾನವನ್ನು ಹೊಕ್ಕು ಹೋದಮೇಲೆ ನಾನು ಬಹುಕಾಲದಿಂದ ನಿಮ್ಮನ್ನು ಎದುರುನೋಡಿಕೊಂಡು ದುಃಖಿಸಿಕೊಂಡಿದ್ದೆನು ; ನನಗೆ ಮರಣವಾಗಬೇಕೆಂಬ ಬುದ್ಧಿ ಹುಟ್ಟಿದರೂ ಆ ಬುದ್ಧಿಯನ್ನು ಪರಾಜಿತವಮಾಡಿ ನಿಶಾಕರಮುನಿಯ ವಾಕ್ಯಗಳನ್ನೇ ಮನಸ್ಸಿನಲ್ಲಿರಿಸಿಕೊಂಡು ನನ್ನ ಪ್ರಾಣಗಳನ್ನು ರಕ್ಷಿಸಿಕೊಂಡಿದ್ದೆನು ; ಯಜ್ಞಪುರುಷನ ಪ್ರಭೆಯು ಅಂಧಕಾರವನ್ನು ತೊಲಗಿಸುವಂತೆ ಆ ಮುನಿಯು ಹೇಳಿದ ಬುದ್ಧಿಯು ನನ್ನ ದುಃಖಾಂಧಕಾರವನ್ನು ತೊಲಗಿಸಿಕೊಂಡಿತ್ತು ; ನಾನು ರಾವಣನ ಪರಾಕ್ರಮವನ್ನು ಬಲ್ಲವನಾದ್ದರಿಂದ ಸೀತಾದೇವಿಯನ್ನು ಎತ್ತಿಕೊಂಡು ಹೋಗುತ್ತಿದ್ದ ರಾವಣನನ್ನು ಕಂಡುಬಂದ ನನ್ನ ಮಗನಾದ ಸುಪಾರ್ಶ್ವನನ್ನು ಕುರಿತು ಸೀತಾದೇವಿಯನ್ನು ಉಪೇಕ್ಷೆಮಾಡಿ ರಾವಣನನ್ನು ಬಿಟ್ಟುಬಂದದ್ದಕ್ಕಾಗಿ ಬಹಳವಾಗಿ ಕೋಪಿಸಿಕೊಂಡೆನು ; ರಾಮಲಕ್ಷ್ಮಣರು ಸೀತಾದೇವಿಯ ವಿಯೋಗದಿಂದ ದುಃಖಾಕ್ರಾಂತರಾಗಿರುವರು ; ನನಗೆ ದಶರಥರಾಯನ ಸ್ನೇಹದಿಂದ ಆತನ ಮಕ್ಕಳಾದ ರಾಮಲಕ್ಷ್ಮಣರನ್ನು ನೋಡಬೇಕೆಂದು ಬಹಳ ಇಚ್ಛೆಯಾಗಿದೆ " ಎಂದು ನುಡಿದನು.

ಆ ಸಮಯದಲ್ಲಿ ಅಂಗದಾದಿ ಕಪಿನಾಯಕರು ನೋಡುತ್ತಿರಲು ಸಂಪಾತಿಗೆ ಗರಿಗಳು ಹುಟ್ಟಿದವು ; ಆತನು ಕೆಂಪಾದ ಗರಿಗಳಿಂದ ಮನೋಹರವಾದ ತನ್ನ ಶರೀರವನ್ನು ನೋಡಿ ಅತ್ಯಂತ ಸಂತೋಷಪಟ್ಟು ಆ ಕಪಿನಾಯಕರನ್ನು ಕುರಿತು "ಎಲೈ ಕಪಿನಾಯಕಮುಖ್ಯಗಳಿರಾ, ಮಹಾತ್ಮನಾದ ನಿಶಾಕರಮುನಿಯ ಪ್ರಭಾವದಿಂದ ನನಗೆ ಸೂರ್ಯಕಿರಣಜ್ವಾಲೆಯಿಂದ ಶೀದುಹೋದ ಗರಿಗಳು ತಿರಿಗಿ ಹುಟ್ಟಿದವು ; ನನಗೆ ಯೌವನಾವಸ್ಥೆಯಲ್ಲಿ ಎಂಥಾ ಪರಾ

ಕ್ರಮವಿತ್ತೋ ಅಂಥಾ ಪರಾಕ್ರಮವುಂಟಾಗಿ ನನ್ನ ಶರೀರವು ಮೊದಲಿನಂತೆ ತೇಜಸ್ಸುಳ್ಳದ್ದಾಗಿದೆ; ನಿಶಾಕರಮುನಿಯು ಹೇಳಿದ ಮಾತುಗಳ ಪ್ರಕಾರ ಕೆಲವು ಕಾರ್ಯಗಳು ತಾರ್ಕಣ್ಯವಾದದ್ದರಿಂದ ಮಿಕ್ಕ ಕಾರ್ಯಗಳೂ ತಾರ್ಕಣ್ಯವಾಗಲುಳ್ಳವಲ್ಲದೆ ತಪ್ಪವು; ಆದ್ದರಿಂದ ನೀವು ಸೀತಾದೇವಿಯನ್ನರಸುವದಕ್ಕೆ ತಕ್ಕ ಪ್ರಯತ್ನವನ್ನು ಅವಶ್ಯಕವಾಗಿ ಕಾಣಿ; ನನಗೆ ಈಗ ಗರಿಹುಟ್ಟಿಬಂದಿದೆ; ಇದು ಮುಂದೆ ನಿಮ್ಮ ಕಾರ್ಯವಾಗುವದಕ್ಕೆ ಶಕುನವು!" ಎಂದು ನುಡಿದು ಮುಂದೆ ಪರಗತಿಯನ್ನು ಸಾಧಿಸಿಕೊಳ್ಳಬೇಕೆಂಬ ಬುದ್ಧಿಯಿಂದ ವಿಂಧ್ಯಪರ್ವತದ ಕೋಡುಗಲ್ಲಿನಿಂದ ಖೇಚರಮಾರ್ಗವಾಗಿ ಹೋದನು.

ಆಮೇಲೆ ವಾಯುವೇಗ ಮನೋವೇಗವುಳ್ಳವರಾದ ಹನುಮಂತನು ಮೊದಲಾದ ಕಪಿನಾಯಕರು ಸಂಪಾತಿಯ ಮಾತನ್ನು ಕೇಳಿ ಅತಿ ಹರ್ಷಪಟ್ಟು "ನಮಗಿನ್ನು ಕಾರ್ಯಸಿದ್ಧಿಯಾಗಲುಳ್ಳದ್ದು; ನಾವಿನ್ನು ಸೀತಾದೇವಿಯನ್ನು ಕಂಡರೆ ನಮ್ಮ ಒಡೆಯನಾದ ಸುಗ್ರೀವನ ಸಮೀಪಕ್ಕೆ ಹೋಗಬಹುದು" ಎಂದು ನಿಶ್ಚಯಿಸಿಕೊಂಡು ಹ್ಯಾಗಾದರೂ ಸೀತಾದೇವಿಯನ್ನರಸಿ ಕಾಣಬೇಕೆಂದು ಪ್ರೀತಿಯಿಂದಲೂ ಹರ್ಷದಿಂದಲೂ ಯತ್ನಮಾಡುತ್ತಿದ್ದರು.

---

## ೬೫ನೇ ಅಧ್ಯಾಯ.

### ಜಾಂಬವಂತನು ಹನುಮಂತನು ಸಮುದ್ರವನ್ನು ದಾಟಿಬರಲು ಸಮರ್ಥನೆಂದದ್ದು.

ಆ ಬಳಿಕ ಗೃಧ್ರರಾಜನಾದ ಸಂಪಾತಿಯ ಮಾತನ್ನು ಕೇಳಿ ಆ ಕಪಿನಾಯಕರೆಲ್ಲರೂ ಕೂಡಿಕೊಂಡು ಅತಿ ಹರ್ಷಯುಕ್ತರಾಗಿ ಬೊಬ್ಬಿಟ್ಟು ಘರ್ಜಿಸುತ ಸಮಸ್ತ ಲೋಕಗಳ ಪ್ರತಿಬಿಂಬವೋ ಎಂಬ ಮರ್ಯಾದೆಯುಳ್ಳದ್ದ ತೆಂಕಣ ಸಮುದ್ರದ ಬಡಗಣತೀರಕ್ಕೆ ಬಂದು ಪಾಳಯಮಿಳಿದು ಅಲ್ಲಿ ಘನಗಾತ್ರವಾದ ಶರೀರಗಳಿಂದ ಭಯಂಕರವಾಗಿ ಬಾಯಿಬಿಟ್ಟುಕೊಂಡಿದ್ದ ನಾನಾ ಜಲಚರಪ್ರಾಣಿಗಳುಳ್ಳದ್ದಾಗಿ ಒಂದು ದಿಕ್ಕಿನಲ್ಲಿ ಮಹತ್ತಾದ ತೆರೆಗಳಿಂದ ಇಟ್ಟಣಿಸಿದ್ದಾಗಿ ಒಂದು ದಿಕ್ಕಿನಲ್ಲಿ ಚಂಚಲವಿಲ್ಲದೆ ನಿದ್ರೆಮಾಡುವಂತೆ ಒಪ್ಪುವಂಥಾದ್ದಾಗಿ ಒಂದು ದಿಕ್ಕಿನಲ್ಲಿ ಪರ್ವತಾಕಾರವಾದ ತೆರೆಗಳ ಹೊಯ್ಲುಗಳಿಂದ ಅತಿ ಭಯಂಕರವಾಗಿ ಮತ್ತೊಂದು ದಿಕ್ಕಿನಲ್ಲಿ ಪಾತಾಳವಾಸಿಗಳಾದ ದಾನವರಿಂದ ಇಟ್ಟಣಿಸಿದ್ದಾಗಿ ಆಕಾಶದಂತೆ ನೋಡುವದಕ್ಕೆ ಅಸಾಧ್ಯವಾದ್ದಾಗಿ ತಡಿಗಳಿಲ್ಲದೆ ಒಪ್ಪುತ್ತಿದ್ದ ಆ ಸಮುದ್ರವನ್ನು ಕಂಡು ಭಯಪಟ್ಟು ಅಂಥಾ ಸಮುದ್ರವನ್ನು ದಾಟಿ ಲಂಕಾದ್ವೀಪಕ್ಕೆ ಹೋಗುವದು ಹ್ಯಾಗೆಂದು ಕಂಗೆಡುತ್ತಿದ್ದರು; ಆ ಕಪಿನಾಯಕರನ್ನು ಕಂಡು ಅಂಗದಕುಮಾರನು ಧೈರ್ಯಗುಂದದೆ ಅವರನ್ನು ಅಂಜದಿರಬೇಕೆಂದು ಸಂತವಿಟ್ಟು ಅವರನ್ನು ಕುರಿತು "ಎಲೈ ಕಪಿನಾಯಕಮಕ್ಕಳಿರಾ, ಮನಸ್ಸಿನಲ್ಲಿ ಧೈರ್ಯಗುಂದಿ ಕಂಗೆಟ್ಟು ದುಃಖಪಡಬೇಡಿ, ದುಃಖವು ಕೋಪಕೆರಳಿದ ಸರ್ಪವು ಅರಿಯದ ಬಾಲಕನನ್ನು ಕೊಲ್ಲುವಂತೆ ಪುರುಷನ ಬಲವನ್ನು ಕೆಡಿಸುವದು; ಯಾವ ಪುರುಷನು ಆಪತ್ಕಾಲಬಂದಲ್ಲಿ ಧೈರ್ಯಗುಂದಿ ದುಃಖಪಡುವನೋ ಆತನ ತೇಜಸ್ಸು ಗುಂದುವದು; ಆತನ ಕಾರ್ಯಸಿದ್ಧಿಯೂ ಕೆಡುವದು" ಎಂದು ಧೈರ್ಯಹೇಳಿ ಸಂತವಿಟ್ಟನು.

ಆ ಬಳಿಕ ಅಂಗದನು ಆ ರಾತ್ರಿಯನ್ನು ಕಳೆದು ಸಮಸ್ತ ಕಪಿನಾಯಕರನ್ನೂ ಕೂಡಿಕೊಂಡು ಮಂತ್ರಾಲೋಚನೆ ಮಾಡುತ್ತಿರಲು ಆತನನ್ನು ಸುತ್ತುವರಿದಿದ್ದ ಕಪಿಸೇನೆಯು ದೇವೇಂದ್ರನನ್ನು ಸುತ್ತುವರಿದಿರುವ ದೇವಸೇನೆಯಂತೆ ಅತಿ ರಮಣೀಯವಾಗಿ ಒಪ್ಪುತ್ತಿತ್ತು! ಅಂಥಾ ಅಪರಿಮಿತವಾದ ಕಪಿಸೇನೆಯನ್ನು ವಾಲಿಯ ತನಯನಾದ ಅಂಗದನೂ ಅತಿ ಪರಾಕ್ರಮಿಯಾದ ಹನುಮಂತನೂ ಹೊರ್ತಾಗಿ ಆಜ್ಞೆಯಲ್ಲಿ ನಿಲ್ಲಿಸುವವರೊಬ್ಬರೂ ಇಲ್ಲ; ಆ ಬಳಿಕ ಅಂಗದಕುಮಾರನು ಹನುಮಂತನು ಮೊದಲಾದ ಕಪಿನಾಯಕರನ್ನು ಸನ್ಮಾನಿಸಿ ಸಂತವಿಟ್ಟು ಅವರನ್ನು ಕುರಿತು "ಎಲೈ ಕಪಿನಾಯಕಮಕ್ಕಳಿರಾ ಕೇಳಿ; ನಮ್ಮಲ್ಲಿ ಈ ಸಮುದ್ರವನ್ನು ದಾಟಿ ಲಂಕಾದ್ವೀಪಕ್ಕೆ ಹೋಗಿ ಸೀತಾದೇ

ಮಿಯ ವೃತ್ತಾಂತವನ್ನರಿತು ಬಂದು ಇಷ್ಟುಮಂದಿ ಕಪಿನಾಯಕರ ಕಂಗೆಡಿಕೆಯನ್ನು ಬಿಡಿಸುವ ಸಮರ್ಥರ್ಯಾರಾದರಿದ್ದರೆ ಅವರ ಕೃಪೆಯಿಂದ ನಾವೆಲ್ಲರು ಕಾರ್ಯಸಾಧನೆ ಮಾಡಿಕೊಂಡು ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ಸುಗ್ರೀವನನ್ನು ಕಾಣಿಸಿಕೊಂಡು ನಮ್ಮ ನಮ್ಮ ಸ್ತ್ರೀಯರನ್ನೂ ಮಕ್ಕಳನ್ನೂ ಕೂಡಿಕೊಂಡು ಸುಖವಾಗಿರುವೆವು ; ಅಂಥಾ ಪುಣ್ಯಾತ್ಮರಾದ ಕಪಿನಾಯಕರ್ಯಾರಿದ್ದಾರೆ ; ಸಮುದ್ರವನ್ನು ದಾಟಿ ಲಂಕಾದ್ವೀಪಕ್ಕೆ ಹೋಗಿ ಸೀತಾದೇವಿಯ ಪರಿಣಾಮಸ್ಥಿತಿಯನ್ನರಿತು ತಿರಿಗಿ ಬಂದು ನಾವೆಲ್ಲರು ಮಹಾಬಲವಂತರಾದ ರಾಮಲಕ್ಷ್ಮಣರನ್ನು ಕಾಣುವಹಾಗೆ ಮಾಡುವಂಥಾ ಸಮರ್ಥರಿದ್ದ ಪಕ್ಷದಲ್ಲಿ ನನಗೆ ಅಂಜದೇ ಅಭಯವನ್ನು ಕೊಡಲೀ'' ಎಂದು ನುಡಿದನು.

ಅದನ್ನು ಕೇಳಿ ಆ ಕಪಿನಾಯಕರು ಪ್ರತ್ಯುತ್ತರವನ್ನು ನುಡಿಯದೆ ಮೌನಸ್ಥರಾಗಿದ್ದರು ; ಅಂಗದಕುಮಾರನು ಆ ಕಪಿನಾಯಕರನ್ನು ಕುರಿತು ''ಎಲೈ ಕಪಿನಾಯಕರುಗಳಿರಾ, ನೀವೆಲ್ಲರು ಲೋಕದಲ್ಲಿ ಮಹಾಬಲವಂತರಾಗಿ ಪರಾಕ್ರಮಿಗಳಾಗಿ ಉತ್ತಮಕುಲದಲ್ಲಿ ಜನಿಸಿದವರಾಗಿ ಅತಿ ಪೂಜ್ಯರಾದವರು ; ನೀವು ಸುಮ್ಮನಿದ್ದರೆ ಇನ್ನೆಂದಿಗೂ ಕಿಷ್ಕಿಂಧಾಪಟ್ಟಣಕ್ಕೆ ಹೋಗುವದೆಂಬ ಆಶೆಯನ್ನು ಬಿಡೀ ; ನಿಮ್ಮಿಷ್ಟುಮಂದಿಯಲ್ಲಿ ಯಾರಿಗೆ ಸಮುದ್ರವನ್ನು ದಾಟುವದಕ್ಕೆ ಸಾಮರ್ಥ್ಯವುಂಟೋ ಆತನು ಈಗಲೇ ಪ್ರೀತಿವಚನವನ್ನು ನುಡಿಯಲೀ'' ಎಂದು ನುಡಿದನು.

ಆ ಮಾತನ್ನು ಕೇಳಿ ಗಜನು ಗವಯನು ಗವಾಕ್ಷನು ಶರಭನು ಗಂಧಮಾದನನು ಮೈಂದನು ದ್ವಿವಿದನು ಸುಷೇಣನು ಜಾಂಬವಂತನು ಮೊದಲಾದ ಕಪಿನಾಯಕರು ತಮ್ಮ ತಮ್ಮ ಉತ್ಸಾಹಶಕ್ತಿಗಳಿಗೆ ತಕ್ಕ ಕಾರ್ಯಸ್ಥಿತಿಯನ್ನು ಹೇಳಿದರು ; ಮೊದಲು ಗಜನು ತಾನು ಹತ್ತುಗಾವುದ ದಾರಿ ದಾಟುವ ಸಾಮರ್ಥ್ಯವುಳ್ಳವನೆಂದು ನುಡಿದನು ; ಗವಾಕ್ಷನು ಇಪ್ಪತ್ತುಗಾವುದ ದಾರಿಯನ್ನು ದಾಟುವದಾಗಿ ನುಡಿದನು ; ಶರಭನು ಮೂವತ್ತುಗಾವುದ ದಾರಿಯನ್ನು ದಾಟುವದಾಗಿ ನುಡಿದನು ; ವೃಷಭನು ನಲವತ್ತು ಗಾವುದ ದಾರಿಯನ್ನು ದಾಟುವದಾಗಿಯೂ ಗಂಧಮಾದನನು ಐವತ್ತುಗಾವುದ ದಾರಿಯನ್ನು ದಾಟುವದಾಗಿಯೂ ಮೈಂದನು ಅರವತ್ತುಗಾವುದ ದಾರಿಯನ್ನು ದಾಟುವದಾಗಿಯೂ ದ್ವಿವಿದನು ಎಪ್ಪತ್ತುಗಾವುದ ದಾರಿಯನ್ನು ದಾಟುವದಾಗಿಯೂ ಸುಷೇಣನು ಎಂಭತ್ತುಗಾವುದ ದಾರಿಯನ್ನು ದಾಟುವದಾಗಿಯೂ ಹೇಳಿದರು ; ಆಮೇಲೆ ಅತಿ ವೃದ್ಧನಾದ ಜಾಂಬವಂತನು ''ಎಲೈ ಕಪಿನಾಯಕಮಕ್ಕಳಿರಾ, ಈಗ ನನಗೆ ವೃದ್ಧಾಪ್ಯವಾಗಿ ಪರಾಕ್ರಮಗುಂದಿತು ; ನನಗೆ ಈಗ ಮೊದಲಿದ್ದ ಮರ್ಯಾದೆಯಲ್ಲಿ ಸಾಮರ್ಥ್ಯವಿಲ್ಲ ; ಹಾಗಾದರೂ ಸುಗ್ರೀವನ ಮಾತನ್ನು ಮೀರಲು ಶಕ್ಯವಲ್ಲ ; ಮಹಾತ್ಮನಾದ ಶ್ರೀರಾಮನ ಕಾರ್ಯವನ್ನು ಉಪೇಕ್ಷೆಮಾಡಸಲ್ಲದು ; ಆದಕಾರಣ ಈಗಲೂ ನಾನು ತೊಂಭತ್ತುಗಾವುದ ದಾರಿಯನ್ನು ಸಂಶಯವಿಲ್ಲದೆ ದಾಟುವೆನು ; ಆದರೆ ಅಷ್ಟುಮಾತ್ರದಿಂದ ಕಾರ್ಯಸಾಧ್ಯವಾಗಲಾರದು ; ನಾನು ಪೂರ್ವದಲ್ಲಿ ಬಲಿಚಕ್ರವರ್ತಿಯ ಯಾಗದಲ್ಲಿ ನಾರಾಯಣನು ವಾಮನಾವತಾರನಾಗಿ ಬಂದು ಬಲಿಚಕ್ರವರ್ತಿಯಿಂದ ಮೂರಡಿ ಭೂಮಿಯನ್ನು ಪಡೆದು ಸ್ವರ್ಗ ಮರ್ತ್ಯ ಪಾತಾಳಗಳೆಂಬ ಮೂರು ಲೋಕಗಳನ್ನೂ ತನ್ನ ಹೆಜ್ಜೆಗಳಿಂದ ಆವರಿಸಿಕೊಂಡಿದ್ದ ಸಮಯದಲ್ಲಿ ಆ ತ್ರಿವಿಕ್ರಮಾವತಾರನಾದ ಸ್ವಾಮಿಯನ್ನು ಪ್ರದಕ್ಷಿಣಮಾಡಿದೆನು ; ಈಗ ಅಂಥಾ ಸಾಮರ್ಥ್ಯವೂ ಶರೀರಬಲವೂ ಉತ್ಸಾಹಶಕ್ತಿಯೂ ಇಲ್ಲ ; ಈಗ ನಾನು ತೊಂಭತ್ತುಗಾವುದದಾರಿ ದಾಟಿದರೂ ಕಾರ್ಯಸಿದ್ಧಿಯಾಗದು'' ಎಂದು ನುಡಿದನು.

ಆ ಮಾತನ್ನು ಕೇಳಿ ಅಂಗದಕುಮಾರನು ಜಾಂಬವಂತನನ್ನು ಸತ್ಕರಿಸಿ ''ಎಲೈ ಜಾಂಬವಂತನೇ, ನಾನು ನೂರು ಗಾವುದದಾರಿ ದಾಟಿಹೋಗುವೆನು ; ಆದರೆ ಅಲ್ಲಿಂದ ತಿರಿಗಿ ದಾಟಿಬರುವದಕ್ಕೆ ಸಾಮರ್ಥ್ಯ ಉಂಟೋ ಇಲ್ಲವೋ ತಿಳಿಯಲಿಲ್ಲ'' ಅಂದನು.

ಆ ಮಾತನ್ನು ಕೇಳಿ ಜಾಂಬವಂತನು ''ಎಲೈ ಅಂಗದಕುಮಾರನೆ, ನಿನ್ನ ಸಾಮರ್ಥ್ಯವನ್ನು ನಾನು ಬಲ್ಲೆನು ; ನೀನು ನೂರುಗಾವುದ ದಾರಿಯನ್ನಾದರೂ ಸಾವಿರಗಾವುದ ದಾರಿಯನ್ನಾದರೂ ದಾಟಿಬರುವದಕ್ಕೆ ಸಮರ್ಥನು ; ಹಾಗಾದರು ನೀನು ನಮಗೆಲ್ಲರಿಗೂ ಒಡೆಯನು ; ನಿನ್ನನ್ನು ಈ ಕಾರ್ಯಕ್ಕೆ ಕಳುಹಿಸಿ ನಾವು ಇಲ್ಲಿರುವದು ಕಾರ್ಯವಲ್ಲ ; ನಮಗೆಲ್ಲರಿಗೂ ನೀನೇ ಆಧಾರವು ; ಸಮಸ್ತ ಕಾರ್ಯಕ್ಕೂ ನೀನೇ ಪ್ರಧಾನನು ; ಆದಕಾರಣ ನಿನ್ನನ್ನಿರಿಸಿ

ಕೊಂಡು ನಾವು ಯಾವ ಕಾರ್ಯವನ್ನಾದರು ಸಾಧನಮಾಡಬೇಕಲ್ಲದೆ ನಿನ್ನನ್ನು ಕಳುಹಿಸಿ ನಾವು ಸುಮ್ಮನಿರುವದು ಸರ್ವಥಾ ಕಾರ್ಯವಲ್ಲ; ಲೋಕದಲ್ಲಿ ಬೇರಿಗೆ ನೀರೆರದು ಜತನಮಾಡಿಕೊಂಡರೆ ಸಮಸ್ತ ಫಲಪುಷ್ಪಗಳೂ ಉಂಟಾಗುವವು; ಆ ಮರ್ಯಾದೆಯಲ್ಲಿ ನೀನು ಈ ಕಾರ್ಯಕ್ಕೆ ಸಾಧಕನು; ಅದಲ್ಲದೆ ನೀನು ರಾಜಪುತ್ರನು; ನಮಗೆಲ್ಲರಿಗೂ ಒಡೆಯನು; ನಿನ್ನ ಸಾಮರ್ಥ್ಯದಿಂದ ನಾವು ಕಾರ್ಯಸಾಧನೆ ಮಾಡಬೇಕಲ್ಲದೆ ಮತ್ತೊಂದಲ್ಲ" ಅಂದನು.

ಆ ಮಾತನ್ನು ಕೇಳಿ ಅಂಗದನು ಪ್ರತ್ಯುತ್ತರವನ್ನು ಕೊಡುತ "ಎಲೈ ಜಾಂಬವಂತನೆ, ನಾನೂ ಹೋಗದೇ ಉಳಿದವರೂ ಹೋಗದೇ ಕಾರ್ಯವಿಳಂಬವಾದಪಕ್ಷದಲ್ಲಿ ನಮಗೆಲ್ಲರಿಗೂ ಮೊದಲಮರ್ಯಾದೆಯಲ್ಲಿ ಪ್ರಾಯೋಪವೇಶವೇ ಗತಿಯಲ್ಲದೆ ಕಾರ್ಯಾಂತರವಿಲ್ಲ; ನಾವು ಈ ಕಾರ್ಯವನ್ನು ಸಾಧ್ಯಮಾಡದೆ ಸುಗ್ರೀವನ ಸಮೀಪಕ್ಕೆ ಹೋದರೆ ನಮ್ಮ ಪ್ರಾಣಗಳು ಉಳಿಯುವದಕ್ಕಿಲ್ಲ; ಈ ಕಾರ್ಯಕ್ಕೆ ಸಮುದ್ರವನ್ನು ದಾಟುವದುಹೊರ್ತಾಗಿ ಮತ್ತೊಂದು ಸಾಧನಾಂತರವಿಲ್ಲ; ನೀನು ಸರ್ವಜ್ಞನು; ನೀನೇ ಈ ಕಾರ್ಯಕ್ಕೆ ತಕ್ಕ ಯೋಚನೆಯನ್ನು ಕಾಣಬೇಕು" ಎಂದು ನುಡಿದನು.

ಆ ಮಾತನ್ನು ಕೇಳಿ ಜಾಂಬವಂತನು ಅಂಗದನನ್ನು ಕುರಿತು "ಎಲೈ ಅಂಗದಕುಮಾರನೆ, ನಿನ್ನ ಕಾರ್ಯಕ್ಕೆ ಹ್ಯಾಗಾದರೂ ಹಾನಿಯಿಲ್ಲ; ಈ ಕಾರ್ಯವನ್ನು ಸಾಧ್ಯಮಾಡಿಕೊಡುವ ಸಾಮರ್ಥ್ಯವುಳ್ಳವನನ್ನು ಹೇಳುತ್ತೇನೆ ಕೇಳು; ಕಪಿನಾಯಕನಾದ ಹನುಮಂತನು ಮೌನದಲ್ಲಿ ನಿಶ್ಚಿಂತನಾಗಿ ಕುಳಿತುಕೊಂಡಿದ್ದಾನೆ; ಈತನು ಈ ಕಾರ್ಯವನ್ನು ಸಾಧ್ಯಮಾಡುವದಕ್ಕೆ ಸಮರ್ಥನು" ಎಂದು ನುಡಿದನು.

## ೬೩ನೇ ಅಧ್ಯಾಯ.

### ಜಾಂಬವಂತನು ಹನುಮಂತನನ್ನು ಸಮುದ್ರವನ್ನು ದಾಟಬೇಕೆಂದು ಪ್ರಾರ್ಥಿಸಿದ್ದು.

ಆ ಬಳಿಕ ಜಾಂಬವಂತನು ಅತ್ಯಂತ ಕಂಗೆಟ್ಟಿದ್ದ ಕಪಿಸೇನೆಯನ್ನು ನೋಡಿ ಹನುಮಂತನನ್ನು ಕುರಿತು "ಎಲೈ ಹನುಮಂತನೆ, ನೀನು ಮಹಾ ಪರಾಕ್ರಮಿಯಾದವನು; ಸಕಲ ಶಾಸ್ತ್ರಾರ್ಥರಹಸ್ಯವನ್ನು ಬಲ್ಲವನು; ನೀನು ನಿನ್ನ ಪರಾಕ್ರಮವನ್ನು ಹೇಳಿಕೊಳ್ಳದೆ ಯಾವಕಾರಣ ಸುಮ್ಮನಿದ್ದೀ! ನೀನು ಬಲದಲ್ಲಿ ಸುಗ್ರೀವನಿಗೆ ಸರಿಯಾದವನು; ತೇಜಸ್ಸಿನಿಂದಲು ಶರೀರಬಲದಿಂದಲು ರಾಮಲಕ್ಷ್ಮಣರಿಗೆ ಸಮಾನನಾದವನು; ಲೋಕದಲ್ಲಿ ವಿನತೆಯ ಮಗನಾದ ಗರುತ್ಮಂತನು ಮಹಾ ಬಲವಂತನು; ಮಹಾ ಪ್ರಸಿದ್ಧನು; ಮಹಾ ಉತ್ತಮನು; ಸಮಸ್ತ ಪಕ್ಷಿಗಳಿಗೂ ಒಡೆಯನು; ಆತನು ಸಮುದ್ರವನ್ನು ದಾಟಿ ಹೋಗುವಾಗ ಆತನ ಗರಿಗಳ ಬಲವನ್ನು ಅನೇಕಬಾರಿ ನೋಡಿದ್ದೇನೆ; ನಿನ್ನ ಬಲವು ಗರುತ್ಮಂತನ ಬಲಕ್ಕೆ ಸಮಾನವಾದಂಥಾದ್ದು; ನಿನ್ನ ಪರಾಕ್ರಮವೂ ನಿನ್ನ ತೇಜಸ್ಸೂ ಗರುತ್ಮಂತನ ತೇಜೋಬಲಗಳಿಗೆ ಕಡಿಮೆಯಾದವಲ್ಲ! ಎಲೈ ಹನುಮಂತನೆ, ಸಮಸ್ತ ಪ್ರಾಣಿಗಳಲ್ಲಿಯೂ ನಿನ್ನ ತೇಜೋಬಲ ಶಕ್ತಿಗಳೇ ವೆಗ್ಗಳವಾದಂಥಾವು; ಅಂಥಾ ನೀನು ನಿನ್ನ ಸಾಮರ್ಥ್ಯವನ್ನು ಹೇಳಿಕೊಳ್ಳದೆ ಯಾವಕಾರಣ ಸುಮ್ಮನಿದ್ದೀ! ಪುಂಜಿಕಸ್ಥಳವೆಂಬ ಸ್ಥಳವಿಶೇಷದಲ್ಲಿದ್ದ ಅಂಜನಾದೇವಿಯು ಮಹಾ ಉತ್ತಮಳು; ಮಹಾ ಪ್ರಸಿದ್ಧಳು; ಕೇಸರಿಯೆಂಬ ಕಪಿನಾಯಕನ ಪಟ್ಟದರಾಣಿಯು; ರೂಪಲಾವಣ್ಯ ಸೌಂದರ್ಯಗಳಿಂದ ಲೋಕದಲ್ಲಿ ಯಾರೂ ಆಕೆಗೆ ಸರಿಯಾದವರಿಲ್ಲ! ಆಕೆಯು ಮೊದಲು ಅಪ್ಸರಸ್ತ್ರೀಯಾಗಿದ್ದು ಒಂದು ಕಾರಣದಿಂದ ಶಾಪವನ್ನು ಪಡೆದು ಕಪಿಸ್ವರೂಪಿಯಾಗಿ ಕಾಮರೂಪಿಯಾಗಿ ಕುಂಜರನೆಂಬ ಕಪಿನಾಯಕನ ಮಗಳಾಗಿ ಹುಟ್ಟಿ ಅಂಜನಾದೇವಿಯೆಂಬ ಹೆಸರಿನಿಂದ ಮನುಷ್ಯರೂಪವನ್ನು ತಾಳಿಕೊಂಡು ರೂಪಯವ್ವನಗಳಿಂದ ರಮಣೀಯವಾಗಿ ಬಿಳೀ ಪಟ್ಟೆಶೀರೆಯನ್ನುಟ್ಟು ನಾನಾವಿಚಿತ್ರಗಳಾದ ಆಭರಣಗಳಿಂದಲೂ ಅನೇಕ ಪುಷ್ಪಮಾಲಿಕೆಗಳಿಂದಲೂ ಅಲಂಕರಿಸಿಕೊಂಡು ನೀರುಂಡ ಕಾರ್ಮುಗಿಲಿಗೆ ಸಮಾನವಾದ ಪರ್ವತಾಗ್ರದಲ್ಲಿ ಸಂಚರಿಸುತ್ತಿದ್ದಳು; ಒಂದು ಸಮಯದಲ್ಲಿ ವಾಯುದೇವನು ಆ ಸ್ತ್ರೀಯ ಕ್ರಮವರ್ತುಳವಾಗಿ ನುಣುಪಾಗ ಸೊಂಪಾಗಿ ನಿಬಿಡವಾಗಿದ್ದ ತೊಡೆಗಳನ್ನೂ ಕಠಿಣವಾಗಿ ಉನ್ನತವಾಗಿ ಬಟುವಾಗಿ ಇಟ್ಟ

ಣಿಸಿದ್ದ ಸ್ತನಗಳನ್ನೂ ಅತಿ ರಮಣೀಯವಾಗಿದ್ದ ಮುಖವನ್ನೂ ಚಕ್ರಾಕಾರವಾಗಿ ಘನಗಾತ್ರವಾಗಿದ್ದ ಪೂರವಾರವನ್ನೂ ಅಸಿದಾಗಿ ವೃತ್ತವಾಗಿದ್ದ ಮಧ್ಯಪ್ರದೇಶವನ್ನೂ ಕಂಡು ಕಾಮಮೋಹಿತನಾಗಿ ಆಕೆಯನ್ನು ತಬ್ಬಿಕೊಂಡನು ; ಆಕೆಯು ಆತನನ್ನು ಕುರಿತು ' ಎಲೈ ಪುರುಷನೆ, ಲೋಕದಲ್ಲಿ ಮನಃಪೂರ್ವಕವಾಗಿ ಅನುಕೂಲವಾಗದಿರುವ ಪತಿವ್ರತಾಸ್ತ್ರೀಯರನ್ನು ವ್ರತಗೆಡಿಸುವದು ಪುರುಷರಿಗೆ ಉಚಿತವೇ ?' ಎಂದು ಕೇಳಿದಳು.

“ ವಾಯುವು ' ಎಲೇ ಶೋಭನಾಂಗಿಯೆ, ನಾನು ನಿನ್ನ ವ್ರತಭಂಗವನ್ನು ಮಾಡುವವನಲ್ಲ; ನೀನು ಅಂಜಬೇಡ; ನಾನೂ ನೀನೂ ದೈವಯತ್ನದಿಂದ ಏಕಾಂತಸ್ಥಳದಲ್ಲಿ ಕೂಡಿದೆವು; ನೀನು ನನ್ನನ್ನು ತಬ್ಬಿಕೊಂಡು ನನ್ನೊಡನೆ ರಮಿಸಿದೆಯಾದರೆ ನಿನಗೆ ಮಹಾ ಬಲವಂತನಾಗಿ ಬುದ್ಧಿವಂತನಾಗಿ ಮಹಾ ಸತ್ವವುಳ್ಳವನಾಗಿ ಅತಿ ತೇಜಸ್ವಿಯಾದ ಮಗನು ಹುಟ್ಟುವನು ; ಅತಿ ದೂರವಾಗಿ ದಾಟುವದರಲ್ಲಿಯೂ ಕುಪ್ಪಳಿಸುವದರಲ್ಲಿಯೂ ನನಗೆ ಸಮಾನವಾದ ವೇಗವುಳ್ಳವನಾಗುವನು ' ಎಂದು ಸಂತವಿಟ್ಟನು.

“ ಆ ಬಳಿಕ ನಿನ್ನ ತಾಯಾದ ಅಂಜನಾದೇವಿಯು ವಾಯುದೇವನಿಗನುಕೂಲವಾಗಿದ್ದು ಕೆಲವುಕಾಲಕ್ಕೆ ಒಂದು ಗುಹೆಯಲ್ಲಿ ನಿನ್ನನ್ನು ಪಡೆದಳು ; ನೀನು ಅವತರಿಸಿದಾಗ ಸೂರ್ಯೋದಯವಾಗಲು ಕೆಂಪಾದ ಸೂರ್ಯಮಂಡಲವನ್ನು ಕಂಡು ಅದು ಪಕ್ವವಾದ ಒಂದು ಫಲವೆಂದೆಣಿಸಿ ಸೂರ್ಯಮಂಡಲವನ್ನು ತೆಗೆದು ನುಂಗಬೇಕೆಂದು ಮುನ್ನೂರುಗಾವುದದೂರ ಅಂತರಿಕ್ಷಮಾರ್ಗದಲ್ಲಿ ಮೇಲಕ್ಕೆ ನೆಗೆದು ಹೋಗುತ ಸೂರ್ಯತೇಜಸ್ಸಿನಿಂದ ತನುಕಾಂತಿ ಗುಂದದಿರಲು ದೇವೇಂದ್ರನು ಅತ್ಯಂತ ಕೋಪದಿಂದ ತನ್ನ ವಜ್ರಾಯುಧದಿಂದ ನಿನ್ನನ್ನು ಹೊಡೆದನು ; ಆ ಆಯುಧವು ನಿನ್ನ ಮುಸುಳಿನ ವಾಮಭಾಗದಲ್ಲಿ ತಾಕಿ ಹೊಕ್ಕು ಹೋಯಿತು ; ಆದ್ದರಿಂದ ನಿನಗೆ ಹನುಮಂತನು ಎಂಬ ಪ್ರಸಿದ್ಧವಾದ ಹೆಸರುಂಟಾಯಿತು ! ಆಮೇಲೆ ನಿನ್ನ ತಂದೆಯಾದ ವಾಯುದೇವನು ಘಾಯಪಡೆದ ನಿನ್ನನ್ನು ಕಂಡು ಅತ್ಯಂತ ದುಃಖಪಟ್ಟು ಕೋಪಯುಕ್ತನಾಗಿ ಸಮಸ್ತ ಪ್ರಾಣಿಗಳಲ್ಲಿಯೂ ವಾಯುವು ಸಂಚರಿಸದಂತೆ ಮಾಡಲು ಇಂದ್ರಾದಿ ಸಮಸ್ತ ದೇವತೆಗಳೂ ಚೈತನ್ಯಗುಂದಿದ ಪ್ರಾಣಿಸಮೂಹಗಳು ಕಂಗೆಟ್ಟದ್ದನ್ನು ನೋಡಿ ನಿನ್ನ ತಂದೆಯಾದ ವಾಯುದೇವನನ್ನು ಸಂತವಿಟ್ಟರು ; ಆಗ ಬ್ರಹ್ಮದೇವನು ನಿನಗೆ ಶಸ್ತ್ರಾಸ್ತ್ರಗಳಿಂದ ಮರಣವಿಲ್ಲದಹಾಗೆ ವರವನ್ನು ಕೊಟ್ಟನು ; ನಿನ್ನಮೇಲೆ ವಜ್ರಾಯುಧವನ್ನು ಪ್ರಯೋಗಿಸಿ ಅದರಿಂದ ಇಂದ್ರನು ಘಾಯವಡೆಯದಿದ್ದ ನಿನ್ನ ಶರೀರವನ್ನು ಕಂಡು ಸುಪ್ರೀತನಾಗಿ ನಿನಗೆ ಸ್ವೇಚ್ಛಾಮರಣವಲ್ಲದೆ ಮತ್ತೊಂದರಿಂದ ಮರಣವಿಲ್ಲದಹಾಗೆ ವರವನ್ನು ಕೊಟ್ಟನು ! ನೀನು ಕೇಸರಿಯೆಂಬ ಕಪಿರಾಜನಿಗೆ ಕ್ಷೇತ್ರಜಕುಮಾರನು ; ವಾಯುವಿನ ಅಂಶಪುತ್ರನು ; ಆದ್ದರಿಂದ ನೀನು ಸಮುದ್ರಾದಿಗಳನ್ನು ದಾಟುವಲ್ಲಿ ವಾಯುವಿಗೆ ಸಮಾನವಾದ ವೇಗವುಳ್ಳವನು ; ಈಗ ನಾನು ವೃದ್ಧಾಪ್ಯಾವಸ್ಥೆಯನ್ನು ಪಡೆದು ಸತ್ವಗುಂದಿ ಬಲಹೀನನಾಗಿದ್ದೇನೆ ; ನೀನು ಸರ್ವಗುಣಸಂಪನ್ನನು ; ಈ ಕಪಿನಾಯಕರಲ್ಲಿ ಈ ಸಮುದ್ರವನ್ನು ದಾಟಿ ಹೋಗುವದಕ್ಕೆ ನೀನೇ ಸಮರ್ಥನು ; ನಾನು ನಾರಾಯಣನ ತ್ರಿವಿಕ್ರಮಾವತಾರಕಾಲದಲ್ಲಿ ಈ ಭೂಮಿಯನ್ನು ಏಳುಬಾರಿ ಪ್ರದಕ್ಷಿಣಮಾಡಿದೆನು ; ಅಲ್ಲಲ್ಲಿ ಪರ್ವತಾಂತರಗಳಲ್ಲಿದ್ದ ಔಷಧಿಗಳನ್ನು ತಂದುಕೊಟ್ಟು ದೇವತೆಗಳ ಕೈಯಲ್ಲಿ ಕ್ಷೀರಸಮುದ್ರವನ್ನು ಮಥನಮಾಡಿಸಿದೆನು ; ಈಗ ನನಗೆ ಅಂಥಾ ಸಾಮರ್ಥ್ಯವಿಲ್ಲ ; ಈ ಕಪಿಸೇನೆಯು ನಿನ್ನ ಸಾಮರ್ಥ್ಯವನ್ನು ನೋಡಬೇಕೆಂದು ಮಹಾ ಲವಲವಿಕೆಯುಳ್ಳವರಾಗಿದ್ದಾರೆ ! ಎಲೈ ಹನುಮಂತನೆ ಏಳು ; ನಿನ್ನ ಶರೀರವನ್ನು ಬೆಳೆಸಿ ಈ ಸಮುದ್ರವನ್ನು ದಾಟು ; ಸಮಸ್ತ ಪ್ರಾಣಿಗಳಿಗೂ ನೀನೇ ಗತಿ ; ಈ ಕಪಿನಾಯಕರೆಲ್ಲರೂ ಕಂಗೆಡಿಕೆಯುಂಟಾಗಿದ್ದಾರೆ ; ನೀನು ಯಾವಕಾರಣ ಉಪೇಕ್ಷೆಮಾಡುತ್ತಿದ್ದೀ ! ನಾರಾಯಣನು ತ್ರಿವಿಕ್ರಮಾವತಾರದಲ್ಲಿ ಭೂಮಂಡಲವನ್ನು ತನ್ನ ಪಾದದೊಳಗೆ ಅಡಕಮಾಡಿಕೊಂಡಂತೆ ನೀನು ಈ ಸಮುದ್ರವನ್ನು ನೂರುಗಾವುದದಾರಿ ಪರ್ಯಂತರ ನಿನ್ನ ಪಾದದೊಳಗೆ ಅಡಕಮಾಡಿಕೋ ” ಎಂದು ನುಡಿದನು.

ಆ ಮಾತನ್ನು ಕೇಳಿ ಹನುಮಂತನು ಅತಿ ಹರ್ಷದಿಂದ ಉಬ್ಬಿ ಸಮಸ್ತ ಕಪಿಸೇನೆಗೂ ಸಂತೋಷವುಂಟುಮಾಡುತ ಆಕಾಶಕ್ಕೂ ಭೂಮಿಗೂ ಕೀಲಿಟ್ಟಂತೆ ವಿರಾಡ್ರೂಪನಹಾಗೆ ಬೆಳೆದನು.

## ೬೭ ನೇ ಅಧ್ಯಾಯ.

(೬೪ ೬೫ ೬೬ನೇ ಅಧ್ಯಾಯಗಳು ೬೦ ೬೧ ೬೨ ೬೩ನೇ ಅಧ್ಯಾಯಗಳಲ್ಲಿ ಸೇರಿವೆ.)

### ಹನುಮಂತನು ಸಮುದ್ರವನ್ನು ದಾಟಲು ಸಮ್ಮತಿಸಿದ್ದು.

ಈ ಮರ್ಯಾದೆಯಲ್ಲಿ ಹನುಮಂತನು ನೂರುಗಾವುದದಾರಿ ಅಗಲವಾದ ಸಮುದ್ರವನ್ನು ದಾಟುವದಕ್ಕೋಸ್ಕರ ಉಬ್ಬಿ ಬೆಳೆಯುತ್ತಿರಲು ಆತನನ್ನು ಕಂಡು ಆ ಕಪಿನಾಯಕರು ತಮ್ಮ ತಮ್ಮ ಮನಸ್ಸಿನಲ್ಲಿದ್ದ ದುಃಖವನ್ನು ಬಿಟ್ಟು ಹರ್ಷಯುಕ್ತರಾಗಿ ಬೊಬ್ಬಿಡುತ "ಹನುಮಂತನು ಮಹಾ ಬಲವಂತನು" ಎಂದು ಸ್ತೋತ್ರವನ್ನು ಮಾಡುತ ಸಂತೋಷಪಡುತ ಆಶ್ಚರ್ಯಪಡುತ ನಾನಾದಿಕ್ಕುಗಳಲ್ಲಿಯೂ ನಿಂತುಕೊಂಡು ನೋಡುತ್ತಿದ್ದರು; ತ್ರಿವಿಕ್ರಮಾವತಾರಕಾಲದಲ್ಲಿ ಭೂಮಿಯನ್ನಳೆಯುತ ನಾರಾಯಣನು ಸಮಸ್ತ ಪ್ರಜೆಗಳನ್ನೂ ನೋಡುತ್ತಿದ್ದಂತೆ ಜಾಂಬವಂತನು ಮೊದಲಾದ ಸಮಸ್ತ ಕಪಿನಾಯಕರನ್ನೂ ನೋಡುತ ಅವರಿಂದ ಜಯಜಯಾ ಎಂದು ಕೊಂಡಾಡಿಸಿಕೊಂಡು ಮಹಾ ಬಲವಂತನಾದ ಹನುಮಂತನು ಅತ್ಯಂತ ಹೆಗ್ಗಳವಾಗಿ ಬೆಳೆದು ತನ್ನ ಬಾಲವನ್ನು ಸುರಟಿಕೊಂಡು ಅತಿ ಹರ್ಷಯುಕ್ತನಾಗಿ ತನ್ನ ತೇಜಸ್ಸಿನಿಂದ ನಾನಾದಿಕ್ಕುಗಳನ್ನೂ ಬೆಳಗಿಸುತ ತನ್ನ ಸ್ವರೂಪವು ರಮಣೀಯವಾಗಿ ತೋರುತ್ತಿರಲು ಹೊಗೆಯಿಲ್ಲದ ಯಜ್ಞಪುರುಷನಂತೆ ಅತಿ ರಮಣೀಯವಾಗಿ ಒಪ್ಪುತ ಸಂತೋಷಾತಿಶಯದಿಂದ ಶರೀರವೆಲ್ಲವು ಪುಳಕಿತವಾಗಲು ಆ ಕಪಿನಾಯಕರ ಮಧ್ಯದಲ್ಲಿ ಬಂದು ಜಾಂಬವಂತನು ಮೊದಲಾದ ಕಪಿವೃದ್ಧರಿಗೆ ಅಭಿವಂದಿಸಿ ಅವರನ್ನು ಕುರಿತು "ಎಲೈ ಕಪಿನಾಯಕರುಗಳಿರ, ಆಕಾಶದಲ್ಲಿ ಸಂಚರಿಸುವವನಾಗಿ ಅಪರಿಮಿತವಾದ ಶಕ್ತಿಯುಳ್ಳವನಾಗಿ ಯಜ್ಞಪುರುಷನಿಗೆ ಸಖನಾಗಿ ಪರ್ವತಾಗ್ರಗಳಲ್ಲಿ ಸಂಚರಿಸುವ ವಾಯುದೇವನು ಯಂಥಾ ಬಲವಂತನೋ ನಾನೂ ಅಂಥಾ ಬಲವಂತನಾಗಿ ಆತನಂತೆ ಅತಿ ವೇಗವುಳ್ಳವನು; ನಾನು ವಾಯುದೇವನ ಮಗನು; ಈ ಸಮುದ್ರವನ್ನು ವಾಯುವಿಗೆ ಸಮಾನವಾಗಿ ದಾಟುವೆನಲ್ಲದೆ ಮತ್ತೊಂದಲ್ಲ; ಗಗನವನ್ನು ತುಡುಕುತ ಅತಿ ವಿಶಾಲವಾದ ಮಹಾಮೇರುಪರ್ವತವನ್ನಾದರೂ ಸಾವಿರಸಾರಿ ನೆಗೆದು ದಾಟಿಹೋಗುವೆನು; ನನ್ನ ಭುಜಗಳಿಂದ ಸಮುದ್ರವನ್ನೊತ್ತರಿಸಿ ನೂಕಿಬಿಟ್ಟೆನಾದರೆ ಸಮಸ್ತ ವನಸಹಿತವಾದ ಭೂಮಂಡಲವು ಸಮುದ್ರೋದಕದಿಂದ ಪರಿಪೂರ್ಣವಾಗುವದು; ಆ ಬಳಿಕ ನನ್ನ ಜಂಘೆಗಳಿಂದಲೂ ತೊಡೆಗಳಿಂದಲೂ ಒಟ್ಟುಗೂಡಿಸಿದೆನಾದರೆ ಎಂದಿನ ಮರ್ಯಾದೆಯಲ್ಲಿ ಉದಕವು ಒಂದುಗೂಡಿ ಸಮುದ್ರವಾಗುವದು; ಆಕಾಶಮಾರ್ಗದಲ್ಲಿ ಅತಿ ವೇಗದಿಂದ ಸಂಚರಿಸುವ ಗರುಡನ ಬಳಿಗೆ ಸಾವಿರಬಾರಿ ಹೋಗಿಬರುವ ಸಾಮರ್ಥ್ಯವು ನನಗುಂಟು; ಸೂರ್ಯನು ಉದಯಪರ್ವತದಲ್ಲಿ ಉದಯವಾಗಿ ಅಸ್ತಮಯಪರ್ವತದಲ್ಲಿ ಅಸ್ತಮಯವಾಗುವ ಪರ್ಯಂತರ ಭೂಮಿಯನ್ನು ಮುಟ್ಟದೆ ಆತನಕೂಡೆ ಸಂಚರಿಸಿಕೊಂಡಿದ್ದು ತಿರಿಗಿ ಬರಲಾಪೆನು; ಅಂತರಿಕ್ಷಮಾರ್ಗದಲ್ಲಿ ಸಂಚರಿಸುವ ನಕ್ಷತ್ರಗಳೆಲ್ಲವನ್ನೂ ಅತಿಕ್ರಮಿಸಿ ಹೋಗುವೆನು; ಸಮುದ್ರವನ್ನು ಹೀರಿ ಬಣಗಿಸುವೆನು; ಭೂಮಿಯನ್ನು ಇಬ್ಬಗೆಯಾಗಿ ಒಡೆದೇನು; ಪರ್ವತಗಳನ್ನು ಚೂರ್ಣಮಾಡೇನು; ಸಮುದ್ರವನ್ನು ಹೊಕ್ಕು ಅದನ್ನು ನನ್ನ ಪಾದವೇಗದಿಂದ ಕದಡಿಬಿಟ್ಟೇನು; ನನಗೆ ಆಕಾಶಮಾರ್ಗದಲ್ಲಿ ತಡೆಯಿಲ್ಲದ ಸಂಚಾರವುಂಟು! ಎಲೈ ಕಪಿನಾಯಕಮುಕ್ಕಳಿರಾ, ನಾನು ಮಹಾಮೇರುಪರ್ವತಕ್ಕೆ ಸಮಾನವಾದ ಶರೀರದೊಡನೆ ಸಮುದ್ರವನ್ನು ದಾಟುವದನ್ನು ಸಮಸ್ತ ಪ್ರಾಣಿಗಳೂ ನೋಡಲೀ! ನಾನು ಅಂತರಿಕ್ಷಮಾರ್ಗದಲ್ಲಿ ಹೋಗುವಾಗ ಸಮಸ್ತ ದಿಕ್ಕುಗಳನ್ನೂ ವ್ಯಾಪಿಸಿಕೊಂಡು ಆಕಾಶವನ್ನು ನುಂಗುವಂತೆ ಸಮಸ್ತ ಮೇಘಗಳನ್ನೂ ಒಡೆದು ತುಂಡುತುಂಡು ಮಾಡಿಕೊಂಡು ಸಮಸ್ತ ಪರ್ವತಗಳಿಗೂ ಕಂಪನವನ್ನು ಹುಟ್ಟಿಸುತ ಸಮುದ್ರವನ್ನು ದಾಟುವದನ್ನು ನೀವೇ ಕಾಣುವಿರಿ; ನನಗುಂಟಾದ ಶಕ್ತಿಯು ಗರುಡಾನಲರಿಬ್ಬರಿಗೆ ಹೊರತಾಗಿ ಮತ್ಯಾರಿಗೂ ಇಲ್ಲ; ನನಗೆ ಸಮಾನವಾದ ಬಲವು ಗರುಡ ವಾಯುಗಳಲ್ಲಲ್ಲದೆ ಮತ್ತೊಬ್ಬರಲ್ಲಿಲ್ಲ; ಯವೆಹೊಳಚುವಷ್ಟು ಹೊತ್ತಿನೊಳಗೆ ಮೇಘಮಂಡಲದಲ್ಲಿ ಮಿಂಚುಹೊಳೆಯುವಂತೆ ನಾನು ಮೇಘಮಂಡಲಕ್ಕೆ ನೆಗೆದು ತಿರಿಗಿ ಬರುವೆನು; ತ್ರಿವಿಕ್ರಮಾವತಾರಕಾಲದಲ್ಲಿ ಭೂಮಂಡಲವನ್ನು ನೀರಡೆಯಮಾಡಿ ಸ್ವರ್ಗಲೋಕಕ್ಕೆ ಪಾದವನ್ನು ಸೇಡಿದ ಪರಮಪುರುಷನಂತೆ ನಾನು ಸಮುದ್ರವನ್ನು ದಾಟುವವನ್ನು ಸಮಸ್ತ ಪ್ರಾಣಿಗಳೂ ನೋಡಲೀ! ನನ್ನ ಸಾಮರ್ಥ್ಯವನ್ನು ನಾನೇ ಬಲ್ಲೆನು; ಸರ್ವಥಾ ಸೀತಾದೇವಿಯನ್ನು ಕಂಡು ಬರುವೆನು; ನೀವೆಲ್ಲರೂ ನಿಮ್ಮ ಮನಸ್ಸಿಗೆ

ಸಂತೋಷವನ್ನುಂಟುಮಾಡಿಕೊಳ್ಳಿರಿ ; ನಾನು ಗಮನವೇಗದಲ್ಲಿ ಗರುಡನಿಗೆ ಸಮಾನವಲ್ಲದೆ ಮತ್ತೊಂದಲ್ಲ ; ನನ್ನ ಮನಸ್ಸಿನ ಹರ್ಷವನ್ನು ನೋಡಿದರೆ ಹತ್ತುಸಾವಿರಗಾವುದದಾರಿ ನೆಗೆದು ಹೋಗಿ ತಿರಿಗಿ ಬರುವೆನೆಂದು ತೋರುತ್ತದೆ ; ಬ್ರಹ್ಮದೇವನನ್ನಾದರೂ ವಜ್ರಪಾಣಿಯಾದ ದೇವೇಂದ್ರನನ್ನಾದರೂ ನೂಕಿಬಿಟ್ಟು ಅಮೃತವನ್ನು ತರಲಾಪೆನು ; ಲಂಕಾದ್ವೀಪವನ್ನು ಕಿತ್ತುಹಾಕಬೇಕೆಂಬ ಬುದ್ಧಿ ತೋರುತ್ತದೆ'' ಎಂದು ನುಡಿದನು.

ಈ ಮರ್ಯಾದೆಯಲ್ಲಿ ನುಡಿಯುತ ಬೊಬ್ಬಿಟ್ಟು ಕೂಗುತ್ತಿದ್ದ ಅತಿ ಬಲವಂತನಾದ ಹನುಮಂತನನ್ನು ಕಂಡು ಆತನ ಸಂಗಡ ಬಂದ ಕಪಿನಾಯಕರು ಅತಿ ಹರ್ಷದಿಂದ ನೋಡುತ್ತಿದ್ದರು ; ಆ ಸಮಯದಲ್ಲಿ ಸಮಸ್ತ ಕಪಿನಾಯಕರ ಕಂಗೆಡಿಕೆಯನ್ನು ಕೆಡಿಸುವಂಥಾವನಾಗಿದ್ದ ಹನುಮಂತನ ಮಾತನ್ನು ಕೇಳಿ ಜಾಂಬವಂತನು ಆತನನ್ನು ಕುರಿತು '' ಎಲೈ ವಾಯುಪುತ್ರನಾದ ಹನುಮಂತನೆ, ನೀನು ನಿನ್ನ ಜ್ಞಾತಿಗಳಾದ ಕಪಿನಾಯಕರ ಮನೋವ್ಯಥೆಯನ್ನು ತೊಲಗಿಸಿದೆ; ಆದ್ದರಿಂದ ಪುಣ್ಯಾತ್ಮರಾದ ಈ ಕಪಿನಾಯಕರೆಲ್ಲರು ನಿನ್ನ ಕಾರ್ಯಸಿದ್ಧಿಯಾಗುವ ಮರ್ಯಾದೆಯಲ್ಲಿ ತಮ್ಮ ತಮ್ಮ ಇಷ್ಟದೇವತಾ ಪ್ರಾರ್ಥನೆಯನ್ನು ಮಾಡುತ್ತಿರುವರು ; ನೀನು ನಿನ್ನ ಗುರುಕಟಾಕ್ಷ ಕೃಪೆಯಿಂದಲೂ ಸಮಸ್ತ ಋಷಿಗಳ ಕೃಪೆಯಿಂದಲೂ ವೃದ್ಧರಾದ ಕಪಿನಾಯಕರ ಆಶೀರ್ವಾದದಿಂದಲೂ ಸಮುದ್ರವನ್ನು ದಾಟಿ ತಿರಿಗಿಬರುವ ಪರ್ಯಂತರ ನಾವೆಲ್ಲರು ಒಂದೇ ಪಾದದಲ್ಲಿ ನಿಂತುಕೊಂಡು ತಪಸ್ಸುಮಾಡುತ್ತಿರುವೆವು ; ಸಮಸ್ತ ಕಪಿನಾಯಕರ ಪ್ರಾಣಗಳೆಲ್ಲವು ನಿನ್ನ ಕೈಕಡಕವಾಗಿರುವವು'' ಎಂದು ನುಡಿದನು.

ಆಮೇಲೆ ಹನುಮಂತನು ಅತಿ ಹರ್ಷಪಟ್ಟು ಆ ಕಪಿನಾಯಕರನ್ನು ಕುರಿತು '' ಎಲೈ ಕಪಿನಾಯಕ ಮಕ್ಕಳಿರಾ, ನಾನು ಗುಂಕಿಸಿ ನೆಗದೆನಾದರೆ ನನ್ನ ಪಾದವೇಗವನ್ನು ಈ ಭೂಮಿಯು ತಾಳಲಾರದು ; ಈ ಮಹೇಂದ್ರಪರ್ವತವು ಕೋಡುಗಲ್ಲುಗಳಿಂದಲೂ ಅನೇಕ ಗುಂಡುಕಲ್ಲುಗಳಿಂದಲೂ ಇಟ್ಟಣಿಸಿ ಮಹಾ ಜತನವಾಗಿದೆ ; ಪ್ರಸಿದ್ಧವಾದ ನಾನಾವೃಕ್ಷಗಳಿಂದಲೂ ಗೈರಿಕಾದಿ ಧಾತುಗಳಿಂದಲೂ ಅನೇಕ ಜರಿಗಳಿಂದಲೂ ರಮಣೀಯವಾದ ಈ ಮಹೇಂದ್ರಪರ್ವತದ ಕೋಡುಗಲ್ಲುಗಳಮೇಲೆ ನಿಂತುಕೊಂಡು ಸಮುದ್ರವನ್ನು ದಾಟಿದೆನಾದರೆ ಈ ಕೋಡುಗಲ್ಲುಗಳು ನನ್ನ ಪಾದಹತಿಯಿಂದ ಚೂರ್ಣವಾಗಿ ಹೋಗುವವು ; ನಾನು ಸಮುದ್ರವನ್ನು ದಾಟುವಲ್ಲಿ ಗುಂಕಿಸಿ ನೆಗದರೆ ಈ ಪರ್ವತದ ಕೋಡುಗಲ್ಲುಗಳೇ ತಾಳಬೇಕಲ್ಲದೆ ಮತ್ತೊಂದೂ ತಾಳುವದಕ್ಕಿಲ್ಲ'' ಎಂದು ನುಡಿದು ನಾನಾಪ್ರಕಾರವಾದ ವೃಕ್ಷಗಳಿಂದಲೂ ನಾನಾ ಮೃಗಗಳಿಂದಲೂ ಎಳೇ ಗರಿಕೆಗಳಿಂದಲೂ ಸಿಂಹ ಶಾರ್ದೂಲ ಮದ್ದಾನೆಗಳಿಂದಲೂ ಸಮಸ್ತ ಪಕ್ಷಿಗಳಿಂದಲೂ ಅನೇಕ ಕೊಳಗಳಿಂದಲೂ ಅನೇಕ ಕೋಡುಗಲ್ಲುಗಳಿಂದಲೂ ಮನೋಹರವಾದ ಮಹೇಂದ್ರಪರ್ವತವನ್ನೇರಲು ಆತನ ಪದಘಾತದಿಂದ ಕಂಗೆಟ್ಟು ಮಹೇಂದ್ರಪರ್ವತವು ಸಿಂಹರಾಜನಿಂದ ಆಕ್ರಮಿಸಲ್ಪಟ್ಟ ಗಜರಾಜನಂತೆ ಬೋರಿಡುತ್ತಿತ್ತು ! ಅಲ್ಲಿದ್ದ ಕೆರೇಕಟ್ಟೆಗಳೆಲ್ಲವು ಒಡೆದುಹೋದವು ; ಅಲ್ಲಿದ್ದ ಗುಂಡುಕಲ್ಲುಗಳು ಮನೋಹರವಾದ ಉದಕಮಧ್ಯವನ್ನು ಸೇರಿದವು ; ಸಮಸ್ತ ಮೃಗಪಕ್ಷಿಗಳೂ ಬೆದರಿ ಓಡಿದವು ; ಮರಗಳೆಲ್ಲವೂ ಕದಲುತ್ತಿದ್ದವು ; ಅಲ್ಲಿದ್ದ ಸರ್ಪಗಳು ತಮ್ಮ ತಮ್ಮ ಸ್ಥಾನಗಳಲ್ಲೇ ಮರೆಯಾದವು ; ಕೆಲವು ಸರ್ಪಗಳು ತಮ್ಮ ಬಿಲಗಳಿಂದ ಹೊರಟು ಅರ್ಧಶರೀರವಾಗಿ ಕಾಣಿಸಿಕೊಂಡು ಮೊರೆಯಿಡುತ್ತಿದ್ದವು ! ಮಹೇಂದ್ರ ಪರ್ವತವು ಈ ಮರ್ಯಾದೆಯಲ್ಲಿ ಕದಲುತ್ತ ಭೂಮಿಯು ಪತಾಕಿಯೋ ಎಂಬಂತೆ ಒಪ್ಪುತ್ತಿತ್ತು ! ಸಮಸ್ತ ಋಷಿಗಳೂ ಬೆದರಿ ಓಡುತ್ತಿದ್ದರು ! ಈ ಮರ್ಯಾದೆಯಲ್ಲಿ ಅತಿ ವೇಗವುಳ್ಳ ಹನುಮಂತನು ಸಮುದ್ರವನ್ನು ದಾಟಬೇಕೆಂಬ ಬುದ್ಧಿಯಿಂದ ಮಹೇಂದ್ರಪರ್ವತವನ್ನು ಹತ್ತಿಕೊಂಡು ಮನಸ್ಸಿನಲ್ಲಿ ಲಂಕಾದ್ವೀಪಕ್ಕೆ ಹೋಗಬೇಕೆಂದು ನಿಶ್ಚಯಿಸಿಕೊಂಡಿದ್ದನು ! ಎಂದು ವಾಲ್ಮೀಕಿಮುನೀಶ್ವರನು ಕುಶಲವರಿಗೆ ನಿರೂಪಂಗೊಡುತ್ತಿದ್ದನು.

ಕಿ ಷ್ಕಿಂ ಧಾ ಕಾಂ ಡ ಸ ಮಾ ಪ್ತಿ .

ಸುಗ್ರೀವಾದಿಪ್ರಿಯತಂತ್ರೀಶಂ ಭಸ್ಮಾಂಗಾವೃತವಿಗ್ರಹಂ ।
ಮಹೇಶ್ವರಸಮಂಧ್ಯಾಯೇತ್ ಕಿಷ್ಕಿಂಧಾಕಾಂಡಉತ್ತಮೇ ॥

ಶ್ರೀ ಚಾಮುಂಡೇಶ್ವರಿ ಪ್ರೆಸ್, ಲಾಲ್‌ಬಾಗ್ ರೋಡ್, ಬೆಂಗಳೂರು—1895.